ಮಂಗಳೂರು
ಶನಿವಾರ, 21 ಫೆಬ್ರವರಿ 2026
ಸಂಪುಟ 47, ಸಂಚಿಕೆ 324, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ ₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಪ್ಯಾಕ್ಸ್ ಸಿಲಿಕಾ ಮೈತ್ರಿಕೂಟ ಸೇರಿದ ಭಾರತ | ೦೭ | ಭಾರತದ ಬುದ್ಧಿಮತ್ತೆ ವಿಶ್ವ ದರ್ಶನ | ೦೭ | ಭಾರತದ ಎಐ ಕಿಡ್ ರೌಲ್ ಜಾನ್ ಅಜು | ೦೭

ಶುಭ ದಿನ

ಕಲಿಯುಗಾಬ್ದ 5127, ವಿಶ್ವಾವಸು ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುನ ಮಾಸ, ಶುಕ್ಲ ಪಕ್ಷ, ತಿಥಿ: ಚೌತಿ, ನಕ್ಷತ್ರ: ರೇವತಿ

ದಿನದ ಮಾತು

ಆಸೆ ಇಲ್ಲದವನು ಇಡೀ ವಿಶ್ವದಲ್ಲೇ ದೊಡ್ಡ ಶ್ರೀಮಂತ.

▲ಸ್ವಾಮಿ ಶಿವಾನಂದ

ವಿಶುದ್ಧ ಎಂದರೆ ಶುದ್ಧೀಕರಣ

ಪೂರ್ಣ ಪರಿಪೂರ್ಣ

• ಪೂರ್ಣಪ್ರಜ್ಞ ಬೇಳೂರು

• ಪುಟ ೬

ಕಿರುಸುದ್ದಿ

ಮ.ಪ್ರ: ದುರ್ಗಾ ದೇಗುಲ ಧ್ವಂಸಕ್ಕೆ ಯತ್ನ, ಹಿಂಸಾಚಾರ

• **ಭೋಪಾಲ್:** ಮಧ್ಯಪ್ರದೇಶದ ಜಬಲ್ಪುರ ಜಿಲ್ಲೆಯಲ್ಲಿ ಗುರುವಾರ ರಾತ್ರಿ ದುರ್ಗಾ ದೇವಾಲಯವನ್ನು ಕೆಲ ಮತಾಂಧರ ಗುಂಪೊಂದು ಧ್ವಂಸಗೊಳಿಸಲು ಪ್ರಯತ್ನಿಸಿದ ಹಿನ್ನೆಲೆ ಕೋಮು ಉದ್ವಿಗ್ನತೆ ಭುಗಿಲೆದ್ದಿದ್ದು, ಎರಡೂ ಗುಂಪುಗಳ ಮಧ್ಯೆ ಜಟಾಪಟಿ ನಡೆದಿದೆ. ದೇವಸ್ಥಾನದಲ್ಲಿ ಪೂಜೆ ನಡೆಯುತ್ತಿದ್ದಾಗ ಮತಾಂಧ ಯುವಕನೊಬ್ಬ ದೇವಸ್ಥಾನದ ಗ್ರಿಲ್ ಮುರಿದಿದ್ದರಿಂದ ಪ್ರತಿಭಟನೆ ಆರಂಭವಾಗಿತ್ತು. ಶಸ್ತ್ರಸಜ್ಜಿತ ಕೆಲ ಮುಸ್ಲಿಮರ ಗುಂಪೊಂದು ಹಿಂಸಾಚಾರ ಆರಂಭಿಸಿದ್ದು, ಕಲ್ಲು ತೂರಾಟ ನಡೆಸಿದೆ. ದೇವಸ್ಥಾನವನ್ನು ಧ್ವಂಸಗೊಳಿಸಲು ಪ್ರಯತ್ನಿಸಿದ ಮುಸ್ಲಿಂಯುವಕನನ್ನು ಜನರು ಹಿಡಿದು ಥಳಿಸಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಈಗಾಗಲೇ ಪೊಲೀಸರು 15 ಮಂದಿಯನ್ನು ಬಂಧಿಸಿದ್ದಾರೆ. ➡ಪುಟ ೪

12ರಿಂದ 15 ಪೈಸೆ ವಿದ್ಯುತ್ ದರ ಏರಿಕೆ?

• **ಬೆಂಗಳೂರು:** ಆರ್ಥಿಕ ನಷ್ಟವನ್ನು ಸರಿದೂಗಿಸಲು ಹೆಚ್ಚುವರಿ ದರ ಏರಿಕೆಗೆ ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳು(ಎಸ್ಕಾಂ) ಕರ್ನಾಟಕ ವಿದ್ಯುತ್ ಸುಧಾರಣಾ ಆಯೋಗಕ್ಕೆ(ಕೆಇಆರ್‌ಸಿ) ಪ್ರಸ್ತಾವನೆ ಸಲ್ಲಿಸಿವೆ. ಪ್ರಸ್ತಾವನೆ ಒಪ್ಪಿಗೆಯಾದಲ್ಲಿ ಏಪ್ರಿಲ್ 1 ರಿಂದ ಯೂನಿಟ್‌ಗೆ 12 ರಿಂದ 15 ಪೈಸೆ ಹೆಚ್ಚುವರಿ ಶುಲ್ಕ ವಿಧಿಸುವ ಸಾಧ್ಯತೆ ಇದೆ.

• ಪುಟ ೧೦

ಪ್ಯಾಕ್ ಸಿಲಿಕಾಗೆ ಭಾರತ ಸೇರ್ಪಡೆ

• **ಹೊಸದಿಲ್ಲಿ :** ನಿರ್ಣಾಯಕ ಖನಿಜಗಳು ಮತ್ತು ಕೃತಕ ಬುದ್ಧಿಮತ್ತೆಗೆ ಸ್ಥಿತಿಸ್ಥಾಪಕ ಪೂರೈಕೆ ಸರಪಣಿಯನ್ನು ನಿರ್ಮಿಸುವ ಗುರಿ ಹೊಂದಿರುವ ಅಮೆರಿಕ ನೇತೃತ್ವದ ಕಾರ್ಯತಂತ್ರದ ಮೈತ್ರಿಕೂಟ 'ಪ್ಯಾಕ್ಸ್ ಸಿಲಿಕಾ'ಗೆ ಭಾರತ ಸೇರ್ಪಡೆಗೊಂಡಿದೆ. ಹೊಸದಿಲ್ಲಿಯಲ್ಲಿ ನಡೆದ ಎಐ ಇಂಪ್ಯಾಕ್ಟ್ ಶೃಂಗಸಭೆಯಲ್ಲಿ ನಡೆದ ಸಮಾರಂಭದಲ್ಲಿ ಭಾರತವು ಈ ಮೈತ್ರಿಕೂಟಕ್ಕೆ ಸೇರುವ ಒಪ್ಪಂದಕ್ಕೆ ಸಹಿ ಹಾಕಿದ್ದು, ಇದು ಭಾರತದ ಪಾಲಿಗೆ ಒಂದು ಮಹತ್ವದ ವರವಾಗುವ ನಿರೀಕ್ಷೆಯಿದೆ.

• ಪುಟ ೧೦

ಅಸ್ಸಾಂಗೆ ಕೈ ಅವಧಿಯಲ್ಲಿ ನುಸುಳುಕೋರರ ಪ್ರವೇಶ

• ಪುಟ ೨

ಲವ್ ಜಿಹಾದ್: ವಿವಾಹ ನೋಂದಣಿಗೆ ಹೊಸ ಕ್ರಮ

• ಪುಟ ೨

ಸ್ನೇಹಮಯಿ ಕೃಷ್ಣ ಬಂಧನ

• ಪುಟ ೧೦

ಸಾಮಾಜಿಕ ನ್ಯಾಯಕ್ಕೆ ಬದ್ಧ

• ಪುಟ ೪

ಎಐ ಶೃಂಗದಲ್ಲಿ ಯುವ ಕಾಂಗ್ರೆಸ್ ಅರೆಬೆತ್ತಲೆ ಪ್ರತಿಭಟನೆ

ನಾಚಿಕೆಗೇಡಿನ ಕೃತ್ಯ



ಒದ್ದು ಓಡಿಸಿದ ಜನ

ಎಐ ಶೃಂಗದಲ್ಲಿ ಭಾಗವಹಿಸಿದ್ದ ಕೆಲವರು ಮತ್ತು ಪ್ರತಿಭಟನಾಕಾರರ ನಡುವೆ ತೀವ್ರ ವಾಗ್ವಾದ ನಡೆದಿದ್ದು, ಪ್ರತಿಭಟನಾಕಾರರನ್ನು ಅಲ್ಲಿದ್ದವರು ಒದ್ದು ಓಡಿಸಿದ ಘಟನೆ ನಡೆದಿದೆ.

ಭಾರತದ ಪ್ರತಿಷ್ಠೆ ವಿರುದ್ಧ ಪಿತೂರಿ

ಯುವಕಾಂಗ್ರೆಸಿಗರ ಶರ್ಟ್‌ರಹಿತ ಪ್ರತಿಭಟನೆಗೆ ಛೀಮಾರಿ ಹಾಕಿರುವ ಐಟಿ ಸಚಿವ ಅಮಿತ್ ಮಾಳವೀಯ, ರಾಹುಲ್ ಮತ್ತು ಕಾಂಗ್ರೆಸ್ ಭಾರತದ ಜಾಗತಿಕ ಇಮೇಜ್ ವಿರುದ್ಧ ಷಡ್ಯಂತ್ರ ಬೆಸೆಯುತ್ತಿದ್ದಾರೆ. ➡ಪುಟ ೪

• **ಹೊಸದಿಲ್ಲಿ:** ಯುವ ಕಾಂಗ್ರೆಸ್(ಐವೈಸಿ) ಕಾರ್ಯಕರ್ತರ ಗುಂಪೊಂದು ಶುಕ್ರವಾರ ಎಐ ಇಂಪ್ಯಾಕ್ಟ್ ಸಮಿಟ್‌ನಲ್ಲಿ ಅರೆಬೆತ್ತಲೆ ಪ್ರತಿಭಟನೆ ನಡೆಸಿ, ಸರ್ಕಾರ ಹಾಗೂ ಭಾರತ-ಅಮೆರಿಕ ವ್ಯಾಪಾರ ಒಪ್ಪಂದದ ವಿರುದ್ಧ ಘೋಷಣೆಗಳಿರುವ ಟಿ-ಶರ್ಟ್‌ಗಳನ್ನು ಹಿಡಿದು ಪ್ರದರ್ಶನ ನಡೆಸಿದ್ದು, ಈ ಘಟನೆ ಕಾಂಗ್ರೆಸ್‌ನ ನಾಚಿಕೆಗೇಡಿನ ಕೃತ್ಯ ಎಂದು ಬಿಜೆಪಿ ಟೀಕಿಸಿದೆ. ಜಾಗತಿಕ ಮಟ್ಟದಲ್ಲಿ ಭಾರತದ ಗೌರವ ಹಾಳು ಮಾಡಲು ಈ ಗದ್ದಲ ಸೃಷ್ಟಿಸಲಾಗಿದೆ ಎಂದು ದೇಶವ್ಯಾಪಿ ಆಕ್ರೋಶ ವ್ಯಕ್ತವಾಗಿದೆ. ಪ್ರಕರಣ ಸಂಬಂಧ ಪೊಲೀಸರು ನಾಲ್ವರನ್ನು ಬಂಧಿಸಿದ್ದಾರೆ.

ವ್ಯಾಪಕ ಆಕ್ರೋಶ

ಭಾರತ ಮಂಟಪದ ಎಕ್ಸಿಬಿಷನ್ ಹಾಲ್ ನಂ. 5ರಲ್ಲಿ ಈ ಘಟನೆ ನಡೆದಿದೆ. ಪ್ರಧಾನಿ ನರೇಂದ್ರ ಮೋದಿ ಹಾಗೂ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಚಿತ್ರಗಳಿರುವ ಹಾಗೂ ಕೆಲವು ಬರಹಗಳಿರುವ ಬಿಳಿ ಟಿ-ಶರ್ಟ್‌ಗಳನ್ನು ಧರಿಸಿ ಅಥವಾ ಹಿಡಿದುಕೊಂಡು ಕನಿಷ್ಠ 10 ಮಂದಿ ಹಾಲ್‌ನಲ್ಲಿ ಸಂಚರಿಸಿದ್ದು, ಕೆಲಕಾಲ ಗದ್ದಲದ ವಾತಾವರಣ ನಿರ್ಮಾಣವಾಯಿತು. ಕೆಲವೇ ನಿಮಿಷಗಳಲ್ಲಿ ಭದ್ರತಾ ಸಿಬ್ಬಂದಿ ಅವರನ್ನು ಹಾಲ್‌ನಿಂದ ಹೊರಗೆ ಕರೆದೊಯ್ದರು. ಘಟನೆಯ ನಂತರ, ದಿಲ್ಲಿ ಪೊಲೀಸರು ನಾಲ್ವರು ಐವೈಸಿ ಕಾರ್ಯಕರ್ತರನ್ನು ಬಂಧಿಸಿದ್ದಾರೆ. ಇದಕ್ಕೂ ಮೊದಲು ಸುಮಾರು 10 ಮಂದಿಯನ್ನು ವಶಕ್ಕೆ ಪಡೆಯಲಾಗಿತ್ತು.

ದೇಶದ್ರೋಹಿಗಳು: ರಾಹುಲ್‌ಗಾಂಧಿ ಮತ್ತು ಕಾಂಗ್ರೆಸ್ ಟಾಪ್‌ಲೆಸ್, ಬ್ರೈನ್‌ಲೆಸ್ ಮತ್ತು ಶೇಮ್‌ಲೆಸ್‌ಗಳು. ರಾಷ್ಟ್ರದ ದ್ರೋಹಿಗಳಿವರು. ರಾಷ್ಟ್ರವು ಪ್ರಗತಿಯಾಗುವುದನ್ನು ಈ ಮಂದಿ ಸಹಿಸುವುದಿಲ್ಲ. ಇಲ್ಲೀಗ ನಡೆದಿರುವ ಎಐ ಸಮ್ಮಿಟ್ ಬಿಜೆಪಿ ಶೃಂಗಸಭೆಯಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳುವಷ್ಟು ಬುದ್ಧಿಮತ್ತೆ ಕೂಡ ಕಾಂಗ್ರೆಸ್‌ಗಿಲ್ಲ ಎಂದು ಬಿಜೆಪಿ ಸಂಸದ ಸಂಬಿತ್ ಪಾತ್ರಾ ತರಾಟೆಗೆತ್ತಿಕೊಂಡಿದ್ದಾರೆ. ➡ಪುಟ ೪

250 ಬಿಲಿಯನ್ ಡಾಲರ್ ಹೂಡಿಕೆ ಭರವಸೆ: ವೈಷ್ಣವ್

- ಎಐ ಇಂಪ್ಯಾಕ್ಟ್ ಶೃಂಗಕ್ಕೆ ಭಾರೀ ಯಶಸ್ಸು
- ಶೃಂಗಸಭೆಗೆ 5 ಲಕ್ಷಕ್ಕೂ ಹೆಚ್ಚು ಮಂದಿ ಭೇಟಿ
- ದಿಲ್ಲಿ ಘೋಷಣೆಗೆ 70ಕ್ಕೂ ಅಧಿಕ ರಾಷ್ಟ್ರಗಳ ಸಹಿ

• **ಹೊಸದಿಲ್ಲಿ:** ಭಾರತದ ಎಐ ಇಂಪ್ಯಾಕ್ಟ್ ಶೃಂಗಸಭೆಯಲ್ಲಿ ಮೂಲಸೌಕರ್ಯ ಕ್ಷೇತ್ರಕ್ಕೆ 250 ಬಿಲಿಯನ್ ಡಾಲರ್‌ಗಿಂತ ಹೆಚ್ಚು ಹೂಡಿಕೆ ಭರವಸೆಗಳು ದೊರೆತಿವೆ ಎಂದು ಕೇಂದ್ರ ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಹೇಳಿದ್ದಾರೆ. ಜತೆಗೆ, ಪ್ರಸ್ತಾವಿತ ದಿಲ್ಲಿ ಘೋಷಣೆಗೆ ಈಗಾಗಲೇ 70 ದೇಶಗಳು ಬೆಂಬಲ ಸೂಚಿಸಿವೆ ಎಂದು ಹೇಳಿರುವ ಅವರು, ಶೃಂಗಸಭೆ ಭಾರೀ ಯಶಸ್ಸು ಕಂಡಿದೆ ಎಂದಿದ್ದಾರೆ. ➡ಪುಟ ೪

ಎಐ ಶೃಂಗಸಭೆ ಅತ್ಯುತ್ತಮ: ತರೂರ್

• **ಹೊಸದಿಲ್ಲಿ:** ದಿಲ್ಲಿಯಲ್ಲಿ ನಡೆಯುತ್ತಿರುವ ಎಐ ಶೃಂಗಸಭೆಯಲ್ಲಿ ಆರಂಭದ ದಿನ ನಡೆದ ಕೆಲವು ಸಣ್ಣ ಲೋಪಗಳನ್ನು ಬಳಸಿಕೊಂಡು ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಮತ್ತಿತರ ಕಾಂಗ್ರೆಸ್ ನಾಯಕರು ಎಐ ಸಮ್ಮೇಳನವನ್ನು ಅಪಹಾಸ್ಯಗೈದರೆ, ಹಿರಿಯ ಕಾಂಗ್ರೆಸ್ ನಾಯಕ ಶಶಿ ತರೂರ್ ಈ ಶೃಂಗಸಭೆ ಅತ್ಯುತ್ತಮವಾಗಿ ನಡೆಯುತ್ತಿದೆ. ದೊಡ್ಡ ಕಾರ್ಯಕ್ರಮಗಳನ್ನು ಆಯೋಜಿಸುವಾಗ ಕೆಲವು ಲೋಪಗಳು ಸಹಜವಾದುದು ಎಂದಿದ್ದಾರೆ. ➡ಪುಟ ೪

ಶಿವಾಜಿ ಮೆರವಣಿಗೆ ಮೇಲೆ ಮಸೀದಿ ಕಡೆಯಿಂದ ಕಲ್ಲು

ಹಿಂದುಗಳ ಆಕ್ರೋಶ | ಬಾಗಲಕೋಟೆ ಪ್ರಕ್ಷುಬ್ಧ





• **ಬಾಗಲಕೋಟೆ:** ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ನಿಮಿತ್ತ ಗುರುವಾರ ರಾತ್ರಿ ಹಳೆ ಬಾಗಲಕೋಟೆಯಲ್ಲಿ ನಡೆದ ಮೆರವಣಿಗೆ ಸಂದರ್ಭದಲ್ಲಿ ಕಲ್ಲು ಹಾಗೂ ಚಪ್ಪಲಿ ತೂರಲಾಗಿದ್ದು, ಹಿಂದುಗಳಿಂದ ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ಪ್ರಕರಣ ಸಂಬಂಧ ಪೊಲೀಸರು ಎಂಟು ಆರೋಪಿಗಳನ್ನು ಬಂಧಿಸಿ, ಭಾರೀ ಬಂದೋಬಸ್ತ್ ಮಾಡಿದ್ದರೂ ಬಾಗಲಕೋಟೆ ನಗರ ಅಕ್ಷರಶಃ ಬೂದಿ ಮುಚ್ಚಿದ ಕೆಂಡದಂತಿದೆ.

ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ನಿಮಿತ್ತ ಗುರುವಾರ ರಾತ್ರಿ ನಗರದ ಅಂಬಾಭವಾನಿ ದೇವಸ್ಥಾನದಿಂದ ಭವ್ಯ ಮೆರವಣಿಗೆ ಆಯೋಜಿಸಲಾಗಿತ್ತು. ಮೆರವಣಿಗೆ ಸಂಚರಿಸುವ ಸಂದರ್ಭದಲ್ಲಿ ಪಂಖಾ ಮಸೀದಿಯಲ್ಲಿ ಜಮಾಯಿಸಿದ್ದ ಜನರಿಂದ ಕಲ್ಲು ತೂರಾಟ ಹಾಗೂ ಚಪ್ಪಲಿ ಎಸೆತದಿಂದ ಬಾಗಲಕೋಟೆಯಲ್ಲಿ ಪ್ರಕ್ಷುಬ್ಧ ವಾತಾವರಣ ಸೃಷ್ಟಿಯಾಗಿದೆ. ಘಟನೆಗೆ ನಗರದಲ್ಲಿ ಅಷ್ಟೇ ಅಲ್ಲದೇ, ಜಿಲ್ಲೆ ಹಾಗೂ ರಾಜ್ಯದ ವಿವಿಧ ಭಾಗದಲ್ಲಿ ಹಿಂದು ಸಂಘಟನೆಗಳು ಆಕ್ರೋಶ ಹೊರ ಹಾಕಿದ್ದು, ವ್ಯಾಪಕ ಖಂಡನೆ ವ್ಯಕ್ತವಾಗಿದೆ. ➡ಪುಟ ೪

ಬಾಗಲಕೋಟೆ, ಮುಧೋಳ ಬಂದ್

ಬಾಗಲಕೋಟೆ ನಗರ ಹಾಗೂ ಮುಧೋಳದಲ್ಲಿ ಅಂಗಡಿ ಮುಂಗಟ್ಟುಗಳನ್ನು ಬಂದ್ ಮಾಡಲಾಗಿತ್ತು. ಕಲ್ಲು ತೂರಾಟ ಘಟನೆ ನಡೆದ ಹಿನ್ನೆಲೆಯಲ್ಲಿ ಬಾಗಲಕೋಟೆ ಎಸಿ 3 ದಿನ ಕಲಂ 163ರ ಅನ್ವಯ ನಿಷೇಧಾಜ್ಞೆ ಜಾರಿ ಮಾಡಿ ಆದೇಶ ಹೊರಡಿಸಿದ್ದಾರೆ.

ಎಂಟು ಜನರ ಬಂಧನ

ಹಳೆ ಬಾಗಲಕೋಟೆ ನಗರದಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಜಯಂತಿ ಅಂಗವಾಗಿ ನಡೆಯುತ್ತಿದ್ದ ಭವ್ಯ ಶೋಭಾಯಾತ್ರೆಯಲ್ಲಿ ಕಲ್ಲು ತೂರಾಟ ಹಾಗೂ ಚಪ್ಪಲಿ ಎಸೆತ ಪ್ರಕರಣಕ್ಕೆ ಸಂಬಂಧಿಸಿದಂತೆ ಎಂಟು ಜನರನ್ನು ಪೊಲೀಸರು ಬಂಧಿಸಿದ್ದಾರೆ. ➡ಪುಟ ೪

ಕಠಿಣ ಕ್ರಮಕ್ಕೆ ಸಿಎಂ ಆದೇಶ

• **ಬೆಂಗಳೂರು:** ಬಾಗಲಕೋಟೆಯಲ್ಲಿ ನಡೆದ ಕಲ್ಲುತೂರಾಟ ಘಟನೆಯು ಸಮಾಜದ ಶಾಂತಿ, ಸೌಹಾರ್ದತೆಗೆ ಮಾರಕ. ಇದನ್ನು ನಾನು ಮತ್ತು ನಮ್ಮ ಸರ್ಕಾರ ಬಲವಾಗಿ ಖಂಡಿಸುತ್ತದೆ. ಘಟನೆಯ ಬಗ್ಗೆ ಹಿರಿಯ ಪೊಲೀಸ್ ಅಧಿಕಾರಿಗಳ ಬಳಿ ಚರ್ಚಿಸಿದ್ದು, ನಿಷ್ಪಕ್ಷಪಾತ ತನಿಖೆ ನಡೆಸಿ, ದುಷ್ಕೃತ್ಯ ಎಸಗಿದ ಪುಂಡರಿಗೆ ಕಾನೂನಿನ ಮೂಲಕ ತಕ್ಕ ಉತ್ತರ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ. ➡ಪುಟ ೪



ಒದ್ದು ಒಳಗೆ ಹಾಕಿ: ಬಿಜೆಪಿ

• **ಬೆಂಗಳೂರು:** ಬಾಗಲಕೋಟೆಯಲ್ಲಿ ಶಿವಾಜಿ ಜಯಂತಿಯ ಸಂದರ್ಭದಲ್ಲಿ ಮೆರವಣಿಗೆ ಮೇಲೆ ಕಲ್ಲು ತೂರಾಟ ನಡೆಸಿದವರನ್ನು ಒದ್ದು ಒಳಗೆ ಹಾಕಿ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಒತ್ತಾಯಿಸಿದರು. ➡ಪುಟ ೪

ಮಂಗಳೂರಿನಲ್ಲಿ ರಾಷ್ಟ್ರಮಟ್ಟದ 'ಸರಸ್ ಮೇಳ'ಕ್ಕೆ ಚಾಲನೆ

ಮಹಿಳಾ ಕೇಂದ್ರಿತ ಯೋಜನೆಗೆ ಒತ್ತು

• **ಮಂಗಳೂರು:** ರಾಜ್ಯ ಸರ್ಕಾರ ಪ್ರತಿ ವರ್ಷ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳಿಗೆ ಸುತ್ತುನಿಧಿ ಬಂಡವಾಳ ಒದಗಿಸುತ್ತಿದ್ದು, ಮಂಗಳೂರಿಗೆ ಇದುವರೆಗೆ 70 ಕೋಟಿ ರೂ. ಒದಗಿಸಲಾಗಿದೆ ಎಂದು ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್ ಹೇಳಿದರು.

ಮಂಗಳೂರಿನ ಕರಾವಳಿ ಉತ್ಸವ ಮೈದಾನದಲ್ಲಿ ಫೆ.28 ರವರೆಗೆ ಹಮ್ಮಿಕೊಂಡಿರುವ ರಾಷ್ಟ್ರಮಟ್ಟದ 'ಸರಸ್ ಮೇಳ' ಸ್ವಸಹಾಯ ಗುಂಪಿನ ಮಹಿಳೆಯರ ಉತ್ಪನ್ನಗಳ ವಸ್ತು ಪ್ರದರ್ಶನ, ಮಾರಾಟ ಮೇಳದಲ್ಲಿ ಶುಕ್ರವಾರ ಪಾಲ್ಗೊಂಡು ಮಾತನಾಡಿದ ಅವರು, ಪ್ರತಿಯೊಂದು ಸಂಘಕ್ಕೆ 1.50 ಲಕ್ಷ ರೂ. ಬಂಡವಾಳ ನೀಡಲಾಗುತ್ತದೆ. ರಾಜ್ಯದಲ್ಲಿ 5000ಕ್ಕೂ ಅಧಿಕ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳಿವೆ. ಒಕ್ಕೂಟಗಳಿಂದ ಹಲವು ಸವಲತ್ತುಗಳ ಮೂಲಕ ಸಬಲೀಕರಣಗೊಳಿಸುವ ಕಾರ್ಯ ನಡೆಯುತ್ತಿದೆ ಎಂದರು. ➡ಪುಟ ೪



ಏನೆಲ್ಲಾ ಇದೆ? ಒಡಿಶಾ, ಚಂಡೀಗಢ, ಕೇರಳ, ಅಸ್ಸಾಂ, ಪ.ಬಂಗಾಳ, ತೆಲಂಗಾಣ, ಆಂಧ್ರ, ಉತ್ತರ ಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳು, ಕರ್ನಾಟಕದ ವಿವಿಧ ಜಿಲ್ಲೆಗಳ ಸ್ವಸಹಾಯ ಸಂಘಗಳ ಗುಂಪುಗಳ ಉತ್ಪನ್ನಗಳು ಪ್ರದರ್ಶನದಲ್ಲಿವೆ. ➡ಪುಟ ೪

ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರ ಆತಂಕ

ಹಿಂದುಗಳ ಮೇಲೆ ನಿಲ್ಲದ ದೌರ್ಜನ್ಯ



• **ದಾವಣಗೆರೆ:** ಬಾಂಗ್ಲಾದೇಶದಲ್ಲಿ ಹಿಂದುಗಳ ಮೇಲೆ ದಿನಂಪ್ರತಿ ದೌರ್ಜನ್ಯ ನಡೆಯುತ್ತಿದೆ. ಭಾರತದ ಹಿಂದುಗಳ ಸ್ಥಿತಿ ಕೂಡ ಇದಕ್ಕಿಂತ ಭಿನ್ನವಾಗಿ ಏನೂ ಇಲ್ಲ ಎಂದು ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದರು ಆತಂಕ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಾಂಗ್ಲಾದೇಶದಲ್ಲಿ ಹಿಂದುಗಳು ಹಿಂಸೆ, ಹಲ್ಲೆ, ಹತ್ಯೆಗಳಿಂದ ನಲುಗುತ್ತಿದ್ದಾರೆ. ಭಾರತದಲ್ಲೂ ಹಿಂದುಗಳ ಮೇಲೆ ದಾಳಿಯಾಗುತ್ತಿದೆ. ಸರ್ಕಾರ ಹಿಂದುಗಳ ರಕ್ಷಣೆಗೆ ತ್ವರಿತ ಕ್ರಮ ಕೈಗೊಳ್ಳಬೇಕೆಂಬುದು ನಮ್ಮ ಆಶಯವಾಗಿದೆ. ಆದರೆ ಸರ್ಕಾರದೊಳಗಿನ ಸಮಸ್ಯೆ, ಒತ್ತಡಗಳು ಏನಿವೆಯೋ ಗೊತ್ತಿಲ್ಲ ಎಂದು ಅವರು ಸೂಚ್ಯವಾಗಿ ಹೇಳಿದರು.

ಕೇಂದ್ರ, ಬದ್ಧತೆ ಪ್ರದರ್ಶಿಸಲಿ: ದೇಶಾದ್ಯಂತ ಗೋಹತ್ಯೆ ನಿಷೇಧಿಸುವಲ್ಲಿ ಕೇಂದ್ರ ಸರ್ಕಾರ ತನ್ನ ಬದ್ಧತೆ ತೋರಿಸಬೇಕು. ಗೋವು ಹಿಂದುಗಳ ಆರಾಧ್ಯದೈವವಾಗಿದ್ದು, ದೇಶದಲ್ಲಿ ಗೋಹತ್ಯೆ ನಿಷೇಧ ಆಗಬೇಕೆಂಬುದು ಪ್ರತಿಯೊಬ್ಬ ಹಿಂದುವಿನ ಆಶಯ. ಆದ್ದರಿಂದ ಗೋಹತ್ಯೆ ನಿಷೇಧಕ್ಕೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು. ➡ಪುಟ ೪

ವೇದಾಧ್ಯಯನ ಕೇಂದ್ರ ತೆರೆಯಲು ಕ್ರಮ: ಶ್ರೀ

ಮಕ್ಕಳಿಗೆ ಚಿಕ್ಕಂದಿನಲ್ಲೇ ಉತ್ತಮ ಸಂಸ್ಕಾರ, ಶಿಕ್ಷಣ ಸಿಗಬೇಕು. ಈ ದಿಸೆಯಲ್ಲಿ ರಾಜ್ಯದ ವಿವಿಧೆಡೆ ವೇದಾಧ್ಯಯನಕ್ಕೆ ಅನುಕೂಲ ಕಲ್ಪಿಸುವ ಉದ್ದೇಶವಿದೆ. ದಾವಣಗೆರೆ ಭಾಗದಲ್ಲೂ ಸೂಕ್ತ ಸ್ಥಳಾವಕಾಶ ಸಿಕ್ಕರೆ ವೇದಾಧ್ಯಯನ ಕೇಂದ್ರ ತೆರೆಯಲು ಕ್ರಮ ವಹಿಸಲಾಗುವುದು ಎಂದು ಪೇಜಾವರ ಶ್ರೀ ತಿಳಿಸಿದರು.

ಟ್ರಂಪ್ ಸುಂಕ ರದ್ದು

- ಸುಪ್ರೀಂ ಕೋರ್ಟ್‌ನಿಂದ ಮಹತ್ವದ ಆದೇಶ
- ತುರ್ತು ಪರಿಸ್ಥಿತಿ ಅಧಿಕಾರ ಬಳಕೆ ಸಲ್ಲದು
- ಭಾರತ, ಬ್ರೆಜಿಲ್ ಸೇರಿ ಎಲ್ಲ ದೇಶಗಳಿಗೆ ಲಾಭ ಸಾಧ್ಯತೆ

• **ವಾಷಿಂಗ್ಟನ್:** ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಏಕಪಕ್ಷೀಯವಾಗಿ ಹಲವಾರು ದೇಶಗಳ ಮೇಲೆ ವ್ಯಾಪಕ ಸುಂಕವನ್ನು ವಿಧಿಸುವ ಮೂಲಕ ಫೆಡರಲ್ ಕಾನೂನನ್ನು ಉಲ್ಲಂಘಿಸಿದ್ದಾರೆ ಎಂದು ಅಮೆರಿಕ ಸುಪ್ರೀಂ ಕೋರ್ಟ್ ಶುಕ್ರವಾರ ತೀರ್ಪು ನೀಡಿದೆ.

ಮುಖ್ಯ ನ್ಯಾ.ಜಾನ್ ರಾಬರ್ಟ್ಸ್ ಈ ವಿಷಯದ ಬಗ್ಗೆ ಬಹುಮತದ ತೀರ್ಪನ್ನು ಬರೆದರು. ಭಾರತ ಮತ್ತು ಬ್ರೆಜಿಲ್‌ನಂತಹ ಪ್ರಮುಖ ವ್ಯಾಪಾರ ಪಾಲುದಾರರ ಮೇಲೆ ಶೇ.50ರಷ್ಟು ಸುಂಕವನ್ನು ಹೆಚ್ಚಿಸಿದ ಕ್ರಮಗಳು ಕಾನೂನನ್ನು ಮೀರಿವೆ ಎಂದು ನ್ಯಾಯಾಲಯವು 6-3ರ ಬಹುಮತದಿಂದ ಒಪ್ಪಿಕೊಂಡಿತು. ➡ಪುಟ ೪

ನಂದಿನಿ ನಕಲಿ ತುಪ್ಪಕ್ಕೆ ಕಡಿವಾಣ ಹಾಕಲು ಕೆಎಂಎಫ್ ಕ್ರಮ

ತುಪ್ಪದ ಪ್ಯಾಕ್‌ಗೆ ಕ್ಯುಆರ್ ಕೋಡ್

• **ಬೆಂಗಳೂರು:** ನಂದಿನಿ ಹೆಸರಲ್ಲಿ ನಕಲಿ ತುಪ್ಪಕ್ಕೆ ಕಡಿವಾಣ ಹಾಕಲು ಮುಂದಾಗಿರುವ ಕರ್ನಾಟಕ ಹಾಲು ಒಕ್ಕೂಟ (ಕೆಎಂಎಫ್), ತುಪ್ಪದ ಪ್ಯಾಕ್‌ಗಳ ಮೇಲೆ ಕ್ಯುಆರ್ ಕೋಡ್ ಜಾರಿ ಮಾಡಲು ಸಿದ್ಧತೆ ನಡೆಸಿದೆ.

ನಂದಿನಿ ಉತ್ಪನ್ನಗಳು ಕನ್ನಡಿಗರ ಸ್ವಾಭಿಮಾನ, ಕನ್ನಡಿಗರ ಭಾವನೆಯಾಗಿದೆ. ಇತ್ತೀಚಿನ ದಿನಗಳಲ್ಲಿ ನಂದಿನಿ ಬ್ರ್ಯಾಂಡ್ ಹೆಸರಲ್ಲಿ ನಕಲಿ ಉತ್ಪನ್ನಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಇದರಿಂದ ಎಚ್ಚೆತ್ತಿರುವ ಕೆಎಂಎಫ್ ಅಧಿಕಾರಿಗಳು ನಕಲಿ ಉತ್ಪನ್ನಗಳಿಗೆ ಕಡಿವಾಣ ಹಾಕಲು ಮುಂದಾಗಿದ್ದಾರೆ.



ಕೆಲವು ದಿನಗಳ ಹಿಂದೆ ನಂದಿನಿ ತುಪ್ಪದ ಬಗ್ಗೆ ಆರೋಪ ಸಹ ಕೇಳಿ ಬಂದಿತ್ತು. ಆದ್ದರಿಂದ ನಂದಿನಿ ಉತ್ಪನ್ನದ ಗುಣಮಟ್ಟ ಮತ್ತು ನಂಬಿಕೆಯನ್ನು ಉಳಿಸಿಕೊಳ್ಳಲು ಕೆಎಂಎಫ್ ಈಗ ನಂದಿನಿ ತುಪ್ಪದ ಪ್ಯಾಕೆಟ್ ಮೇಲೆ ಕ್ಯುಆರ್ ಕೋಡ್ ಜಾರಿ ಮಾಡಲು ಮುಂದಾಗಿದೆ. ಗ್ರಾಹಕರು ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ, ಒಟಿಪಿ ಪರಿಶೀಲನೆ ಮೂಲಕ ಉತ್ಪನ್ನದ ಮೂಲ, ಉತ್ಪಾದನಾ ದಿನಾಂಕ ಮತ್ತು ದೃಢೀಕರಣದ ಬಗ್ಗೆ ಸ್ಪಷ್ಟ ಮಾಹಿತಿ ಪಡೆದುಕೊಳ್ಳಬಹುದಾಗಿದೆ. ➡ಪುಟ ೪

ಕ್ಯುಆರ್ ಕೋಡ್‌ನಲ್ಲಿ ಒದಗಿಸಲಾದ ವಿವರಗಳು

- ಉತ್ಪಾದನಾ ಸ್ಥಳ
- ಉತ್ಪಾದನಾ ದಿನಾಂಕ
- ಮಾರುಕಟ್ಟೆ ಬಿಡುಗಡೆ ದಿನಾಂಕ
- ಮಾರುಕಟ್ಟೆ ಗುರುತಿನ ಕೋಡ್

ಹೇಗೆ ಕೆಲಸ ಮಾಡುತ್ತದೆ?

ಪ್ರತಿಯೊಂದು ತುಪ್ಪದ ಪ್ಯಾಕೆಟ್ ಮತ್ತು ಬಾಟಲಿ ಮೇಲೆ ವಿಶಿಷ್ಟವಾದ ಕ್ಯುಆರ್ ಕೋಡ್ ಮುದ್ರಿಸಲಾಗುವುದು. ಗ್ರಾಹಕರು ಉತ್ಪನ್ನದ ಸತ್ಯಾಸತ್ಯತೆ ಪರಿಶೀಲಿಸಲು ತಮ್ಮ ಸ್ಮಾರ್ಟ್‌ಫೋನ್ ಮೂಲಕ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಬಹುದು. ಸ್ಕ್ಯಾನ್ ಮಾಡಿದ ನಂತರ ಗ್ರಾಹಕರು ಪರದೆ ಮೇಲೆ ಪ್ರದರ್ಶಿಸಲಾದ ನಿರ್ದಿಷ್ಟ ಸಂಖ್ಯೆ ನಮೂದಿಸಬೇಕು. ಸಂಖ್ಯೆ ಸಲ್ಲಿಸಿದ ನಂತರ ಫೋನ್‌ಗೆ ಒಟಿಪಿ ಕಳುಹಿಸಲಾಗುತ್ತದೆ. ➡ಪುಟ ೪

ಸಂಗೊಳ್ಳಿ ರಾಯಣ್ಣ ಪ್ರತಿಮೆಗೆ ಅಪಮಾನ

• **ಬೆಳಗಾವಿ:** ಯಾರೋ ಕಿಡಿಗೇಡಿಗಳು ಮಚ್ಚೆ ಗ್ರಾಮದಲ್ಲಿರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರ ಪ್ರತಿಮೆಗೆ ಯಾವುದೋ ಪದಾರ್ಥ ಹಚ್ಚಿ ಅಪಮಾನ ಮಾಡಿರುವ ಘಟನೆ ಗುರುವಾರ ತಡರಾತ್ರಿ ನಡೆದಿದೆ.



ಕೂಡಲೇ ಘಟನಾ ಸ್ಥಳಕ್ಕೆ ದೌಡಾಯಿಸಿದ ಪೊಲೀಸರು ಪರಿಶೀಲನೆ ನಡೆಸಿದ್ದಾರೆ. ಮಚ್ಚೆ ಗ್ರಾಮದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದೆ. ಪ್ರತಿಮೆ ಮೇಲಿದ್ದ ಪದಾರ್ಥದ ಮಾದರಿಯನ್ನು ಸಂಗ್ರಹಿಸಿ ಫೊರೆನ್ಸಿಕ್ ಪರೀಕ್ಷೆಗೆ ಕಳುಹಿಸಲಾಗಿದೆ. ಸ್ಥಳದ ಸಮೀಪದಲ್ಲೇ ಸುಮಾರು 10 ಮೀಟರ್ ದೂರದಲ್ಲಿ ಸಿಸಿ ಟಿವಿ ಕ್ಯಾಮೆರಾ ಇರುವುದರಿಂದ ಅದರ ದೃಶ್ಯಾವಳಿಗಳನ್ನು ಪೊಲೀಸರು ಪರಿಶೀಲನೆ ನಡೆಸಿದ್ದಾರೆ. ಈ ಕೃತ್ಯದ ಬಗ್ಗೆ ದೂರುದಾರರನ್ನು ವಿಚಾರಣೆಗೊಳಪಡಿಸಲಾಗಿದೆ. ➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು)	ಬೆಳ್ಳಿ: 2,51,500 (2,51,000) ಅಪರಂಜಿ ಚಿನ್ನ 15,380 (15,480) ಆಭರಣ ಚಿನ್ನ: 14,315 (14,415) ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿ.ಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)
ಷೇರು ಸೂಚ್ಯಂಕ	ಬಿಎಸ್‌ಇ 82,814 (316↑) ಎನ್‌ಎಸ್‌ಇ 25,571 (116↑)
$1 = ₹90.68	

ಕಳೆದ ಐದು ದಿನಗಳಿಂದ ದಿಲ್ಲಿಯ ಭಾರತ್ ಮಂಟಪಂನಲ್ಲಿಯಶಸ್ವಿಯಾಗಿ ನಡೆದ ಎಐ ಶೃಂಗಸಭೆಗೆ ಹಲವು ಜಾಗತಿಕ ನಾಯಕರು ಸಾಕ್ಷಿಯಾದರು. ಹಲವು ಒಪ್ಪಂದಗಳಿಗೆ ಸಹಿ ಹಾಕುವ ಮೂಲಕ ಭಾರತ ವಿಶ್ವ ನಾಯಕರ ಜತೆ ಅನೇಕ ವಿಚಾರಗಳ ಬಗ್ಗೆ ಚರ್ಚಿಸಿದೆ. ಅಲ್ಲದೇ 2047ರ ವಿಕಸಿತ ಭಾರತ ಗುರಿ ತಲುಪುವತ್ತ ಮತ್ತೊಂದು ಹೆಜ್ಜೆ ಮುಂದಿಟ್ಟಿದೆ.

ವಿಶ್ವಕ್ಕೆ ಭಾರತದ ಬುದ್ಧಿಮತ್ತೆ ದರ್ಶನ

ವ್ಯಾಪಾರ, ತಂತ್ರಜ್ಞಾನ, ಎಐ ಸಹಕಾರಕ್ಕೆ ಒತ್ತು

ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಮಾರಿಷಸ್, ಶ್ರೀಲಂಕಾ ಹಾಗೂ ಸ್ಲೋವಾಕಿಯಾ ರಾಷ್ಟ್ರಗಳ ಉನ್ನತ ನಾಯಕರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದರು. ವ್ಯಾಪಾರ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿ ಸಹಕಾರವನ್ನು ಮತ್ತಷ್ಟು ಬಲಪಡಿಸುವುದು ಈ ಸಭೆಗಳ ಪ್ರಮುಖ ಉದ್ದೇಶವಾಗಿತ್ತು.ಎಐ ಇಂಪ್ಯಾಕ್ಟ್ ಶೃಂಗಸಭೆಯ ಅಂಗವಾಗಿ ನಡೆದ ಈ ಭೇಟಿಗಳ ವೇಳೆ ಮೋದಿ ಅವರು ವಿಶ್ವಸಂಸ್ಥೆಯ ಮಹಾಸಚಿವ ಅಂಟೋನಿಯೊ ಗುಟೆರೇಸ್ ಅವರನ್ನು ಭೇಟಿಯಾಗಿ ಕೃತಕ ಬುದ್ಧಿಮತ್ತೆಯ ಬಳಕೆಯನ್ನು ಎಲ್ಲರನ್ನು ಒಳಗೊಂಡಂತೆ ರೂಪಿಸುವ ಕುರಿತು ಚರ್ಚಿಸಿದರು. ಎಐ ಕ್ಷೇತ್ರದಲ್ಲಿ ವಿಶ್ವಸಂಸ್ಥೆ ರಚನಾತ್ಮಕ ಪಾತ್ರ ವಹಿಸುವ ಅಗತ್ಯವನ್ನು ಅವರು ಉಲ್ಲೇಖಿಸಿದರು.

ಸಾಮಾಜಿಕ ಜಾಲತಾಣದಲ್ಲಿ ತಮ್ಮ ಅಭಿಪ್ರಾಯ ಹಂಚಿಕೊಂಡ ಮೋದಿ, ವಿಶ್ವಸಂಸ್ಥೆಯ ಸುಧಾರಣೆ ಕುರಿತು ಕೂಡ ಚರ್ಚೆ ನಡೆದಿರುವುದಾಗಿ ಹೇಳಿದರು. ವಿಶೇಷವಾಗಿ ಗ್ಲೋಬಲ್ ಸೌತ್ ದೇಶಗಳಿಗೆ ಹೆಚ್ಚಿನ ಪ್ರತಿನಿಧಿತ್ವ ಮತ್ತು ಧ್ವನಿ ನೀಡುವ ಅಗತ್ಯವನ್ನು ಅವರು ಪ್ರಸ್ತಾಪಿಸಿದರು.

ಹಲವು ರಾಷ್ಟ್ರ ನಾಯಕರ ಜತೆಗೆ ಮೋದಿ ದ್ವಿಪಕ್ಷೀಯ ಮಾತುಕತೆ

ಮಾರಿಷಸ್ ಪ್ರಧಾನಿ ಡಾ. ನವೀಂಚಂದ್ರ ರಾಮಗೂಲಾಮ್ ಅವರೊಂದಿಗೆ ನಡೆದ ಮಾತುಕತೆ ಬಳಿಕ, ಪ್ರಾದೇಶಿಕ ಭದ್ರತೆ ಮತ್ತು ಸಮೃದ್ಧಿಗಾಗಿ ಎರಡೂ ದೇಶಗಳು ಸಮೀಪ ಸಹಕಾರ ಮುಂದುವರಿಸಲಿವೆ ಎಂದು ಮೋದಿ ಹೇಳಿದರು. ಎಐ, ತಂತ್ರಜ್ಞಾನ, ಸಂಸ್ಕೃತಿ ಹಾಗೂ ಜನರ ನಡುವಿನ ಬಾಂಧವ್ಯ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ತಂತ್ರಾತ್ಮಕ ಪಾಲುದಾರಿಕೆಯನ್ನು ಹೊಸ ಎತ್ತರಗಳಿಗೆ ಕೊಂಡೊಯ್ಯುವ ಬದ್ಧತೆಯನ್ನು ಪುನರುಚ್ಚರಿಸಲಾಗಿದೆ ಎಂದು ಅವರು ತಿಳಿಸಿದರು.

ಶ್ರೀಲಂಕಾ ಅಧ್ಯಕ್ಷ ಅನುರ ಕುಮಾರ ದಿಸ್ಸನಾಯಕೆ ಅವರೊಂದಿಗೆ ನಡೆದ ಸಭೆಯಲ್ಲಿ, ಭಾರತ-ಶ್ರೀಲಂಕಾ ಸಂಬಂಧಗಳ ಇತ್ತೀಚಿನ ಪ್ರಗತಿಯನ್ನು ಪರಿಶೀಲಿಸಲಾಗಿದೆ. ಶಕ್ತಿ, ಸಂಪರ್ಕ ವ್ಯವಸ್ಥೆ, ಮೂಲಸೌಕರ್ಯ, ಆರೋಗ್ಯ, ಕೌಶಲ್ಯಾಭಿವೃದ್ಧಿ, ಸಂಸ್ಕೃತಿ ಹಾಗೂ ನೀಲಿ ಆರ್ಥಿಕತೆ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಸಹಕಾರದ ಅವಕಾಶಗಳ ಕುರಿತು ಚರ್ಚಿಸಲಾಗಿದೆ ಎಂದು ಮೋದಿ ತಿಳಿಸಿದರು.

ಸ್ಲೋವಾಕಿಯಾ ಅಧ್ಯಕ್ಷ ಪೀಟರ್ ಪೆಲ್ಲೆಗ್ರಿನಿ ಅವರೊಂದಿಗೆ ನಡೆದ ಮಾತುಕತೆ ಫಲಪ್ರದವಾಗಿತ್ತು ಎಂದು ಮೋದಿ ಹೇಳಿದ್ದಾರೆ. ರಕ್ಷಣಾ, ಅಂತರಿಕ್ಷ ಹಾಗೂ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಸಹಕಾರ ವಿಸ್ತರಣೆಗೆ ಒತ್ತು ನೀಡಲಾಗಿದೆ. ಭಾರತ-ಯೂರೋಪಿಯನ್ ಒಕ್ಕೂಟ ಮುಕ್ತ ವ್ಯಾಪಾರ ಒಪ್ಪಂದವು ವ್ಯಾಪಾರ ಮತ್ತು ಹೂಡಿಕೆಗಳಿಗೆ ಹೊಸ ಅವಕಾಶಗಳನ್ನು ಸೃಷ್ಟಿಸಲಿದೆ ಎಂದು ಮೋದಿ ಅಭಿಪ್ರಾಯಪಟ್ಟಿದ್ದಾರೆ. ಡಿಜಿಟಲ್ ತಂತ್ರಜ್ಞಾನ, ಸ್ಟಾರ್ಟ್‌ಅಪ್‌ಗಳು, ರಕ್ಷಣಾ ಹಾಗೂ ಅಂತರಿಕ್ಷ ಕ್ಷೇತ್ರಗಳಲ್ಲಿ ಸಹಕಾರ ಕುರಿತೂ ಮಹತ್ವದ ಚರ್ಚೆ ನಡೆದಿದೆ ಎಂದು ತಿಳಿಸಿದ್ದಾರೆ. ಪ್ರಮುಖ ಎಐ ಮತ್ತು ಡೀಪ್ ಟೆಕ್ ನವೋದ್ಯಮಗಳ 16 ಸಿಇಒಗಳ ಜತೆ ಮತ್ತು ಸತತ 7 ದ್ವಿಪಕ್ಷೀಯ ಸಭೆಗಳನ್ನು ನಡೆಸಿದರು.ಭಾರತೀಯ ನವೋದ್ಯಮ ಇಕೋಸಿಸ್ಟಂ, ಬಂಡವಾಳ, ಸಂಶೋಧನೆ ಮತ್ತು ಅಭಿವೃದ್ಧಿ, ಕೌಶಲಾಭಿವೃದ್ಧಿ ಇತ್ಯಾದಿ ವಿಚಾರಗಳ ಬಗ್ಗೆ ಜಾಗತಿಕ ನಾಯಕರ ಜತೆ ಪ್ರಧಾನಿ ಮೋದಿ ಚರ್ಚೆ ನಡೆಸಿದರು. ಆರೋಗ್ಯ, ಕೃಷಿ, ಶಿಕ್ಷಣ ಮತ್ತು ಆಡಳಿತಾತ್ಮಕ ಸವಾಲುಗಳ ಕುರಿತು ಚರ್ಚಿಸಲಾಗಿದೆ.



ಕೊನೆಯ ದಿನದ ಹೈಲೈಟ್ಸ್

- ಅಮೆರಿಕ ನೇತೃತ್ವದ ಪ್ಯಾಕ್ಸ್ ಸಿಲಿಕಾ ಮೈತ್ರಿಕೂಟ ಸೇರಿದ ಭಾರತ
- ಭಾರತ-ಅಮೆರಿಕ ದ್ವಿಪಕ್ಷೀಯ ವ್ಯಾಪಾರ ಸಂಬಂಧಕ್ಕೆ ಉತ್ತೇಜನ
- ಜಾಗತಿಕ ಮಟ್ಟದಲ್ಲಿ ಭಾರತದ ಎಐ ಸಾಮರ್ಥ್ಯ ಮತ್ತು ಟೆಕ್ ಮೂಲಸೌಕರ್ಯ ಮಾರುಕಟ್ಟೆಯಲ್ಲಿ ಅಂದಾಜು 250 ಶತಕೋಟಿ ಡಾಲರ್ ಹೂಡಿಕೆ ಘೋಷಣೆ
- ಪ್ರಧಾನಿಯವರ ನೈತಿಕ, ಮಾನವ ಆಧಾರಿತ ಎಐ ದೃಷ್ಟಿಕೋನ ಮಾನವ್ ದೇಸಿ ಎಐ ಅಭಿವೃದ್ಧಿ ಯೋಜನೆಗೆ ಉತ್ತೇಜನ
- ಸುಮಾರು 10,000 ಎಐ ನವೋದ್ಯಮಗಳ ಸಾಧನೆ ಗುರುತಿಸಿದ್ದು, ಜಾಗತಿಕ ಪರಿಣಾಮ ಎಐ ಚಾಲೆಂಜ್ ಪ್ರಶಸ್ತಿ ಗೆದ್ದ ಇನಿಹೀಲ್
- ಆರೋಗ್ಯ ಕ್ಷೇತ್ರದಲ್ಲಿ ಎಐ ಪ್ಲಾಟ್‌ಫಾರಂ ಬೋಧ್ ಅನಾವರಣ
- ಜಾಗತಿಕ ನಾಯಕರೊಂದಿಗೆ ಪ್ರಧಾನಿ ಮೋದಿ ಚರ್ಚೆ ಮತ್ತು ಸತತ 7 ದ್ವಿಪಕ್ಷೀಯ ಸಭೆ
- ಎಐ ಆಡಳಿತ, ಭದ್ರತೆ ಮತ್ತು ಜವಾಬ್ದಾರಿಯುತ ನಿಯೋಜನೆ ಭರವಸೆ ನೀಡಿ ಜಾಗತಿಕ ನಾಯಕರ ಜಂಟಿ ಘೋಷಣೆ



ಭಾರತದ ಅಭಿವೃದ್ಧಿ ಶ್ಲಾಘನೀಯ: ಮ್ಯಾಕ್ರಾನ್

ವೇಗವಾಗಿ ಅಭಿವೃದ್ಧಿಯಾಗುತ್ತಿರುವ ಎಐ ತಂತ್ರಜ್ಞಾನಕ್ಕೆ ಸುರಕ್ಷಿತ ಮೇಲ್ವಿಚಾರಣೆಯ ಅಗತ್ಯವಿದೆ . ಈ ಕ್ಷೇತ್ರದ ನಿಯಮಗಳನ್ನು ರೂಪಿಸುವ ಕಾರ್ಯವನ್ನು ಮುಂದುವರಿಸಲು ಬದ್ಧರಾಗಿದ್ದೇವೆ. ಭಾರತದಂತಹ ನಮ್ಮ ಮಿತ್ರ ರಾಷ್ಟ್ರಗಳೊಂದಿಗೆ ಸೇರಿ ನಿಯಮ ರೂಪಿಸುತ್ತೇವೆ. ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯವನ್ನು ಜನಸಾಮಾನ್ಯರಿಗೆ ತಲುಪಿಸುವಲ್ಲಿ ಭಾರತ ವಹಿಸಿರುವ ಪ್ರಮುಖ ಪಾತ್ರ ಶ್ಲಾಘನೀಯವಾದುದು ಎಂದು ಫ್ರಾನ್ಸ್‌ನ ಅಧ್ಯಕ್ಷ ಇಮಾನ್ಯುಯೆಲ್ ಮ್ಯಾಕ್ರಾನ್ ಹೊಸದಿಲ್ಲಿಯಲ್ಲಿ ನಡೆದ ಜಾಗತಿಕ ಕೃತಕ ಬುದ್ಧಿಮತ್ತೆ (ಎಐ)ಶೃಂಗಸಭೆಯಲ್ಲಿ ಹೇಳಿದ್ದಾರೆ.

ಭಾರತದ ಎಐ ಕಿಡ್

'ಭಾರತದ ಎಐ ಕಿಡ್' ಎಂದೇ ಕರೆಯಲ್ಪಡುವ ಹದಿನಾರು ವರ್ಷದ ರೌಲ್ ಜಾನ್ ಅಜು, ಎಐ ಇಂಪ್ಯಾಕ್ಟ್ ಶೃಂಗಸಭೆಯಲ್ಲಿ ಗಮನ ಸೆಳೆದಿದ್ದಾನೆ. ಅಲ್ಲಿ ಆತ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಅಂಟೋನಿಯೊ ಗುಟೆರೇಸ್ ಅವರನ್ನು ಭೇಟಿಯಾಗಿದ್ದಾನೆ. ಕೃತಕ ಬುದ್ಧಿಮತ್ತೆ ಮತ್ತು ದೊಡ್ಡ ಪ್ರಮಾಣದ ತರಬೇತಿ ಯೋಜನೆಗಳಲ್ಲಿ ಆತನ ಚಟುವಟಿಕೆಯನ್ನು ಗುರುತಿಸಿ ಶೃಂಗಸಭೆಗೆ ಆಹ್ವಾನಿಸಲಾಗಿತ್ತು. ಅನೇಕ ಕಂಪನಿಗಳ ಸಹಯೋಗದೊಂದಿಗೆ, ವೃತ್ತಿಪರರೊಂದಿಗೆ, ಸುಮಾರು 1.5 ಲಕ್ಷ ವಿದ್ಯಾರ್ಥಿಗಳಿಗೆ ಆತ ತರಬೇತಿ ನೀಡಿದ್ದಾನೆ.



1.5 ಲಕ್ಷ ವಿದ್ಯಾರ್ಥಿಗಳಿಗೆ ತರಬೇತಿ ನೀಡಿದ ಅಜು

ಜವಾಬ್ದಾರಿಯುತ ಎಐ ಮಾತು: ಮಕ್ಕಳಿಗೆ ಸರಳ ಭಾಷೆಯಲ್ಲಿ ಕೃತಕ ಬುದ್ಧಿಮತ್ತೆ ಕಲಿಸಲು ಜೆಟ್ಸನ್, ನ್ಯಾನೊ ಆಧಾರಿತ ರೋಬೋಟ್ 'ಮೀಬಾಟ್' ಅನ್ನು ಅಭಿವೃದ್ಧಿಪಡಿಸಿದ್ದಾನೆ. ಎಐ ಹಲ್ಯೂಸಿನೇಶನ್‌ಗಳು (ಭ್ರಮೆ) ಮತ್ತು ಅತಿಯಾದ ಬಳಕೆಯ ಬಗೆಗಿನ ಅಪಾಯಗಳ ಬಗ್ಗೆಯೂ ಆತ ಬೆಳಕು ಚೆಲ್ಲಿದ್ದಾನೆ. 1, 700 ಕೋಟಿ ಮೌಲ್ಯದ ಸಂಸ್ಥೆಯನ್ನು ನಡೆಸುತ್ತಿದ್ದರೂ, ಆತ ನಿಯಮಿತ ಶಾಲಾ ಶಿಕ್ಷಣವನ್ನು ಮುಂದುವರಿಸುತ್ತಿದ್ದಾನೆ.

ಭಾರತದಲ್ಲಿ ಶೀಘ್ರ ಮೊದಲ ಏರ್ ಟ್ಯಾಕ್ಸಿ

ಭಾರತದ ಮೊದಲ ಸ್ಥಳೀಯವಾಗಿ ಅಭಿವೃದ್ಧಿಪಡಿಸಿದ ಏರ್ ಟ್ಯಾಕ್ಸಿಯನ್ನು ಶೃಂಗಸಭೆ 2026 ರಲ್ಲಿ ಪ್ರದರ್ಶಿಸಲಾಯಿತು. ಇದು ನಗರಗಳ ಸಂಚಾರ ವ್ಯವಸ್ಥೆಯಲ್ಲಿ ಒಂದು ಪ್ರಮುಖ ಹೆಜ್ಜೆಯೆನಿಸಿದೆ. ಎಲೆಕ್ಟ್ರಿಕ್ ವರ್ಟಿಕಲ್ ಟೇಕ್-ಆಫ್ ಮತ್ತು ಲ್ಯಾಂಡಿಂಗ್ (ಇ-ವಿಟಿಒಎಲ್) ವಿಮಾನವನ್ನು ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮದ್ರಾಸ್ ಸಹಯೋಗದೊಂದಿಗೆ ದಿ ಇಪ್ಲೇನ್ ಕಂಪನಿ ಅಭಿವೃದ್ಧಿಪಡಿಸಿದೆ. ವಿಮಾನವನ್ನು ಜನನಿಬಿಡ ನಗರಗಳಲ್ಲಿ ಪ್ರಯಾಣದ ಸಮಯವನ್ನು ಕಡಿಮೆ ಮಾಡಲು ವಿನ್ಯಾಸಗೊಳಿಸಲಾಗಿದೆ. ಇದರ ಟೇಕ್-ಆಫ್ ಅಥವಾ ಲ್ಯಾಂಡಿಂಗ್‌ಗೆ ರನ್‌ವೇ ಅಗತ್ಯವಿರುವುದಿಲ್ಲ.



8 ನಿಮಿಷಗಳಲ್ಲಿ 36 ಕಿಮೀ!: ಬೆಂಗಳೂರು ವಿಮಾನ ನಿಲ್ದಾಣದಿಂದ ಯುಬಿ ಸಿಟಿಗೆ ರಸ್ತೆಯ ಮೂಲಕ ಎರಡು ಗಂಟೆಗಳವರೆಗೆ ತೆಗೆದುಕೊಳ್ಳಬಹುದಾದಂತಹ 36 ಕಿಮೀ ಪ್ರಯಾಣವನ್ನು ಈ ಟ್ಯಾಕ್ಸಿ ಎಂಟು ನಿಮಿಷಗಳಲ್ಲಿ ಪೂರ್ಣಗೊಳಿಸುವ ನಿರೀಕ್ಷೆಯಿದೆ. ದರ ಸುಮಾರು 1,700 ರೂ. ಆಗಿರಬಹುದು ಎಂದು ಅಂದಾಜಿಸಲಾಗಿದೆ. ಒಂದು ಬಾರಿ ಬ್ಯಾಟರಿ ಚಾರ್ಜ್ ಮಾಡಿದರೆ ಹಲವೆಡೆ ನಿಂತು ಸಾಗುವ ಸಾಮರ್ಥ್ಯ ಇದಕ್ಕಿದೆ. 2027ರಲ್ಲಿ ಏರ್ ಆಂಬ್ಯುಲೆನ್ಸ್ ಸೇವೆಗಳನ್ನು ಯೋಜಿಸಲಾಗಿದ್ದು, ನಂತರ ಪ್ರಮುಖ ನಗರಗಳಲ್ಲಿ ವಾಣಿಜ್ಯ ಕಾರ್ಯಾಚರಣೆ ಆರಂಭಿಸಲು ಚಿಂತನೆ ನಡೆದಿದೆ.



ಭಾರತ ಕೃತಕ ಬುದ್ಧಿಮತ್ತೆಯ ಕ್ರಾಂತಿ ಕೇಂದ್ರ

2026ರ ಇಂಡಿಯಾ ಎಐ ಇಂಪ್ಯಾಕ್ಟ್ ಶೃಂಗಸಭೆಯಲ್ಲಿ ಉನ್ನತ ತಂತ್ರಜ್ಞಾನದ ದಿಗ್ಗಜರು ಭಾರತದ ಸಾಮರ್ಥ್ಯ, ಪ್ರತಿಭೆ ಮತ್ತು ನೀತಿಗಳ ಬಗ್ಗೆ ಬಲವಾದ ವಿಶ್ವಾಸ ವ್ಯಕ್ತಪಡಿಸಿದ್ದು, ಭಾರತ ಕೃತಕ ಬುದ್ಧಿಮತ್ತೆಯ ಭವಿಷ್ಯದ ಜಾಗತಿಕ ಕೇಂದ್ರವಾಗಿ ಸ್ಥಾನ ಪಡೆದಿದೆ ಎಂದು ಶ್ಲಾಘಿಸಿದ್ದಾರೆ. ಓಪನ್ ಎಐಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸ್ಯಾಮ್ ಆಲ್ಟ್ಮನ್, ಭಾರತ ಪೂರ್ಣ ಪ್ರಮಾಣದ ಎಐ ನಾಯಕ ಆಗಲು ಬೇಕಾದ ಎಲ್ಲಾ ಅರ್ಹತೆ ಹೊಂದಿದೆ ಎಂದು ಹೇಳಿದ್ದಾರೆ.

ಗೂಗಲ್ ಸಿಇಒ ಸುಂದರ್ ಪಿಚೈ, ಭಾರತ ಕೃತಕ ಬುದ್ಧಿಮತ್ತೆಯಲ್ಲಿ ಅಸಾಧಾರಣವಾಗಿ ಮುನ್ನುಗ್ಗುತ್ತಿದೆ ಎಂದು ಹೇಳಿದ್ದಾರೆ. ಅವರು ಭಾರತದೊಂದಿಗೆ ಗೂಗಲ್‌ನ ದೀರ್ಘಾವಧಿಯ ಪಾಲುದಾರಿಕೆಯನ್ನು ಪುನರುಚ್ಚರಿಸಿದ್ದಾರೆ. ಗೂಗಲ್ ಡೀಪ್ ಮೈಂಡ್‌ನ ಸಿಇಒ ಮತ್ತು ಸಹ-ಸಂಸ್ಥಾಪಕರಾದ ಡೆಮಿಸ್ ಹ್ಯಾಸಾಬಿಸ್, ಸಂಶೋಧನಾ ಪಾಲುದಾರಿಕೆಗಳು ವಿಸ್ತರಿಸಿದಂತೆ ಭಾರತ ಎಐ ಪವರ್‌ಹೌಸ್ ಆಗಲು ಸಜ್ಜಾಗಿದೆ, ಎಂದು ಹೇಳಿದ್ದಾರೆ.

ಮಿಸ್ಟ್ರಲ್ ಎಐಯ ಸಹ-ಸಂಸ್ಥಾಪಕ ಮತ್ತು ಸಿಇಒ ಆರ್ಥರ್ ಮೆನ್ಷ್, ಭಾರತದ ಅಪಾರ ಪ್ರತಿಭೆಯನ್ನು ಉಲ್ಲೇಖಿಸುತ್ತಾ,ತಮ್ಮ ಸಂಸ್ಥೆಯ ನಾಲ್ಕನೇ ಒಂದು ಭಾಗದಷ್ಟು ಸಂಶೋಧಕರು ಭಾರತೀಯರು ಎಂದು ಗಮನಸೆಳೆದರು.

ಎಡಬ್ಲ್ಯೂಎಸ್ ಏಷ್ಯಾ ಪೆಸಿಫಿಕ್ ಮತ್ತು ಜಪಾನ್‌ನ ಉಪಾಧ್ಯಕ್ಷ ಜೈಮ್ ವ್ಯಾಲೆಸ್, ಕ್ಲೌಡ್ ಕಂಪ್ಯೂಟಿಂಗ್ ಅವಕಾಶಗಳನ್ನು ಜನರಿಗೆ ತೆರೆದಿಡುತ್ತಿದೆ, ಮತ್ತು ಭಾರತದ ಎಐ ಬೆಳವಣಿಗೆಯ ಮೂಲಸೌಕರ್ಯ ಪೂರೈಕೆಯಲ್ಲಿ ಬೆನ್ನೆಲುಬಾಗಿ ಕಾರ್ಯನಿರ್ವಹಿಸುತ್ತದೆ, ಎಂದು ಭರವಸೆ ವ್ಯಕ್ತಪಡಿಸಿದರು.

ಮೈಕ್ರೋಸಾಫ್ಟ್‌ನ ಅಧ್ಯಕ್ಷ ಬ್ರಾಡ್ ಸ್ಮಿತ್, ಕೃತಕ ಬುದ್ಧಿಮತ್ತೆ ಜಾಗತಿಕ ದಕ್ಷಿಣಕ್ಕೆ ಹೇಗೆ ಪ್ರಯೋಜನ ನೀಡುತ್ತದೆ ಎಂಬುದನ್ನು ಅನ್ವೇಷಿಸಲು ಜಗತ್ತು ಭಾರತದಲ್ಲಿ ಒಗ್ಗೂಡಿದೆ, ಎಂದು ಹೇಳಿದ್ದಾರೆ. ಆಕ್ಸೆಂಚರ್‌ನ ಅಧ್ಯಕ್ಷೆ ಮತ್ತು ಸಿಇಒ ಜೂಲಿ ಸ್ವೀಟ್, ಪ್ರಾಥಮಿಕ ಶಾಲೆಯಿಂದ ಕೃತಕ ಬುದ್ಧಿಮತ್ತೆ ಶಿಕ್ಷಣವನ್ನು ಅಳವಡಿಸಿಕೊಂಡಿದ್ದಕ್ಕಾಗಿ ಭಾರತವನ್ನು ಶ್ಲಾಘಿಸಿದ್ದಾರೆ.

ವಿಕಸಿತ ಭಾರತಕ್ಕೆ ಎಐ ಪೂರಕ: ಐಎಂಎಫ್

ಎಐಯನ್ನೊಂದು ಒಳಿತಿನ ಅಥವಾ ಕೆಡುಕಿನ ಶಕ್ತಿಯಾಗಿ ಪರಿವರ್ತಿಸಿಕೊಳ್ಳುವುದು ನಮ್ಮ ಕೈಯ್ಯಲ್ಲಿದೆ. ಹಾಗಾಗಿ ಇದರ ಅಭಿವೃದ್ಧಿ ಮತ್ತು ನಿರ್ವಹಣೆಯಲ್ಲಿ ಸಮತೋಲನ ಮುಖ್ಯ. ಜಾಗತಿಕ ಬೆಳವಣಿಗೆ ದರವನ್ನು ಎಐ ಏರುಗತಿಗೆ ಕೊಂಡೊಯ್ಯಬಲ್ಲುದು. ಭಾರತದ ಪಾಲಿಗೆ ಇದು ಧನಾತ್ಮಕ ಅಂಶ, ಅಂದರೆ ಭಾರತದ ವಿಕಸಿತ ಭಾರತ ವಿಷನ್ ಖಂಡಿತ ಸಾಕಾರವಾಗಲಿದೆ ಎಂದು ಐಎಂಎಫ್ ಆಡಳಿತ ನಿರ್ದೇಶಕರಾದ ಕ್ರಿಸ್ಟಲಿನಾ ಜಾರ್ಜೀವಾ ಎಐ ಇಂಪ್ಯಾಕ್ಟ್ ಸಮ್ಮಿಟ್‌ನಲ್ಲಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಕಿರುಸುದ್ದಿ

ತರೂರ್ ಪುಸ್ತಕಕ್ಕೆ ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಶ್ಲಾಘನೆ



• **ಹೊಸದಿಲ್ಲಿ:** ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ಹಿರಿಯ ಕಾಂಗ್ರೆಸ್ ನಾಯಕ ಮತ್ತು ಸಂಸದ ಶಶಿ ತರೂರ್ ಅವರ ಹೊಸ ಪುಸ್ತಕ ದಿ ಸೇಜ್ ಹೂ ರೀಮಾಜೈನ್ಡ್ ಹಿಂದುಯಿಸಂ: ದಿ ಲೈಫ್, ಲೆಸನ್ಸ್, ಆ್ಯಂಡ್ ಲೆಗಸಿ ಆಫ್ ಶ್ರೀ ನಾರಾಯಣ ಗುರು ಅನ್ನು ಔಪಚಾರಿಕವಾಗಿ ಬಿಡುಗಡೆ ಮಾಡಿದ್ದಾರೆ. ಇದು ಸುಧಾರಕ ನಾರಾಯಣ ಗುರುಗಳ ಆಧ್ಯಾತ್ಮಿಕ ಮತ್ತು ಸಾಮಾಜಿಕ ಪರಂಪರೆ ಸಂರಕ್ಷಿಸುವ ಹೆಗ್ಗುರುತು ಕೃತಿ ಎಂದು ಶ್ಲಾಘಿಸಿದರು.

ಅಸ್ಸಾಂಗೆ ಕೈ ಅವಧಿಯಲ್ಲಿ ನುಸುಳುಕೋರರ ಪ್ರವೇಶ

• **ನಾಥನ್‌ಪುರ (ಅಸ್ಸಾಂ):** ಕಾಂಗ್ರೆಸ್ ತನ್ನ ಆಡಳಿತಾವಧಿಯಲ್ಲಿ ದೇಶದ ಗಡಿ ತೆರೆದಿಟ್ಟಿರುವುದು ಅಸ್ಸಾಂನಲ್ಲಿ ನುಸುಳುಕೋರರು ಸೇರಿಕೊಳ್ಳಲು ಕಾರಣವೆಂದು ಆರೋಪಿಸಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ಹಿಮಂತ ಬಿಸ್ವ ಶರ್ಮಾ ಸರ್ಕಾರ ಪರಿಣಾಮಕಾರಿಯಾಗಿ ಸಮಸ್ಯೆಯನ್ನು ನಿಭಾಯಿಸಿದೆ ಎಂದು ಪ್ರಶಂಸಿಸಿದ್ದಾರೆ.

ವೈಬ್ರೆಂಟ್ ವಿಲೇಜಸ್ ಕಾರ್ಯಕ್ರಮದ ಎರಡನೇ ಹಂತಕ್ಕೆ ಶುಕ್ರವಾರ ಕೇಂದ್ರ ಗೃಹ ಸಚಿವ ಶಾ ಚಾಲನೆ ನೀಡಿದರು. ಗಡಿ ಪ್ರದೇಶಗಳಲ್ಲಿ ಬಾಂಗ್ಲಾ ವಲಸಿಗರ ವಲಸೆ ಮತ್ತು ನುಸುಳುಕೋರರ ಚಟುವಟಿಕೆಗಳನ್ನು ತಡೆಗಟ್ಟಲು ಈ ಯೋಜನೆ ನೆರವಾಗಲಿದೆ.



ಕಾಂಗ್ರೆಸ್ ತನ್ನ ಆಡಳಿತಾವಧಿಯಲ್ಲಿ ಅಸ್ಸಾಂ ಜನರಿಗೆ ಯಾವುದೇ ಅಭಿವೃದ್ಧಿ ಯೋಜನೆಗಳನ್ನು ನೀಡಿಲ್ಲ. ಬಿಜೆಪಿ ಆಡಳಿತದಲ್ಲಿ ದೇಶದಲ್ಲೇ ಅತ್ಯಧಿಕ ದಿನವೊಂದರಲ್ಲಿ 14 ಕಿಮೀ. ರಸ್ತೆ ನಿರ್ಮಾಣ ಮಾಡಲಾಗುತ್ತಿದೆ ಎಂದು ಗೃಹ ಸಚಿವ ಶಾ ಟೀಕಿಸಿದರು.

ಪಾಕಿಸ್ತಾನ ಮತ್ತು ಬಾಂಗ್ಲಾದೇಶ ಜತೆ ಗಡಿ ಹಂಚಿಕೊಳ್ಳುವ 17 ರಾಜ್ಯಗಳ 1,954 ಗ್ರಾಮಗಳು ಯೋಜನೆಯಲ್ಲಿ ಒಳಗೊಂಡಿವೆ.

ಗಡಿ ಪ್ರದೇಶಗಳೆಂದರೆ, ಅವುಗಳನ್ನು ಭೌಗೋಳಿಕವಾಗಿ ಮಾತ್ರವಲ್ಲದೆ ಅಭಿವೃದ್ಧಿ, ಉದ್ಯೋಗ, ಶಿಕ್ಷಣ, ವಿದ್ಯುತ್, ರಸ್ತೆ ಮತ್ತು ದೂರವಾಣಿ ಸಂಪರ್ಕದಲ್ಲೂ ದೇಶದ ಕೊನೆಯ ಗ್ರಾಮಗಳಾಗಿದ್ದವು. ಆದರೆ ಗಡಿ ಗ್ರಾಮಾಭಿವೃದ್ಧಿಗೆ ಪ್ರಧಾನಿ ನರೇಂದ್ರ ಮೋದಿ ಪ್ರಮುಖ ಆದ್ಯತೆ ನೀಡಿದ್ದಾರೆ ಎಂದು ಶಾ ತಿಳಿಸಿದ್ದಾರೆ.

ಲೈಂಗಿಕ ದೌರ್ಜನ್ಯ: ಪತಿ, ಪತ್ನಿಗೆ ಮರಣದಂಡನೆ

• **ಹೊಸದಿಲ್ಲಿ:** 33 ಅಪ್ರಾಪ್ತ ಬಾಲಕರ ಮೇಲಿನ ದಶಕದ ಲೈಂಗಿಕ ದೌರ್ಜನ್ಯ ಪ್ರಕರಣದಲ್ಲಿ ಉತ್ತರ ಪ್ರದೇಶದ ಬಾಂದಾ ವಿಶೇಷ ಪೋಕ್ಸೊ ನ್ಯಾಯಾಲಯವು ಮಾಜಿ ಜೂ. ಎಂಜಿನಿಯರ್ ರಾಮ ಭವನ್ ಹಾಗೂ ಅವರ ಪತ್ನಿ ದುರ್ಗಾವತಿಗೆ ಮರಣದಂಡನೆ ವಿಧಿಸಿದೆ.

2010ರಿಂದ 2020ರವರೆಗೆ ಮಕ್ಕಳ ಮೇಲೆ ವ್ಯವಸ್ಥಿತವಾಗಿ ದೌರ್ಜನ್ಯ ಎಸಗಿದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ, ನ್ಯಾಯಾಲಯವು ಈ ಕೃತ್ಯಗಳನ್ನು 'ಅತ್ಯಂತ ಅಪರೂಪದ ಅಪರಾಧ' ಎಂದು ಪರಿಗಣಿಸಿದೆ.

- 33 ಪುಟ್ಟ ಬಾಲಕರ ಮೇಲೆ ಲೈಂಗಿಕ ದೌರ್ಜನ್ಯ
- ವಿಶೇಷ ಪ್ರಕರಣವೆಂದು ಪರಿಗಣಿಸಿದ ಕೋರ್ಟ್

ಆರೋಪಿಗಳು ಪೀಡಿತರ ಅಶ್ಲೀಲ ವಿಡಿಯೋ ಹಾಗೂ ಛಾಯಾಚಿತ್ರಗಳನ್ನು ಎರಡು ಲಕ್ಷಕ್ಕಿಂತ ಹೆಚ್ಚು ಸಂಖ್ಯೆಯಲ್ಲಿ ಸೃಷ್ಟಿಸಿ, ಇಂಟರ್‌ನೆಟ್ ಮೂಲಕ ಅನೇಕ ದೇಶಗಳಿಗೆ ಹಂಚಿಕೆ ಮಾಡಿರುವುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ.

ಪೋಕ್ಸೊ ಅಡಿಯಲ್ಲಿ ಶಿಕ್ಷೆ ವಿಧಿಸಲಾಗಿದೆ. ಗಂಭೀರ ಲೈಂಗಿಕ ದೌರ್ಜನ್ಯ, ಮಕ್ಕಳನ್ನು ಅಶ್ಲೀಲ ಉದ್ದೇಶಗಳಿಗೆ ಬಳಸಿಕೊಳ್ಳುವುದು, ಅಶ್ಲೀಲ ವಸ್ತುಗಳ ಸಂಗ್ರಹಣೆ ಸೇರಿದಂತೆ ಹಲವು ಆರೋಪಗಳಲ್ಲಿ ಇಬ್ಬರೂ ದೋಷಿಗಳೆಂದು ನ್ಯಾಯಾಲಯ ತೀರ್ಪು ನೀಡಿದೆ.

ಪ್ರತಿಯೊಬ್ಬ ಪೀಡಿತನಿಗೂ ರೂ. 10 ಲಕ್ಷ ಪರಿಹಾರ ನೀಡುವಂತೆ ರಾಜ್ಯ ಸರ್ಕಾರಕ್ಕೆ ನ್ಯಾಯಾಲಯ ನಿರ್ದೇಶಿಸಿದೆ. ಆರೋಪಿಗಳ ಮನೆಯಿಂದ ವಶಪಡಿಸಿಕೊಂಡ ನಗದು ಮೊತ್ತವನ್ನು ಪೀಡಿತರಲ್ಲಿ ಸಮಾನವಾಗಿ ಹಂಚಿಕೆ ಮಾಡುವಂತೆ ಆದೇಶಿಸಲಾಗಿದೆ.

ಲವ್ ಜಿಹಾದ್: ವಿವಾಹ ನೋಂದಣಿಗೆ ಹೊಸ ಕ್ರಮ

• **ಅಹಮದಾಬಾದ್:** ವಿವಾಹ ನೋಂದಣಿ ಪ್ರಕ್ರಿಯೆಯ ದುರುಪಯೋಗ ತಡೆಗಟ್ಟುವ ಉದ್ದೇಶದಿಂದ ಗುಜರಾತ್ ಸರ್ಕಾರ ಹೊಸ ಕ್ರಮಗಳನ್ನು ಘೋಷಿಸಿದೆ.

ಹೊಸ ನಿಯಮದಂತೆ ವಿವಾಹ ನೋಂದಣಿ ಪ್ರಮಾಣಪತ್ರಕ್ಕಾಗಿ ವಧು-ವರರು ಪೋಷಕರಿಗೆ ವಿವಾಹದ ಮಾಹಿತಿ ನೀಡಿರುವುದಾಗಿ ಘೋಷಣಾ ಪತ್ರ ಸಲ್ಲಿಸಬೇಕು. ಜೊತೆಗೆ, ಪೋಷಕರ ಗುರುತುಪತ್ರ, ದೂರವಾಣಿ ಸಂಖ್ಯೆ, ವಾಸಸ್ಥಳದ ದಾಖಲೆ ಸೇರಿದಂತೆ ಅಗತ್ಯ ವಿವರಗಳನ್ನು ಒದಗಿಸುವುದು ಕಡ್ಡಾಯವಾಗಿದೆ.

- ಗುಜರಾತ್ ಸರ್ಕಾರದಿಂದ ಮಹತ್ವದ ನಿರ್ಧಾರ

ರಾಜ್ಯ ಉಪಮುಖ್ಯಮಂತ್ರಿ ಹರ್ಷ ಸಂಘವಿ ವಿಧಾನಸಭೆಯಲ್ಲಿ ಮಾತನಾಡಿ, ಗುರುತು ಮರೆಮಾಡಿ ಹೆಣ್ಣು ಮಕ್ಕಳನ್ನು ಸಿಲುಕಿಸುವ ಘಟನೆಗಳಿಗೆ ಕಡಿವಾಣ ಹಾಕಲು ನಿಯಮಗಳಲ್ಲಿ ಬದಲಾವಣೆ ತರಲಾಗುತ್ತಿದೆ ಎಂದು ತಿಳಿಸಿದರು.

ಅರ್ಜಿಯನ್ನು ಸ್ವೀಕರಿಸಿದ ಬಳಿಕ ಸಹಾಯಕ ನೋಂದಣಾಧಿಕಾರಿ 10 ದಿನಗಳೊಳಗೆ ಪೋಷಕರಿಗೆ ಮಾಹಿತಿ ನೀಡಬೇಕಾಗುತ್ತದೆ. ಪರಿಶೀಲನೆ ಹಾಗೂ ನಿಯಮಗಳ ಪಾಲನೆಯ ನಂತರ, ಅರ್ಜಿ ದಿನಾಂಕದಿಂದ 30 ದಿನಗಳ ಬಳಿಕ ವಿವಾಹ ನೋಂದಣಿ ನಡೆಯಲಿದೆ. ಈ ಎಲ್ಲ ವಿವರಗಳನ್ನು ಸರ್ಕಾರ ಅಭಿವೃದ್ಧಿಪಡಿಸಲಿರುವ ಜಾಲತಾಣ ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ. ಪುತ್ರಿಯರ ಸುರಕ್ಷತೆ ಹಾಗೂ ಸಾಮಾಜಿಕ ವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಸಂಘವಿ ಹೇಳಿದರು.

ಗಾಜಾ ಶಾಂತಿ ಮಂಡಳಿ ಸಭೆಗೆ ಭಾರತ ವೀಕ್ಷಕ

• **ಹೊಸದಿಲ್ಲಿ:** ಗಾಜಾ ಪಟ್ಟಿಯ ಪುನರಾಭಿವೃದ್ಧಿಗಾಗಿ ಅಮೆರಿಕ ಡೊನಾಲ್ಡ್ ಟ್ರಂಪ್ ಸ್ಥಾಪಿಸಿರುವ ಯೋಜನೆಗೆ ಸೇರಿಕೊಳ್ಳದೆ, ಭಾರತವು ವೀಕ್ಷಕ ದೇಶವಾಗಿ ಗಾಜಾ ಕುರಿತ ಟ್ರಂಪ್ ಶಾಂತಿ ಮಂಡಳಿಯ ಉದ್ಘಾಟನಾ ಸಭೆಯಲ್ಲಿ ಭಾಗವಹಿಸಿದೆ. ವಾಷಿಂಗ್ಟನ್ ಡಿಸಿಯಲ್ಲಿರುವ ಡೊನಾಲ್ಡ್ ಜೆ. ಟ್ರಂಪ್ ಇನ್ಸ್ಟಿಟ್ಯೂಟ್ ಆಫ್ ಪೀಸ್‌ನಲ್ಲಿ ನಡೆದ ಸಭೆಯಲ್ಲಿ ಭಾರತವನ್ನು ಭಾರತೀಯ ರಾಯಭಾರ ಕಚೇರಿಯ ಚಾರ್ಜ್ ಡಿ ಅಫೇರ್ಸ್ ನಾಮ್ಗ್ಯಾ ಖಿಂಪಾ ಪ್ರತಿನಿಧಿಸಿದ್ದರು. ಹಮಾಸ್ ಮತ್ತು ಇಸ್ರೇಲ್ ನಡುವಿನ ಎರಡು ವರ್ಷಗಳ ಯುದ್ಧದಿಂದ ಬಹುತೇಕ ನಿರ್ನಾಮವಾಗಿರುವ ಗಾಜಾವನ್ನು ಪುನರ್‌ನಿರ್ಮಿಸುವ ಗುರಿಯನ್ನು ಹೊಂದಿರುವ ಯೋಜನೆಗೆ ಅಮೆರಿಕ ಧನಸಹಾಯ ಮಾಡುತ್ತದೆ ಎಂದು ಹೇಳಿ, ಹೊಸ ಬೋರ್ಡ್ ಆಫ್ ಪೀಸ್‌ಗೆ 10 ಬಿಲಿಯನ್ ನೀಡುವುದಾಗಿ ಟ್ರಂಪ್ ಭರವಸೆ ನೀಡಿದರು.

ಅಪರೂಪದ ಖನಿಜ, ಸೆಮಿಕಂಡಕ್ಟರ್, ಎಐ ಪೂರೈಕೆ ಬಲ | ಚೀನಾಗೆ ಭಾರೀ ಹೊಡೆತ

ಪ್ಯಾಕ್ಸ್ ಸಿಲಿಕಾ ಮೈತ್ರಿಕೂಟ ಸೇರಿದ ಭಾರತ

• **ಹೊಸದಿಲ್ಲಿ:** ಅಪರೂಪದ ಖನಿಜಗಳು, ಸೆಮಿಕಂಡಕ್ಟರ್ ಮತ್ತು ಕೃತಕ ಬುದ್ಧಿಮತ್ತೆ (ಎಐ) ಕ್ಷೇತ್ರಗಳಲ್ಲಿನ ಪೂರೈಕೆ ಸಹಯೋಗ ಬಲಗೊಳಿಸುವ ಉದ್ದೇಶದಿಂದ ಅಮೆರಿಕ ನೇತೃತ್ವದ ಪ್ಯಾಕ್ಸ್ ಸಿಲಿಕಾ ಮೈತ್ರಿಕೂಟವನ್ನು ಭಾರತ ಶುಕ್ರವಾರ ಸೇರಿಕೊಂಡಿದೆ. ಇದು ಚೀನಾದ ಖನಿಜ ಮತ್ತು ಸೆಮಿಕಂಡಕ್ಟರ್ ಮಾರುಕಟ್ಟೆಗೆ ಭಾರೀ ಹೊಡೆತ ನೀಡಲಿದೆ.

ದಿಲ್ಲಿಯಲ್ಲಿ ನಡೆದ ಎಐ ಇಂಪ್ಯಾಕ್ಟ್ ಶೃಂಗದ 5ನೇ ಮತ್ತು ಕೊನೆಯ ದಿನವಾದ ಶುಕ್ರವಾರ, ಉಭಯ ರಾಷ್ಟ್ರಗಳ ಉನ್ನತ ಅಧಿಕಾರಿಗಳು ಒಪ್ಪಂದ ಪತ್ರಗಳಿಗೆ ಸಹಿ ಹಾಕಿದರು.

ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಒಪ್ಪಂದ ಮಾತುಕತೆ ಬಹಳ ಸುದೀರ್ಘ ಸಮಯದಿಂದ ನಡೆಯುತ್ತಿದ್ದು, ಒಪ್ಪಂದ ಅಂತಿಮಗೊಳಿಸುವ ಮತ್ತು ಉಭಯ ರಾಷ್ಟ್ರಗಳ ನಡುವಿನ ದ್ವಿಪಕ್ಷೀಯ ಸಂಬಂಧ ಸುಧಾರಿಸುವ ದೃಷ್ಟಿಕೋನದಿಂದ ಪ್ಯಾಕ್ಸ್ ಸಿಲಿಕಾ ಮೈತ್ರಿಕೂಟವನ್ನು ಸೇರುವ ದೃಢ ನಿರ್ಧಾರವನ್ನು ಭಾರತ ತೆಗೆದುಕೊಂಡಿದೆ.

ಆರ್ಥಿಕ ಭದ್ರತೆಯೇ ರಾಷ್ಟ್ರೀಯ ಭದ್ರತೆ: ವ್ಯಾಪಾರ ಒಪ್ಪಂದ, ಪ್ಯಾಕ್ಸ್ ಸಿಲಿಕಾದಿಂದ ರಕ್ಷಣಾ ಸಹಯೋಗದವರೆಗೆ ನಮ್ಮ ರಾಷ್ಟ್ರಗಳೆರಡೂ ಮಿತಿಯಿಲ್ಲದೆ ಜತೆಗೂಡಿ ಕೆಲಸ ಮಾಡಲಿವೆ. ಭಾರತ ಪ್ರತಿಭೆ ಸಂಪದ್ಭರಿತ ರಾಷ್ಟ್ರವಾಗಿದ್ದು, ಎಂತಹಾ ಪ್ರತಿಸ್ಪರ್ಧಿಗಳಿಗೂ ಸವಾಲೊಡ್ಡಬಲ್ಲ ಸಾಮರ್ಥ್ಯ ಹೊಂದಿದೆ. ಭಾರತದ ಎಂಜಿನಿಯರಿಂಗ್ ಸಾಮರ್ಥ್ಯ ಪ್ಯಾಕ್ಸ್ ಸಿಲಿಕಾ ಮೈತ್ರಿಕೂಟದಲ್ಲಿ ನಿರ್ಣಾಯಕ ಪಾತ್ರ ವಹಿಸಲಿದೆ. ಅಪರೂಪದ ಖನಿಜ ಉತ್ಪಾದನಾ ಸಾಮರ್ಥ್ಯದತ್ತ ಭಾರತ ಪ್ರಮುಖ ಹೆಜ್ಜೆಯಿರಿಸಿದೆ. ಅಪರೂಪದ ಖನಿಜ ಪೂರೈಕೆಯಲ್ಲಿ ನಮ್ಮ ಸ್ನೇಹಿತರು ಆರ್ಥಿಕ ದಬ್ಬಾಳಿಕೆ ಮತ್ತು ಬೆದರಿಕೆಗಳನ್ನು ಎದುರಿಸುತ್ತಿದ್ದಾರೆ (ಚೀನಾ ಕುರಿತು).



ಪ್ಯಾಕ್ಸ್ ಸಿಲಿಕಾ ಮೈತ್ರಿ ರಾಷ್ಟ್ರಗಳು

ಆಸ್ಟ್ರೇಲಿಯಾ, ಗ್ರೀಸ್, ಇಸ್ರೇಲ್, ಜಪಾನ್, ಕತಾರ್, ದಕ್ಷಿಣ ಕೊರಿಯಾ, ಸಿಂಗಾಪುರ, ಯುಎಇ, ಬ್ರಿಟನ್, ಭಾರತ ಅಧಿಕೃತವಾಗಿ ಪ್ಯಾಕ್ಸ್ ಸಿಲಿಕಾ ಒಪ್ಪಂದಕ್ಕೆ ಸಹಿ ಹಾಕಿವೆ. ಉಳಿದಂತೆ ಕೆನಡಾ, ಜರ್ಮನಿ, ನೆದರ್‌ಲೆಂಡ್ಸ್ ಮತ್ತು ಐರೋಪ್ಯ ಒಕ್ಕೂಟ ಸೇರ್ಪಡೆಯಾಗುವ ಸಾಧ್ಯತೆಯಿದೆ.

ಏನಿದು ಪ್ಯಾಕ್ಸ್ ಸಿಲಿಕಾ ಶೃಂಗ?

ಕಳೆದ ವರ್ಷ ಡಿ.12ರಂದು ಅಮೆರಿಕದ ವಾಷಿಂಗ್ಟನ್‌ನಲ್ಲಿ ಪ್ಯಾಕ್ಸ್ ಸಿಲಿಕಾ ಶೃಂಗ ನಡೆದಿದ್ದು, 12 ರಾಷ್ಟ್ರಗಳು ಸಹಿ ಮಾಡಿದ್ದವು. ಕಚ್ಚಾ ವಸ್ತುಗಳಿಂದ ಸೆಮಿಕಂಡಕ್ಟರ್ ಮತ್ತು ಎಐ ಮೂಲಸೌಕರ್ಯದವರೆಗೂ ಪರಸ್ಪರ ಆರ್ಥಿಕ ಪ್ರಗತಿ ಮತ್ತು ಭದ್ರತೆ ಬದ್ಧತೆಯನ್ನು ಜಂಟಿಯಾಗಿ ಘೋಷಿಸಿದ್ದವು. ಈ ಸದಸ್ಯ ರಾಷ್ಟ್ರಗಳ ಪಟ್ಟಿಗೆ ಭಾರತ ಸೇರಿಕೊಂಡಿದೆ. ಕಳೆದ ತಿಂಗಳು ಅಮೆರಿಕ ರಾಯಭಾರಿ ಗೋರ್ ಮೈತ್ರಿಕೂಟವನ್ನು ಸೇರುವಂತೆ ಭಾರತವನ್ನು ಆಹ್ವಾನಿಸಿದ್ದರು.

ಎಸ್‌ಐಆರ್ ಪರಿಶೀಲನೆ, ದೂರು ಪರಿಹಾರಕ್ಕೆ ಜಡ್ಜ್‌ಗಳ ನೇಮಕ

ಪ.ಬಂಗಾಳ ಸರ್ಕಾರಕ್ಕೆ ಸುಪ್ರೀಂ ಪಾಠ

• **ಹೊಸದಿಲ್ಲಿ:** ಪಶ್ಚಿಮ ಬಂಗಾಳದಲ್ಲಿನ ಮತದಾರರ ಪಟ್ಟಿಯ ಶುದ್ಧೀಕರಣಕ್ಕೆ ಸಂಬಂಧಿಸಿದ ವಿಶೇಷ ತೀವ್ರ ಪರಿಶೀಲನೆ (ಎಸ್‌ಐಆರ್) ಕಾರ್ಯಕ್ಕೆ ನೆರವಾಗುವಂತೆ ನ್ಯಾಯಾಂಗ ಅಧಿಕಾರಿಗಳನ್ನು ನೇಮಿಸಲು ಕಲ್ಕತ್ತಾ ಹೈಕೋರ್ಟ್‌ಗೆ ಸುಪ್ರೀಂ ಕೋರ್ಟ್ ನಿರ್ದೇಶಿಸಿದೆ. ರಾಜ್ಯ ಸರ್ಕಾರ ಮತ್ತು ಚುನಾವಣಾ ಆಯೋಗದ ನಡುವೆ ಆರೋಪ-ಪ್ರತ್ಯಾರೋಪಗಳ ಮುಂದುವರಿದ ಬೆನ್ನಲ್ಲೇ ಅತ್ಯರೂಪವಾದ ನಿರ್ಧಾರ ತೆಗೆದುಕೊಂಡಿದೆ.



ದಾವೆಗಳು ಮತ್ತು ಆಕ್ಷೇಪಣೆಗಳನ್ನು ಪರಿಶೀಲಿಸುವ ಕೆಲಸವನ್ನು ನ್ಯಾಯಾಂಗ ಅಧಿಕಾರಿಗಳು ನೋಡಿಕೊಳ್ಳಬಹುದು ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ. ಎರಡು ಸಂವಿಧಾನಾತ್ಮಕ ಸಂಸ್ಥೆಗಳಾದ ರಾಜ್ಯ ಸರ್ಕಾರ ಮತ್ತು ಚುನಾವಣಾ ಆಯೋಗದ ನಡುವೆ ನಂಬಿಕೆ ಕೊರತೆ ಕಾಣಿಸುತ್ತಿದೆ. ಜನರ ದಾವೆ-ಆಕ್ಷೇಪಣೆಗಳ ಹಂತದಲ್ಲೇ ಪ್ರಕ್ರಿಯೆ ಕುಂಟುತ್ತಿದೆ,' ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಹೇಳಿದ್ದಾರೆ. ಎಸ್‌ಐಆರ್ ಕಾರ್ಯಕ್ಕಾಗಿ ಜಿಲ್ಲಾ ನ್ಯಾಯಾಧೀಶರ ಹುದ್ದೆ ಮಟ್ಟದ ಸೇವೆಯಲ್ಲಿರುವ ಹಾಗೂ ನಿವೃತ್ತ ನ್ಯಾಯಾಂಗ ಅಧಿಕಾರಿಗಳನ್ನು ನಿಯೋಜಿಸುವಂತೆ ಹೈಕೋರ್ಟ್‌ಗೆ ಸುಪ್ರೀಂ ಕೋರ್ಟ್ ಸೂಚಿಸಿದೆ. 'ಅಸಾಮಾನ್ಯ ಪರಿಸ್ಥಿತಿಗಳ ಕಾರಣದಿಂದ ಅಸಾಮಾನ್ಯ ಆದೇಶ ನೀಡಬೇಕಾಗಿದೆ ಎಂದು ನ್ಯಾಯಾಲಯ ಹೇಳಿದೆ.

ಇಂದು ಸಭೆ: ನ್ಯಾಯಾಂಗ ಅಧಿಕಾರಿಗಳ ಯೋಜನೆಯ ಸೂಕ್ಷ್ಮ ವಿವರಗಳನ್ನು ನಿರ್ಧರಿಸಲು ರಾಜ್ಯ ಚುನಾವಣಾ ಆಯುಕ್ತರು, ಮುಖ್ಯ ಕಾರ್ಯದರ್ಶಿ, ಪೊಲೀಸ್ ಮಹಾನಿರ್ದೇಶಕರು ಸೇರಿದಂತೆ ಹಿರಿಯ ಅಧಿಕಾರಿಗಳು ಶನಿವಾರ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯವರೊಂದಿಗೆ ಸಭೆ ನಡೆಸುವಂತೆ ನಿರ್ದೇಶಿಸಲಾಗಿದೆ.

ದಾಖಲೆಗಳ ಪರಿಶೀಲನೆ ಮತ್ತು ಮತದಾರರ ಪಟ್ಟಿಯಲ್ಲಿ ಸೇರ್ಪಡೆ- ವಿಲೇವಾರಿ ನ್ಯಾಯ ಸಮ್ಮತವಾಗಿರಲು, ಪ್ರತಿಯೊಂದು ಜಿಲ್ಲೆಯಲ್ಲಿ ನ್ಯಾಯಾಂಗ ಅಧಿಕಾರಿಗಳ ನೆರವು ಅನಿವಾರ್ಯ ಎಂದು ನ್ಯಾಯಾಲಯ ಹೇಳಿದೆ.

ಏನಿದು ವಿವಾದ?: ಎಸ್‌ಐಆರ್ ಕರ್ತವ್ಯಗಳಿಗೆ ಅಧಿಕಾರಿಗಳ ನಿಯೋಜನೆ ಕುರಿತು ಆಯೋಗ ಮತ್ತು ರಾಜ್ಯ ಸರ್ಕಾರದ ನಡುವೆ ವಿವಾದವಿದೆ. ಸರ್ಕಾರದ ಪರ ವಕೀಲರು ಅರ್ಹ ಅಧಿಕಾರಿಗಳನ್ನು ನೀಡಿದ್ದೇವೆ ಎಂದಿದ್ದರೆ, ಆಯೋಗದ ಪರ ವಕೀಲರು ಕೊಟ್ಟಿಲ್ಲ ಎಂದಿದೆ. ಅರ್ಹ ಗುಂಪು ಎ ಅಧಿಕಾರಿಗಳನ್ನು ನೀಡದಿದ್ದರೆ ಜನರ ಭವಿಷ್ಯವನ್ನು ಯಾರು ನಿರ್ಧರಿಸುತ್ತಾರೆ?ಎಂದು ಪ್ರಶ್ನಿಸಿತ್ತು.

ಕಡೆಗೆ, ಉಭಯ ಪಕ್ಷಗಳ ನಡುವಿನ ಜಗಳದಿಂದ ಬೇಸತ್ತು ಕೋರ್ಟ್, ನ್ಯಾಯಾಂಗ ಅಧಿಕಾರಿಗಳನ್ನೇ ನೇಮಕ ಮಾಡುವ ತೀರ್ಮಾನಕ್ಕೆ ಬಂದಿದೆ.

ಕಿರುಸುದ್ದಿ

ಅಖಿಲ ಭಾರತ ಸಾಮಾನ್ಯ ಜ್ಞಾನ ಪರೀಕ್ಷೆ: ಅಪೂರ್ವ ವೈಷ್ಣವಿ, ಸುಕೃತಿ ಪಡಿಯಾರ್ ಸಾಧನೆ

• ಕುಂದಾಪುರ : ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರ ಬೆಂಗಳೂರು ಇವರು ಆಯೋಜಿಸಿದ ಅಖಿಲ ಭಾರತ ಸಾಮಾನ್ಯ ಜ್ಞಾನ ಪರೀಕ್ಷೆಯಲ್ಲಿ ಕುಂದಾಪುರದ ಶ್ರೀ ವೆಂಕಟರಮಣ ಆಂಗ್ಲ ಮಾಧ್ಯಮ ಕಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಾದ ಅಪೂರ್ವ ವೈಷ್ಣವಿ (3ನೇ ಸ್ಥಾನ) ಹಾಗೂ ಸುಕೃತಿ ಪಡಿಯಾರ್ (7ನೇ ಸ್ಥಾನ) ವನ್ನು ಪಡೆದಿರುತ್ತಾರೆ. ಇವರಿಗೆ ಶಾಲಾ ಆಡಳಿತ ಮಂಡಳಿ, ಮುಖ್ಯ ಶಿಕ್ಷಕರು, ಬೋಧಕ ಹಾಗೂ ಬೋಧಕೇತರ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ.




ಮಂತ್ರಾಲಯದಲ್ಲಿ ಯುವ ಕಲಾವಿದೆ ಸುಶ್ರೀತಾ ಸಾಲಿಗ್ರಾಮ ನೃತ್ಯ ವೈಭವ

• ಕೋಟ: ಇಲ್ಲಿನ ಉಡುಪಿ ಜಿಲ್ಲೆಯ ಸಾಲಿಗ್ರಾಮದ ಖ್ಯಾತ ಯುವ ಭರತನಾಟ್ಯ ಹಾಗೂ ಯಕ್ಷ ಕಲಾವಿದೆ ಸುಶ್ರೀತಾ ಸಾಲಿಗ್ರಾಮ ಅವರು ಫೆ.25ರಂದು ಮಂತ್ರಾಲಯದಲ್ಲಿ ನಡೆಯುವ ಪ್ರತಿಷ್ಠಿತ ರಾಯರ ಆಶೀರ್ವಾದ ಪಡೆಯುವ ಶ್ರೀ ಮಂತ್ರಾಲಯಂ ಪರಿಮಳ ಪ್ರಶಸ್ತಿ ಕಾರ್ಯಕ್ರಮದಲ್ಲಿ ಭರತನಾಟ್ಯ ಹಾಗೂ ಯಕ್ಷಗಾನ ನೃತ್ಯ ಕಾರ್ಯಕ್ರಮ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿದೆ.ಎಂದು ಸುಶ್ರೀತಾ ಪೋಷಕರಾದ ಕೃಷ್ಣಮೂರ್ತಿ ಮರಕಾಲ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಪಂಚವರ್ಣದ ರೈತರೆಡೆಗೆ ಹಿರಿಯ ಕೃಷಿಕ ದಾರೋಜ್ಜಿ ಮನೆ ಆನಂದ ಮೊಗವೀರ ಆಯ್ಕೆ

• ಕೋಟ: ಪಂಚವರ್ಣ ಯುವಕ ಮಂಡಲದ ಪ್ರವರ್ತಿತ ಸಂಸ್ಥೆ ಪಂಚವರ್ಣ ಮಹಿಳಾ ಮಂಡಲ ನೇತೃತ್ವದಲ್ಲಿ ಗೀತಾನಂದ ಫೌಂಡೇಶನ್ ಮಣೂರು, ರೈತ ಧ್ವನಿ ಸಂಘ ಕೋಟ, ಗೆಳೆಯರ ಬಳಗ ಕಾರ್ಕಡ, ರೋಟರಿ ಕ್ಲಬ್ ಕೋಟ ಸಾಲಿಗ್ರಾಮ, ಸ್ನೇಹಕೂಟ ಮಣೂರು ಇವರುಗಳ ಸಂಯುಕ್ತ ಸಹಯೋಗದೊಂದಿಗೆ ಪ್ರತಿ ತಿಂಗಳು ಸಾಧಕ ಕೃಷಿಕನನ್ನು ಗುರುತಿಸುವ ಸರಣಿ ಕಾರ್ಯಕ್ರಮ ರೈತರೆಡೆಗೆ ನಮ್ಮ ನಡಿಗೆ ಮಾಲಿಕೆಯ 52ರ ಸರಣಿಯ ಕಾರ್ಯಕ್ರಮದ ಅಂಗವಾಗಿ ಸಾಧಕ ಕೃಷಿಕರ ಮನೆಯಂಗಳಕ್ಕೆ ತೆರಳಿ ಕೃಷಿ ಪರಿಕರವನ್ನು ನೀಡಿ ಗೌರವಿಸುವ ಕಾರ್ಯ ಫೆ.22ರಂದು ಬೆಳಗ್ಗೆ 10.45ಕ್ಕೆ ನಡೆಯಲಿದೆ.
ಕೃಷಿ ಕ್ಷೇತ್ರದ ಹಿರಿಯ ಸಾಧಕ ಕೋಟ ಮಣೂರು ಪಡುಕರೆ ದಾರೋಜ್ಜಿಮನೆ ಆನಂದ ಮೊಗವೀರ ಅವರಿಗೆ ಕೃಷಿ ಪುರಸ್ಕಾರ ನೀಡಿ ಗೌರವಿಸಲಿದೆ ಎಂದು ಸಂಘದ ಅಧ್ಯಕ್ಷ ಮನೋಹರ್ ಪೂಜಾರಿ, ಸ್ಥಾಪಕಾಧ್ಯಕ್ಷ ಸುರೇಶ್ ಗಾಣಿಗ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಪವರ್ ಲಿಫ್ಟಿಂಗ್‌ನಲ್ಲಿ ಚಿನ್ನ

• ಮಂಗಳೂರು: ಕೂಳೂರಿನಲ್ಲಿ ಇತ್ತೀಚೆಗೆ ಜರುಗಿದ ರಾಜ್ಯ ಮಾಸ್ಟರ್ಸ್ ಪವರ್ ಲಿಫ್ಟಿಂಗ್ ಸ್ಪರ್ಧೆಯ 74 ಕೆಜಿ ದೇಹತೂಕ ಎಂ4 ಅನ್‌ಇಕ್ವಿಪ್ಡ್ ವಿಭಾಗದಲ್ಲಿ ಸದಾನಂದ ಅಮೀನ್ ಕುದ್ರೋಳಿ ಅವರು ಚಿನ್ನದ ಪದಕವನ್ನು ತಮ್ಮದಾಗಿಸಿಕೊಳ್ಳುವ ಮೂಲಕ ಬೆಸ್ಟ್ ಪವರ್ ಲಿಫ್ಟರ್ ಆಗಿ ಹೊರ ಹೊಮ್ಮಿದ್ದಾರೆ. ಕಳೆದ ಹಲವು ವರ್ಷಗಳಿಂದ ಪವರ್ ಲಿಫ್ಟರ್ ಆಗಿ ಸಾಧನೆ ಮಾಡುತ್ತಿರುವ ಸದಾನಂದ ಅವರು ಮಂಗಳೂರು ಬಾಲಾಂಜನೇಯ ಜಿಮ್ನಾಶಿಯಂನ ಸದಸ್ಯ.



ಶುಶ್ರೂಷ ಪರೀಕ್ಷೆಯಲ್ಲಿ ಆಳ್ವಾಸ್ ವಿದ್ಯಾರ್ಥಿಗಳ ಸಾಧನೆ

• ಮೂಡುಬಿದಿರೆ: ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದವರು ಡಿಸೆಂಬರ್ 2025 ರಂದು ನಡೆಸಿದ ಶುಶ್ರೂಷ ಪರೀಕ್ಷೆಯಲ್ಲಿ ಆಳ್ವಾಸ್ ಶುಶ್ರೂಷ ಮಹಾವಿದ್ಯಾಲಯದ ಅಂತಿಮ ವರ್ಷದ ಎಂ.ಎಸ್ಸಿ ನರ್ಸಿಂಗ್‌ನ 7 ವಿದ್ಯಾರ್ಥಿಗಳ ಪೈಕಿ 5 ವಿದ್ಯಾರ್ಥಿಗಳು ಉನ್ನತ ದರ್ಜೆಯಲ್ಲಿ, 2 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿ ಕಾಲೇಜಿಗೆ ಶೇಕಡಾ 100 ಫಲಿತಾಂಶವನ್ನು ತಂದು ಕೊಟ್ಟಿದ್ದಾರೆ. ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ. ಮೋಹನ ಆಳ್ವ, ಟ್ರಸ್ಟಿ, ಡಾ. ವಿನಯ್ ಆಳ್ವ, ಪ್ರಾಂಶುಪಾಲರಾದ ಡಾ. ಬಿ.ಎ. ಯತಿಕುಮಾರ ಸ್ವಾಮಿ ಗೌಡ ಮತ್ತು ಕಾಲೇಜಿನ ಪ್ರಾಧ್ಯಾಪಕ ವರ್ಗದವರು ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದರು.

ಅಡಿಕೆ ಕಳ್ಳನ ಬಂಧನ


• ಆಲಂಕಾರು: ಕಳೆದ ತಿಂಗಳು ಕಡಬ ಠಾಣಾ ವ್ಯಾಪ್ತಿಯ ಆಲಂಕಾರು ಗ್ರಾಮದ ಶಾಂತಿಮೊಗರು ಎಂಬಲ್ಲಿ ಅಡಿಕೆ ಕಳವು ಮಾಡಿ ತಪ್ಪಿಸಿಕೊಂಡಿದ್ದ ಒಬ್ಬ ಆರೋಪಿಯನ್ನು ಬಂಧಿಸಲಾಗಿದ್ದು, ಇನ್ನೊಬ್ಬ ಆರೋಪಿ ನಿರೀಕ್ಷಣಾ ಜಾಮೀನು ಪಡೆದು ನ್ಯಾಯಾಲಯಕ್ಕೆ ಹಾಜರಾಗಿದ್ದಾನೆ.
ಕಳೆದ ಜ.24ರಂದು ತಡ ರಾತ್ರಿ ಆಲಂಕಾರು ಗ್ರಾಮದ ಶಾಂತಿಮೊಗರು ನಿವಾಸಿ ಸತೀಶ್ ಎಂಬವರ ಅಡಿಕೆ ತೋಟದಿಂದ ಅಡಿಕೆ ಕಳವು ಮಾಡಿ ಸ್ಕೂಟಿಯಲ್ಲಿ ಸಾಗಿಸಲು ಯತ್ನಿಸಿರುವಾಗ ರೆಡ್‌ಹ್ಯಾಂಡ್ ಸಿಕ್ಕಿ ಬಿದ್ದು, ಸ್ಕೂಟಿ ಹಾಗೂ ಕದ್ದ ಮಾಲನ್ನು ಸ್ಥಳದಲ್ಲೇ ಬಿಟ್ಟು ಆರೋಪಿಗಳು ಪರಾರಿಯಾಗಿದ್ದರು. ಈ ಕುರಿತು ಸತೀಶ್ ಅವರು ಕಡಬ ಠಾಣೆ ದೂರು ನೀಡಿದ್ದರು. ಮಾತ್ರವಲ್ಲ ಆರೋಪಿಗಳ ಬಳಸುತ್ತಿದ್ದ ಮೊಬೈಲ್, ಸ್ಕೂಟಿಯ ದಾಖಲೆಗಳನ್ನು ಪೊಲೀಸರಿಗೆ ಒಪ್ಪಿಸಿದ್ದರು. ಆದರೆ, ಎರಡು ವಾರ ಕಳೆದರೂ ಆರೋಪಿಗಳ ಪತ್ತೆಯಾಗಿರಲಿಲ್ಲ. ಇದೀಗ ಅಡಿಕೆ ಕಳವುಗೈದಿರುವ ಆರೋಪಿ ಕಡಬ ತಾಲೂಕಿನ ಕ್ಯಾಮಣ ಗ್ರಾಮದ ಜಯಂತ್ ಎಂ. (28) ಎಂಬಾತನನ್ನು ಪೊಲೀಸರು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಆತನಿಗೆ ನ್ಯಾಯಾಲಯ ನ್ಯಾಯಾಂಗ ಬಂಧನ ವಿಧಿಸಿದೆ. ಇನ್ನೊಬ್ಬ ಆರೋಪಿ ಕಾಣಿಯೂರು ಗ್ರಾಮದ ಲಿಂಗಪ್ಪ (36) ಎಂಬಾತ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದುಕೊಂಡಿದ್ದಾನೆ ಎಂದು ಪೊಲೀಸ್ ಪ್ರಕಟಣೆ ತಿಳಿಸಿದೆ.



ಬಳಂಜ ಸರಕಾರಿ ಉನ್ನತೀಕರಿಸಿದ ಪ್ರಾಥಮಿಕ, ಪ್ರೌಢಶಾಲಾ ಕ್ರೀಡಾಂಗಣದ ಅಭಿವೃದ್ಧಿಗೆ ಧರ್ಮಸ್ಥಳ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆಯವರು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಮೂಲಕ ರೂ. 3 ಲಕ್ಷ ಅನುದಾನ ಒದಗಿಸಿದ್ದು, ಅನುದಾನದ ಮಂಜೂರಾತಿ ಪತ್ರ ಹಾಗೂ ಚೆಕ್‌ನ್ನು ಯೋಜನೆಯ ನಿರ್ದೇಶಕ ದಿನೇಶ್ ಪೂಜಾರಿ ಅವರು ಬಳಂಜ ಶಿಕ್ಷಣ ಟ್ರಸ್ಟ್ ಅಧ್ಯಕ್ಷ, ಪತ್ರಕರ್ತ ಮನೋಹರ ಬಳಂಜ ಅವರಿಗೆ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಬಳಂಜ ಶಿಕ್ಷಣ ಟ್ರಸ್ಟ್‌ನ ಟ್ರಸ್ಟಿ ಪ್ರಮೋದ್ ಜೈನ್, ಯೋಜನಾಧಿಕಾರಿ ಅಶೋಕ್ ಬಿ, ಮೇಲ್ವಿಚಾರಕಿ ಪದ್ಮಾವತಿ, ಸೇವಾ ಪ್ರತಿನಿಧಿ ಉಮಾ, ಪೂರ್ಣಿಮ, ಶಾಲಾ ಪ್ರಭಾರ ಮುಖ್ಯೋಪಾಧ್ಯಾಯ ಮಲ್ಲಿಕಾರ್ಜುನ, ಶಿಕ್ಷಕಿ ಕೈನಿ ರೀಮಾ ಕ್ರಾಸ್ತಾ ಉಪಸ್ಥಿತರಿದ್ದರು.

ಬಿಪಿಎಲ್ ಕಾರ್ಡ್‌ದಾರರಿಗೆ ಉಚಿತ ರಕ್ತ

• ಮಂಗಳೂರು : ಮಾನವೀಯ ಸೇವೆಗಳ ದಶಕಗಳ ಪರಂಪರೆ ಹೊಂದಿರುವ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ದ.ಕ.ಜಿಲ್ಲಾ ಘಟಕ ಇಂದು ತನ್ನ ಅತ್ಯಪೂರ್ವ ಸೇವಾ ಕಾರ್ಯಗಳ ಮೂಲಕ ರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಕಳೆದ ವರ್ಷ ಸುಮಾರು 7 ಕೋಟಿ ರೂ.ವೆಚ್ಚದಲ್ಲಿ 4 ಅಂತಸ್ತುಗಳ ಭವ್ಯ ಶತಮಾನೋತ್ಸವ ಕಟ್ಟಡ ಉದ್ಘಾಟನೆಗೊಂಡಿರುವುದು ಆಡಳಿತ ಮಂಡಳಿಯ ಹೆಮ್ಮೆಯ ಸಾಧನೆಯಾಗಿದೆ ಎಂದು ರೆಡ್‌ಕ್ರಾಸ್ ದ.ಕ.ಜಿಲ್ಲಾ ಘಟಕದ ಚೇರ್ಮನ್ ಸಿಎ ಶಾಂತಾರಾಮ ಶೆಟ್ಟಿ ತಿಳಿಸಿದ್ದಾರೆ.



ಮಂಗಳೂರಿನ ಲೇಡಿಗೋಶನ್ ಆಸ್ಪತ್ರೆ ಆವರಣದಲ್ಲಿರುವ ರೆಡ್‌ಕ್ರಾಸ್‌ನ ಬ್ಲಡ್ ಬ್ಯಾಂಕ್ ವರ್ಷದ 365 ದಿನ ಸೇವೆ ನೀಡುತ್ತಿದೆ. ಲೇಡಿಗೋಶನ್ ಆಸ್ಪತ್ರೆಯಲ್ಲಿ ದಾಖಲಾಗುವ ಗರ್ಭಿಣಿಯರು, ಬಾಣಂತಿಯರು ಸಹಿತ ಅವಶ್ಯ ಇರುವ ರೋಗಿಗಳಿಗೆ ಉಚಿತವಾಗಿ ರಕ್ತ ಪೂರೈಸಲಾಗುತ್ತಿದೆ. ಪ್ರತೀ ತಿಂಗಳು ಸುಮಾರು 500 ಯುನಿಟ್ ರಕ್ತ ಉಚಿತವಾಗಿ ನೀಡುತ್ತಿರುವುದು ಹಾಗೂ ವೆನ್ಲಾಕ್ ಆಸ್ಪತ್ರೆಯಲ್ಲಿ ಹೆಲ್ಪ್ ಡೆಸ್ಕ್ ಸೇವೆ ಸಾಧನೆಯಾಗಿದೆ. ಮುಂದಿನ ದಿನಗಳಲ್ಲಿ ಜಿಲ್ಲೆಯ ಯಾವುದೇ ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಗಳಲ್ಲಿ ದಾಖಲಾಗುವ ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ಅವಶ್ಯ ಇದ್ದರೆ ಉಚಿತವಾಗಿ ರಕ್ತ ಒದಗಿಸುವ ಯೋಜನೆ ರೂಪಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ. ರೆಡ್ ಕ್ರಾಸ್ ದ.ಕ.ಜಿಲ್ಲಾ ಘಟಕದ ಆಡಳಿತ ಮಂಡಳಿಗೆ ಫೆ.22ರಂದು ಚುನಾವಣೆ ನಡೆಯಲಿದೆ. ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿರುವ ಸಮರ್ಥ ಅಭ್ಯರ್ಥಿಗಳಾದ ಡಾ.ಸತೀಶ್ ರಾವ್, ಯತೀಶ್ ಬೈಕಂಪಾಡಿ, ಡಾ. ಬಿ.ಸಚ್ಚಿದಾನಂದ ರೈ, ಸಚೇತ್ ಸುವರ್ಣ, ಡಾ.ಸುಮನ.ಬಿ., ಪುಷ್ಪರಾಜ್ ಜೈನ್, ಗುರುದತ್ ನಾಯಕ್, ವಕೀಲ ರಾಘವೇಂದ್ರ ರಾವ್ ಮತ್ತು ಹಿರಿಯ ಪತ್ರಕರ್ತ ಪಿ.ಬಿ.ಹರಿಪ್ರಸಾದ್ ರೈ ಇವರುಗಳು ಸಿಎ ಶಾಂತಾರಾಮ ಶೆಟ್ಟಿ ನೇತೃತ್ವದ ತಂಡದ ಅಭ್ಯರ್ಥಿಗಳಾಗಿ ಸ್ಪರ್ಧಾ ಕಣದಲ್ಲಿದ್ದಾರೆ. ಹಲವು ಸಮಾಜಮುಖಿ ಕಾರ್ಯಗಳನ್ನು ಭವಿಷ್ಯದಲ್ಲಿ ಹಮ್ಮಿಕೊಳ್ಳಲಾಗಿದೆ. ಇದನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಲು ನಮ್ಮ ತಂಡದ 10 ಸಮರ್ಪಿತ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಂತೆ ಅವರು ವಿನಂತಿಸಿದ್ದಾರೆ.

ಸ್ವಂತ ಕಟ್ಟಡ ವಿಚಾರದಲ್ಲಿ ಶುರುವಾದ ರಂಪಾಟ | ವೈರಲ್ ವಿಡಿಯೋ ಹಿಂದೆ ಮರೆಯಾದ ವಾಸ್ತವ

ಬೀದಿಗೆ ಬೀಳ್ತಿದೆ ಮಹಿಳಾ ಕಾಲೇಜ್ ಗೌರವ

• ಪುತ್ತೂರು: ಸುಮಾರು 12 ವರ್ಷಗಳ ಹಿಂದೆ ಪುತ್ತೂರು ಹಾಗೂ ಸುತ್ತಮುತ್ತಲಿನ ಗ್ರಾಮಾಂತರದ ಪದವಿ ಶಿಕ್ಷಣ ಆಕಾಂಕ್ಷಿತ ಹೆಣ್ಣು ಮಕ್ಕಳಿಗೆ ಆಶಾಕಿರಣವಾಗಿ ಆರಂಭಗೊಂಡ ಪುತ್ತೂರು ಮಹಿಳಾ ಪ್ರಥಮ ದರ್ಜೆ ಕಾಲೇಜಿಗೆ ಮೂಲಭೂತ ಸೌಕರ್ಯವಾದ ಸಮರ್ಪಕ, ಸ್ವಂತ ಕಟ್ಟಡದ ವಿಚಾರವನ್ನು ಅನಗತ್ಯ ಬೀದಿ ರಂಪಾಟ ಮಾಡುತ್ತಿರುವ ಘಟನೆ ನಾಗರಿಕ ಸಮಾಜದಲ್ಲಿ ತಲೆ ತಗ್ಗಿಸುವಂತೆ ಮಾಡುತ್ತಿದೆ.

ಕಾಲೇಜ್‌ಗೆ ನಗರ ಸುತ್ತಿದ ಇತಿಹಾಸ

2014ರಲ್ಲಿ ಆರಂಭಗೊಂಡ ಪುತ್ತೂರು ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, 700ಕ್ಕೂ ಮಿಕ್ಕಿ ವಿದ್ಯಾರ್ಥಿನಿಯರನ್ನು ಪದವಿ ಶಿಕ್ಷಣಕ್ಕೆ ಸೆಳೆದ ಕಾರಣ ಮಾತ್ರ ಸುದ್ದಿಯಾಗಿಲ್ಲ. ಜತೆಗೆ 12 ವರ್ಷಗಳಲ್ಲಿ ನಗರ ಸುತ್ತುವ ಮೂಲಕವೂ ಸುದ್ದಿಯಾಗಿದೆ. ಆರಂಭದಲ್ಲಿ ನೆಲ್ಲಿಕಟ್ಟೆ ಬಳಿಯ ಸರಕಾರಿ ಶಾಲಾ ಕಟ್ಟಡದಲ್ಲಿ ಆರಂಭಗೊಂಡಿತು. 2015ರಲ್ಲಿ ಹೊಸ ಮಿನಿ ವಿಧಾನಸೌಧ ಕಟ್ಟಡ ಆದ ಬಳಿಕ ಕಾಲೇಜ್ ಹಳೆಯ ತಾಲೂಕು ಕಚೇರಿ ಕಟ್ಟಡಕ್ಕೆ ಸ್ಥಳಾಂತರಗೊಂಡಿತು. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿದಂತೆಲ್ಲಾ 100 ಮೀ. ದೂರದ ಪುರಸಭಾ ಕಟ್ಟಡ ಕೋಣೆಗಳನ್ನೂ ಬಳಸಿಕೊಳ್ಳಲಾಯಿತು. ಆ ಕಟ್ಟಡ ಕೆಡವಿದ ಬಳಿಕ ತಾಲೂಕು ಕಚೇರಿಯ ಇದ್ದ ಕೊಠಡಿಗಳಲ್ಲೇ ಸುಧಾರಿಸಿಕೊಂಡು ಬರಲಾಯಿತು. ಈ ಮಧ್ಯೆ ಬನ್ನೂರು ಆನೆಮಜಲಿನಲ್ಲಿ ಜಾಗ ಗುರುತಿಸಲಾಯಿತಾದರೂ ಜಾಗದ ವಿವಾದ ನ್ಯಾಯಾಲಯದ ಮೆಟ್ಟಿಲಲ್ಲಿ ಇದ್ದ ಕಾರಣ ಸಂಧಾನ ವಿಫಲವಾಯಿತು. 2023ರ ಆರಂಭದಲ್ಲಿ ಕಡೆಗೂ ಬೊಳುವಾರು ಸರಕಾರಿ ಶಾಲೆಯ ಬಳಿ ಜಾಗ ಗುರುತಿಸಿ ಶಿಲಾನ್ಯಾಸ ನೆರವೇರಿಸಲಾಯಿತು.



ಇಲ್ಲಿ ನಿರ್ಮಾಣ ಹಂತದಲ್ಲಿರುವ ಹೊಸ ಕಟ್ಟಡ ಹಾಗೂ ಟಾರ್ಪಾಲು ಅಡ್ಡಲಾಗಿ ಕಟ್ಟಿ ಆಸ್ಪತ್ರೆ ಸಂಬಂಧಿ ಕಟ್ಟಡದ ನಿರ್ಮಾಣ ಕಾಮಗಾರಿ ನಡೆಯುತ್ತಿರುವುದು.

ಕಾಮಗಾರಿ ಯಾಕೆ ಇನ್ನೂ ಕುಂಟುತ್ತಿದೆ...?

ಹೊಸ ಕಟ್ಟಡ ನಿರ್ಮಾಣಕ್ಕೆ ಶಿಲಾನ್ಯಾಸ ನೆರವೇರಿಸಿ 3 ವರ್ಷ ಪೂರ್ಣಗೊಂಡಿದೆ. 9 ತಿಂಗಳ ಗಡುವಿನಲ್ಲಿ ನಿರ್ಮಾಣವಾಗಬೇಕಿದ್ದ ಕಟ್ಟಡ ಇನ್ನೂ ಪೂರ್ಣ ಸ್ವರೂಪ ಪಡೆದಿಲ್ಲ. ಇಲಾಖೆಯ ಮೂಲಕ ಗೃಹ ಮಂಡಳಿಗೆ ರೂ.6.50 ಕೋಟಿ ಅನುದಾನ ನೀಡಲಾಗಿದೆ ಎನ್ನುವ ಮಾಹಿತಿ ಲಭಿಸಿದೆ. ಆದರೆ, ಕಟ್ಟಡ ನಿರ್ಮಾಣ ಕಾಮಗಾರಿ ಯಾಕೆ ಕುಂಟುತ್ತಿದೆ ಎನ್ನುವುದು ಯಕ್ಷ ಪ್ರಶ್ನೆಯಾಗಿದೆ. 3 ಅಂತಸ್ತಿನ ಕಟ್ಟಡ 50 ಶೇ.ದಷ್ಟು ಮಾತ್ರ ಪೂರ್ಣಗೊಂಡಿದೆ.

ಜಾಲತಾಣಗಳಲ್ಲಿ ಮತ್ತೆ ಚರ್ಚೆಗೆ ಬಂತು

ಇಲ್ಲಿ ವಿದ್ಯಾರ್ಥಿನಿಯರು ನಡೆಸಿದ ಪ್ರತಿಭಟನೆ, ಮಾಜಿ ಶಾಸಕರ ಆಗಮನ, ಅನಂತರ ಆಗಮಿಸಿ ಸಿಟ್ಟಿಗೆದ್ದ ಹಾಲಿ ಶಾಸಕರು ಪ್ರಾಂಶುಪಾಲರು, ಉಪನ್ಯಾಸಕರನ್ನು ವಿದ್ಯಾರ್ಥಿಗಳ ಎದುರೇ ತರಾಟೆಗೆ ತೆಗೆದುಕೊಂಡ ಘಟನೆ ಜಾಲತಾಣಗಳಲ್ಲಿ ವ್ಯಾಪಕ ಪರ ವಿರೋಧದ ಚರ್ಚೆಗೆ ಕಾರಣವಾಗಿದೆ. ಅನಗತ್ಯ ವಿಚಾರ ವೀಡಿಯೋ ಮಾಡಿ ಕ್ರೆಡಿಟ್ ಗಿಟ್ಟಿಸಿಕೊಳ್ಳುವ ಭರದಲ್ಲಿ ವಾಸ್ತವತೆ ಮರೆಮಾಚಲಾಗುತ್ತಿದೆ ಎಂದು ಬೇಸರ ವ್ಯಕ್ತಪಡಿಸುತ್ತಾರೆ ಇಲ್ಲಿನ ಹಿರಿಯ ಶಿಕ್ಷಣ ತಜ್ಞರು.

ಕಾಲೇಜ್ ಅಭಿವೃದ್ಧಿ ಸಮಿತಿ ಮೌನ...!

ಇಲ್ಲಿ ವಿದ್ಯಾರ್ಥಿನಿಯರು ಎದುರಿಸುತ್ತಿರುವ ಸಮಸ್ಯೆ ಬಗ್ಗೆ ಕಾಲೇಜ್ ಅಭಿವೃದ್ಧಿ ಸಮಿತಿಯೂ ಗಂಭೀರವಾಗಿ ಪರಿಗಣಿಸಿರುವುದು ಕಾಣಿಸುತ್ತಿಲ್ಲ. 2014ರ ಆ.17ರಂದು ಶಾಸಕರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿದ ಬಳಿಕ ಸಭೆಗಳು ನಡೆಸಿದ ಮಾಹಿತಿ ಇಲ್ಲ. ಮೊನ್ನೆಯ ಪ್ರತಿಭಟನೆ ಬಳಿಕವೂ ಸಮಿತಿಯ ಕಡೆಯಿಂದ ಯಾವುದೇ ಪ್ರಕ್ರಿಯೆ ಇಲ್ಲ.

ವಿದ್ಯಾಭಿಮಾನಿಗಳಿಗೆ ಕಾಡಿದೆ ತೀವ್ರ ರೀತಿ ಬೇಸರ

ಹಾಳು ಕೊಂಪೆಯಂತಹ ಕಟ್ಟಡದಲ್ಲಿ ವರ್ಷಗಳಿಂದ ಸಹಿಸಿಕೊಂಡು ಹೊಸ ಕಟ್ಟಡದ ಭರವಸೆಯೊಂದಿಗೆ ವಿದ್ಯಾರ್ಜನೆ ಮಾಡುತ್ತಿದ್ದ ವಿದ್ಯಾರ್ಥಿನಿಯರು ಮತ್ತಷ್ಟು ಹಿಂಸೆ ಆರಂಭವಾದಾಗ ಸಹನೆಯ ಕಟ್ಟೆಯೊಡೆದು ಪ್ರತಿಭಟನೆಗೆ ಇಳಿದಿದ್ದರು. ಆದರೆ, ಆ ಬಳಿಕದಲ್ಲಿ ಈ ವಿಚಾರ ರಾಜಕೀಯವಾಗಿ ಬಳಕೆಯಾಗುವ ಮೂಲಕ ಸತ್ಯ, ಅಗತ್ಯತೆಗಿಂತ ರಾಜಕೀಯ ಮೇಲುಗೈ ಸಾಧನೆಗೆ ಆದ್ಯತೆಯಾಗಿರುವುದು ವಿದ್ಯಾಭಿಮಾನಿಗಳಲ್ಲಿ ಬೇಸರಕ್ಕೆ ಕಾರಣವಾಗಿದೆ.

ವಿದ್ಯಾರ್ಥಿಗಳಿಗೆ ನ್ಯಾಯ ಸಿಗದೇ?

ಇಷ್ಟು ವರ್ಷಗಳಲ್ಲಿ ಶಿಕ್ಷಣ ಕ್ಷೇತ್ರಕ್ಕೆ, ಅದೂ ವಿದ್ಯಾರ್ಥಿನಿಯರ ಶಿಕ್ಷಣ ಅವಕಾಶಕ್ಕೆ ಮೂಲಭೂತ ಸೌಕರ್ಯ ಒದಗಿಸಲು ಸಾಧ್ಯವಾಗಿಲ್ಲ. ಸರಕಾರಿ ಆಸ್ಪತ್ರೆಯಲ್ಲಿ ಡಯಾಲಿಸಿಸ್ ವ್ಯವಸ್ಥೆ ವಿಸ್ತರಣೆ ಅತ್ಯಂತ ಆವಶ್ಯಕತೆ ಹೌದು. ಆದರ ಜತೆಗೆ ಸುಮಾರು 520 ವಿದ್ಯಾರ್ಥಿನಿಯರ ಸಮಸ್ಯೆಗಳಿಗೂ ನ್ಯಾಯ ಸಿಗಬೇಕಾಗಿರುವುದು ಅನಿವಾರ್ಯವಲ್ಲವೇ ?

■ ಸವಿತಾ ಪುತ್ತೂರು, ಶಿಕ್ಷಣಾಭಿಮಾನಿ

ಈಗಿನ ತರಗತಿ ಸ್ಥಿತಿ

ಹಾಲಿ ಸರಕಾರಿ ಆಸ್ಪತ್ರೆಗೆ ಸಂಬಂಧಿಸಿದ ಕಟ್ಟಡದಲ್ಲಿ ವಿದ್ಯಾರ್ಥಿನಿಯರ ಪಾಠ, ಪ್ರವಚನಗಳಿಗೆ ಸಮಸ್ಯೆಯಾಗದಂತೆ ಹಗಲು ಹೊತ್ತಿನಲ್ಲಿ ಕಾಮಗಾರಿಗೆ ಬಿಡುವು ನೀಡುವ ಶಾಸಕರ ಸೂಚನೆಯನ್ನು ನಗಣ್ಯ ಮಾಡಲಾಗಿದೆ. ಟಾರ್ಪಾಲು ಅಡ್ಡಲಾಗಿ ಕಟ್ಟಿ ನಿರ್ಮಾಣ ಕಾಮಗಾರಿ ಮುಂದುವರೆಸಲಾಗಿದೆ. ಸಧ್ಯ ಇರುವ ಕೊಠಡಿಗಳಲ್ಲಿ ಒತ್ತಡದಲ್ಲಿ ತರಗತಿಗಳನ್ನು ನಡೆಸಲಾಗುತ್ತಿದೆ.

ಫೆ.24ರಂದು ಡಾ.ಎಂಎನ್‌ಆರ್ 77ನೇ ಹುಟ್ಟುಹಬ್ಬ

77 ಮಂದಿಗೆ ಸವಲತ್ತು ವಿತರಣೆ

• ಮಂಗಳೂರು: ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ (ಎಸ್‌ಸಿಡಿಸಿಸಿ ಬ್ಯಾಂಕ್) ಅಧ್ಯಕ್ಷ ಸಹಕಾರ ರತ್ನ ಡಾ.ಎಂ. ಎನ್. ರಾಜೇಂದ್ರ ಕುಮಾರ್ ಅವರ 77ನೇ ಹುಟ್ಟುಹಬ್ಬದ ಸಂಭ್ರಮಾಚರಣೆ ಕಾರ್ಯಕ್ರಮ ಫೆ. 24ರಂದು ಪೂರ್ವಾಹ್ನ 10.30ಕ್ಕೆ ನಗರದ ಎಸ್‌ಸಿಡಿಸಿಸಿ ಬ್ಯಾಂಕ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ. ಇದೇ ಸಂದರ್ಭ 77ರ ನೆನಪಿನಲ್ಲಿ 77 ಮಂದಿ ಅರ್ಹ ಫಲಾನುಭವಿಗಳಿಗೆ ವಿವಿಧ ಸವಲತ್ತು ವಿತರಣೆ ನಡೆಯಲಿದೆ.



ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಸಲು ಅಭಿವಂದನಾ ಸಮಿತಿ ಅಧ್ಯಕ್ಷ ಐಕಳಬಾವ ದೇವಿಪ್ರಸಾದ್ ಶೆಟ್ಟಿ ಬೆಳಪು, ಹುಟ್ಟು ಹಬ್ಬದ ಜೊತೆಗೆ ಅಭಿವಂದನಾ ಕಾರ್ಯಕ್ರಮವೂ ನಡೆಯಲಿದೆ. ಅರ್ಥಪೂರ್ಣವಾಗಿ ಈ ಕಾರ್ಯಕ್ರಮ ನಡೆಯಲಿದೆ ಎಂದರು.



ಸಹಕಾರಕ್ಷೇತ್ರವನ್ನುಸದೃಢಗೊಳಿಸುವ ಚಿಂತನೆಯೊಂದಿಗೆ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೊಸ ಕ್ರಾಂತಿಯನ್ನು ಸೃಷ್ಟಿಸಿರುವ ಡಾ.ಎಂ. ಎನ್. ರಾಜೇಂದ್ರ ಕುಮಾರ್ ಅವರು ಸಹಕಾರಿಗಳೆಲ್ಲರಿಗೂ ಆದರ್ಶಪ್ರಾಯ. ಸಹಕಾರ ಕ್ಷೇತ್ರದ ಬೆಳವಣಿಗೆಗೆ ವಿಶೇಷ ಕಾರ್ಯಯೋಜನೆಯನ್ನು ರೂಪಿಸಿ ಮಾರ್ಗದರ್ಶಕರಾಗಿರುವ ಡಾ.ಎಂ. ಎನ್.ಆರ್. ಅವರ ಹುಟ್ಟುಹಬ್ಬವನ್ನು ಅರ್ಥಪೂರ್ಣವಾಗಿ ಆಚರಿಸುವ ಉದ್ದೇಶದಿಂದ 77 ಮಂದಿ ಅರ್ಹ ಫಲಾನುಭವಿಗಳಿಗೆ ವಿವಿಧ ಸವಲತ್ತು ವಿತರಿಸಲು ತೀರ್ಮಾನಿಸಲಾಗಿದೆ. ಸಮಾಜದ ಎಲ್ಲ ವರ್ಗದ ಫಲಾನುಭವಿಗಳನ್ನು ಗುರುತಿಸಿ ಸವಲತ್ತುಗಳನ್ನು ಈ ಕಾರ್ಯಕ್ರಮದಲ್ಲಿ ವಿತರಿಸಲಾಗುವುದು ಎಂದು ದೇವಿಪ್ರಸಾದ್ ಶೆಟ್ಟಿ ತಿಳಿಸಿದರು.

ಸಮಾರಂಭದಲ್ಲಿ..

35 ಮಂದಿಗೆ ಸಹಾಯಧನ, 30 ಮಂದಿಗೆ ವಿದ್ಯಾರ್ಥಿವೇತನ, 5 ಮಂದಿಗೆ ಹೊಲಿಗೆಯಂತ್ರ, ಹಾಗೂ ವಿಶೇಷಚೇತನ ಇಬ್ಬರಿಗೆ, ಐದು ಮಂದಿಗೆ ಜೇನುಗೂಡು ಪೆಟ್ಟಿಗೆ ವಿತರಣೆ ನಡೆಯಲಿದೆ.

ಡಾ.ಎಂ.ಎನ್. ರಾಜೇಂದ್ರ ಕುಮಾರ್ ಹುಟ್ಟುಹಬ್ಬ ಕಾರ್ಯಕ್ರಮವನ್ನು ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್ ಉದ್ಘಾಟಿಸಲಿದ್ದಾರೆ. ಸಮಸ್ತ ಸಹಕಾರಿಗಳ ಪರವಾಗಿ ಈ ಕಾರ್ಯಕ್ರಮದಲ್ಲಿ ಡಾ.ಎಂ. ಎನ್. ರಾಜೇಂದ್ರ ಕುಮಾರ್ ಅವರು ಅಭಿವಂದನೆಯನ್ನು ಸ್ವೀಕರಿಸಲಿದ್ದು, ಮಾಜಿ ಮುಖ್ಯಮಂತ್ರಿ ಡಾ.ಎಂ. ವೀರಪ್ಪ ಮೊಯ್ಲಿ ಅವರು ಅಭಿವಂದನಾ ಭಾಷಣ ಮಾಡಲಿದ್ದಾರೆ. ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಡಿ.ವೇದ ವ್ಯಾಸ ಕಾಮತ್ ಸಮಾರಂಭದ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಹೇಳಿದರು.

ಬ್ಯಾಂಕ್ ಉಪಾಧ್ಯಕ್ಷ ವಿನಯ್ ಕುಮಾರ್ ಸೂರಿಂಜೆ, ನಿರ್ದೇಶಕರು ಗಳಾದ ಎಂ. ವಾದಿರಾಜ ಶೆಟ್ಟಿ, ಭಾಸ್ಕರ್ ಎಸ್. ಕೋಟ್ಯಾನ್ , ಐಕಳಬಾವ ದೇವಿಪ್ರಸಾದ್ ಶೆಟ್ಟಿ ಬೆಳಪು, ಶಶಿಕುಮಾರ್ ರೈ ಬಾಲ್ಯೊಟ್ಟು, ಎಸ್.ಬಿ. ಜಯರಾಮ ರೈ, ಮೋನಪ್ಪ ಶೆಟ್ಟಿ ಎಕ್ಕಾರು, ಸದಾಶಿವ ಉಳ್ಳಾಲ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗೋಪಾಲಕೃಷ್ಣ ಭಟ್ ಕೆ ಉಪಸ್ಥಿತರಿದ್ದರು.

ನಾಳೆ ಕೇರಳ ಅರಣ್ಯ ಖಾತೆ ಸಚಿವ ಎ.ಕೆ. ಶಶೀಂದ್ರನ್ ಉದ್ಘಾಟನೆ

ಬೆಳ್ಳೂರಿನಲ್ಲಿ 9 ಕಿಮೀ ಉದ್ದ ಸೌರಬೇಲಿ

• ಕಾಸರಗೋಡು: ಜಿಲ್ಲಾ ಅರಣ್ಯ ವಿಭಾಗದ ಕಾಸರಗೋಡು ರೇಂಜ್‌ನ ಪರಪ್ಪ ವಲಯದ ಬೆಳ್ಳೂರು ಗ್ರಾಮ ಪಂಚಾಯತ್‌ನಲ್ಲಿ ಕೃಷಿಕರ ದೀರ್ಘಕಾಲೀನ ಸಮಸ್ಯೆಗಳನ್ನು ಪರಿಹರಿಸಲು ಜಾರಿಗೆ ತರಲಾದ 9 ಕಿಲೋ ಮೀಟರ್ ಉದ್ದದ ಸೌರ ಬೇಲಿ ಯೋಜನೆಯನ್ನು ಕೇರಳ ಅರಣ್ಯ ಖಾತೆ ಸಚಿವ ಎ.ಕೆ.ಶಶೀಂದ್ರನ್ ಫೆ.22ರಂದು ಉದ್ಘಾಟಿಸಲಿದ್ದಾರೆ.



ಮಾನವ ಮತ್ತು ವನ್ಯಜೀವಿ ಸಂಘರ್ಷ ಹೆಚ್ಚುತ್ತಿರುವ ಪ್ರದೇಶದಲ್ಲಿ ಕೃಷಿ ವಲಯವನ್ನು ಸಂರಕ್ಷಿಸಲು ಇಲಾಖೆಗಳ ಸಮನ್ವಯದೊಂದಿಗೆ ಜಾರಿಗೆ ತರಲಾದ ಮಾದರಿ ಯೋಜನೆ ಇದಾಗಿದೆ. ಪರಪ್ಪ ವಿಭಾಗದ ಆರತಿಕುಡ್ಲುವಿನಿಂದ ದೇಶಮುಳ ವರೆಗಿನ ಪ್ರದೇಶವು ಮುಖ್ಯವಾಗಿ ಭತ್ತದ ಕೃಷಿಯನ್ನು ಅವಲಂಬಿಸಿದೆ.

ಕಳೆದ ಕೆಲವು ವರ್ಷಗಳಿಂದ ಕಾಡು ಕೋಣಗಳು ಸೇರಿದಂತೆ ವನ್ಯಜೀವಿಗಳ ಉಪಟಳದಿಂದಾಗಿ ಬೆಳೆ ಹಾನಿ ವ್ಯಾಪಕವಾಗಿ ಸಂಭವಿಸಿದೆ. ಇದರಿಂದಾಗಿ ಅನೇಕ ಮಂದಿ ರೈತರು ತಮ್ಮ ಜೀವನೋಪಾಯವನ್ನು ತ್ಯಜಿಸುವಂತೆ ಮಾಡಿದೆ. ಈ ಮಧ್ಯೆ ಕಾಡುಪ್ರಾಣಿಗಳು ನಾಡಿಗಿಳಿಯದಂತೆ ಅರಣ್ಯ ಇಲಾಖೆಯು ವೈಜ್ಞಾನಿಕ ತಡೆಗಟ್ಟುವಿಕೆಯಾಗಿ ಸೌರ ಬೇಲಿಗಳನ್ನು ಅಳವಡಿಸಲು ಮುಂದಾಗಿದೆ.

ಈ ಯೋಜನೆಯನ್ನು ಕೃಷಿ ಇಲಾಖೆ ಮತ್ತು ಸ್ಥಳೀಯಾಡಳಿತ ಸಂಸ್ಥೆಗಳ ಜಂಟಿ ಸಹಯೋಗದೊಂದಿಗೆ ಜಾರಿಗೆ ತರಲಾಗಿದೆ. ಕೃಷಿ ಇಲಾಖೆಯ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (ಆರ್‌ಕೆವಿವೈ) ಯೋಜನೆಯಡಿ 37 ಲಕ್ಷ ರೂ. ಮತ್ತು ಬೆಳ್ಳೂರು ಗ್ರಾಮ ಪಂಚಾಯತ್‌ನಿಂದ 1.88 ಲಕ್ಷ ರೂ.ಗಳ ಆರ್ಥಿಕ ನೆರವು ನೀಡಲಾಗಿದೆ. ಸ್ಥಳೀಯರ ಭಾಗವಹಿಸುವಿಕೆಯೊಂದಿಗೆ ಹಂತ ಹಂತವಾಗಿ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆ. ಈ ಯೋಜನೆಯು ವನ್ಯಜೀವಿ ದಾಳಿಯ ಭಯವಿಲ್ಲದೆ ಭತ್ತದ ಕೃಷಿ ಮತ್ತು ಸಂಬಂಧಿತ ಕೃಷಿ ಚಟುವಟಿಕೆಗಳನ್ನು ಮುಂದುವರಿಸಲು ಕೃಷಿಕರಿಗೆ ಆತ್ಮವಿಶ್ವಾಸವನ್ನು ನೀಡುತ್ತದೆ.

ಮಾದರಿ

ಅರಣ್ಯ ಮಿತಿಯಲ್ಲೇ ವನ್ಯಜೀವಿಗಳನ್ನು ಇರಿಸುವ ಮೂಲಕ ಮಾನವ - ವನ್ಯಜೀವಿ ಸಂಘರ್ಷವನ್ನು ಗಮನಾರ್ಹವಾಗಿ ಕಡಿಮೆ ಮಾಡಬಹುದು. ಬೆಳೆ ಹಾನಿ ಕಡಿಮೆಯಾಗುವುದರೊಂದಿಗೆ ರೈತರ ಆರ್ಥಿಕ ಸ್ಥಿತಿ ಸುಧಾರಿಸುತ್ತದೆ ಎಂದು ಅರಣ್ಯ ಮತ್ತು ಕೃಷಿ ಇಲಾಖೆ ಅಧಿಕಾರಿಗಳು ಆಶಿಸಿದ್ದಾರೆ.

ಕೃಷಿ ಹಾಗೂ ಅರಣ್ಯ ಸಂರಕ್ಷಣೆಗೆ ಕೈಜೋಡಿಸುವ ರಾಜ್ಯ ಸರಕಾರದ ನೀತಿಯ ಭಾಗವಾಗಿ ಜಾರಿಗೆ ತರಲಾದ ಸೌರ ಬೇಲಿ ನಿರ್ಮಾಣ ಯೋಜನೆಯು ಕೃಷಿಕರ ಸುರಕ್ಷತೆ ಮತ್ತು ಜೀವನೋಪಾಯವನ್ನು ಖಚಿತಪಡಿಸು ವುದಲ್ಲದೆ ಪ್ರಕೃತಿ ಸಂರಕ್ಷಣೆಯನ್ನು ಹೆಚ್ಚು ಜನಪ್ರಿಯಗೊಳಿಸುವಲ್ಲಿ ಮಾದರಿಯಾಗಲಿದೆ.

ಮಂಗಳೂರಿನಲ್ಲಿ ಮಿರ್ ಗ್ರೂಪ್ ನೇತೃತ್ವದ 'ಮಿರ್ ನೆಟ್ ಝೀರೊ ವಿಷನ್' ಸಮ್ಮೇಳನಕ್ಕೆ ಚಾಲನೆ | ಅಭಯ್ ಭಾಕ್ರೆ ಭವಿಷ್ಯ

ಭವಿಷ್ಯದಲ್ಲಿ ಇತರೆ ಇಂಧನಗಳಿಗೆ ಹಸಿರು ಜಲಜನಕ ಪರ್ಯಾಯ

• ಮಂಗಳೂರು: ಹಸಿರು ಜಲಜನಕ ಭವಿಷ್ಯದಲ್ಲಿ ಇತರ ಇಂಧನಗಳಿಗೆ ಪರ್ಯಾಯವಾಗಲಿದೆ. ಪ್ರಸಕ್ತ ಡೀಸೆಲ್‌ನಲ್ಲಿ ಓಡಿಸಲಾಗುತ್ತಿರುವ ಟ್ರಕ್ ಮತ್ತು ಬಸ್‌ಗಳಿಗೆ ಹಸಿರು ಜಲಜನಕ ಬಳಕೆಯ ಪ್ರಯೋಗಗಳು ನಡೆಯುತ್ತಿವೆ ಎಂದು ಕೇಂದ್ರ ಇಂಧನ ಕಾರ್ಯಕ್ಷಮತೆ ಬ್ಯೂರೋ ಇದರ ಮಹಾನಿರ್ದೇಶಕ ಅಭಯ್ ಭಾಕ್ರೆ ಹೇಳಿದರು.

ಮಂಗಳೂರಿನ ಟಿಎಂಎ ಪೈ ಇಂಟರ್ ನ್ಯಾಷನಲ್ ಸಭಾಂಗಣದಲ್ಲಿ ಇಟಲಿಯ ಮಿರ್ ಗ್ರೂಪ್ ಆಯೋಜಿಸಿದ್ದ ಮಿರ್ ನೆಟ್ ಝೀರೊ ವಿಷನ್ ಸಮ್ಮೇಳನದ ಶುಕ್ರವಾರ ನಡೆದ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ವಿಶ್ವದಲ್ಲಿ ಮೆಥನಾಲ್ ಬದಲಿಗೆ 60 ಹಡಗುಗಳು ಈಗಾಗಲೇ ಹಸಿರು ಇಂಧನದ ಮೂಲಕ ಕಾರ್ಯಾಚರಿಸುತ್ತಿವೆ. ಹಸಿರು ಅಮೋನಿಯಾವನ್ನು ರಸಗೊಬ್ಬರವಾಗಿಯೂ ಬಳಸಬಹುದಾಗಿದೆ ಎಂದರು. ಭಾರತದಲ್ಲಿ ಸೂರ್ಯನ ಬೆಳಕು ಮತ್ತು ನೀರಿನ ಮೂಲಗಳು ಅಗಾಧವಾಗಿರುವುದರಿಂದ ಹಸಿರು ಇಂಧನವನ್ನು ಅತ್ಯಂತ ಕಡಿಮೆ ವ್ಯಯದಲ್ಲಿ ಬಳಕೆ ಮಾಡಬಹುದಾಗಿದೆ ಎಂದವರು ಹೇಳಿದರು. ನವೀಕರಿಸಬಹುದಾದ ನೈಸರ್ಗಿಕ ಅನಿಲ ಹಾಗೂ ಹಸಿರು ಜಲಜನಕ ಭವಿಷ್ಯದ ಇಂಧನ ಶಕ್ತಿಯಾಗಿದೆ.ಗ್ರೀನ್ ಹೈಡ್ರೋಜನ್ ಸೇರಿದಂತೆ ಪರಿಸರಕ್ಕೆ ಪೂರಕವಾದ ಅಂಶಗಳತ್ತ ಹೆಚ್ಚಿನ ಒಲವು ಹರಿಸಬೇಕಿದೆ. ಹಾಗಾದಾಗ ಮಾತ್ರ ನಾವು ಶತಮಾನಗಳ ಹಿಂದಿನಂತೆ ಈ ಭೂಮಿಯಲ್ಲಿ ಸ್ವಚ್ಛ ಪರಿಸರದ ಜತೆ ಬದುಕಲು ಸಾಧ್ಯವಾಗಲಿದೆ ಎಂದರು. ಮಿರ್ ಗ್ರೂಪ್‌ನ ಸಿಇಒ ರಫೋಲೋ ಮೊರಾರ್ಯೊ ಮಾತನಾಡಿ, ಹಸಿರು ಇಂಧನದ ಮೂಲಕ ಸುಸ್ಥಿರ ಅಭಿವೃದ್ಧಿ ಸಾಧ್ಯವಾಗಲಿದೆ. ಇದರಿಂದ ನೈಸರ್ಗಿಕ ಸಂಪನ್ಮೂಲವನ್ನು ಉಳಿಸಿ ತ್ಯಾಜ್ಯವನ್ನು ಸಮರ್ಪಕ ನಿರ್ವಹಣೆ, ಪ್ಲಾಸ್ಟಿಕ್‌ಗಳ ಬಳಕೆಯನ್ನು ಕಡಿಮೆ ಮಾಡುವ ಮೂಲಕ ಹಸಿರು ಇಂಧನ ಬಳಕೆಗೆ ಒತ್ತು ನೀಡಬಹುದಾಗಿದೆ ಎಂದರು. ಇಟಲಿಯ ಕಾನ್ಸುಲೇಟ್ ಜನರಲ್ ಗಿಯಾಂಡೊ ಮೆಡಿಕೊ ಮಿಲಾನೊ, ಸಂಸದ ಕ್ಯಾ.ಬ್ರಿಜೇಶ್ ಚೌಟ, ಜಿಲ್ಲಾಧಿಕಾರಿ ದರ್ಶನ್ ಎಚ್.ವಿ, ಎಸ್‌ಇಝೆಡ್ ಸಿಇಒ ಸೂರ್ಯನಾರಾಯಣ, ಮಿರ್ ಗ್ರೂಪ್‌ನ ಪ್ರಮೋದ್ ಪಿಂಟೊ, ನಿತಿನ್ ಶೆಟ್ಟಿ, ಎನ್‌ಐಟಿಕೆ ನಿರ್ದೇಶಕ ಪ್ರೊ. ಬಿ. ರವಿ, ಗೋಕುಲ್ ದಾಸ್ ಉಪಸ್ಥಿತರಿದ್ದರು.



'ಕರ್ನಾಟಕವು ತನ್ನ ಪವನ ವಿದ್ಯುತ್ ಸಾಮರ್ಥ್ಯವನ್ನು 1,331.48 ಮೆಗಾವ್ಯಾಟ್‌ಗೆ ಹೆಚ್ಚಿಸಿಕೊಂಡಿದ್ದು, 2024 - 25 ರ ಆರ್ಥಿಕ ವರ್ಷದಲ್ಲಿ ಪವನ ವಿದ್ಯುತ್ ಸಾಮರ್ಥ್ಯ ಸೇರ್ಪಡೆಯಲ್ಲಿ ರಾಜ್ಯವು ದೇಶದಲ್ಲಿ ಮೊದಲ ಸ್ಥಾನವನ್ನು ಪಡೆದುಕೊಂಡಿದೆ.

■ ಟಿ.ಡಿ. ರಾಜೇಗೌಡ, ಶೃಂಗೇರಿ ಶಾಸಕರು, ಕೆಆರ್‌ಇಡಿಎಲ್ ಅಧ್ಯಕ್ಷರು.

'ಮಂಗಳೂರಿನಲ್ಲಿ ಪ್ಲಾಸ್ಟಿಕ್ ಪಾರ್ಕ್ ಶೀಘ್ರ ಪೂರ್ಣಗೊಳಿಸಲು ಆದ್ಯತೆ ನೀಡಲಾಗಿದೆ. ಈಗಾಗಲೇ ಶೇ. 90ರಷ್ಟು ಪೂರ್ಣಗೊಂಡಿದ್ದು, ಉದ್ಘಾಟನೆಗೆ ಸಜ್ಜಾಗುತ್ತಿದೆ. ಅಲ್ಲದೆ ಮಂಗಳೂರಿನಲ್ಲಿ ಸಮಗ್ರ ವೈದ್ಯಕೀಯ ಪ್ರವಾಸೋದ್ಯಮಕ್ಕಾಗಿ ಕೇಂದ್ರ ಬಜೆಟ್ ಸಂದರ್ಭ ಪ್ರಸ್ತಾವಿಸಲಾಗುವುದು.

■ ಕ್ಯಾ.ಬ್ರಿಜೇಶ್ ಚೌಟ, ಸಂಸದರು, ದ.ಕ.

ಶಿವಾಜಿ ಮೆರವಣಿಗೆ ಮೇಲೆ ಮಸೀದಿ ಕಡೆಯಿಂದ ಕಲ್ಲು

ಪುಟ ೧➡ ಪಂಕಾ ಮಸೀದಿಯ ಸಮೀಪ ಮೆರವಣಿಗೆ ಶಾಂತ ರೀತಿಯಿಂದ ಹೊರಟಾಗ ಮಸೀದಿಯಲ್ಲಿದ್ದ ಕಿಡಿಗೇಡಿಗಳ ಗುಂಪು ಪೊಲೀಸ್ ಭದ್ರತೆ ಇದ್ದರೂ ಅದ್ಯಾವುದಕ್ಕೂ ಕ್ಯಾರೇ ಎನ್ನದೇ ಮೆರವಣಿಗೆಯಲ್ಲಿ ಪೊಲೀಸರ ಎದುರೇ ಕಲ್ಲು ತೂರಾಟ, ಚಪ್ಪಲಿ ಎಸೆದಿದ್ದಾರೆ. ಕಲ್ಲು ತೂರಾಟವಾಗುತ್ತಿದ್ದಂತೆ ಎಸ್ಪಿ ಸಿದ್ಧಾರ್ಥ ಗೋಯಲ್ ಅವರ ತಲೆಗೆ ಬಿದ್ದು ಗಾಯ ಕೂಡ ಆಗಿದೆ. ಸ್ಥಳದಲ್ಲೇ ಇದ್ದ ಹಿಂದುಗಳು ಮೆರವಣಿಗೆಯನ್ನು ಕೆಲವು ಸಮಯ ಸ್ಥಗಿತಗೊಳಿಸಿ ಆಕ್ರೋಶ ವ್ಯಕ್ತಪಡಿಸಿ ಕಲ್ಲು ತೂರಾಟ ನಡೆಸಿದವರನ್ನು ಬಂಧಿಸಬೇಕು ಎಂದು ಆಗ್ರಹಿಸಿದರು. ನಂತರ ಮೆರವಣಿಗೆ ಯಥಾ ಸ್ಥಿತಿಯಲ್ಲಿ ನಡೆಯಿತು.

ಆರೋಪಿಗಳ ಬಂಧನಕ್ಕೆ ಗಡುವು: ಶುಕ್ರವಾರ ಅಂಬಾಭವಾನಿ ದೇವಸ್ಥಾನ ಬಳಿ ಸೇರಿದ ಹಿಂದು ಸಂಘಟನೆಗಳ ಮುಖಂಡರು, ಕಾರ್ಯಕರ್ತರು, ಸಮಾಜದವರು ಎಲ್ಲಿ ಶಿವಾಜಿ ಮಹಾರಾಜರ ಮೆರವಣಿಗೆಗೆ ಅಪಮಾನ ಮಾಡಲಾಗಿದೆ ಅದೇ ಸ್ಥಳದಿಂದ ಮತ್ತೊಮ್ಮೆ ಮೆರವಣಿಗೆ ನಡೆಯಬೇಕು. ಮಸೀದಿಯಲ್ಲಿ 8 ಜನರು ಇರಲಿಲ್ಲ 200 ಜನ ಪೂರ್ವ ನಿಯೋಜಿತದಿಂದಲೇ ಸೇರಿದ್ದಾರೆ. ಅಲ್ಲಿದ್ದ ಎಲ್ಲರೂ ಬಂಧನ ಆಗಬೇಕು. ಮಸೀದಿಯ ಆಡಳಿತ ಮಂಡಳಿಯವರು, ಚೇರ್ಮನ್ ಅವರನ್ನು ಕೂಡ ಬಂಧಿಸಬೇಕು. ಶನಿವಾರ ಸಂಜೆ ವೇಳೆಗೆ ಬಂಧನವಾಗಬೇಕು ಎಂದು ಹಿಂದು ಸಂಘಟನೆ ಮುಖಂಡರು ಸಭೆಯಲ್ಲಿ ಗಡುವು ನೀಡಿ ಪೊಲೀಸರಿಗೆ ಎಚ್ಚರಿಕೆ ನೀಡಿದರು.

8 ಜನರ ಬಂಧನ

ಪುಟ ೧➡ ತಮ್ಮ ಕಚೇರಿಯಲ್ಲಿ ಶುಕ್ರವಾರ ಬೆಳಗ್ಗೆ ಮಾಧ್ಯಮದವರಿಗೆ ಘಟನೆಯ ಕುರಿತು ಮಾಹಿತಿ ನೀಡಿದ ಎಸ್ಪಿ ಸಿದ್ಧಾರ್ಥ ಗೋಯಲ್, ಶಿವಾಜಿ ಮಹಾರಾಜರ ಜಯಂತಿ ನಿಮಿತ್ತ ಆಯೋಜಿಸಿದ್ದ ಮೆರವಣಿಗೆ ನಗರದ ಪಂಕಾ ಮಸೀದಿ ಬಳಿ ತೆರಳುತ್ತಿರುವಾಗ ಮಸೀದಿಯಿಂದ ಎರಡು ಕಲ್ಲು ಹಾಗೂ ಚಪ್ಪಲಿ ಎಸೆದಿರುವುದು ವಿಡಿಯೋ ಮೂಲಕ ದೃಢಪಟ್ಟಿದ್ದು, ತಕ್ಷಣ ಇದಕ್ಕೆ ಸಂಬಂಧಪಟ್ಟ 8 ಜನರನ್ನು ಬಂಧಿಸಿ ತನಿಖೆ ನಡೆಸಲಾಗುತ್ತಿದೆ ಎಂದರು. ಮೆರವಣಿಗೆಯ ಮೇಲೆ ಕಲ್ಲು ತೂರಾಟ ನಡೆಸಿದ ಪ್ರಮುಖ ಆರೋಪಿಯಾಗಿರುವ ನವನಗರದ ಸೆಕ್ಟರ್ ನಂ.10ರ ನಿವಾಸಿ ತನ್ವೀರ್ ಶಕೀಲ್ ಹವಾಲ್ದಾರ(28), ಪೆಂಡಾರಗಲ್ಲಿಯ ಮುಜ್ಜು ಉರ್ಫ್ ಮುಜಮಿಲ್ ರಾಜೇಸಾಬ್ ಕಮತಗಿ(23), ಸದ್ದಾಂ ರಾಜೇಸಾಬ್ ಕಮತಗಿ(22), ರಿಯಾನ್ ಮಹ್ಮದ ಶೇಖ್ (21), ವಸೀಮ್ ಅಲ್ಲಾಭಕ್ಷ ಶೇಖ್ (22) ಹಾಗೂ ನಗರದ ಶಂಕರಲಿಂಗ ಗುಡಿ ಹತ್ತಿರದ ನಿವಾಸಿ ಸರ್ಪರಾಜ ಇಕ್ಬಾಲಸಾಬ ಚಾವುಸ(33) ಎಂಬ ಎಂಟು ಜನರನ್ನು ಬಂಧಿಸಲಾಗಿದೆ ಎಂದು ಹೇಳಿದರು.


ಕಠಿಣ ಕ್ರಮಕ್ಕೆ ಸಿಎಂ ಸಿದ್ದರಾಮಯ್ಯ ಆದೇಶ

ಪುಟ ೧➡ ಘಟನೆ ಕುರಿತು ಎಕ್ಸ್ ಪೋಸ್ಟ್ ಮಾಡಿರುವ ಸಿದ್ದರಾಮಯ್ಯ, ಈಗಾಗಲೇ ಪ್ರಕರಣ ಸಂಬಂಧ ಕೆಲವು ಆರೋಪಿಗಳನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಲಾಗುತ್ತಿದ್ದು, ಘಟನೆಗೆ ಕಾರಣರಾದ ಪ್ರತಿಯೊಬ್ಬರಿಗೂ ಶಿಕ್ಷೆ ನಿಶ್ಚಿತ. ನಾಡಿನ ಜನರಿಗೆ ಭಯಮುಕ್ತ ನೆಮ್ಮದಿಯ ಬದುಕು ನೀಡುವುದು ನಮ್ಮ ಮೊದಲ ಆದ್ಯತೆ. ಜನರ ಶಾಂತಿ – ನೆಮ್ಮದಿಗೆ ಭಂಗ ತರುವ ಯಾವುದೇ ವ್ಯಕ್ತಿ – ಶಕ್ತಿಗಳನ್ನು ನಾವು ಸಹಿಸುವುದಿಲ್ಲ. ಸಾರ್ವಜನಿಕರು ಯಾವುದೇ ಪ್ರಚೋದನೆಗಳಿಗೂ ಕಿವಿಗೊಡದೆ, ಸಂಯಮದಿಂದ ವರ್ತಿಸಿ. ಪೊಲೀಸ್ ಇಲಾಖೆ ತನ್ನ ಕರ್ತವ್ಯವನ್ನು ನಿಷ್ಪಕ್ಷಪಾತವಾಗಿ ಮಾಡಲಿದೆ ಎಂದು ಸಿಎಂ ತಿಳಿಸಿದ್ದಾರೆ.

ಒದ್ದು ಒಳಗೆ ಹಾಕಿ: ಬಿಜೆಪಿ

ಪುಟ ೧➡ ಅವರು ಶುಕ್ರವಾರ ಮಾಧ್ಯಮಗಳ ಜತೆ ಮಾತನಾಡಿ, ಬಾಗಲಕೋಟೆಯಲ್ಲಿ ಕೆಲವು ದೇಶದ್ರೋಹಿಗಳು ಶಿವಾಜಿ ಮೆರವಣಿಗೆ ಮೇಲೆ ಕಲ್ಲು ತೂರಾಟ ನಡೆಸಿದ್ದಾರೆ. ಅವರು ಯಾರೆಂದು ಪೊಲೀಸರು ಪತ್ತೆ ಹಚ್ಚಿದ್ದಾರೆ. ಇಂಥ ದೇಶದ್ರೋಹಿಗಳನ್ನು ಒದ್ದು ಒಳಗೆ ಹಾಕಬೇಕೆಂದು ಮುಖ್ಯಮಂತ್ರಿಗಳಲ್ಲಿ ಹಾಗೂ ಗೃಹ ಸಚಿವರಲ್ಲಿ ಆಗ್ರಹಿಸುತ್ತೇನೆ ಎಂದರು. ಇಂಥ ಟಿಪ್ಪು, ಔರಂಗಜೇಬ್ ಮನಸ್ಥಿತಿ ಇರುವ ದೇಶದ್ರೋಹಿಗಳನ್ನು ಯಾವುದೇ ಕಾರಣಕ್ಕೆ ಕ್ಷಮಿಸಬಾರದು. ಇಂಥವರಿಗೆ ತಕ್ಕ ಪಾಠ ಕಲಿಸಬೇಕು ಎಂದು ವಿಜಯೇಂದ್ರ ಆಗ್ರಹಿಸಿದರು.

ರಾಮ ಬಾಣ



ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಪ್ರಧಾನಿ ನರೇಂದ್ರ ಮೋದಿ ದೇಶ ದ್ರೋಹಿ
– ನಸೀರ್ ಅಹ್ಮದ್

– ಅವರು ದ್ರೋಹ ಬಗೆದುದು ಯಾವ ದೇಶಕ್ಕೆ ಎಂಬುದನ್ನು ನೀವು ಸ್ಪಷ್ಟವಾಗಿ ಹೇಳಿದ್ದರೆ ಚೆನ್ನಾಗಿತ್ತು. ಭಾರತಕ್ಕಂತೂ ಅವರಿಂದ ಯಾವುದೇ ದ್ರೋಹವಾಗಿಲ್ಲ ಎಂಬುದು ನೀವೂ ಸೇರಿ ಸಮಸ್ತ ಭಾರತೀಯರಿಗೆ ತಿಳಿದಿದೆ!

ದಿನ ಭವಿಷ್ಯ

ಮೇಷ ಕೆಲವು ಅನಿರೀಕ್ಷಿತ ಗುರಿ ಸಾಧಿಸಬೇಕಾಗುತ್ತದೆ. ಚಿಂತೆಗೆ ಕಾರಣವಿಲ್ಲ. ನಿಮ್ಮಿಂದ ಸುಲಭದಲ್ಲೆ ಸಾಧ್ಯವಾಗಲಿದೆ. ಬಂಧು ಭೇಟಿ. ಆರ್ಥಿಕ ಸ್ಥಿರತೆ.

ವೃಷಭ ಬಾಕಿ ಉಳಿದ ಕಾರ್ಯ ಪೂರೈಸಿರಿ. ಸಂಜೆ ವೇಳೆ ಕುಟುಂಬ ಸದಸ್ಯರ ಜತೆ ಆತ್ಮೀಯ ಕಾಲಕ್ಷೇಪ. ಪ್ರೇಮಿಗಳ ಮಧ್ಯೆ ಒಡಕು ಉಂಟಾದೀತು.

ಮಿಥುನ ಕೆಲವು ಪುಟ್ಟ ಬದಲಾವಣೆ ಮಾಡಿಕೊಳ್ಳಿ. ಆರೋಗ್ಯಪೂರ್ಣ ಮತ್ತು ಸಂತಸದ ಬದುಕು ಸಾಧ್ಯ. ದೊಡ್ಡ ಮಟ್ಟದ ವೆಚ್ಚಕ್ಕೆ ಕೈಹಾಕಬೇಡಿ.

ಕಟಕ ಕೆಲಸದ ಒತ್ತಡದಿಂದ ಮುಕ್ತಿ. ನಿಮ್ಮ ಇಷ್ಟದ ಕಾರ್ಯ ನಡೆಸಲು ಅವಕಾಶ. ಧನಲಾಭ. ಅತಿ ಆಹಾರ ಸೇವನೆ ಜಡತ್ವಕ್ಕೆ ಕಾರಣವಾದೀತು.

ಸಿಂಹ ಎಲ್ಲರು ಮೆಚ್ಚುವ ಸಾಧನೆ ನಿಮ್ಮದು. ಅಶಾಂತಿ ಪರಿಹಾರ. ಕಠಿಣ ಕಾರ್ಯ ಸುಲಭದಲ್ಲಿ ಪೂರ್ಣ. ಹೊಸ ಹೊಣೆಗಾರಿಕೆ ಈಗ ಹೊತ್ತುಕೊಳ್ಳದಿರಿ.

ಕನ್ಯಾ ಮನಸ್ಸೇಕೋ ಉದಾಸ. ಎಲ್ಲರ ಜತೆ ಬೆರೆಯಲು ಮನಸ್ಸು ಬಾರದು. ಕಾರಣವಿಲ್ಲದ ಚಿಂತೆ. ಕೆಲವರಿಗೆ ಹೊಟ್ಟೆ ನೋವು ಕಾಡಬಹುದು.

ತುಲಾ ಪ್ರಮುಖ ನಿರ್ಧಾರ ತಾಳಬೇಕಾದ ದಿನ. ಮನದಲ್ಲಿ ಶಾಂತತೆ ಕಾಯ್ದುಕೊಳ್ಳಿ. ಒತ್ತಡಗಳು ಪ್ರಭಾವಿಸದಂತೆ ನೋಡಿ. ದೈಹಿಕ ನೋವು ಸಂಭವ.

ವೃಶ್ಚಿಕ ಪ್ರೀತಿಯ ಬದುಕು ಅಥವಾ ಕೌಟುಂಬಿಕ ಪರಿಸರ ಸಕಾರಾತ್ಮಕ ಬದಲಾವಣೆ ಕಾಣಲಿದೆ. ಸಮಸ್ಯೆ ನಿವಾರಣೆ. ಬಂಧುಗಳ ಸಹಕಾರ.

ಧನು ಕೆಲ ವಿಚಾರಗಳಲ್ಲಿ ಗೊಂದಲದ ಮನಸ್ಥಿತಿ. ಸ್ಪಷ್ಟತೆ ಕಾಣದೆ ತೊಳಲಾಟ. ವಿವೇಕದಿಂದ ವರ್ತಿಸಿ, ಇತರರನ್ನು ನಿಯಂತ್ರಿಸಲು ಹೋಗದಿರಿ.

ಮಕರ ವೃತ್ತಿಯಲ್ಲಿ ಹೆಚ್ಚು ಎಚ್ಚರದಿಂದಿರಿ. ಪ್ರತಿಕೂಲ ಸನ್ನಿವೇಶ ಎದುರಾದೀತು. ಇದರ ಮಧ್ಯೆಯೇ ಆರ್ಥಿಕ ಉನ್ನತಿ. ಮುಖ್ಯ ಯೋಜನೆ ಯಶಸ್ಸು.

ಕುಂಭ ಇಂದು ನಿಮ್ಮ ಸುತ್ತಲಿನ ಪರಿಸರ ಗಂಭೀರ ಎನಿಸಲಿದೆ. ನೀವೂ ಅದಕ್ಕೆ ಹೊಂದಿಕೊಳ್ಳಿ. ಕೆಲಸದಲ್ಲಿ ಭಾರೀ ಒತ್ತಡ. ಇತರರ ಅಸಹಕಾರ ಎದುರಿಸುವಿರಿ.

ಮೀನ ಏರುಪೇರಿನ ದಿನ. ಸಂತೋಷ, ಬೇಸರ ಎರಡೂ ಅನುಭವಿಸುವಿರಿ. ಪ್ರೀತಿಗೆ ಅಡ್ಡಿ. ಒತ್ತಡ ಕಳೆಯಲು ಸಂಗೀತ, ಅಧ್ಯಾತ್ಮ ನೆರವಾದೀತು.

ರಾಹುಕಾಲ: 9.00-10.30
ಗುಳಿಕಕಾಲ: 6.00-7.30

ಅದೃಷ್ಟ ಸಂಖ್ಯೆ 8,1,5,0

ಟ್ರಂಪ್ ಸುಂಕ ರದ್ದು

ಪುಟ ೧➡ ಸುಂಕವನ್ನು ವಿಧಿಸಲು ಅಂತಾರಾಷ್ಟ್ರೀಯ ತುರ್ತು ಆರ್ಥಿಕ ಅಧಿಕಾರ ಕಾಯ್ದೆಯು(ಐಇಇಪಿಎ) ಅಧ್ಯಕ್ಷರಿಗೆ ಅಧಿಕಾರ ನೀಡುವುದಿಲ್ಲ ಎಂದು ನಾವು ಭಾವಿಸುತ್ತೇವೆ ಎಂದು ರಾಬರ್ಟ್ಸ್ ತೀರ್ಪಿನಲ್ಲಿ ಬರೆದಿದ್ದಾರೆ. ಸುಂಕ ವಿಧಿಸುವ ಅಧಿಕಾರ ಕಾಂಗ್ರೆಸ್‌ಗಷ್ಟೇ ಇದ್ದು, ಅಧ್ಯಕ್ಷ ಟ್ರಂಪ್‌ಗೆ ಇಲ್ಲ ಎಂದು ಮುಖ್ಯ ನ್ಯಾಯಮೂರ್ತಿ ಹೇಳಿದರು. ನ್ಯಾಯಮೂರ್ತಿಗಳಾದ ಆಮಿ ಕೋನಿ ಬ್ಯಾರೆಟ್, ನೀಲ್ ಗೋರ್ಸಚ್ ರಾಬರ್ಟ್ಸ್ ಮತ್ತು ಇನ್ನೂ ಮೂವರು ಒಪ್ಪಿಕೊಂಡರು.



ನ್ಯಾಯಮೂರ್ತಿಗಳಾದ ಕ್ಲಾರೆನ್ಸ್ ಥಾಮಸ್, ಸ್ಯಾಮ್ಯುಯೆಲ್ ಅಲಿಟೊ ಮತ್ತು ಬ್ರೆಟ್ ಕವನಾಫ್ ವ್ಯತಿರಿಕ್ತ ತೀರ್ಪು ಬರೆದರು. 2025ರ ಏ.2ರಂದು ಟ್ರಂಪ್, ಕಾರ್ಯನಿರ್ವಾಹಕ ಆದೇಶದ ಮೂಲಕ ಈ ಸುಂಕ ನಿರ್ಧಾರಕ್ಕೆ ಸಹಿ ಹಾಕಿ, ವಿಮೋಚನಾ ದಿನ ಎಂದು ಕರೆದಿದ್ದರು. ಅಂದು ಅವರು ಜಗತ್ತಿನ ವಿವಿಧ ದೇಶಗಳ ಮೇಲೆ ಸುಂಕ ವಿಧಿಸಿದ್ದರು. ಟ್ರಂಪ್ ಅವರ ಕ್ರಮವು ಜಾಗತಿಕ ಮಾರುಕಟ್ಟೆಗಳನ್ನು ಬೆಚ್ಚಿಬೀಳಿಸಿತು. ಜತೆಗೆ ಸಾಂಪ್ರದಾಯಿಕ ಯುಎಸ್ ವ್ಯಾಪಾರ ಪಾಲುದಾರರನ್ನು ದೂರವಿಟ್ಟು, ಜಾಗತಿಕ ಆರ್ಥಿಕ ಅನಿಶ್ಚಿತತೆಗೆ ಕಾರಣವಾಯಿತು. ಟ್ರಂಪ್ ವಿರುದ್ಧ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನಿಂದಾಗಿ ಅಮೆರಿಕ, ಸುಂಕ ಸಂಗ್ರಹದಲ್ಲಿ 175 ಬಿಲಿಯನ್ ಡಾಲರ್ ಅನ್ನು ಮರುಪಾವತಿ ಮಾಡಬೇಕಾದ ಅಪಾಯವಿದೆ ಎಂದು ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ.

ಎಕ್ಸ್ ಖಾತೆಯಲ್ಲಿ ವಿಷಯ ಹಂಚಿಕೊಂಡ ಮುಖ್ಯಮಂತ್ರಿ ಸಿದ್ದರಾಮಯ್ಯ

ಸಾಮಾಜಿಕ ನ್ಯಾಯಕ್ಕೆ ಬದ್ಧ

• **ಬೆಂಗಳೂರು:** ಸಾಮಾಜಿಕ ನ್ಯಾಯ ಎನ್ನುವುದು ನನ್ನ ಪಾಲಿಗೆ ಒಂದು ಸಿದ್ಧಾಂತ ಅಲ್ಲ, ಅದು ಸರ್ವ ಸಮಾನತೆಯ ಗುರಿಯನ್ನು ತಲುಪಲು ನಾನು ಆರಿಸಿಕೊಂಡ ಬದುಕಿನ ಹಾದಿ. ಸಾಮಾನ್ಯವಾಗಿ ಸಾಮಾಜಿಕ ನ್ಯಾಯ ಎಂದರೆ ಯಾರಿಂದಲೋ ಕಿತ್ತು, ಇನ್ನಾರಿಗೋ ಹಂಚುವ ಜನವಿರೋಧಿಯಾದ, ತಾರತಮ್ಯದ ನೀತಿ ಎಂಬಂತೆ ಬಿಂಬಿಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಸಾಮಾಜಿಕ ಜಲತಾಣ ಟ್ವಿಟರ್‌ನಲ್ಲಿ ಹಲವಾರು ವಿಷಯಗಳನ್ನು ಹಂಚಿಕೊಂಡಿರುವ ಅವರು, ಸಂಪತ್ತು, ಅಧಿಕಾರ ಮತ್ತು ಅವಕಾಶಗಳು ಎಲ್ಲರಿಗೂ ಸಮಾನವಾಗಿ ಹಂಚಿಕೆಯಾಗಬೇಕು. ಅಭಿವೃದ್ಧಿಯ ಫಲವನ್ನು ಜಾತಿ, ಧರ್ಮ, ಪ್ರದೇಶಗಳ ಭೇದವಿಲ್ಲದೆ ಸರ್ವರಿಗೂ ಸಮಾನವಾಗಿ ಹಂಚಿಕೆಯಾಗಬೇಕೆ ನ್ನುವುದು ಸಂವಿಧಾನದ ಆಶಯವಾಗಿ ಹೊರಹೊಮ್ಮಿರುವ ಸಾಮಾಜಿಕ ನ್ಯಾಯದ ಪರಿಕಲ್ಪನೆ. ಇದೇ ನಿಜವಾದ ವೈಜ್ಞಾನಿಕವಾದ ಅಭಿವೃದ್ಧಿ ಮಾದರಿ ಎಂದಿದ್ದಾರೆ.

ಸಾಮಾಜಿಕ ನ್ಯಾಯದ ಮೂಲಕ ಸಮಸಮಾಜದ ನಿರ್ಮಾಣಕ್ಕೆ ಪ್ರಯತ್ನಿಸಿದ್ದ ಅಣ್ಣ ಬಸವಣ್ಣ, ಗ್ರಾಮ ಸ್ವರಾಜ್ಯದ ಕನಸು ಬಿತ್ತಿದ್ದ ಮಹಾತ್ಮ ಗಾಂಧಿ ಮತ್ತು ರಾಜಕೀಯ ಪ್ರಭುತ್ವದ ಜೊತೆ ಸಾಮಾಜಿಕ ಪ್ರಜಾ ಪ್ರಭುತ್ವ ಸ್ಥಾಪನೆಯಾಗಬೇಕೆಂದು ಪ್ರತಿಪಾದಿಸಿದ್ದ ಬಾಬಾಸಾಹೇಬ್ ಅಂಬೇಡ್ಕರ್ ಮತ್ತಿತರ ಮಾರ್ಗ ದರ್ಶಕರ ಚಿಂತನೆಗಳ ಸಾರದೊಂದಿಗೆ ಈ ಅಭಿವೃದ್ಧಿ ಮಾದರಿಯನ್ನು ರೂಪಿಸಿದ್ದೇನೆ. ಇದನ್ನು ನಾನು ಹೆಮ್ಮೆಯಿಂದ ಕರ್ನಾಟಕ ಮಾದರಿ ಎಂದಿದ್ದಾರೆ.

ನನ್ನ ರಾಜಕೀಯ ಜೀವನ ಕಠಿಣವಾಗಿತ್ತು: ನನ್ನ ನಾಲ್ಕು ದಶಕಗಳ ರಾಜಕೀಯ ಜೀವನ ಎಂದಿಗೂ ಹೂವಿನ ಹಾಸಿಗೆ ಆಗಿರಲಿಲ್ಲ, ಅದು ಕಲ್ಲು – ಮುಳ್ಳುಗಳ ಹಾದಿಯಾಗಿತ್ತು. ನನ್ನನ್ನು ರಾಜಕೀಯವಾಗಿ ಮುಗಿಸಲು ಹಲವಾರು ದೊಡ್ಡ ದೊಡ್ಡ ನಾಯಕರು ಹಲವಾರು ಬಗೆಯ ಕುಟಿಲ ಕಾರಸ್ತಾನಗಳನ್ನು ಮಾಡಿದ್ದಾರೆ. ಅವುಗಳನ್ನೆಲ್ಲವನ್ನೂ ಜನತೆಯ ಆಶೀರ್ವಾದದಿಂದ ಗೆದ್ದು ಬಂದಿದ್ದೇನೆ.

ಕುರಿಕಾಯುವವನು ಸಿಎಂ ಆದ ಎನ್ನುವ ಹೊಟ್ಟೆಕಿಚ್ಚು



ನನ್ನ ಮೇಲೆ ವಿರೋಧಿಗಳು ನಡೆಸುತ್ತಿರುವ ಬಹುತೇಕ ದಾಳಿಗಳು, ಮಾಡುತ್ತಿರುವ ಟೀಕೆ-ಆರೋಪಗಳಿಗೆ ನಾನು ಹುಟ್ಟಿದ ಜಾತಿಯೂ ಒಂದು ಕಾರಣ. ಕುರಿ ಕಾಯುತ್ತಾ ಇರಬೇಕಾದವನು ಮುಖ್ಯಮಂತ್ರಿ ಆಗಿ ಬಿಟ್ಟನಲ್ಲಾ, ಆರ್ಥಿಕ ತಜ್ಞರಿಗೆ ಸರಿಸಮನಾಗಿ ನಿಂತು ಸಾಲು ಸಾಲು ಬಜೆಟ್ ಮಂಡಿಸಿ ಶಹಬ್ಬಾಸ್ ಗಿರಿ ಗಳಿಸುತ್ತಿದ್ದಾನಲ್ಲಾ ಎನ್ನುವ ಅಸಹನೆ, ಅವರೊಳಗೆ ದ್ವೇಷ, ಅಸೂಯೆ ಕುದಿಯುತ್ತಿದೆ. ಇವನೊಬ್ಬನನ್ನು ರಾಜಕೀಯವಾಗಿ ಮುಗಿಸಿಬಿಟ್ಟರೆ ಅದರ ನಂತರ ನಮ್ಮೆಲ್ಲರ ಹಾದಿ ಸುಲಭವಾಗುತ್ತದೆ ಎನ್ನುವ ರಾಜಕೀಯ ದುರುದ್ದೇಶದ ಲೆಕ್ಕಾಚಾರ ಇವರ ಮನಸ್ಸಿನಲ್ಲಿದೆ ಎಂದರು.

ರಣರಂಗ ಬಿಟ್ಟು ಓಡಿಹೋಗುವ ಹೇಡಿಯಾಗಲಾರೆ

ಇದು ನನ್ನ ವಿರುದ್ಧ ನಡೆಯುತ್ತಿರುವ ಷಡ್ಯಂತ್ರಗಳಲ್ಲ, ಇದು ನನ್ನನ್ನು ನಂಬಿರುವ, ಪ್ರೀತಿಸುತ್ತಿರುವ, ನನಗೆ ನಿರಂತರವಾಗಿ ಆಶೀರ್ವಾದ ನೀಡಿ ಬೆಂಬಲಿಸುತ್ತಿರುವ ನಿಮ್ಮ ವಿರುದ್ಧ ನಡೆಯುತ್ತಿರುವ ಷಡ್ಯಂತ್ರ ಎನ್ನುವುದು ನನಗೆ ಚೆನ್ನಾಗಿ ಗೊತ್ತು. ಆದ್ದರಿಂದ ನನ್ನ ಉಸಿರು ಇರುವವರೆಗೆ ಈ ರಾಜಕೀಯ ಷಡ್ಯಂತ್ರ, ದ್ವೇಷ-ಅಸೂಯೆಯ ರಾಜಕಾರಣದ ವಿರುದ್ಧ ಹೋರಾಡುತ್ತೇನೆ. ಇದು ಸತ್ಯ, ನ್ಯಾಯ ಮತ್ತು ಧರ್ಮಕ್ಕಾಗಿ ನಡೆಯುತ್ತಿರುವ ಹೋರಾಟ. ನಿಮ್ಮೆಲ್ಲರ ಬೆಂಬಲದೊಂದಿಗೆ ಈ ಹೋರಾಟವನ್ನು ನನ್ನ ಉಸಿರು ಇರುವವರೆಗೆ ನಡೆಸುತ್ತೇನೆ, ರಣರಂಗವನ್ನು ಬಿಟ್ಟು ಓಡಿ ಹೋಗುವ ಹೇಡಿ ನಾನಾಗಲಾರೆ ಎಂದರು.

ಸಫಾರಿ ಪುನರಾರಂಭ

• **ಮೈಸೂರು:** ಮಾನವ–ಹುಲಿ ಸಂಘರ್ಷದ ಹಿನ್ನೆಲೆಯಲ್ಲಿ ಕಳೆದ ನವೆಂಬರ್ 7ರಂದು ಸ್ಥಗಿತಗೊಳಿಸಲಾಗಿದ್ದ ಸಫಾರಿಯನ್ನು ಫೆ.21ರಿಂದ ಷರತ್ತುಬದ್ಧವಾಗಿ ಪುನಾರಂಭಿಸಲು ನಿರ್ಧರಿಸಿದ್ದು, ಈ ಷರತ್ತುಗಳನ್ನು ಕಟ್ಟುನಿಟ್ಟಾಗಿ ಜಾರಿ ಮಾಡುವಂತೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಅಧಿಕಾರಿಗಳಿಗೆ ಸ್ಪಷ್ಟ ಸೂಚನೆ ನೀಡಿದರು.



ಶುಕ್ರವಾರ ಮೈಸೂರಿನಲ್ಲಿ ಮೈಸೂರು, ಕೊಡಗು, ಚಾಮರಾಜನಗರ ವಿಭಾಗದ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಬಹುತೇಕ ಶನಿವಾರದಿಂದ ಸಫಾರಿ ಆರಂಭಿಸಲು ಅಧಿಕೃತ ಆದೇಶ ಹೊರಡಿಸಲಾಗುವುದು. ಈ ಆದೇಶದಲ್ಲಿರುವ ಷರತ್ತುಗಳ ಉಲ್ಲಂಘನೆ ಆದರೆ, ಸಂಬಂಧಿತ ಅಧಿಕಾರಿಗಳನ್ನೇ ಹೊಣೆ ಮಾಡಲಾಗುವುದು ಎಂದು ಎಚ್ಚರಿಸಿದರು

ನ.7ಕ್ಕೆ ಮೊದಲು ಬಳಕೆಯಾಗುತ್ತಿದ್ದ ಸಫಾರಿ ವಾಹನಗಳಲ್ಲಿ ಶೇ.50ರಷ್ಟು ವಾಹನ ಮತ್ತು ಸಿಬ್ಬಂದಿಯನ್ನು ಮಾತ್ರವೇ ಬಳಕೆ ಮಾಡಬೇಕು. ಹೆಚ್ಚಾಗಿ ಬಸ್‌ಗಳ ಮೂಲಕ ಸಫಾರಿ ನಡೆಸಬೇಕು. ಅತ್ಯಂತ ಕಡಿಮೆ ಸಂಖ್ಯೆಯಲ್ಲಿ ಕ್ಯಾಂಪರ್ ಮತ್ತು ಜೀಪ್ ಬಳಕೆ ಮಾಡಬೇಕು. ಈ ಬಗ್ಗೆ ಸ್ಪಷ್ಟ ಆದೇಶ ಹೊರಡಿಸಲಾಗುವುದು ಎಂದರು.

ವನ್ಯಜೀವಿಗಳು ಕಾಡಿನಿಂದ ಹೊರಬರದಂತೆ ಕ್ರಮಕ್ಕೆ ಸೂಚನೆ: ಬಂಡಿಪುರ ಮತ್ತು ನಾಗರಹೊಳೆ ಅರಣ್ಯ ಪ್ರದೇಶದಲ್ಲಿ ಮಾನವ-ವನ್ಯಜೀವಿ ಸಂಘರ್ಷ ಇರುವ ಪ್ರದೇಶವನ್ನು ಗುರುತಿಸಬೇಕು. ಆ ಪ್ರದೇಶದಲ್ಲಿ ಗಸ್ತು ಹೆಚ್ಚಿಸಬೇಕು. ವನ್ಯಜೀವಿಗಳು ವಸತಿ ಪ್ರದೇಶಕ್ಕೆ ಬಾರದಂತೆ, ಜೀವಹಾನಿ, ಬೆಳೆ ಹಾನಿ ಮಾಡದಂತೆ ಎಚ್ಚರಿಕೆ ವಹಿಸಬೇಕು ಎಂದು ನಿರ್ದೇಶನ ನೀಡಿದರು.

ಬಂಡೀಪುರ ಅರಣ್ಯದ ಗಡಿಯಲ್ಲಿ 100 ಕಿ.ಲೋ. ಮೀಟರ್ ಅತ್ಯಂತ ಸೂಕ್ಷ್ಮ ಪ್ರದೇಶವಾಗಿದ್ದು, ಇಲ್ಲಿ 5 ಕಿ.ಮೀ.ಗೆ ಒಂದರಂತೆ 25 ಶಿಬಿರ ನಿರ್ಮಿಸಿ, ಪ್ರತಿ ಶಿಬಿರದಲ್ಲಿ ಸ್ಥಳೀಯರನ್ನು ಕಾಡಿನ ಮಿತ್ರ ಎಂದು ನೇಮಕ ಮಾಡಿಕೊಂಡು, ವನ್ಯಜೀವಿಗಳ ಚಲನವಲನದ ಬಗ್ಗೆ ನಿಗಾ ಇಡಬೇಕು. ಥರ್ಮಲ್ ಡ್ರೋನ್, ವಾಹನ ಇತ್ಯಾದಿ ಯಾವುದೇ ಸೌಲಭ್ಯ ಬೇಕಿದ್ದರೂ ಲಿಖಿತ ಮೂಲಕ ಪ್ರಸ್ತಾವನೆ ಸಲ್ಲಿಸಿ ಎಂದರು. ವನ್ಯಜೀವಿಗಳ ರಕ್ಷಣೆಯ ಜೊತೆಗೆ ಕಾಡಿನಂಚಿನಲ್ಲಿ ವಾಸಿಸುತ್ತಿರುವ ನಿವಾಸಿಗಳ ಜೀವ ರಕ್ಷಣೆಯೂ ಅರಣ್ಯ ಇಲಾಖೆಯ ಪ್ರಥಮ ಆದ್ಯತೆ ಆಗಿದೆ ಎಂದರು.

ತುಪ್ಪದ ಪ್ಯಾಕ್‌ಗೆ ಕ್ಯುಆರ್ ಕೋಡ್

ಪುಟ ೧➡ ಇದರಿಂದಾಗಿ ಗ್ರಾಹಕರು ಉತ್ಪನ್ನದ ಸತ್ಯಾಸತ್ಯತೆಯನ್ನು ಮತ್ತು ಆಹಾರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಬಹುದೆಂದು ಕೆಎಂಎಫ್ ಗುಣಮಟ್ಟ ವಿಭಾಗದ ಮುಖ್ಯಸ್ಥ ವಿ.ಸಿ.ವೆಂಕಟೇಶ್ ತಿಳಿಸಿದ್ದಾರೆ.

ನಕಲಿ ವ್ಯಾಪಾರಿಗಳ ವಿರುದ್ಧ ಸಮರ: ಈ ಕ್ರಮವನ್ನು ಮೊದಲಿಗೆ ನಂದಿನಿ ತುಪ್ಪದ ಪ್ಯಾಕೆಟ್ ಮತ್ತು ಬಾಟಲಿಗಳ ಮೇಲೆ ಪರಿಚಯಿಸಲಾಗುವುದು. ಮುಂದಿನ ದಿನಗಳಲ್ಲಿ ಉಳಿದ ಉತ್ಪನ್ನದ ಮೇಲೆ ಕ್ಯುಆರ್ ಕೋಡ್ ಜಾರಿ ಮಾಡುವ ಚಿಂತನೆ ನಡೆಸಲಾಗುವುದು. ಕ್ಯುಆರ್ ಕೋಡ್ ಕ್ರಮವು ನಕಲಿ ವ್ಯಾಪಾರಿಗಳ ವಿರುದ್ಧ ಸಮರ ಹಾಗೂ ಗ್ರಾಹಕರ ವಿಶ್ವಾಸವನ್ನು ಮತ್ತಷ್ಟುಗಳಿಸುವ ಪ್ರಯತ್ನವಾಗಿದೆ ಎಂದು ಕೆಎಂಎಫ್ ತಿಳಿಸಿದೆ.

ಕ್ಯುಆರ್ ಕೋಡ್ ವ್ಯವಸ್ಥೆಯು ಅಂತಿಮ ಹಂತದ ಸಿದ್ಧತೆಯಲ್ಲಿದ್ದು, ಶೀಘ್ರದಲ್ಲೇ ಅಂದರೆ ಮಾರ್ಚ್ ತಿಂಗಳಲ್ಲಿ ಎಲ್ಲಾ ಒಕ್ಕೂಟಗಳಲ್ಲೂ ಜಾರಿ ಮಾಡಲಾಗುವುದು. ಪೂರ್ವಸಿದ್ಧತಾ ಕಾರ್ಯ ಮುಗಿದಿದ್ದು, ಎಲ್ಲಾ ಒಕ್ಕೂಟಗಳಲ್ಲಿ ಜಾರಿ ಮಾಡಲು ಬೇಕಾದ ತಾಂತ್ರಿಕ ವ್ಯವಸ್ಥೆಯನ್ನು ಮಾಡಲಾಗುತ್ತಿದೆ. ಬಳಿಕ ಪೂರ್ಣ ಪ್ರಮಾಣದಲ್ಲಿ ರಾಜ್ಯಾದ್ಯಂತ ಕ್ಯುಆರ್ ಕೋಡ್ ವ್ಯವಸ್ಥೆ ಜಾರಿ ಮಾಡಲಾಗುವುದು ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ತಿಳಿಸಿದ್ದಾರೆ.

ಹೇಗೆ ಕೆಲಸ ಮಾಡುತ್ತದೆ?

ಪುಟ ೧➡ ಒಟಿಪಿ ನಮೂದಿಸಿದಾಗ ಉತ್ಪನ್ನದ ಸಂಪೂರ್ಣ ಮಾಹಿತಿಯು ತಕ್ಷಣವೇ ಗೋಚರಿಸುತ್ತದೆ. ಇದು ಗ್ರಾಹಕರು ಖರೀದಿಸಿದ ತುಪ್ಪ ಅಸಲಿಯೋ ಅಥವಾ ನಕಲಿಯೋ ಎಂಬುದನ್ನು ಖಚಿತಪಡಿಸಲು ಸಹಾಯ ಮಾಡುತ್ತದೆ.

> ಪಾರದರ್ಶಕ ವ್ಯವಸ್ಥೆ ಗ್ರಾಹಕರು ಖರೀದಿಸಿದ ತುಪ್ಪ ಅಸಲಿಯೋ, ನಕಲಿಯೋ ಎಂಬುದನ್ನು ಖಚಿತಪಡಿಸಲು ಸಹಾಯ ಮಾಡುತ್ತದೆ. ಪ್ರಸ್ತುತ, ಕಲಬೆರಕೆ, ನಕಲಿ ಮಾಡುವ ಹೆಚ್ಚಿನ ಅಪಾಯ ಪರಿಗಣಿಸಿ, ಕ್ಯುಆರ್ ಕೋಡ್ ವ್ಯವಸ್ಥೆ ಜಾರಿ.
> ■ **ಬಿ.ಶಿವಸ್ವಾಮಿ,** ಕೆಎಂಎಫ್ ಎಂಡಿ

> ಕ್ಯುಆರ್ ಕೋಡ್ ಜಾರಿ ಮಾಡುವ ಸಂಬಂಧ ಪ್ರಯೋಗಾತ್ಮಕ ಹಂತ ಯಶಸ್ವಿಯಾಗಿದ್ದು, ಮಾರ್ಚ್ ತಿಂಗಳಿಂದ ಎಲ್ಲಾ ಒಕ್ಕೂಟಗಳಲ್ಲೂ ಜಾರಿ ಮಾಡಲಾಗುವುದು.
> ■ **ವಿ.ಸಿ.ವೆಂಕಟೇಶ್,** ಗುಣಮಟ್ಟ ವಿಭಾಗದ ಮುಖ್ಯಸ್ಥ

ಮಹಿಳಾ ಕೇಂದ್ರಿತ ಯೋಜನೆಗೆ ಒತ್ತು

ಪುಟ ೧➡ **ಮಹಿಳಾ ಕೇಂದ್ರಿತ ಯೋಜನೆಗಳಿಗೆ ಒತ್ತು:** ರಾಜ್ಯ ಸರ್ಕಾರ ಮಹಿಳಾ ಕೇಂದ್ರೀಕೃತ ಯೋಜನೆಗಳ ಮೂಲಕ ಅವರ ಸ್ವಾಭಿಮಾನದ ಬದುಕಿಗೆ ನೆರವಾಗುತ್ತಿದೆ. ಹೆಣ್ಣು ಮಕ್ಕಳು ಯಾವುದೇ ಸವಲತ್ತಾಗಲಿ, ಹಣವನ್ನಾಗಲಿ ನೀಡಿದರೆ ಅದನ್ನು ಸ್ವಂತಕ್ಕೆ ಬಳಸುವುದಿಲ್ಲ. ಬದಲಾಗಿ ಅದನ್ನು ತಮ್ಮ ಕುಟುಂಬದ ಏಳಿಗೆಗೆ ಪೂರಕವಾಗಿ ವಿನಿಯೋಗಿಸುತ್ತಾರೆ. ಹಾಗಾಗಿಯೇ ಸರ್ಕಾರ ಮಹಿಳಾ ಕೇಂದ್ರಿತ ಯೋಜನೆಗಳಿಗೆ ಒತ್ತು ನೀಡಿದೆ ಎಂದರು.

ಅಕ್ಕ ಫುಡ್ ಮೇಳ ಬೆಂಗಳೂರಿನಲ್ಲಿ ನಡೆಸಲಾಗುತ್ತಿತ್ತು. ಈ ವರ್ಷ ಹೊರಗಡೆ ಮಾಡಬೇಕೆಂಬ ಇರಾದೆಯೊಂದಿಗೆ ಮಂಗಳೂರಿನಲ್ಲಿ ಆಯೋಜಿಸಲಾಗುತ್ತಿದೆ. ವಿವಿಧ ರಾಜ್ಯ ಹಾಗೂ ಜಿಲ್ಲೆಗಳ ಸ್ವಸಹಾಯ ಗುಂಪುಗಳ ವಿವಿಧ ಉತ್ಪನ್ನಗಳ 100ಕ್ಕೂ ಅಧಿಕ ಮಳಿಗೆಗಳು, ಅಕ್ಕ ಫುಡ್ ಕೋರ್ಟ್ ಕೂಡಾ ಇದೆ ಎಂದು ಸಚಿವರು ಹೇಳಿದರು.

ಮೇಳಕ್ಕೆ ಚಾಲನೆ ನೀಡಿ ಮಾತನಾಡಿದ ವಿಧಾನಸಭೆ ಅಧ್ಯಕ್ಷ ಯು.ಟಿ.ಖಾದರ್, ಗ್ರಾಮೀಣ ಮಹಿಳೆಯರಿಗೆ ಶಕ್ತಿ ತುಂಬುವ ಈ ಮೇಳ ವ್ಯಾಪಾರದ ವೇದಿಕೆ ಮಾತ್ರವಲ್ಲ, ಸ್ವಸಹಾಯ ಸಂಘಗಳ ಶಕ್ತಿ, ಸ್ವಾವಲಂಬನೆಯ ಶಕ್ತಿ ತೋರಿಸುವ ಕಾರ್ಯಕ್ರಮ ಎಂದರು.

ಶಾಸಕ ವೇದವ್ಯಾಸ ಕಾಮತ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ದ.ಕ. ಸಂಸದ ಕ್ಯಾ. ಬ್ರಿಜೇಶ್ ಚೌಟ, ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಮತಾ ಗಟ್ಟಿ, ಮುಡಾ ಅಧ್ಯಕ್ಷ ಸದಾಶಿವ ಉಳ್ಳಾಲ್, ಕೊಂಕಣಿ ಅಕಾಡೆಮಿ ಅಧ್ಯಕ್ಷ ಸ್ಟ್ಯಾನಿ ಅಲ್ವಾರಿಸ್, ಕೌಶಲ್ಯಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಮನೋಜ್ ಕುಮಾರ್ ಮೀನ, ಎನ್‌ಆರ್‌ಎಲ್‌ಎಂ ಮಿಶನ್ ನಿರ್ದೇಶಕಿ ಜ್ಯೋತ್ಸ್ನಾ, ಜಿಲ್ಲಾಧಿಕಾರಿ ದರ್ಶನ್ ಎಚ್.ವಿ., ಜಿ.ಪಂ. ಸಿಇಒ ವಿನಾಯಕ ನರ್ವಾಡೆ ಮೊದಲಾದವರು ಉಪಸ್ಥಿತರಿದ್ದರು.

ಏನೆಲ್ಲಾ ಇದೆ?

ಪುಟ ೧➡ ಸುಮಾರು 100ಕ್ಕೂ ಅಧಿಕ ಮಳಿಗೆಗಳಲ್ಲಿ ವಿವಿಧ ರೀತಿಯ ವಸ್ತುಗಳು ಪ್ರದರ್ಶನ ಮತ್ತು ಮಾರಾಟಕ್ಕಿವೆ. ಆಂಧ್ರಪ್ರದೇಶದ ಕಲಂಕಾರಿ ಸೀರೆ, ತೆಲಂಗಾಣದ ಕೂಚಂಪಳ್ಳಿ ಸೀರೆಗಳು, ಅಸ್ಸಾಂನ ಕಸೂತಿ ಸೀರೆ, ತ್ರಿಪುರಾ, ಪಶ್ಚಿಮ ಬಂಗಾಳದ ಹ್ಯಾಂಡ್‌ಲೂಮ್ಸ್, ಉತ್ತರ ಪ್ರದೇಶದ ಕೈಮಗ್ಗ ವಸ್ತುಗಳು ಹಾಗೂ ಇತರ ಗೃಹೋಪಯೋಗಿ ಮತ್ತು ಆಹಾರ ಉತ್ಪನ್ನಗಳ ಜತೆಗೆ ಕರ್ನಾಟಕದ ಚನ್ನಪಟ್ಟಣದ ಮರದ ಗೊಂಬೆಗಳು, ಕೊಪ್ಪಳದ ಕಿನ್ನಾಳ ಆಟದ ಸಾಮಗ್ರಿಗಳು, ಇಳಕಲ್ ಸೀರೆ, ನಾರಿನ ಉತ್ಪನ್ನದ ಬ್ಯಾಗ್‌ಗಳು ಪ್ರದರ್ಶನದಲ್ಲಿವೆ.

ಹಿಂದುಗಳ ಮೇಲೆ ನಿಲ್ಲದ ದೌರ್ಜನ್ಯ

ಪುಟ ೧➡ ಗೋಹತ್ಯೆ ನಿಷೇಧವಾಗುವಲ್ಲಿ ಸರ್ಕಾರದ ಜವಾಬ್ದಾರಿಯೂ ಇದೆ, ಸಮಾಜದ ಜವಾಬ್ದಾರಿಯೂ ಇದೆ. ಪ್ರತಿ ಜಿಲ್ಲೆಗೊಂದು ಗೋಶಾಲೆ ತೆರೆಯಬೇಕು. ಅನ್ಯ ಉದ್ದೇಶಕ್ಕೆ ಬಳಕೆಯಾಗುತ್ತಿರುವ ಗೋಮಾಳಗಳ ಒತ್ತುವರಿ ತೆರವುಗೊಳಿಸಬೇಕು. ಗೋಸೇವೆ ಮಾಡುವವರಿಗೆ ಗೋಮಾಳಗಳ ನಿರ್ವಹಣೆ ಜವಾಬ್ದಾರಿ ವಹಿಸಬೇಕು ಎಂದು ಅವರು ಅಭಿಪ್ರಾಯಪಟ್ಟರು.

ಮಧ್ಯಪ್ರದೇಶ: ದುರ್ಗಾ ದೇಗುಲ ಧ್ವಂಸಕ್ಕೆ ಯತ್ನ, ಹಿಂಸಾಚಾರ

ಪುಟ ೧➡ ಜಿಲ್ಲಾ ಪೊಲೀಸ್ ಮುಖ್ಯಸ್ಥರು, ಸರ್ಕಾರಿ ಅಧಿಕಾರಿಗಳು ಸೇರಿದಂತೆ ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ಸ್ಥಳೀಯ ಪೊಲೀಸರನ್ನೂ ತ್ವರಿತವಾಗಿ ನಿಯೋಜಿಸಿ ಶಾಂತಿ ಪುನಃ ಸ್ಥಾಪಿಸುವಲ್ಲಿ ಯಶಸ್ವಿಯಾದರು. ಪರಿಸ್ಥಿತಿಯನ್ನು ಹತೋಟಿಗೆ ತರಲು ಅಶ್ರುವಾಯು ಶೆಲ್‌ಗಳನ್ನು ಪ್ರಯೋಗಿಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಪೂಜೆ ವೇಳೆ ಧ್ವನಿವರ್ಧಕದಲ್ಲಿ ಆಜಾನ್: ಮಾಧ್ಯಮಗಳ ಪ್ರಕಾರ, ದುರ್ಗಾ ದೇವಸ್ಥಾನದಲ್ಲಿ ಪೂಜೆ ನಡೆಯುತ್ತಿದ್ದ ವೇಳೆ ನೇರ ಮುಂಭಾಗದಲ್ಲಿರುವ ಮಸೀದಿಯಲ್ಲಿ ಧ್ವನಿವರ್ಧಕದಲ್ಲಿ ಆಜಾನ್ ಕೂಗಲಾಗಿದೆ. ಆರತಿ ವೇಳೆ ಧ್ವನಿವರ್ಧಕದಲ್ಲಿ ಆಜಾನ್ ಕೂಗಿದ್ದರಿಂದ ಹಿಂದುಗಳು ವಿರೋಧ ವ್ಯಕ್ತಪಡಿಸಿದ್ದರು. ಆಜಾದ್ ಚೌಕ್ ಪ್ರದೇಶ ಹಿಂದಿನಿಂದಲೂ ಸೂಕ್ಷ್ಮ ಪ್ರದೇಶವೆಂದು ಪರಿಗಣಿಸಲಾಗಿದೆ. ರಂಜಾನ್ ಆರಂಭವು ಈ ಪ್ರದೇಶದಲ್ಲಿ ಕೋಮು ಸಂವೇದನೆಗಳನ್ನು ಮತ್ತಷ್ಟು ಹೆಚ್ಚಿಸಿದೆ.

ರಾಯಣ್ಣ ಪ್ರತಿಮೆಗೆ ಅಪಮಾನ

ಪುಟ ೧➡ ಘಟನೆಗೆ ಸಂಬಂಧಿಸಿದಂತೆ ಸಮಗ್ರ ತನಿಖೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕ್ರಮ ಕೈಗೊಳ್ಳಲು ಸಚಿವರ ಸೂಚನೆ: ಮಚ್ಚೆ ಗ್ರಾಮದಲ್ಲಿರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರತಿಮೆಗೆ ಕಿಡಿಗೇಡಿಗಳು ಯಾವುದೋ ಪದಾರ್ಥ ಬಳಿದಿರುವುದುರಿಂದ ಸಾಕಷ್ಟು ವಿವಾದಕ್ಕೆ ತಿರುಗುವ ಸಾಧ್ಯತೆ ಇದ್ದು, ಈ ಪ್ರಕರಣಕ್ಕೆ ಸಂಬಂಧಿಸಿದ ಆರೋಪಿಗಳನ್ನು ಕೂಡಲೇ ಬಂಧಿಸಿ ಕ್ರಮ ಕೈಗೊಳ್ಳುವಂತೆ ಸಚಿವ ಸತೀಶ್ ಜಾರಕಿಹೊಳಿ ಪೊಲೀಸರಿಗೆ ಸೂಚಿಸಿದ್ದಾರೆ. ಮಾಧ್ಯಮಗಳೊಂದಿಗೆ ಮಾತನಾಡಿ, ಈ ಘಟನೆಗೆ ಸಂಬಂಧಿಸಿದಂತೆ ಸಿಸಿ ಟಿವಿ ದೃಶ್ಯಾವಳಿಗಳನ್ನು ಪೊಲೀಸರು ಪರಿಶೀಲನೆ ನಡೆಸಿದ್ದಾರೆ. ಘಟನೆ ಸಂಬಂಧ ತನಿಖೆ ಮುಂದುವರಿಸಲಾಗಿದೆ. ಗ್ರಾಮಸ್ಥರು ಯಾವುದೇ ರೀತಿ ಆತಂಕಕ್ಕೆ ಒಳಗಾಗುವುದು ಬೇಡ, ಗ್ರಾಮದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಿಕೊಳ್ಳಬೇಕು ಎಂದು ತಿಳಿಸಿದ್ದಾರೆ.

ಪ್ರಯಾಣ ದರ ಹೆಚ್ಚಿಸುವ ಪ್ರಸ್ತಾಪ ಇಲ್ಲ: ಸಚಿವ

• **ಬೆಂಗಳೂರು:** ಸಾರಿಗೆ ನಿಗಮಗಳ ಪ್ರಯಾಣ ದರವನ್ನು ಪ್ರಸ್ತುತ ಹೆಚ್ಚಿಸುವ ಯಾವುದೇ ಯೋಜನೆ ಇಲ್ಲ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದ್ದಾರೆ. ಈ ಬಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಸ್ತುತ ಪ್ರಯಾಣ ದರವನ್ನು ಹೆಚ್ಚಿಸುವ ಪ್ರಶ್ನೆಯೇ ಇಲ್ಲ, ಭವಿಷ್ಯದ ಪರಿಸ್ಥಿತಿಯನ್ನು ನೋಡಿ ನಿರ್ಧಾರ ತೆಗೆದುಕೊಳ್ಳಲಾಗುವುದು ಕಳೆದ ವರ್ಷ ಜನವರಿಯಲ್ಲಿ ಪ್ರಯಾಣ ದರವನ್ನು ಶೇ.15ರಷ್ಟು ಹೆಚ್ಚಿಸಲಾಗಿತ್ತು. ಪ್ರತಿ ವರ್ಷ ಪ್ರಯಾಣ ದರವನ್ನು ಪರಿಷ್ಕರಿಸುವ ಬಗ್ಗೆ ಚರ್ಚೆಗಳು ನಡೆಯುತ್ತಿವೆ ಎಂದು ಮಾಹಿತಿ ನೀಡಿದ್ದಾರೆ. ಜಲಮಂಡಳಿ, ವಿದ್ಯುತ್ ದರ ಮತ್ತು ಮೆಟ್ರೊ ಮಾದರಿಯಲ್ಲಿ ಬಸ್ ದರವನ್ನು ನಿಗದಿಪಡಿಸುವ ಬಗ್ಗೆ ಸರ್ಕಾರ ಪರಿಗಣಿಸುತ್ತಿದೆ ಎಂದರು.

ನಾಚಿಕೆಗೇಡಿನ ಕೃತ್ಯ

ಪುಟ ೧➡ **ಜೆನ್ ಝಿಗಳು ಕ್ಷಮಿಸಲ್ಲ:** ಜೆನ್–ಝಿಗಳು ಕಾಂಗ್ರೆಸ್ ಪಕ್ಷವನ್ನು ಎಂದಿಗೂ ಕ್ಷಮಿಸಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿರುವ ಸಂಬಿತ್ ಪಾತ್ರಾ, ನೀವು ನೆಹರೂ, ಎಡ್ವಿನಾ ಮತ್ತು ಹಾವು ಈ ಬಗ್ಗೆ ಗೂಗಲ್‌ನಲ್ಲಿ ಹುಡುಕಿಯಂತೆ. ಭಾರತವೊಂದು ಹಾವಾಡಿಗರ ರಾಷ್ಟ್ರವೆಂದು ಪಂಡಿತ್ ನೆಹರೂ, ಎಡ್ವಿನಾ ಮೌಂಟ್‌ಬ್ಯಾಟನ್ ಮತ್ತು ಬ್ರಿಟಿಷರ ಸಮಕ್ಷಮ ತಾಯ್ನಾಡನ್ನೇ ಅಣಕಿಸಿ ನಗುತ್ತಿರುವ ದೃಶ್ಯವನ್ನು ಕಾಣಬಹುದು ಎಂದಿದ್ದಾರೆ. ಅಂದು ನೆಹರೂ ಮಾಡಿರುವ ದೇಶ ವಿರೋಧಿ ಅಪಹಾಸ್ಯವನ್ನೇ ಇಂದು ರಾಹುಲ್ ಪುನರಾ ವರ್ತಿಸಿದ್ದಾರೆ ಎಂದು ಸಂಬಿತ್ ಪಾತ್ರಾ ಆರೋಪಿಸಿದ್ದಾರೆ.

ಭಾರತದ ಪ್ರತಿಷ್ಠೆ ವಿರುದ್ಧ ಪಿತೂರಿ

ಪುಟ ೧➡ ತಂತ್ರಜ್ಞಾನ ರಂಗದಲ್ಲಿನ ತನ್ನ ಆವಿಷ್ಕಾರಗಳು, ನಾಯಕತ್ವವನ್ನು ಪ್ರದರ್ಶಿಸುವ ಪ್ರತಿಷ್ಠಿತ ಜಾಗತಿಕ ಎಐ ಸಮ್ಮಿಟ್‌ನ್ನು ಭಾರತ ಆಯೋಜಿಸಿರುವಾಗ ,ಕಾಂಗ್ರೆಸ್ ದೇಶದ ಘನತೆ ಮೀರಿ ಅಡೆತಡೆಯೊಡ್ಡೋ ಹೀನ ಹಾದಿ ಹಿಡಿದದ್ದು ತೀರಾ ಅಕ್ಷಮ್ಯವೆಂದು ಕಾಂಗ್ರೆಸಿಗರನ್ನು ತರಾಟೆಗೆತ್ತಿಕೊಂಡಿದ್ದಾರೆ. ಜಾಗತಿಕ ವೇದಿಕೆಯಲ್ಲಿ ಭಾರತವನ್ನು ಅಪಮಾನಿಸಲು ವ್ಯವಸ್ಥಿತವಾಗಿ ಎಸಗಿರುವ ಕೃತ್ಯವಿದು. ರಾಜಕೀಯವಾಗಿ ವಿರೋಧ ವ್ಯಕ್ತಪಡಿಸುವುದು ಪ್ರಜಾತಾಂತ್ರಿಕ ಹಕ್ಕು. ಆದರೆ ಭಾರತದ ಜಾಗತಿಕ ಪ್ರತಿಷ್ಠೆ ವಿರುದ್ಧ ಷಡ್ಯಂತ್ರ ಬೆಸೆಯೋದು ತೀರಾ ಹೇಯ ಎಂದು ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ಟೀಕಿಸಿದ್ದಾರೆ. ನೆಟ್ಟಿಗರು ಕೂಡಾ ಕಾಂಗ್ರೆಸಿಗರ ಈ ಹೀನ ಕೃತ್ಯದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದು, ಅನೇಕ ಕಾಂಗ್ರೆಸ್ ಬೆಂಬಲಿಗರು, ಕಾಂಗ್ರೆಸ್ ಈ ರೀತಿ ವರ್ತಿಸಿದ್ದೇ ಆದಲ್ಲಿ ಜನರಿಂದ ಇನ್ನಷ್ಟು ತಿರಸ್ಕಾರಕ್ಕೀಡಾಗಲಿದೆ ಎಂದು ಪ್ರತಿಕ್ರಿಯಿಸಿದ್ದಾರೆ.

250 ಬಿಲಿಯನ್ ಡಾಲರ್ ಹೂಡಿಕೆ ಭರವಸೆ: ವೈಷ್ಣವ್

ಪುಟ ೧➡ ಶೃಂಗಸಭೆಯಲ್ಲಿ 5 ಲಕ್ಷಕ್ಕೂ ಹೆಚ್ಚು ಮಂದಿ ಭೇಟಿ ನೀಡಿದ್ದು, ದೇಶೀಯ ಹಾಗೂ ಜಾಗತಿಕ ಮಟ್ಟದಲ್ಲಿ ಭಾರತದ ಎಐ ಮುಂದಾಳತ್ವಕ್ಕೆ ಬಲವಾದ ಸ್ಪಂದನೆ ವ್ಯಕ್ತವಾಗಿದೆ. .



ಹೂಡಿಕೆ ಭರವಸೆಗಳ ಕುರಿತು ಮಾತನಾಡಿದ ವೈಷ್ಣವ್, ಮೂಲ ಸೌಕರ್ಯ ಕ್ಷೇತ್ರಕ್ಕೆ 250 ಬಿಲಿಯನ್ ಡಾಲರ್‌ಗಿಂತ ಹೆಚ್ಚು ಹಾಗೂ ವೆಂಚರ್ ಕ್ಯಾಪಿಟಲ್ ಮತ್ತು ಆಳ ತಂತ್ರಜ್ಞಾನ ಕ್ಷೇತ್ರಕ್ಕೆ ಸುಮಾರು 20 ಬಿಲಿಯನ್ ಡಾಲರ್ ಹೂಡಿಕೆ ಭರವಸೆ ದೊರೆತಿದೆ ಎಂದು ತಿಳಿಸಿದರು. ಈ ಅಂಕೆಗಳು ಮಹತ್ವದ್ದಾಗಿದ್ದರೂ, ಹೊಸ ಎಐ ಯುಗದಲ್ಲಿ ಭಾರತದ ಪಾತ್ರದ ಮೇಲೆ ವಿಶ್ವದ ವಿಶ್ವಾಸವೇ ಇನ್ನಷ್ಟು ಮಹತ್ವದ್ದು ಎಂದರು.

ದಿಲ್ಲಿ ಘೋಷಣೆಗೆ ವ್ಯಾಪಕ ಒಮ್ಮತ ವ್ಯಕ್ತವಾಗಿದ್ದು, ಶನಿವಾರ ಶೃಂಗಸಭೆ ಸಮಾರೋಪಗೊಳ್ಳುವ ಹೊತ್ತಿಗೆ ಸಹಿ ಮಾಡುವ ದೇಶಗಳ ಸಂಖ್ಯೆ 80 ದಾಟುವ ನಿರೀಕ್ಷೆಯಿದೆ ಎಂದು ವೈಷ್ಣವ್ ಹೇಳಿದರು. ಘೋಷಣೆಯ ಸಂಪೂರ್ಣ ವಿವರಗಳನ್ನು ಸಮಾರೋಪದ ಬಳಿಕ ಪಾರದರ್ಶಕವಾಗಿ ಹಂಚಿಕೊಳ್ಳಲಾಗುವುದು ಎಂದು ಅವರು ಸ್ಪಷ್ಟಪಡಿಸಿದರು. ಮೂಲಗಳ ಪ್ರಕಾರ, ಅಮೆರಿಕವೂ ಈ ಘೋಷಣೆಗೆ ಬೆಂಬಲ ಸೂಚಿಸಿದೆ.

ಐದು ಲಕ್ಷ ಮಂದಿ ಭೇಟಿ: ಐದು ಲಕ್ಷಕ್ಕೂ ಹೆಚ್ಚು ಮಂದಿ ಪ್ರದರ್ಶನದಲ್ಲಿ ಭಾಗವಹಿಸಿ ಜಾಗತಿಕ ತಜ್ಞರೊಂದಿಗೆ ಸಂವಾದ ನಡೆಸಿದರು. ವಿಶ್ವದ ಪ್ರಮುಖ ಎಐ ಸಂಸ್ಥೆಗಳು ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಂಡವು. ಅನೇಕ ನವೋದ್ಯಮಗಳಿಗೆ ತಮ್ಮ ಸಾಧನೆ ಪ್ರದರ್ಶಿಸುವ ಅವಕಾಶ ದೊರೆಯಿತು. ಚರ್ಚೆಗಳ ಗುಣಮಟ್ಟ ಅತ್ಯುತ್ತಮವಾಗಿತ್ತು ಎಂದು ಸಚಿವರು ಹೇಳಿದರು.

ಹಿಂದಿನ ಶೃಂಗಸಭೆಯಲ್ಲಿ ಅಂತಿಮ ಘೋಷಣೆಗೆ 60 ದೇಶಗಳು ಸಹಿ ಮಾಡಿದ್ದರೆ, ಈ ಬಾರಿ 70 ದೇಶಗಳ ಮೈಲಿಗಲ್ಲು ಈಗಾಗಲೇ ದಾಟಲಾಗಿದೆ ಎಂದು ಸಚಿವರು ಹೇಳಿದರು. ಮುಖ್ಯ ಎಐ ರಾಷ್ಟ್ರಗಳು ಈಗಾಗಲೇ ಬೆಂಬಲ ಸೂಚಿಸಿವೆ. ಯಾರೂ ಸಹಿ ಮಾಡಿಲ್ಲವೆಂದು ಊಹಾಪೋಹಗಳಿಗೆ ಅವಕಾಶವಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಎಐ ಶೃಂಗಸಭೆ ಅತ್ಯುತ್ತಮ: ತರೂರ್

ಪುಟ ೧➡ ಆದರೆ ಇದೀಗ ಮುಂದುವರಿದ ಸಮ್ಮೇಳನ ಅತ್ಯಂತ ಒಳ್ಳೆಯ ರೀತಿಯಲ್ಲಿ ನಡೆದಿದೆ ಎಂದು ಅವರು ಶ್ಲಾಘಿಸಿದರು. ಈ ಮೂಲಕ ಭಾರತ ಸರ್ಕಾರ ಆಯೋಜಿಸಿದ 2ನೇ ಜಾಗತಿಕ ಎಐ ಶೃಂಗಸಭೆಯನ್ನು ಪ್ರಧಾನಿ ಮೋದಿಯವರ ಅವಹೇಳನಕ್ಕೆ ಬಳಸಿಕೊಂಡ ಕಾಂಗ್ರೆಸ್ ನಿಲುವಿಗೆ ತರೂರು ಮತ್ತೆ ತಮ್ಮ ಅಸಮ್ಮತಿ ವ್ಯಕ್ತಪಡಿಸಿದ್ದಾರೆ. ಈ ಶೃಂಗಸಭೆ ಅತ್ಯಂತ ಪ್ರೇರಣಾದಾಯಿಯಾಗಿ ನಡೆದಿದೆ. ವಿವಿಧ ದೇಶಗಳ ಅಧ್ಯಕ್ಷರುಗಳು, ಪ್ರಧಾನಿಗಳು, ವಿಶ್ವ ನಾಯಕರು, ಪ್ರಖ್ಯಾತ ಸಿಇಒಗಳು ಸೇರಿದಂತೆ ಜಾಗತಿಕ ಪ್ರಮುಖರು ಪಾಲ್ಗೊಂಡಿರುವ ಈ ಶೃಂಗಸಭೆ ಕೃತಕ ಬುದ್ಧಿಮತ್ತೆ ಅಭಿವೃದ್ಧಿಯಲ್ಲಿ ಹೊಸ ಸಮಗ್ರ ವಿಶ್ವವೊಂದನ್ನು ನಿರ್ಮಿಸುವ ಬಲವಾದ ಸಂದೇಶ ನೀಡಿರುವುದು ಸ್ವಾಗತಾರ್ಹ ಎಂದು ಶಶಿ ತರೂರ್ ಪ್ರತಿಕ್ರಿಯಿಸಿದ್ದಾರೆ. ಶೃಂಗಸಭೆಗೆ ಹೋಗಲು ತನಗೆ ಅವಕಾಶ ಸಿಗದಿದ್ದರೂ, ಅಲ್ಲಿ ನಾಳೆ ನಾನು ಮಾತನಾಡಲಿದ್ದೇನೆ. ಇಂತಹ ದೊಡ್ಡ ಕಾರ್ಯಕ್ರಮಗಳಲ್ಲಿ ಸಣ್ಣಪುಟ್ಟ ಲೋಪಗಳು ಸಹಜ ಎಂದು ಹೇಳಿದ್ದಾರೆ. ಯುದ್ಧಕ್ಕೆ ಮುಂದಾಗುತ್ತಿಲ್ಲ ಎಂದರೆ ದುರ್ಬಲರು ಎಂದಲ್ಲ: ಇದೇ ವೇಳೆ ಭಾರತದ ರಕ್ಷಣಾ ತಂತ್ರಗಾರಿಕೆ ಕುರಿತು ಮಾತನಾಡಿದ ಶಶಿ ತರೂರ್, ಯುದ್ಧಕ್ಕೆ ಮುಂದಾಗುತ್ತಿಲ್ಲ ಎಂದರೆ ದುರ್ಬಲರು ಎಂದಲ್ಲ. ಭಾರತಕ್ಕೆ ರಕ್ಷಣೆ ಮುಖ್ಯವಾದುದು. ನಾವು ಯುದ್ಧಕ್ಕೆ ಹೋಗಲು ಬಯಸುವುದರಿಂದಲ್ಲ, ಆದರೆ ಇತರರು ನಾವು ತುಂಬಾ ದುರ್ಬಲರು ಎಂದು ಭಾವಿಸಬಾರದು ಎಂಬ ಕಾರಣದಿಂದಾಗಿ ಅವರು ಯುದ್ಧಕ್ಕೆ ಹೋಗಲು ಪ್ರಚೋದಿಸಲ್ಪಡಬಹುದು. ಇದು ಅಕ್ಷರಶಃ ರಕ್ಷಣಾತ್ಮಕ ನಡೆಯಾಗಿದೆ. ನಾವು ಅದಕ್ಕಾಗಿ ಕೆಲಸ ಮಾಡುತ್ತಿದ್ದೇವೆ ಮತ್ತು ನಾನು ಈ ವಿಚಾರದಲ್ಲಿ ಸರ್ಕಾರವನ್ನು ಬೆಂಬಲಿಸುತ್ತೇನೆ ಎಂದು ಶಶಿತರೂರ್ ಹೇಳಿದರು.



ಕಿರುಸುದ್ದಿ

ಕಾಂಡಕೋಶ ಕಸಿ ನೋಂದಣಿಗೆ ಅನುಮತಿ

ಬೆಂಗಳೂರು: ನಗರದ ನ್ಯೂ ಬಿಇಎಲ್ ರಸ್ತೆಯಲ್ಲಿರುವ ಎಂ.ಎಸ್. ರಾಮಯ್ಯ ಮೆಮೋರಿಯಲ್ ಆಸ್ಪತ್ರೆಗೆ ದಿ ಟ್ರಾನ್ಸ್‌ಪ್ಲಾಂಟೇಶನ್ ಆಫ್ ಹ್ಯೂಮನ್ ಆರ್ಗನ್ಸ್ ಆ್ಯಂಡ್ ಟಿಶ್ಯೂಸ್ ಆಕ್ಟ್‌ನಲ್ಲಿ ರಚಿಸಲ್ಪಟ್ಟಿರುವ ಮಾನವ ಅಂಗಾಂಗಳು ಮತ್ತು ಅಂಗಾಂಶಗಳ ಕಸಿ ನಿಯಮದ ಅನ್ವಯ ಐದು ವರ್ಷದ ಅವಧಿಗೆ ಹೆಮಟೊ ಪಯಟಿಕ್ ಕಾಂಡಕೋಶ ಕಸಿ ನೋಂದಣಿಗೆ ಅನುಮತಿ ನೀಡಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸರ್ಕಾರದ ಅಧೀನ ಕಾರ್ಯದರ್ಶಿಗಳು ಆದೇಶಿಸಿದ್ದಾರೆ.

ಎಲ್‌ಐಸಿ, ಎಂಎಫ್ ಟೆಕ್ನಾಲಜಿ ಫಂಡ್ ಬಿಡುಗಡೆ

ಬೆಂಗಳೂರು: ಎಲ್‌ಐಸಿ ಮ್ಯೂಚುವಲ್ ಫಂಡ್ ಇದೀಗ ಕೇವಲ ಸಾಂಪ್ರದಾಯಿಕ ಐಟಿ ಸೇವೆಗಳಿಗೆ ಸೀಮಿತವಾಗದೆ, ಭಾರತದಲ್ಲಿ ಬೆಳೆಯುತ್ತಿರುವ ತಂತ್ರಜ್ಞಾನದ ವಿವಿಧ ಕ್ಷೇತ್ರಗಳಲ್ಲಿ ಸಮಗ್ರ ಹೂಡಿಕೆಯ ಅವಕಾಶವನ್ನು ಒದಗಿಸಲು ವಿನ್ಯಾಸಗೊಳಿಸಲಾದ ವಿಷಯಾಧಾರಿತ ಎಲ್‌ಐಸಿ ಎಂಎಫ್ ಟೆಕ್ನಾಲಜಿ ಫಂಡ್ ಅನ್ನು ಬಿಡುಗಡೆ ಮಾಡಿದೆ.

ಹೊಸ ಫಂಡ್ ಆಫರ್ ಮಾ.6ರಂದು ಮುಕ್ತಾಯಗೊಳ್ಳಲಿದೆ. ಈ ಯೋಜನೆಯು ಮಾ.19 ರಂದು ಚಂದಾದಾರಿಕೆ ಮತ್ತು ಮರುಖರೀದಿಗಾಗಿ ಪುನಃ ಲಭ್ಯವಿರುತ್ತದೆ. ಸಾಂಪ್ರದಾಯಿಕ ಐಟಿ–ಕೇಂದ್ರಿತ ಯೋಜನೆಗಳಿಗಿಂತ ಭಿನ್ನವಾಗಿ, ಎಲ್‌ಐಸಿ ಎಂಎಫ್ ಟೆಕ್ನಾಲಜಿ ಫಂಡ್ ಸೆಮಿಕಂಡಕ್ಟರ್–ಸಂಬಂಧಿತ ಕಂಪನಿಗಳು, ಡೇಟಾ ಸೆಂಟರ್ ಆಪರೇಟರ್ ಗಳು, ಡಿಜಿಟಲ್ ಕಾಮರ್ಸ್ ಪ್ಲಾಟ್ ಫಾರ್ಮ್‌ಗಳು, ಇಂಟರ್ ನೆಟ್ ಉದ್ಯಮಗಳು ಮತ್ತು ಉದಯೋನ್ಮುಖ ತಂತ್ರಜ್ಞಾನ ಸಂಸ್ಥೆಗಳನ್ನು ಒಳಗೊಂಡಂತೆ ವ್ಯಾಪಕ ಶ್ರೇಣಿಯ ತಂತ್ರಜ್ಞಾನ–ಚಾಲಿತ ವಲಯಗಳಲ್ಲಿ ಬಂಡವಾಳವನ್ನು ಹೂಡುವ ಗುರಿಯನ್ನು ಹೊಂದಿದೆ.

ಕಲ್ಲು ತೂರುವವರಿಗೆ ಬೆಂಬಲ: ಬೊಮ್ಮಾಯಿ ಕಿಡಿ

ಬೆಂಗಳೂರು: ಬಾಗಲಕೋಟೆಯಲ್ಲಿ ನಡೆದಿರುವ ಘಟನೆ ಕಲ್ಲು ತೂರಾಟ ಮಾಡುವ, ಚಪ್ಪಲಿ ತೂರುವ, ಶಿವಾಜಿ ಮಹಾರಾಜರಿಗೆ ಅಗೌರವ ತೋರುವವರಿಗೆ ಈ ಸರ್ಕಾರ ಸಂಪೂರ್ಣ ಬೆಂಬಲಕ್ಕೆ ನಿಂತಿರುವುದು ಬಹಳ ಸ್ಪಷ್ಟ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ.



ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಬರೆದುಕೊಂಡಿರುವ ಅವರು, ಶಿವಾಜಿ ಮಹಾರಾಜ ಭಾರತ ದೇಶ ಕಂಡ ಒಬ್ಬ ಅಪ್ರತಿಮ ನಾಯಕ. ಇಡೀ ದೇಶ ಅವರನ್ನು ಗೌರವದಿಂದ ಕಾಣುತ್ತದೆ. ಅವರಿಗೆ ಕಿಡಿಗೇಡಿಗಳು ಅಪಮಾನ ಮಾಡಿರುವುದು ಅತ್ಯಂತ ಖಂಡನೀಯ. ಕಲ್ಲು ತೂರಿದವರಿಗೆ, ಚಪ್ಪಲಿ ತೂರಿದವರಿಗೆ ಇದರ ಹಿಂದೆ ಷಡ್ಯಂತ್ರ ಮಾಡಿದವರಿಗೆ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳುವುದಿಲ್ಲ. ತೋರಿಕೆಗೆ ಮಾತ್ರ ಬಂಧನ ತೋರಿಸುತ್ತಾರೆ. ತುಷ್ಟಿಕರಣದ ಪರಾಕಾಷ್ಟೆಗೆ ಈ ರಾಜ್ಯ ಸರ್ಕಾರ ಮುಟ್ಟಿದೆ. ಇಲ್ಲಿ ನ್ಯಾಯಕ್ಕೆ, ಧರ್ಮಕ್ಕೆ ನೀತಿಗೆ ಯಾವುದೇ ಬೆಲೆ ಇಲ್ಲ ಎಂದು ಹೇಳಿದ್ದಾರೆ.

ಕೇವಲ ತುಷ್ಟೀಕರಣ, ಭ್ರಷ್ಟಾಚಾರ, ವಿಭಜಿಸುವಕರಣಕ್ಕೆ ಮಾತ್ರ ಬೆಲೆ ಇರುವುದು ಬಹಳ ಸ್ಪಷ್ಟ. ಈ ಸರ್ಕಾರ ಆಯ್ಕೆಯಾಗಿರುವ ತಮ್ಮ ಕರ್ತವ್ಯವನ್ನು ಮರೆತು ರಾಜ್ಯಕ್ಕೆ ದೀರ್ಘಕಾಲ ಹಾನಿಯಾಗುವ ಕೆಲಸ ಮಾಡುವುದನ್ನು ನೋಡಿದರೆ ಜನರು ಇದರ ವಿರುದ್ಧ ಹೋರಾಟ ಮಾಡುವುದು ಅನಿವಾರ್ಯ. ಈ ಘಟನೆ ಅತ್ಯಂತ ಖಂಡನಾರ್ಹ ಎಂದು ಹೇಳಿದ್ದಾರೆ.

ಹಿಂದುಗಳು ಮೆರವಣಿಗೆ ಮಾಡಬಾರದೆ

ಬೆಂಗಳೂರು: ಕರ್ನಾಟಕದಲ್ಲಿ ಹಿಂದು ರಾಷ್ಟ್ರೀಯ ನಾಯಕರು, ದೇವಾನುದೇವತೆಗಳ ಭಾವಚಿತ್ರದ ಮೆರವಣಿಗೆ ಮಾಡಬಾರದೆಂದು ಘೋಷಣೆ ಮಾಡಿ; ಅಲ್ಪಸಂಖ್ಯಾತರಿಗೆ ಸಂಬಂಧಿಸಿದ ಮೆರವಣಿಗೆ ಮಾತ್ರ ಮಾಡಬೇಕೆಂದು ಪ್ರಕಟಿಸಿ ಎಂದು ವಿಧಾನಪರಿಷತ್ ಪ್ರತಿಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಗಣಪತಿ ಉತ್ಸವ, ಶಿವಾಜಿ ಜಯಂತಿ ಬಂದಾಗ ಹೀಗಾಗುತ್ತಿದೆ. ಯಾವುದೇ ಮಸೀದಿ ಮುಂಭಾಗದಿಂದ ಹಿಂದು ಮೆರವಣಿಗೆ, ಗಣಪತಿ ಉತ್ಸವಗಳು, ಕನಕದಾಸ, ಬಸವೇಶ್ವರರ ಭಾವಚಿತ್ರದ ಮೆರವಣಿಗೆಯನ್ನು ರಸ್ತೆಯಲ್ಲಿ, ಮಸೀದಿ ಮುಂದೆ ಮಾಡಬಾರದೇ? ಯಾಕೆ ಕರ್ನಾಟಕ ರಾಜ್ಯದಲ್ಲಿ ಈ ಥರ ತುಷ್ಟೀಕರಣ ಆಗುತ್ತಿದೆ? ಕರ್ನಾಟಕದಲ್ಲಿ ಶಿವಾಜಿ ಜಯಂತಿ ಮಾಡಬಾರದೇ? ಇದೇನು ಪಾಕಿಸ್ತಾನವೇ? ಎಂದು ಪ್ರಶ್ನಿಸಿದರು. ವಿಧಾನಸೌಧದಲ್ಲಿ ಪಾಕಿಸ್ತಾನ ಪರ ಘೋಷಣೆ ಕೂಗಿದರೂ ನಾವೇನೂ ಮಾಡುವುದಿಲ್ಲ ಎಂದು ತಿಳಿಸಲಿ ಎಂದಿದ್ದಾರೆ.

ನಾಯಿ, ರಾಸುಗಳ ಮೇಲೆ ನಿರಂತರ ದಾಳಿ| ಲಕ್ಷಾಂತರ ಮೌಲ್ಯದ ರಾಸುಗಳಿಂದ ನಷ್ಟ| ಆತಂಕದಲ್ಲಿ ರೈತರು

ಹಳ್ಳಿಗಳ ಬೀದಿಯಲ್ಲಿ ಚಿರತೆಗಳ ಹೆಜ್ಜೆ

ಎಸ್.ರುದ್ರೇಶ್ವರ

ದಿಗಂತ ವಿಶೇಷ

ರಾಮನಗರ: ಇತ್ತೀಚಿನ ದಿನದಲ್ಲಿ ಚಿರತೆ ಸಂತತಿ ವೃದ್ಧಿಯಾಗಿರುವ ಪರಿಣಾಮ ಸಾಕು ಪ್ರಾಣಿಗಳ ಮೇಲಿನ ದಾಳಿ ದಿನೇ ದಿನೇ ಹೆಚ್ಚಾಗುತ್ತಿದೆ. ಗ್ರಾಮೀಣ ಭಾಗದಲ್ಲಿ ಮಾತ್ರವಲ್ಲದೆ ಸದ್ದಿಲ್ಲದೇ ಪಟ್ಟಣಕ್ಕೂ ಎಂಟ್ರಿ ಕೊಡುತ್ತಿರುವ ಚಿರತೆಗಳು ಜನರ ನಿದ್ದೆಗೆಡಿಸಿವೆ.

ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಮಾತ್ರ ವಲ್ಲದೇ ಗ್ರಾಮೀಣ ಪ್ರದೇಶದಲ್ಲಿರುವ ಸಣ್ಣ–ಪುಟ್ಟ ಗುಡ್ಡಗಳ ಪೊದೆಯಲ್ಲಿ ವಾಸಿಸುತ್ತಿರುವ ಚಿರತೆಗಳು ಆಹಾರಕ್ಕಾಗಿ ಸಾಕು ಪ್ರಾಣಿಗಳನ್ನು ಗುರಿಯಾಗಿಸಿಕೊಂಡಿವೆ. ಕತ್ತಲಾಗುತ್ತಿದ್ದಂತೆ ನಾಡಿನ ಕಡೆಗೆ ದಾಳಿ ಮಾಡಿ ಬೀದಿನಾಯಿ, ಕುರಿ, ಮೇಕೆ, ದನಕರುಗಳು ಸೇರಿದಂತೆ ಜಾನುವಾರನ್ನು ಹೊತ್ತೊಯ್ಯತೊಡಗಿವೆ. ಕಷ್ಟ ಕಾಲದಲ್ಲಿ ನೆರವಿಗೆ ಬರಲೆಂದು ಜೋಪಾನದಿಂದ ಸಾಕುತ್ತಿರುವ ಜಾನುವಾರು ಚಿರತೆ ಬಾಯಿಗೆ ಸಿಲುಕುತ್ತಿವೆ. ಇದರಿಂದ ರೈತನಿಗೆ ಭಾರಿ ಪ್ರಮಾಣದ ನಷ್ಟ ಉಂಟಾಗುತ್ತಿದೆ.

ಬಿಡದಿ ಪುರಸಭೆ ವ್ಯಾಪ್ತಿಯ ಕಲ್ಲುಗೋಪಹಳ್ಳಿ, ತಮ್ಮಣ್ಣನದೊಡ್ಡಿ ಗ್ರಾಮಗಳ ಸುತ್ತಮುತ್ತಲ ಪ್ರದೇಶದಲ್ಲಿ ಚಿರತೆ ಹಾವಳಿ ಹೆಚ್ಚಾಗಿದೆ. ಶಿವರಾತ್ರಿ ಹಬ್ಬದ ದಿನದಂದು ತಡರಾತ್ರಿ ತಮ್ಮಣ್ಣನದೊಡ್ಡಿಯ ರವಿ ಎಂಬುವರ ಮನೆಗೆ ನುಗ್ಗಿದ ಚಿರತೆ





ಒಂದು ಮೇಕೆಯನ್ನು ಕೊಂದು ರಕ್ತಕುಡಿದು ಮತ್ತೊಂದನ್ನು ಹೊತ್ತುಕೊಂಡು ಹೋಗಿದೆ. ತಮ್ಮಣ್ಣನದೊಡ್ಡಿ ಗ್ರಾಮದ ಹೊರವಲಯ ದಲ್ಲಿರುವ ಮುತ್ತುರಾಯಸ್ವಾಮಿ ದೇವಾಲಯದ ಆಸುಪಾಸಿನಲ್ಲಿ ಚಿರತೆಗಳು ಹಗಲಿನಲ್ಲಿಯೇ ಕಾಣಿಸಿಕೊಂಡು ಜನರಿಗೆ ಭಯ ಹುಟ್ಟಿಸಿವೆ. ಇನ್ನು ಕಲ್ಲುಗೋಪಹಳ್ಳಿಯಲ್ಲಿ ಬೆಳಗಿನ ಜಾವದ ಸಮಯ ದಲ್ಲಿ ಮೂರು ಚಿರತೆಗಳು ಒಟ್ಟಾಗಿ ಗ್ರಾಮದಲ್ಲಿ ಪ್ರತ್ಯಕ್ಷವಾಗಿವೆ. ಗ್ರಾಮದ ರಸ್ತೆಯಲ್ಲಿ ಓಡಾಡಿರು ವುದು ಸಿಸಿ ಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಆಗಾಗ ಆಹಾರ ಹುಡುಕಿಕೊಂಡು ಬರುವ ಚಿರತೆಗಳು ಗ್ರಾಮದಲ್ಲಿ ಮನೆ ಕಾಂಪೌಂಡ್ ಹಾಗೂ ಮನೆಯ ಛಾವಣಿ ಮೇಲೇರಿ ಬೀದಿನಾಯಿ ಹಾಗೂ ಜಾನುವಾರನ್ನು ಹುಡುಕಾಡಿವೆ. ಕೆಲವು ದಿನದಿಂದ ಚಿರತೆ ಹಾವಳಿ ಹೆಚ್ಚಾಗಿದೆ. ಗ್ರಾಮದಲ್ಲಿದ್ದ ಸಾಕು ನಾಯಿಗಳನ್ನು ಚಿರತೆಗಳು ಹೊತ್ತುಹೋಗಿವೆ. ಇದರ ರುಚಿಯಲ್ಲೆ ಮತ್ತೆ ಗ್ರಾಮಕ್ಕೆ ಬಂದಿವೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಚಿರತೆಗಳು ಪ್ರತಿ ಆರು ತಿಂಗಳಿಗೊಮ್ಮೆ ಕನಿಷ್ಠ ಎರಡರಿಂದ ಮೂರು ಮರಿಗಳನ್ನು ಹಾಕುತ್ತವೆ. ಒಂದು ಹೆಣ್ಣು ಚಿರತೆ ಪ್ರತಿ ವರ್ಷ ಕನಿಷ್ಠ ಐದರಿಂದ ಆರು ಮರಿಗಳನ್ನು ಪ್ರಕೃತಿಯ ಮಡಿಲಿಗೆ ಇಡು ತ್ತಿದೆ. ಹೀಗಾಗಿ ಚಿರತೆಗಳ ಸಂತತಿ ದಿನದಿಂದ ದಿನಕ್ಕೆ ಏರುಗತಿಯಲ್ಲಿದೆ. ಸಣ್ಣಪೊದೆಗಳಲ್ಲಿ ಅಡಗಿಕೊಳ್ಳುವ ಚಿರತೆಗಳು ರಾತ್ರಿ ಮಾತ್ರವಲ್ಲದೆ ಹಗಲಲ್ಲೂ ಜನ–ಜಾನುವಾರುಗಳ ಮೇಲೆರಗುವ ಪ್ರಕರಣಗಳು ಕಂಡುಬರುತ್ತಿವೆ. ಸಾಕುಪ್ರಾಣಿಗಳ ರಕ್ತದ ರುಚಿಯುಂಡ ಚಿರತೆಗಳು ಗ್ರಾಮದ ಪಕ್ಕದಲ್ಲಿಯೇ ಆಶ್ರಯ ಪಡೆಯುತ್ತಿದ್ದು, ಮನೆಯ ಹಿತ್ತಲು, ಹೊಲಗಳಲ್ಲಿ ಬಚ್ಚಿಟ್ಟುಕೊಂಡು ಜನರಲ್ಲಿ ಭಯ–ಭೀತಿ ಹುಟ್ಟಿಸಿವೆ.

ಬೋನಿಗೂ ಬೀಳದ ಕಿಲಾಡಿ ಚಿರತೆಗಳು

ಕಲ್ಲುಗೋಪಹಳ್ಳಿ ಮತ್ತು ತಮ್ಮಣ್ಣನದೊಡ್ಡಿ ಭಾಗದಲ್ಲಿ ಕೆಲವು ದಿನಗಳಿಂದ ಚಿರತೆ ಕಾಣಿಸಿಕೊಂಡಿರುವ ಬಗ್ಗೆ ಕೇಳಿಬಂದಿವೆ. ಮಾಹಿತಿ ಬಂದ ಹಿನ್ನೆಲೆಯಲ್ಲಿ ಕಲ್ಲುಗೋಪಹಳ್ಳಿ ಬಳಿ ಈಗಾಗಲೇ ಬೋನು ಇರಿಸಲಾಗಿದೆ. ಆದರೆ, ಚಿರತೆ ಬೋನಿನತ್ತ ಸುಳಿದಿಲ್ಲ. ಗ್ರಾಮಗಳಿಗೆ ಭೇಟಿ ನೀಡಿ ಪರಿಶೀಲಿಸಲಾಗಿದೆ. ತಮ್ಮಣ್ಣನದೊಡ್ಡಿ ಸಮೀಪವೂ ಮತ್ತೊಂದು ಬೋನು ಇರಿಸಲು ಇಲಾಖಾಧಿಕಾರಿಗಳ ಗಮನ ಸೆಳೆಯಲಾಗುವುದು. ಚಿರತೆಗಳು ಹುಲ್ತಾರ್ ಅರಣ್ಯ ಪ್ರದೇಶದಿಂದ ಆಹಾರ ಹುಡುಕುತ್ತಾ ಬಂದಿರಬಹುದು ಎಂದು ಬಿಡದಿ ವಲಯ ಅರಣ್ಯಾಧಿಕಾರಿ ಭೈರವ ತಿಳಿಸಿದರು.



ಮನೆಯಿಂದ ಹೊರಬರಲಾಗುತ್ತಿಲ್ಲ

ಕತ್ತಲಾಗುತ್ತಿದಂತೆ ಗ್ರಾಮದಲ್ಲಿನ ಮಹಿಳೆಯರು, ಮಕ್ಕಳಾದಿಯಾಗಿ ಯಾರೂ ಮನೆಯಿಂದ ಹೊರಬರಲಾಗುತ್ತಿಲ್ಲ. ಅಲ್ಲದೆ, ಮನೆಗಳ ಮುಂದೆ ಜಾನುವಾರು, ಮೇಕೆ, ಕುರಿಯನ್ನು ಕಟ್ಟಿಹಾಕಲು ಭಯಪಡುವಂತಾಗಿದೆ. ಗ್ರಾಮದಲ್ಲಿ ಹಗಲು ರಾತ್ರಿಯೆನ್ನದೆ ರಾಜಾರೋಷವಾಗಿ ಓಡಾಡುತ್ತಾ ಆತಂಕ ಸೃಷ್ಟಿಸಿರುವ ಚಿರತೆಯನ್ನು ಕೂಡಲೇ ಸೆರೆಹಿಡಿಯಬೇಕೆಂದು ಗ್ರಾಮಸ್ಥ ಬಾನಂದೂರು ನಂಜುಂಡಿ ಒತ್ತಾಯಿಸಿದರು.

ಪ್ರಭಾವಿ ವ್ಯಕ್ತಿತ್ವದ ಶಿವಾಜಿ, ಠಾಕ್ರೆ



ಬೆಂಗಳೂರು: ಛತ್ರಪತಿ ಶಿವಾಜಿ ಮಹಾರಾಜರ ಆದರ್ಶವನ್ನು ಹಿಂದವಿ ರಾಷ್ಟ್ರದ ದೃಷ್ಟಾಂತವಾಗಿ ಅಳವಡಿಸಿಕೊಂಡು, ಮಹಾರಾಷ್ಟ್ರದ ಹಿತಕ್ಕಾಗಿ ಶಿವಾಜಿ ಪಾಲನೆಯನ್ನು ಅನುಸರಿಸಿದ ಬಾಳಾ ಸಾಹೇಬ್ ಠಾಕ್ರೆ ಅವರು ದೇಶ ಕಂಡ ವರ್ಣರಂಜಿತ ಹಾಗೂ ಪ್ರಭಾವ ಶಾಲಿ ವ್ಯಕ್ತಿತ್ವವಾಗಿದ್ದರು ಎಂದು ಸಂಸ್ಕೃತಿ ಚಿಂತಕ ಡಾ.ಗುರುರಾಜ ಪೋಶೆಟ್ಟಿಹಳ್ಳಿ ವ್ಯಕ್ತಪಡಿಸಿದರು.

ಛತ್ರಪತಿ ಶಿವಾಜಿ ಮಹಾರಾಜ ಜಯಂತಿ ಅಂಗವಾಗಿ ಕರ್ನಾಟಕ ಕ್ಷತ್ರಿಯ ಮರಾಠ ಪರಿಷತ್ತ ಕೇಂದ್ರ ಕಚೇರಿಯಲ್ಲಿ ಹಮ್ಮಿಕೊಳ್ಳಲಾದ ಅಂಬುಜಾತನಯ ಅವರ ರಚನೆಯ ಹಿಂದವಿ ಹೃದಯ ಸಾಮ್ರಾಟ್ ಬಾಳಾ ಸಾಹೇಬ್ ಠಾಕ್ರೆ ಕೃತಿ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ಛತ್ರಪತಿ ಶಿವಾಜಿ ಮಹಾರಾಜರ ಆದರ್ಶಗಳನ್ನು ಹಿಂದವಿ ರಾಷ್ಟ್ರದ ದೃಷ್ಟಾಂತವಾಗಿ ಅಳವಡಿಸಿಕೊಂಡು, ಮಹಾರಾಷ್ಟ್ರದ ಹಿತಕ್ಕಾಗಿ ಶಿವಾಜಿ ಪಾಲನೆಯನ್ನು ಅನುಸರಿಸಿದ ಬಾಳಾ ಸಾಹೇಬ್ ಠಾಕ್ರೆ ಅವರು ದೇಶ ಕಂಡ ವರ್ಣರಂಜಿತ ಹಾಗೂ ಪ್ರಭಾವಶಾಲಿ ವ್ಯಕ್ತಿತ್ವವಾಗಿದ್ದರು ಎಂದರು.

ಹಿಂದವಿ ಹೃದಯ ಸಾಮ್ರಾಟ್ ಬಾಳಾ ಸಾಹೇಬ್ ಠಾಕ್ರೆ ಕೃತಿ ಬಿಡುಗಡೆ

ಈ ಕೃತಿಯಲ್ಲಿ ಅವರ ರಾಜಕೀಯ–ಸಾಂಸ್ಕೃತಿಕ ದೃಷ್ಟಿಕೋನಗಳು, ಮಹಾರಾಷ್ಟ್ರ-ಕರ್ನಾಟಕ ಬಾಂಧವ್ಯ ಸೇರಿದಂತೆ ವಿವಿಧ ಆಯಾಮಗಳಿಂದ ವ್ಯಕ್ತಿತ್ವ ವಿಶ್ಲೇಷಣೆ ನಡೆಸಲಾಗಿದೆ. ಜನ್ಮ ಶತಮಾನದ ಸಂಭ್ರಮದಲ್ಲಿರುವ ಠಾಕ್ರೆ ಬದುಕಿನ ಅನೇಕ ಆಯಾಮಗಳಿಗೆ ಈ ಕೃತಿ ಕನ್ನಡಿಯಂತೆ ಕಾರ್ಯ ನಿರ್ವಹಿಸುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪರಿಷತ್ ಗೌರ್ನಿಂಗ್ ಕೌನ್ಸಿಲ್ ಅಧ್ಯಕ್ಷ ಎಸ್.ಆರ್.ಸಿಂಧೆ, ಪ್ರಧಾನ ಕಾರ್ಯದರ್ಶಿ ಸುನಿಲ್ ರಾವ್ ಚೌಹಾಣ್, ಖಜಾಂಚಿ ವೆಂಕಟರಾವ್ ಚೌಹಾಣ್, ಕರ್ನಾಟಕ ಮರಾಠ ಸಮುದಾಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಮರಿಯೋಜಿ ರಾವ್ ಉಪಸ್ಥಿತರಿದ್ದರು.

ದುರ್ನಡತೆ ಸಾಬೀತಾದಲ್ಲಿ ಸದಸ್ಯತ್ವ ರದ್ದು

ಬೆಂಗಳೂರು: ಒಂದೇ ಆರೋಪದ ಸಂಬಂಧ ಕ್ರಿಮಿನಲ್ ಪ್ರಕರಣದಲ್ಲಿ ಶಿಕ್ಷೆ ಆಗದಿದ್ದರೂ, ಆಡಳಿತಾತ್ಮಕ ನಿಟ್ಟಿನಿಂದ ದುರ್ನಡತೆ ಆರೋಪ ಸಾಬೀತಾಗಿದ್ದಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಸದಸ್ಯರನ್ನು ವಜಾಗೊಳಿಸಬಹುದು ಎಂದು ಹೈಕೋರ್ಟ್ ಆದೇಶಿಸಿದೆ.

ಗದಗ–ಬೇಟಗೇರಿ ಸಿಟಿ ಮುನಿಸಿಪಾಲಿಟಿಯ ಸದಸ್ಯರಾದ ಉಷಾ ಮಹೇಶ್ ದಾಸರ, ಅನಿಲ್ ಎಂ.ಅಬ್ಬಿಗೇರಿ ಮತ್ತು ಗುಳ್ಳಪ್ಪ ಎಸ್. ಮುಷಿಗೇರಿ ಅವರನ್ನು ಸದಸ್ಯತ್ವದಿಂದ ವಜಾಗೊಳಿಸಿದ್ದ ಸರ್ಕಾರದ ಕ್ರಮವನ್ನು ಹೈಕೋರ್ಟ್ ಎತ್ತಿಹಿಡಿದಿದೆ.

ಸಾರ್ವಜನಿಕ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದ ಕೆಲವು ವ್ಯಕ್ತಿಗಳ ಜತೆ ಶಾಮೀಲಾಗಿ ಮುನಿಸಿಪಾಲಿಟಿ ಆಯುಕ್ತರ ಸಹಿಯನ್ನು ನಕಲು ಮಾಡಿ, ಸುಳ್ಳು ನಿರ್ಣಯವನ್ನು ಸೃಷ್ಟಿಸಿ ಒತ್ತುವರಿದಾರರಿಗೆ ಭೂ ಸ್ವಾಧೀನ ಪತ್ರ ನೀಡಿದ್ದ ಆರೋಪದಲ್ಲಿ ತಮ್ಮನ್ನು ವಜಾಗೊಳಿಸಿದ್ದ ಸರ್ಕಾರದ ಕ್ರಮ ಪ್ರಶ್ನಿಸಿ ಈ ಮೂವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅದರ



ವಿಚಾರಣೆ ನಡೆಸಿದ ನ್ಯಾ. ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿದೆ.

ಆರೋಪಿಗಳು ತಾವು ಅಮಾಯಕರು ಎಂದು ಹೇಳುತ್ತಿದ್ದು, ಇಂತಹ ಹೇಳಿಕೆಗಳನ್ನು ಕ್ರಿಮಿನಲ್ ಕೇಸುಗಳ ವಿಚಾರಣೆ ವೇಳೆ ಪರಿಗಣಿಸಬಹುದು. ಆದರೆ, ಇದು ಆಡಳಿತಾತ್ಮಕ ಕ್ರಮ ಕೈಗೊಳ್ಳುವುದಕ್ಕೆ ಅಡ್ಡಿಯಾಗದು. ಸಾಕಷ್ಟು ಸಾಕ್ಷ್ಯಾಧಾರಗಳನ್ನು ಆಧರಿಸಿ ಕರ್ನಾಟಕ ಮುನಿಸಿಪಾಲಿಟಿಗಳ ಕಾಯ್ದೆ 1964ರ ಸೆಕ್ಷನ್ 41ರ ಅನ್ವಯ ಸದಸ್ಯರನ್ನು ವಜಾಗೊಳಿಸಿರುವ ಸರ್ಕಾರದ ಕ್ರಮಲ್ಲಿ ಯಾವುದೇ ದೋಷಗಳಿಲ್ಲ ಎಂದು ಪೀಠ ಹೇಳಿದೆ.

ಕ್ರಿಮಿನಲ್ ಪ್ರಕರಣಗಳಲ್ಲಾದರೆ ಆರೋಪಗಳನ್ನು ಯಾವುದೇ ಸಂದೇಹಕ್ಕೆ ಆಸ್ಪದವಿಲ್ಲದ ರೀತಿ ಸಾಬೀತು ಮಾಡಬೇಕಾಗುತ್ತದೆ. ಆಡಳಿತಾತ್ಮಕ ಕ್ರಮ ಕನಿಷ್ಠ ಮಾನದಂಡವನ್ನು ಆಧರಿಸಿದೆ. ಹಾಗಾಗಿ ಚುನಾಯಿತ ಪ್ರತಿನಿಧಿಗಳನ್ನು ವಜಾಗೊಳಿಸುವ ಅಥವಾ ಸದಸ್ಯ ಸ್ಥಾನದಿಂದ ಪದಚ್ಯುತಗೊಳಿಸಲು ಕ್ರಿಮಿನಲ್ ಪ್ರಕರಣದಲ್ಲಿ ಶಿಕ್ಷೆಯಾಗಿರಬೇಕೆಂದು ಇಲ್ಲ. ದುರ್ನಡತೆ ಸಾಬೀತಾಗಲು ಸಾಕಷ್ಟು ದಾಖಲೆಗಳ ಸಾಕ್ಷ್ಯವಿದ್ದರೆ ಸಾಕು ಎಂದು ಪೀಠ ಆದೇಶದಲ್ಲಿ ತಿಳಿಸಿದೆ.

ಅರ್ಜಿದಾರ ಆರೋಪಿಗಳು ನಡೆಸಿದ್ದಾರೆನ್ನಲಾದ ನಿರ್ಣಯ ನಕಲು ಮಾಡಿರುವುದು ಕೆಎಂಸಿ ಕಾಯ್ದೆ ಸೆಕ್ಷನ್ 41ರಡಿ ಸ್ಪಷ್ಟವಾಗಿ ದುರ್ನಡತೆ ವ್ಯಾಪ್ತಿಗೆ ಒಳಪಡುತ್ತದೆ. ಆರೋಪಿಗಳ ವಿರುದ್ಧದ ಆರೋಪದ ಕೃತ್ಯದ ಕುರಿತು ಎಲ್ಲಾ ಮುನಿಸಿಪಲ್ ದಾಖಲೆಗಳನ್ನು ಮತ್ತು ಸ್ವತಂತ್ರ ಪರಿಶೀಲನೆ ನಂತರ ಸಾಕಷ್ಟು ಸಾಕ್ಷ್ಯಾಧಾರಗಳನ್ನು ಸಂಗ್ರಹ ಮಾಡಿದ ನಂತರವೇ ಅವರನ್ನು ಸದಸ್ಯ ಸ್ಥಾನದಿಂದ ವಜಾಗೊಳಿಸಲಾಗಿದೆ. ಹಾಗಾಗಿ, ಆದೇಶದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ ಎಂದು ಪೀಠ ತಿಳಿಸಿದೆ.

ಕೋರ್ಟ್ ಅಂಗಳದಲ್ಲಿ ನಗೆಯ ಅಲೆ

ಬೆಂಗಳೂರು: ಮನೆಯ ಪಾಟ್‌ನಲ್ಲಿ ಗಾಂಜಾ ಬೆಳೆದ ಆರೋಪದ ಸಂಬಂಧಿತ ಪ್ರಕರಣದ ವೇಳೆ ಅರ್ಜಿದಾರರ ಪರ ವಕೀಲರು ಷೋಗೆ ಗಾಂಜಾ ಗಿಡ ಹಾಕಿರಬಹುದು. ಬೇರೆ ಗಿಡಗಳ ಜತೆ ಅದು ಬಂದಿರಬಹುದು ಎಂದು ಹೇಳಿದ್ದರಿಂದ ಹೈಕೋರ್ಟ್‌ನಲ್ಲಿ ಶುಕ್ರವಾರ ನಗುವಿನ ಅಲೆ ಎದ್ದಿತು.

ಮಾದಕ ವಸ್ತು ಮತ್ತು ಅಮಲು ಪದಾರ್ಥಗಳ ನಿಯಂತ್ರಣ (ಎನ್‌ಡಿಪಿಎಸ್) ಕಾಯ್ದೆಯಡಿ ದಾಖಲಾಗಿರುವ ಪ್ರಕರಣ ರದ್ದತಿ ಕೋರಿ ಕೊಡಗಿನ ಪೊನ್ನಂಪೇಟೆಯ ಗೋಣಿಕೊಪ್ಪದ ನಿವಾಸಿ ಎ.ಎಂ. ಕಾವೇರಪ್ಪ ಅಲಿಯಾಸ್ ರಾಶಿ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾ.ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ನಡೆಸಿತು.ವಿಚಾರಣೆ ಆರಂಭವಾಗುತ್ತಿದ್ದಂತೆ ಅರ್ಜಿದಾರರ ಪರ ವಕೀಲರು ಮನೆಯಲ್ಲಿ ಒಂದು ಕೆಜಿ ಗಾಂಜಾ ಬೆಳೆಯಲಾಗುತ್ತದೆಯೇ? ಅರ್ಧ ಕೆಜಿ ಮಾತ್ರ ಸಿಕ್ಕಿರುವುದು. ಗಾಂಜಾ ಗಿಡಗಳು ಬೆಳೆದಿರುವ ಜಾಗ ನಮ್ಮದಲ್ಲ, ಬೇರೆಯವರಿಗೆ ಸೇರಿದ್ದಾಗಿದೆ. ನಮಗೆ ಗೊತ್ತಿದ್ದರೆ ನಾವೇಕೆ ಅದನ್ನು ಬೆಳೆಯುತ್ತೇವೆ? ಅದನ್ನು ಯಾರು ಪ್ರತ್ಯೇಕಿಸಿಲ್ಲ. ಷೋಗೆ ಹಾಕಿಕೊಂಡಿರಬಹುದು ಎಂದರು. ಅರ್ಜಿದಾರರ ವಾದಕ್ಕೆ ಪೀಠ ಆಶ್ಚರ್ಯ ವ್ಯಕ್ತಪಡಿಸಿದ ಕಾರಣಕ್ಕೆ ಎಚ್ಚೆತ್ತುಕೊಂಡ ವಕೀಲರು ನಾವು ಹಾಕಿಲ್ಲ. ಬೇರೆ ಗಿಡಗಳ ಜತೆ ಅದು ಬೆಳೆದಿರಬಹುದು ಎಂದು ಸಮರ್ಥನೆ ನೀಡಿದರು. ಇದರಿಂದ ನ್ಯಾಯಮೂರ್ತಿಗಳು ಸೇರಿ ಕೋರ್ಟ್‌ನಲ್ಲಿದ್ದ ವಕೀಲರು ಜೋರಾಗಿ ನಕ್ಕರು. ಹೆಚ್ಚುವರಿ ರಾಜ್ಯ ಸರ್ಕಾರಿ ಅಭಿಯೋಜಕ ಬಿ.ಎನ್. ಜಗದೀಶ್ ಅವರು ಗಾಂಜಾ ಬೆಳೆಯುವುದೇ ಅಪರಾಧ. ಕೆನಬೀಸ್ ಪ್ಲಾಂಟ್ ಬೆಳೆಯುವುದು ಅಪರಾಧ. ಗಾಂಜಾವನ್ನು ಒಣಗಿಸಿ, ಅದನ್ನು ತಂದು ಆನಂತರ ತೂಕ ಮಾಡಲಾಗದು ಎಂದರು. ವಾದ–ಪ್ರತಿವಾದ ಆಲಿಸಿದ ನ್ಯಾಯಾಲಯವು ಫೆ.2ರಂದು ಪ್ರಕರಣಕ್ಕೆ ನೀಡಿದ್ದ ತಡೆಯನ್ನು ವಿಸ್ತರಿಸಿ, ಅರ್ಜಿ ವಿಚಾರಣೆಯನ್ನು ಮಾ.6ಕ್ಕೆ ಮುಂದೂಡಿತು.

ಇಂದಿನಿಂದ ಸಿಎಂ ಕಪ್ ಬ್ಯಾಡ್ಮಿಂಟನ್ ಟೂರ್ನಿ

ಬೆಂಗಳೂರು: ಸಿಎಂ ಕಪ್ ಬ್ಯಾಡ್ಮಿಂಟನ್ ಟೂರ್ನಿಗೆ ಕ್ಷಣಗಣನೇ ಶುರು ವಾಗಿದೆ. ಫೆ.21 ಮತ್ತು 22 ರಂದು ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆಯ ಅಂಗಳದಲ್ಲಿ ನಡೆಯಲಿರುವ ಎರಡು ದಿನಗಳ ಟೂರ್ನಿಯಲ್ಲಿ ಎಂಟು ತಂಡಗಳು ಭಾಗ ವಹಿಸಲಿವೆ.

ಜನಪ್ರತಿನಿಧಿಗಳು, ಐಎಎಸ್–ಐಪಿಎಸ್ ಅಧಿಕಾರಿಗಳು, ಸಚಿವಾಲಯದ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು, ವೈದ್ಯರು, ತಾರೆಯರು ಹಾಗೂ ಪತ್ರಕರ್ತರ ಜತೆ ಯಾಗಿ ಕ್ರೀಡಾ ಮನೋಭಾವದಿಂದ ಹೋರಾಟ ನಡೆಸಲಿದ್ದಾರೆ. ಲೀಡರ್ಸ್ ಪ್ಲೇ ಫ್ರೆಂಡ್‌ಶಿಪ್ ವಿನ್ ಎಂಬ ಘೋಷ ವಾಕ್ಯದೊಂದಿಗೆ ಆರಂಭಗೊಂಡಿರುವ ಮೊದಲ ಆವೃತ್ತಿಯ ಟೂರ್ನಿಯ ಲಾಂಛನವನ್ನು ಈಗಾಗಲೇ ಸಿಎಂ ಸಿದ್ದರಾಮಯ್ಯನವರು ಅನಾವರಣಗೊಳಿಸಿದ್ದಾರೆ.

ಟೂರ್ನಿಯಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಹಾಗೂ ಶಾಸಕರಾದ ಪೊನ್ನಣ್ಣ, ಶರತ್ ಬಚ್ಚೇಗೌಡ, ಡಾ.ಮಂಥರ್ ಗೌಡ, ಮಾಜಿ ಶಾಸಕ ನಾರಾಯಣಸ್ವಾಮಿ, ಐಎಎಸ್ ಅಧಿಕಾರಿಗಳಾದ ಸೆಲ್ವಕುಮಾರ್, ಜಗದೀಶ್, ಐಪಿಎಸ್ ಅಧಿಕಾರಿಗಳಾದ ಅಲೋಕ್ ಕುಮಾರ್, ರಮೇಶ್ ಬಾನೋಥ್, ಕೆಪಿಎಸ್ ಅಧಿಕಾರಿ ಸತೀಶ್ ಕುಮಾರ್ ಸೇರಿದಂತೆ ಇತರರು ಪವರ್ ಪ್ಲೇ ವಿಭಾಗದಲ್ಲಿ ಭಾಗವಹಿಸಲಿದ್ದಾರೆ. ಟೂರ್ನಿಯಲ್ಲಿ ಒಟ್ಟು 128 ಆಟಗಾರರು ಕಣಕ್ಕಿಳಿಯಲಿದ್ದಾರೆ.

ಈಗಾಗಲೇ ಎಂಟೂ ಫ್ರಾಂಚೈಸಿಗಳ ಆಟಗಾರರು ಸಾಕಷ್ಟು ಪೂರ್ವತಯಾರಿ ನಡೆಸಿದ್ದಾರೆ. ಕಳೆದ ಒಂದು ತಿಂಗಳಿನಿಂದ ಆಟಗಾರರು ಕಠಿಣ ಅಭ್ಯಾಸದಲ್ಲಿ ನಿರತರಾಗಿದ್ದಾರೆ. ರೋಚಕವಾಗಿ ಸಾಗಲಿರುವ ವಿನೂತನ ಮಾದರಿಯ ಸಿಎಂ ಬ್ಯಾಡ್ಮಿಂಟನ್ ಟೂರ್ನಿ ನಮ್ಮ ಬೆಂಗಳೂರು ಸಾಕ್ಷಿಯಾಗಲಿದೆ.

ಬೆದರಿಕೆ: ವಿವಿಧ ಸಂಘಟನೆಗಳ ಪ್ರತಿಭಟನೆ

ಮಹದೇವಪುರ: ಎಸ್‌ಸಿ–ಎಸ್‌ಟಿ ಕಾಯ್ದೆ ದುರುಪಯೋಗ ಮಾಡಿಕೊಂಡು ಸರ್ಕಾರಿ ಅಧಿಕಾರಿಗಳು ಮತ್ತು ಖಾಸಗಿ ಬಿಲ್ಡರ್ಸ್‌ನ್ನು ಬೆದರಿಸಿ, ಅವರಿಂದ ಹಣ ಸುಲಿಗೆ ಮಾಡುತ್ತಿರುವ ಆಂಧ್ರ ಮೂಲದ ಆರ್‌ಟಿಐ ಕಾರ್ಯಕರ್ತ ಪರಮೇಶ್ ಎಂಬಾತನನ್ನು ಬಂಧಿಸಿ ಕಾನೂನು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಕರ್ನಾಟಕ ದಲಿತ ರಕ್ಷಣಾ ವೇದಿಕೆ ಮತ್ತು ದಲಿತ ಸಂಘಟನೆಗಳ ಒಕ್ಕೂಟದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ವೈಟ್ ಫೀಲ್ಡ್‌ನ ಡಿಸಿಪಿ ಕಚೇರಿ ಮುಂದೆ ನಡೆದ ಪ್ರತಿಭಟನೆಯ ನೇತೃತ್ವ ವಹಿಸಿದ ಕರ್ನಾಟಕ ದಲಿತ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಸೋರೆಹುಣಸೆ ವೆಂಕಟೇಶ್ ಮಾತನಾಡಿ, ಆಂಧ್ರ ಮೂಲದ ಪರಮೇಶ್ ಎಂಬಾತನು ಬಲಜಿಗ ನಾಯ್ಡು ಜಾತಿಗೆ ಸೇರಿದವನಾಗಿದ್ದಾನೆ. ಸರ್ಕಾರದ ಯೋಜನೆ ಲಾಭ ಪಡೆಯುವ ದುರುದ್ದೇಶದಿಂದ ನಕಲಿ ದಾಖಲೆಗಳು ಸೃಷ್ಟಿಸಿ ಎಸ್‌ಟಿ ಜಾತಿ ಪ್ರಮಾಣಪತ್ರ ಪಡೆದು ಸರ್ಕಾರಕ್ಕೆ ವಂಚನೆ ಮಾಡುತ್ತಿದ್ದಾನೆ. ಅಲ್ಲದೆ ಅಟ್ರಾಸಿಟಿ ಕಾಯ್ದೆಯನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಪ್ರಕರಣಗಳು ದಾಖಲಿಸುವುದಾಗಿ ಜನರನ್ನು ಬೆದರಿಕೆ ಹಾಕುತ್ತಿದ್ದಾನೆ ಎಂದು ಆಕ್ಷೇಪಿಸಿದರು.



ಸರ್ಕಾರಿ ಜಮೀನಿಗಳಿಗೆ ನಕಲಿ ದಾಖಲೆಗಳನ್ನು ಸೃಷ್ಟಿಸುವುದು, ಆರ್‌ಟಿಐ ಕಾರ್ಯಕರ್ತ, ವಕೀಲ ಹಾಗೂ ಪತ್ರಕರ್ತ ಎಂದು ಹೇಳಿಕೊಂಡು ಸರ್ಕಾರಿ ಅಧಿಕಾರಿಗಳಿಗೆ ಹಾಗೂ ಖಾಸಗಿ ಬಿಲ್ಡರ್ಸ್‌ಗೆ ಬೆದರಿಕೆ ಹಾಕಿ ಕೋಟ್ಯಂತರ ರೂಪಾಯಿ ಹಣ ಸುಲಿಗೆ, ಕೆಲವು ಮಹಿಳೆಯರಿಗೆ ಹಣ ಒಡವೆ ಆಸೆ ತೋರಿಸಿ ಅವರಿಂದಲೇ ಹಣ ಪಡೆದು ವಂಚನೆ ಮಾಡುವ ಮೂಲಕ ಅವರ ಜೀವನ ಹಾಳು ಮಾಡಿದ್ದಾನೆ. ಎನ್‌ಜಿಟಿ, ಪರಿಸರ ಮಾಲಿನ್ಯ, ಜಿಬಿಎ, ಬಿಡಿಎ ಅಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು ನನಗೆ ಪರಿಚಯವಿದೆ ಎಂದು ಬಿಲ್ಡರ್ಸ್ ವಿರುದ್ಧ ಆರ್‌ಟಿಐ ಹಾಕಿಕೊಂಡು ಅವರಿಂದ ಕೋಟ್ಯಂತರ ರೂಪಾಯಿ ಹಣ ಪಡೆದಿದ್ದಾನೆ. ಈತನ ಹಲವು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಸಮಾಜಕ್ಕೆ ಮಾರಕವಾಗಿರುವ ಈ ವ್ಯಕ್ತಿಯನ್ನು ದೌರ್ಜನ್ಯ ಕಾಯ್ದೆಯಲ್ಲಿ ಬಂಧಿಸಿ ರಾಜ್ಯದಿಂದ ಗಡೀಪಾರು ಮಾಡುವಂತೆ ಒತ್ತಾಯಿಸಿದರು.

ಕರ್ನಾಟಕ ಸರ್ಕಾರಿ ಭೂ ರಕ್ಷಣಾ ಸಮಿತಿ ರಾಜ್ಯಾಧ್ಯಕ್ಷ ಎನ್.ವಿಜಯಕುಮಾರ್, ಕರ್ನಾಟಕ ಸಿಂಹ ಸೇನೆ ಪ್ರಧಾನ ಕಾರ್ಯದರ್ಶಿ ನಡವತ್ತಿ ಶ್ರೀನಿವಾಸ್, ಡಿ.ಎಸ್.ಎಸ್. ಹಿರಿಯ ಮುಖಂಡ ಅಂಬೇಡ್ಕರ್ ನಗರ ಗುಟ್ಟೆ ಶಂಬಪ್ಪ, ಕರ್ನಾಟಕ ದಲಿತ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷೆ ಭಾಗ್ಯ ಮುಂತಾದವರಿದ್ದರು.

ಸಿಎಂ ನೇತೃತ್ವದಲ್ಲಿ ಜಿಬಿಎ ಸಮಿತಿ ಪುನಾರಚನೆ: ಅಧಿಕೃತ ಆದೇಶ

ಸಮಿತಿಗೆ 75ರ ಬದಲಿಗೆ 86 ಸದಸ್ಯರು

ಬೆಂಗಳೂರು: ಮುಖ್ಯಮಂತ್ರಿ ನೇತೃತ್ವದ ಗ್ರೇಟರ್ ಬೆಂಗಳೂರು ಪ್ರಾಧಿಕಾರ(ಜಿಬಿಎ)ದ ಸಮಿತಿಯನ್ನು ಪುನಾರಚನೆ ಮಾಡಿ ಸರಕಾರ ಅಧಿಕೃತ ಆದೇಶ ಹೊರಡಿಸಿದೆ. ಇದರಿಂದ ಜಿಬಿಎ ಸಮಿತಿಯಲ್ಲಿ ಮೊದಲಿದ್ದ 75ರ ಬದಲಾಗಿ ಈಗ 86 ಸದಸ್ಯರು ಇರಲಿದ್ದಾರೆ.

ಬೆಳಗಾವಿ ಅಧಿವೇಶನದಲ್ಲಿ ಜಿಬಿಎ ಆಡಳಿತ ಕಾಯ್ದೆ ತಿದ್ದುಪಡಿಸಿ ಮಸೂದೆಯನ್ನು ಮಂಡಿಸಿ ಅಂಗೀಕರಿಸಲಾಗಿತ್ತು.

ತಿದ್ದುಪಡಿ ಮಸೂದೆಯಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಸೇರಿದಂತೆ, ಚಿಕ್ಕಬಳ್ಳಾಪುರದ ಸಂಸದರನ್ನು ಸೇರಿದಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಮತ್ತು ಇತರರನ್ನು ಸೇರಿಸಲು ನಿಯ ರೂಪಿಸಲಾಗಿತ್ತು. ಇದೀಗ ಸರ್ಕಾರ ಅಧಿಕೃತ ಆದೇಶ ಹೊರಡಿಸಿದ್ದು, ಚಿಕ್ಕಬಳ್ಳಾಪುರ ಸಂಸದ, ಸರ್ಕಾರದ ಮುಖ್ಯ ಕಾರ್ಯದರ್ಶಿ ಸೇರಿದಂತೆ ಮತ್ತಿತರರು ಜಿಬಿಎಯ ಪದನಿಮಿತ್ತ ಸದಸ್ಯರಾಗಿರಲಿದ್ದಾರೆ.

ಹೊಸದಾಗಿ ಸೇರ್ಪಡೆಯಾದವರು: ಜಿಬಿಎ ಸಮಿತಿಯ ತಿದ್ದುಪಡಿ ದೇಶದ ಪ್ರಕಾರ ಚಿಕ್ಕಬಳ್ಳಾಪುರ ಸಂಸದ (ಡಾ.ಕೆ.ಸುಧಾಕರ್), ನಾಮನಿರ್ದೇಶಿತ ಸಂಸದರು(ಸುಧಾಮೂರ್ತಿ) ಹಾಗೂ ನಾಮನಿರ್ದೇಶಿತ ವಿಧಾನಪರಿಷತ್ ಸದಸ್ಯರು, ಸರ್ಕಾರದ ಮುಖ್ಯ ಕಾರ್ಯದರ್ಶಿ(ಡಾ. ಶಾಲಿನಿ ರಜನೀಶ್), ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ–ನಗರಾಭಿವೃದ್ಧಿ ಇಲಾಖೆ(ತುಷಾರ್ ಗಿರಿ ನಾಥ್), ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ–ಆರ್ಥಿಕ ಇಲಾಖೆ(ರಿತೇಶ್ ಕುಮಾರ್ ಸಿಂಗ್) ಅವರುಗಳನ್ನು ಜಿಬಿಎ ಸಮಿತಿಗೆ ಸೇರಿಸಿ ತಿದ್ದುಪಡಿ ಆದೇಶ ನೀಡಿದೆ.



ಉಳಿದಂತೆ ಮೊದಲಿನ ಆದೇಶದ ಪ್ರಕಾರ: ಮುಖ್ಯಮಂತ್ರಿಯಾದ ಸಿದ್ದರಾಮಯ್ಯ ಜಿಬಿಎಯ ಪದನಿಮಿತ್ತ ಅಧ್ಯಕ್ಷರಾಗಿ,ಬೆಂಗಳೂರು ಅಭಿವೃದ್ಧಿ ಸಚಿವ ಡಿ.ಕೆ.ಶಿವಕುಮಾರ್ ಪದನಿಮಿತ್ತ ಉಪಾಧ್ಯಕ್ಷರಾಗಿರುತ್ತಾರೆ. ಅದಲ್ಲದೆ ಸಮಿತಿಯಲ್ಲಿ ಬೆಂಗಳೂರು ನಗರ ವ್ಯಾಪ್ತಿಯ ವಿಧಾನಸಭಾ ಸದಸ್ಯರು, ರಾಜ್ಯಸಭಾ ಸದಸ್ಯರು, ವಿಧಾನಸಭಾ ಸದಸ್ಯರು ಸದಸ್ಯರಾಗಿರುತ್ತಾರೆ.

ಜತೆಗೆ, ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಮುಖ್ಯಆಯುಕ್ತರು, ಐದು ವಿವಿಧ ಪ್ರಾಧಿಕಾರಿಗಳ ಆಯುಕ್ತರು, ಐದು ಪಾಲಿಕೆಗಳ ಮೇಯರ್‌ಗಳು ಸಮಿತಿಯ ಸದಸ್ಯರಾಗಿರಲಿದ್ದಾರೆ. ಬೆಂಗಳೂರು ನಗರ ಪೊಲೀಸ್ ಆಯುಕ್ತರು, ಜಿಬಿಎ ಮುಖ್ಯಅಭಿಯಂತರರು, ಮಹಾನಗರ ಪ್ರದೇಶಾಭಿವೃದ್ಧಿ ಆಯುಕ್ತರು, ಭೂ ಸಾರಿಗೆ ಪ್ರಾಧಿಕಾರದ ಮುಖ್ಯಕಾರ್ಯನಿರ್ವಹಣಾಧಿಕಾರಿ,ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರು ಸಮಿತಿಯಲ್ಲಿದ್ದಾರೆ.

ಪಾಲಿಕೆ ಅಧಿಕಾರಿಗಳ ಸಭೆ: ಪಿಜಿಗಳ ಪರಿಶೀಲನೆಗೆ ತಂಡ ರಚನೆ

ಶುಚಿತ್ವ, ಶುದ್ಧ ನೀರು, ಆರೋಗ್ಯ ಸುರಕ್ಷತೆಗೆ ಆದ್ಯತೆ

ಬೆಂಗಳೂರು: ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಪೇಯಿಂಗ್ ಗೆಸ್ಟ್(ಪಿಜಿ)ಗಳ ಪರಿಶೀಲನೆಗೆ ಜಂಟಿ ತಂಡ ರಚಿಸಲಾಗಿದೆ ಎಂದು ಪಾಲಿಕೆ ಆಯುಕ್ತ ಡಿ.ಎಸ್. ರಮೇಶ್ ತಿಳಿಸಿದರು.

ವಿವಿಧ ವಿಷಯದ ಕುರಿತು ಅಧಿಕಾರಿಗಳ ಸಭೆ ನಡೆಸಿದ ಅವರು, ಬಾಕಿ ಉಳಿದಿರುವ ಎಲ್ಲ ಕಾಮಗಾರಿಗಳನ್ನು ಶೀಘ್ರದಲ್ಲಿ ಪೂರ್ಣಗೊಳಿಸು ವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು. ಗುತ್ತಿಗೆ ಪಡೆದು ಅಭಿವೃದ್ಧಿ ಕಾರ್ಯಕೈಗೊಳ್ಳದ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಲು ಕ್ರಮ ವಹಿಸಿ. ಸಿವಿಲ್ ಹಾಗೂ ಒಳಚರಂಡಿ ಕಾಮಗಾರಿ ಪೂರ್ಣಗೊಳಿಸಿದ ನಂತರವೇ ಡಾಂಬರೀಕರಣ ಕೈಗೊಳ್ಳಲು ಹಾಗೂ ರಸ್ತೆಗಳು ಸಮತಟ್ಟಾಗಿರುವಂತೆ ಡಾಂಬರೀಕರಣ ಮಾಡಿ. ಕಾಮಗಾರಿಗಳ ನೈಜ ಸಮಯದ ಭೌತಿಕ ಪ್ರಗತಿ ವರದಿ ಪಡೆಯಲು ತಂತ್ರಾಂಶ ಅಭಿವೃದ್ಧಿ ಕುರಿತು ಪ್ರಸ್ತಾವನೆ ಸಲ್ಲಿಸಲು ಸೂಚನೆ ನೀಡಿದರು.

ಜಂಟಿ ತಂಡ ರಚನೆ: ಉಚ್ಚ ನ್ಯಾಯಾಲಯದ ಆದೇಶದನ್ವಯ ಸಾರ್ವಜನಿಕ ಆರೋಗ್ಯ ಮತ್ತು ಸುರಕ್ಷತೆ ನಿಯಮ ಪಾಲನೆ ಹಿನ್ನೆಲೆಯಲ್ಲಿ ಪೇಯಿಂಗ್ ಗೆಸ್ಟ್‌ಗಳ ಪರಿಶೀಲನೆಗಾಗಿ ಆರೋಗ್ಯ ವಿಭಾಗ ಹಾಗೂ ನಗರ ಯೋಜನೆ ವಿಭಾಗದ ಅಧಿಕಾರಿಗಳನ್ನು ಒಳಗೊಂಡ ಜಂಟಿ ಪರಿಶೀಲನಾ ತಂಡವನ್ನು ರಚಿಸಲಾಗಿದೆ. ಜಂಟಿ ತಂಡವು ಪೂರ್ವ ನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ ಪಿಜಿಗಳನ್ನು15 ದಿನಗಳೊಳಗೆ ಸಮಗ್ರವಾಗಿ ಪರಿಶೀಲಿಸಿ ಅನುಸರಣಾ ವರದಿ ಸಲ್ಲಿಸಲು ಸೂಚಿಸಲಾಗಿದೆ ಎಂದು ತಿಳಿಸಿದರು.



ಪಿಜಿಗಳ ಸಮಗ್ರ ಪರಿಶೀಲನೆಯಲ್ಲಿ ಮಂಜೂರಾದ ಕಟ್ಟಡ ಯೋಜನೆಯ ಪ್ರಕಾರ ನಿರ್ಮಾಣವಾಗಿದೆಯೇ, ವಾಣಿಜ್ಯ ವಲಯದಲ್ಲಿ ಬರುತ್ತದೆಯೇ, ಅಗ್ನಿಶಾಮಕ ಇಲಾಖೆಯಿಂದ ಎನ್‌ಒಸಿ ಪಡೆಯಲಾಗಿದೆಯೇ, ಸಿಸಿಟಿವಿ ಹಾಗೂ ಕನಿಷ್ಠ 90 ದಿನಗಳ ಡೇಟಾ ಸಂಗ್ರಹ ವ್ಯವಸ್ಥೆ, ಪ್ರತಿ ವ್ಯಕ್ತಿಗೆ ಕನಿಷ್ಠ 70 ಚದರ ಅಡಿ ಸ್ಥಳಾವಕಾಶ, ಪ್ರಥಮ ಚಿಕಿತ್ಸೆ ಪೆಟ್ಟಿಗೆ, ಮೂಲವೈದ್ಯಕೀಯ ಸೌಲಭ್ಯ, ಸುರಕ್ಷಿತ ಕುಡಿಯುವ ನೀರು, ಆಹಾರ ತಯಾರಿಸಲು ಅಡುಗೆಕೋಣೆ ಇದ್ದಲ್ಲಿ ಎಫ್‌ಎಸ್‌ಎಸ್‌ಎಐ ಪ್ರಮಾಣಪತ್ರ ಮಾನ್ಯತೆ, ಭದ್ರತಾ ವ್ಯವಸ್ಥೆ, ಕಸ ವಿಂಗಡಣೆ ಮತ್ತು ವಿಲೇವಾರಿ ನಿಯಮಾನುಸಾರ ಪಾಲನೆ, ಹಾಗೂ ತುರ್ತು ಸಂಪರ್ಕ ದೂರವಾಣಿಗಳ ಪ್ರದರ್ಶನ ಫಲಕ ಇತ್ಯಾದಿಗಳ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಸಂಪಾದಕೀಯ

ಉಚಿತಗಳೆಷ್ಟು ವಿಹಿತ?

ಚುನಾವಣೆಯ ಸಂದರ್ಭದಲ್ಲಿ ರಾಜಕೀಯ ಪಕ್ಷಗಳು ಮತದಾರರಿಗೆ ಉಚಿತ ಕೊಡುಗೆಗಳನ್ನು ಘೋಷಿಸುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿರುವ ಸರ್ವೋಚ್ಚ ನ್ಯಾಯಾಲಯವು, ಈ ಮೂಲಕ ಎಂತಹ ಪರಂಪರೆಯನ್ನು ಹುಟ್ಟು ಹಾಕುತ್ತಿದ್ದೀರಿ ಎಂದು ಖಾರವಾಗಿ ಪ್ರಶ್ನಿಸಿದೆ. ತಮಿಳುನಾಡು ಸರಕಾರವು ವರ್ಗಭೇದವಿಲ್ಲದೆ ಎಲ್ಲರಿಗೂ ಉಚಿತ ವಿದ್ಯುತ್ ನೀಡುವುದಾಗಿ ವಾಗ್ದಾನ ಮಾಡಿರುವುದನ್ನು ಅಲ್ಲಿನ ವಿದ್ಯುತ್ ವಿತರಣಾ ನಿಗಮವು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿದ ಮೂವರು



ನ್ಯಾಯಾಧೀಶರನ್ನು ಒಳಗೊಂಡ ನ್ಯಾಯಪೀಠವು, ಸರಕಾರದ ಇಂತಹ ನಡೆಯನ್ನು ಖಂಡಿಸಿದೆ. ಕೇವಲ ತಮಿಳುನಾಡಿನಲ್ಲಷ್ಟೇ ಅಲ್ಲದೆ, ಇತ್ತೀಚಿನ ವರ್ಷಗಳಲ್ಲಿ ಹಲವಾರು ರಾಜ್ಯಗಳಲ್ಲಿ ಪ್ರತಿಯೊಂದು ಪಕ್ಷವೂ ಇಂತಹ ಉಚಿತಗಳನ್ನು ಘೋಷಿಸುವ ಕ್ರಮ ಅನುಸರಿಸುವುದು ಕೂಡಾ ನ್ಯಾಯಾಲಯದ ಕೆಂಗಣ್ಣಿಗೆ ಕಾರಣವಾಗಿದೆ. ಆರ್ಥಿಕವಾಗಿ ದುಸ್ಥಿತಿಯಲ್ಲಿರುವ ರಾಜ್ಯಗಳು ಕೂಡಾ ಇಂತಹ ಬಿಟ್ಟಿ ಕೊಡುಗೆಗಳನ್ನು ಘೋಷಿಸುತ್ತಿರುವುದರ ಕುರಿತು ತೀವ್ರ ಆಕ್ರೋಶ ಕಾರಿರುವ ನ್ಯಾಯಾಲಯವು, ಜನರಿಗೆ ಎಲ್ಲವನ್ನೂ ಉಚಿತವಾಗಿ ನೀಡಿದರೆ ಅವರು ಕೆಲಸ ಮಾಡುವ ಮನಸ್ಸು ಮಾಡಿಯಾರೆ ಎಂದು ಪ್ರಶ್ನಿಸಿದೆ.

ನ್ಯಾಯಾಲಯದ ಆಕ್ರೋಶ ಸಹಜವಾದುದೇ ಆಗಿದೆ. ಬಹುತೇಕ ನಾಗರಿಕರೂ ಇದೇ ಬಗೆಯ ಅಭಿಪ್ರಾಯ ಹೊಂದಿದ್ದಾರೆ. ರಾಜಕೀಯ ಪಕ್ಷಗಳು ಚುನಾವಣೆ ಬಂದಾಗ ಇಂತಹ ಓಲೈಕೆ ರಾಜಕಾರಣ ಮಾಡುವುದು ಇತ್ತೀಚಿನ ವರ್ಷಗಳಲ್ಲಿ ಮಾಮೂಲಾಗಿದೆ. ಅಧಿಕಾರಕ್ಕೆ ಬಂದ ಬಳಿಕ ಕಲ್ಯಾಣ ಕಾರ್ಯಕ್ರಮಗಳ ಮೂಲಕ ಜನರಿಗೆ ಒಳಿತು ಮಾಡುವುದಾಗಿ ಪ್ರಕಟಿಸುವುದನ್ನು ಒಪ್ಪಿಕೊಳ್ಳಬಹುದು. ಅದು ರಾಜಕೀಯ ಪಕ್ಷವೊಂದರ ಸಾಮರ್ಥ್ಯ, ಯೋಜನೆ, ದೂರದೃಷ್ಟಿಯ ಪ್ರದರ್ಶನವೂ ಆಗುತ್ತದೆ. ಆದರೆ ಯಾವುದೇ ಯೋಜನೆ ಹಾಕಿಕೊಳ್ಳದೆ, ದೂರದೃಷ್ಟಿಯಿಲ್ಲದೆ, ಬೇಕಾಬಿಟ್ಟಿ ಕೊಡುಗೆ ನೀಡುವುದರಿಂದ ರಾಜ್ಯವು ಭಾರೀ ಆರ್ಥಿಕ ಹೊರೆ ಅನುಭವಿಸಬೇಕಾಗುತ್ತದೆ. ಆ ಕಾರಣದಿಂದಾಗಿ ಇನ್ನಿತರ ಅಭಿವೃದ್ಧಿ ಕಾರ್ಯಗಳು ಮೂಲೆಗುಂಪಾಗುತ್ತವೆ. ಮೂಲಸೌಕರ್ಯಗಳು ಮಣ್ಣು ಪಾಲಾಗುತ್ತವೆ.

ಉಚಿತ ಕೊಡುಗೆಗಳನ್ನು ವಿರೋಧಿಸಿ ನ್ಯಾಯಾಲಯ ಇಂತಹ ಅಭಿಪ್ರಾಯ ವ್ಯಕ್ತಪಡಿಸಿರುವುದು ಇದೇ ಮೊದಲೇನಲ್ಲ. 2025 ಮತ್ತು 2022ರಲ್ಲಿಯೂ ಇದೇ ರೀತಿಯ ಆಕ್ಷೇಪ ವ್ಯಕ್ತಪಡಿಸಿತ್ತು. ದುರಂತವೆಂದರೆ ನ್ಯಾಯಾಲಯ ಕೂಡಾ ಇದನ್ನು ತಡೆಯಲು ಏನು ಕ್ರಮ ತೆಗೆದುಕೊಳ್ಳಬಹುದು ಎಂಬ ಮಾರ್ಗದರ್ಶಿ ಸೂತ್ರಗಳನ್ನು ಪ್ರಕಟಿಸುವ ಮನ ಮಾಡಿಲ್ಲ. ಅದನ್ನು ಸಂಸತ್ತು ಮತ್ತು ಚುನಾವಣಾ ಆಯೋಗಕ್ಕೆ ಬಿಟ್ಟಿದೆ. ಇನ್ನಾದರೂ 'ಅನುಚಿತ' ಉಚಿತ ಕೊಡುಗೆಗಳನ್ನು ಘೋಷಿಸುವ ಚಾಳಿಗೆ ಕಡಿವಾಣ ಬೀಳಬೇಕಾಗಿದೆ.

ವಿಶುದ್ಧ ಎಂದರೆ ಶುದ್ಧೀಕರಣ

ವಿಶುದ್ಧ ಚಕ್ರವು ನಿಮ್ಮ ಭಾವನೆಗಳನ್ನು ವ್ಯಕ್ತ ಪಡಿಸುವ ಸಾಧನ. ಭಾವನಾತ್ಮಕ ಅನುಭವಗಳನ್ನು ಪ್ರಜ್ಞಾಪೂರ್ವಕ ಸಂಗತಿಗಳನ್ನಾಗಿ ಪರಿವರ್ತಿಸುವ ಮೂಲಕ ನಿಮ್ಮನ್ನು ಅಭಿವ್ಯಕ್ತಗೊಳಿಸುತ್ತದೆ.

ಪೂರ್ಣ ಪರಿಪೂರ್ಣ

ಪೂರ್ಣಪ್ರಜ್ಞ ಬೇಳೂರು
poornaprajnabelur@gmail.com



ವಿಶುದ್ಧ ಚಕ್ರವು ಚಕ್ರಗಳಿಂದ ಬರುವ ಶಕ್ತಿಯನ್ನು ಶುದ್ಧೀಕರಿಸಿ ಮೇಲಿನ ಚಕ್ರಗಳಿಗೆ ಕಳಿಸುತ್ತದೆ. ಚಯಾಪಚಯ ಕ್ರಿಯೆಯನ್ನು ಶುದ್ಧೀಕರಿಸುತ್ತದೆ ಮತ್ತು ಶಕ್ತಿಯ ಮಟ್ಟವನ್ನು ನಿಯಂತ್ರಿಸುತ್ತದೆ. ಹೃದಯ ಮತ್ತು ಮನಸ್ಸಿನ ನಡುವಿನ ಸೇತುವೆಯಂತೆ ಕಾರ್ಯ ನಿರ್ವಹಿಸುತ್ತದೆ.

ಸಾಮಾಜಿಕ ಬದಲಾವಣೆ: ಗೋಪಾಲಕೃಷ್ಣ ಗೋಖಲೆಯವರ ಒಂದು ಮಾತು ಇಡೀ ದಕ್ಷಿಣ ಭಾರತದಲ್ಲೇ ಗಣೇಶನ ಹಬ್ಬವನ್ನು ಆಚರಿಸುವಂತೆ ಮಾಡಿತು. ಲಾಲ್ ಬಹಾದ್ದೂರ್ ಶಾಸ್ತ್ರೀಜಿಗಳ ಒಂದು ಮಾತು ದೇಶದಾದ್ಯಂತ ಜನರನ್ನು ಸೋಮವಾರದ ಒಪ್ಪತ್ತು ಊಟಕ್ಕೆ ಶರಣಾಗುವಂತೆ ಮಾಡಿತು. ಹೀಗೆ ಒಂದು ಮಾತು, ಸಾಮಾಜಿಕವಾಗಿ ಒಗ್ಗೂಡಿಸಿತು. ಇನ್ನೊಂದು ಮಾತು, ಒಪ್ಪತ್ತು ಮಾಡುವ ಮೂಲಕ ಬಡವರಿಗೆ ಊಟವು ದೊರಕುವಂತೆ ಮಾಡಿತು. ಹೀಗೆ ವಿಶುದ್ಧ ಚಕ್ರದ ಸಹಾಯದಿಂದ ಸಾಮಾಜಿಕ ಬದಲಾವಣೆ ಶೀಘ್ರದಲ್ಲಿ ಆಗಲು ಕಾರಣವಾಯಿತು.

ವೈಯಕ್ತಿಕ ಬದಲಾವಣೆ: ಹೊಸ ಪದಗಳ ಕಲಿಕೆಯು ನಿಮ್ಮಲ್ಲಿ ಹೊಸ ಚೈತನ್ಯವನ್ನೇ ನೀಡುತ್ತದೆ. ಒಂದು ಪದಕ್ಕೆ ಹಲವು ಅರ್ಥಗಳಿವೆ. ಒಂದು ಪದದ ಹಿಂದೆ ಕತೆಗಳೇ ಇರುತ್ತವೆ. ಒಂದು ಪದದ ಹಿಂದೆ ವಿಷಾದವಿರಬಹುದು. ಒಂದು ಪದದ ಹಿಂದೆ ಒಂದು ಕಾದಂಬರಿಗೆ ಆಗುವಷ್ಟು ಸಂಗತಿಗಳು ಇರಬಹುದು. ಒಂದು ಪದ ಸಂಜೀವಿನಿಯೇ ಆಗಿರಬಹುದು. ಅಶ್ವತ್ಥಾಮ ಹತಃ ಕುಂಜರಃ ಎನ್ನುವ ಒಂದು ಮಾತು ದ್ರೋಣಾಚಾರ್ಯರ ತಲೆಯನ್ನೇ ಕತ್ತರಿಸಿ ಹಾಕಿತು. ಇವೆಲ್ಲಾ ಅರ್ಥವಾಗುವುದು ನಿಮ್ಮೊಳಗೇ ಒಂದು ಬದಲಾವಣೆ ಆದರೆ ಮಾತ್ರ.

ನೀವು ಈ ರೀತಿಯಲ್ಲೂ ಸಹಾ ವಿಶುದ್ಧ ಚಕ್ರವನ್ನು ಸಮತೋಲನ ಮಾಡಬಹುದು.

ವಿಶುದ್ಧ ಚಕ್ರವು ನಿಮ್ಮ ಗಂಟಲಿನಲ್ಲಿ ಇರುವ ಕಾರಣ ನಿಮ್ಮ ಧ್ವನಿಯನ್ನು ಮತ್ತು ಅದರ ತರಂಗಗಳನ್ನು ನಿಯಂತ್ರಿಸುತ್ತದೆ. ನಿಮಗೆ ತಿಳಿದಿರುವ ಹಾಗೇ ಪ್ರತಿಯೊಂದು ವಸ್ತುಗಳಿಗೂ ಅದರದೇ ಆದ ತರಂಗಗಳಿವೆ. ನೀವು ಅದನ್ನು ಘರ್ಷಣೆಗೆ ಒಳಪಡಿಸಿದಾಗ ಅದು ಹೊರಡಿಸುವ ಶಬ್ದಗಳನ್ನು ನೀವು ಧ್ವನಿ ತರಂಗ ಎನ್ನುತ್ತೀರಿ. ಪ್ರತಿಯೊಂದು ಖನಿಜಕ್ಕೂ, ಕಲ್ಲುಗಳಿಗೂ ಅದರದೇ ಆದ ತರಂಗವನ್ನು ಹೊಮ್ಮಿಸುವ ಶಕ್ತಿ ಇರುತ್ತದೆ. ಅದನ್ನು ನೀವು ಸೂಕ್ತವಾದ ರೀತಿಯಲ್ಲಿ ಬಳಸಿಕೊಳ್ಳಬೇಕು. ಅಕ್ವಾಮೆರಿನ್ ಎಂಬುದು ಸಮುದ್ರ ನೀಲಿ ಬಣ್ಣದ ಹರಳು, ಸೆಲೆಸ್ಟೈಟ್ ಸಹಾ ನೀಲಿ ಬಣ್ಣದ ಹರಳು, ವೈಢೂರ್ಯ ಬೆಕ್ಕಿನ ಕಣ್ಣಿನ ಬಣ್ಣದ್ದು. ಇವುಗಳನ್ನೆಲ್ಲಾ ನೀವು ಧರಿಸುವುದರ ಮೂಲಕ ವಿಶುದ್ಧ ಚಕ್ರವನ್ನು ಸಮತೋಲನ ಮಾಡಬಹುದು. ಇವು ಇರುವ ಹಾರವನ್ನಾಗಲೀ, ಅಥವಾ ಕೇವಲ ನೀಲಿ ಬಣ್ಣದ ಪದಕವಿರುವ ಸರವನ್ನಾದರೂ ನೀವು ಧರಿಸಬೇಕು.

ನೀಲಿಯೇ ಏಕೆ?

ವಿಶುದ್ಧ ಚಕ್ರವನ್ನು ಹದಿನಾರು ದಳಗಳಿರುವ ನೀಲಿಯ ಕಮಲದಿಂದ ಗುರುತಿಸಲಾಗುತ್ತದೆ. ಇದು ಸ್ಪಷ್ಟತೆ, ಸತ್ಯ ಮತ್ತು ಶಾಂತತೆಯ ಪ್ರತಿಬಿಂಬ. ಆಕಾಶ ತತ್ವವನ್ನು ಪ್ರತಿನಿಧಿಸುವ ಕಾರಣ ಅದು ನೀಲಿ. ಆಕಾಶವು ಸೂಕ್ಷ್ಮ ಮತ್ತು ವಿಸ್ತಾರ ಎರಡೂ ಗುಣಗಳನ್ನು ಹೊಂದಿದೆ. ರೂಪಕ್ಕಿಂತಾ ಚಲನೆ ಮತ್ತು ಅನುರಣನವನ್ನು ಅನುಮತಿಸುತ್ತದೆ. ನೀವು ಸಾವಧಾನದಿಂದ ಮಾತನಾಡುವುದು, ಜಪವನ್ನು ನಿರಂತರ ಮಾಡುವುದು, ಗುನುಗುವಿಕೆ ಹೀಗೆ ಇವೆಲ್ಲಾ ಕೇಂದ್ರ ಸಂಗತಿಗಳು. ತರಂಗವು ಅಡಚಣೆ ಇಲ್ಲದೇ ಚಲಿಸಲು ಮುಕ್ತವಾದ ಸ್ಥಳ ಬೇಕು. ಅದೇ ಆಕಾಶ.

ನೀವು ಕುತ್ತಿಗೆಯ ವ್ಯಾಯಾಮವನ್ನು ಸೂಕ್ತವಾದ ರೀತಿಯಲ್ಲಿ ಮಾಡಿದರೆ ವಿಶುದ್ಧ ಚಕ್ರದ ಸಮತೋಲನ ಸಾಧ್ಯ. ಕತ್ತನ್ನು ಹಿಗ್ಗಿಸುವುದು, ಹಲಾಸನವನ್ನು ಮಾಡುವುದು, ಕುತ್ತಿಗೆಯನ್ನು ಮೇಲೆ ಕೆಳಗೆ ಮಾಡುತ್ತಾ, ಅಡ್ಡಾದಿಡ್ಡಿ ತಿರುಗಿಸುತ್ತಾ ವ್ಯಾಯಾಮಗಳನ್ನು ಮಾಡುವುದು ಮುಖ್ಯ.

ಗಲ್ಲವನ್ನು ಎದೆಗೆ ಒತ್ತಿರಿ. ಎಡ ಕಿವಿಯನ್ನು ಎಡ ಭುಜಕ್ಕೆ ತಾಗಿಸಿ, ಬಲ ಕಿವಿಯನ್ನು ಬಲ ಭುಜಕ್ಕೆ ತಾಗಿಸಿ, ಮತ್ತು ಸ್ವಲ್ಪ ಹೊತ್ತು ಹಾಗೇ ಇಟ್ಟುಕೊಳ್ಳಿ. ಉಸಿರನ್ನು ಒಳಗೆ ಎಳೆದುಕೊಳ್ಳಿ ಮತ್ತು ಸುಮಾರು ಮೂವತ್ತು ಸೆಕೆಂಡುಗಳ ಕಾಲ ನಿಮ್ಮೊಳಗೆ ಆಗುತ್ತಿರುವ ಹಿಗ್ಗುವಿಕೆಯನ್ನು ಅನುಭವಿಸಿ. ಹೀಗೆ ಬೇರೆ ಬೇರೆ ರೀತಿಯಲ್ಲಿ ಚಟುವಟಿಕೆ ನಡೆಸಿ. ಹಿಗ್ಗುವಿಕೆ ಮತ್ತು ಕುಗ್ಗುವಿಕೆ ಎರಡೂ ವಿಧಾನಗಳನ್ನೂ ಪ್ರತ್ಯಕ್ಷವಾಗಿ ನೋಡಿಕೊಳ್ಳಬಹುದು.

ಮೂಗಿನ ಮೂಲಕವೇ ಉಸಿರಾಟದ ಕ್ರಮವನ್ನು ಅನುಸರಿಸಿ, ಇದರಿಂದಾಗಿ ನಿಮ್ಮ ಗಂಟಲು ಮತ್ತು ಒಣಗಿದ ಬಾಯಲ್ಲಿ ಉತ್ತೇಜನ ಉಂಟಾಗುತ್ತದೆ. ಈಗ ಜೋರಾಗಿ ಉಸಿರು ಬಿಡಲು ಶುರು ಮಾಡಿ. ಹುಖ್ ಹುಖ್ ಎನ್ನುವ ಶಬ್ದವನ್ನು ಮಾಡಿ. ನೀವು ಬಿಡುವ ಉಸಿರು ಸಿಂಹದ ಘರ್ಜನೆಯಂತೆ ಕೇಳಿಸುತ್ತದೆ. ಅದಕ್ಕೇ ಇದನ್ನು ಸಿಂಹದ ಉಸಿರಾಟ ಎನ್ನುತ್ತಾರೆ.

ವಿಶುದ್ಧ ಚಕ್ರವು ನಿಮ್ಮ ಭಾವನೆಗಳನ್ನು ವ್ಯಕ್ತ ಪಡಿಸುವ ಸಾಧನ. ಭಾವನಾತ್ಮಕ ಅನುಭವಗಳನ್ನು ಪ್ರಜ್ಞಾಪೂರ್ವಕ ಸಂಗತಿಗಳನ್ನಾಗಿ ಪರಿವರ್ತಿಸುವ ಮೂಲಕ ನಿಮ್ಮನ್ನು ಅಭಿವ್ಯಕ್ತಗೊಳಿಸುತ್ತದೆ.

ನೀವು ಆಡಬೇಕೆಂಬ ಮಾತುಗಳನ್ನು ಯಾವತ್ತೂ ನಿಗ್ರಹಿಸಬೇಡಿರಿ. ಅದರಲ್ಲೂ ಭಾವನಾತ್ಮಕವಾಗಿ ಆಡಿದ ಮಾತುಗಳು ಸತ್ಯವೇ ಆಗುತ್ತವೆ. ನಿಮಗೆ ಆಗಾಗ ಗಂಟಲು ನೋವು, ಕಿರಿಕಿರಿ, ಕಿಚ್‌ಕಿಚ್, ಬಿಗಿತ, ಒತ್ತಡ, ಹೊಟ್ಟೆಯಿಂದ ಏನೋ ಗಂಟಲಿನವರೆಗೆ ಬಂದು ಒತ್ತಿ ನಿಂತಂತೆ ಆಗುವುದು, ಧ್ವನಿ ಇದ್ದಕ್ಕಿದ್ದಂತೆ ಗೊರಗೊರ ಎನ್ನುವುದು, ಕುತ್ತಿಗೆ ನೋವು, ಭುಜದ ಸೆಳೆತ, ಭಾರವಾಗುವುದು, ದವಡೆ ಬಿಗಿಯುವುದು, ನುಂಗಲು ತೊಂದರೆಯಾಗುವುದು, ಉಸಿರಾಟದ ತೊಂದರೆಗಳು ಇವೆಲ್ಲಾ ದೈಹಿಕವಾಗಿ ವಿಶುದ್ಧ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ತೋರುವ ಲಕ್ಷಣಗಳು.

ನೀವು ಅತಿಯಾಗಿ ಮಾತನಾಡಲು ತೊಡಗಿದರೆ, ಇತರರು ಮಾತನಾಡುತ್ತಿದ್ದಾಗ ನೀವು ಮಾತನ್ನು ಶುರು ಮಾಡಿದರೆ, ಇನ್ನೊಬ್ಬರ ಸುದ್ದಿಯನ್ನು ಅತಿಯಾಗಿ ಹೇಳತೊಡಗಿದರೆ, ಕೆಟ್ಟದಾಗಿ ಬೈಯತೊಡಗಿದರೆ, ನಿಮ್ಮ ಬಗ್ಗೆ ಅತಿಯಾಗಿ ಹೇಳಿಕೊಳ್ಳತೊಡಗಿದರೆ, ಎಲ್ಲದಕ್ಕೂ ಸಂಬಂಧವಿಲ್ಲದ ಪ್ರತಿಕ್ರಿಯೆಗಳನ್ನು ನೀಡತೊಡಗಿದರೆ ಅದೆಲ್ಲಾ ಅಸಮತೋಲನದ ಚಿಹ್ನೆಗಳು.

ನೀವು ಆಗ ಮೌನದಿಂದ ಅಥವಾ ಬುದ್ಧಿವಂತಿಕೆಯ ಮಾತುಗಳಿಂದ ಸರಿಪಡಿಸಿಕೊಳ್ಳಲು ಆಗದು. ಒಪ್ಪಂದದ ಮೂಲಕ ಜನರನ್ನು ಆಕರ್ಷಿಸುವುದು, ಕಷ್ಟವಾದ ಆದರೆ ಅನಗತ್ಯವಾದ ಸಂಭಾಷಣೆಯನ್ನು ತಪ್ಪಿಸುವುದು. ಹೊಂದಿಕೊಳ್ಳುವುದು, ಭಾವನೆಗಳು ಸ್ಫೋಟವಾಗದಂತೆ ಆಗಾಗ ವ್ಯಕ್ತ ಪಡಿಸಿ ಹಗುರವಾಗುವುದು. ವಿಚಾರಗಳನ್ನು ಮತ್ತು ಸೃಜನಶೀಲ ಕೆಲಸಗಳನ್ನು ಮಾಡುವುದರ ಮೂಲಕ ಸಮತೋಲನ ಸಾಧ್ಯ.

ಆತ್ಮಾವಲೋಕನ ಮಾಡಿಕೊಳ್ಳಿ

ನೀವು ಆಡಬೇಕೆಂದಿರುವುದನ್ನು ಯಾಕೆ ಆಡದೇ ಉಳಿದಿರಿ.

ನಿಮಗೆ ಗೊತ್ತಿಲ್ಲದಿರುವುದನ್ನು ಯಾಕೆ ಗೊತ್ತಿಲ್ಲ ಎಂದು ಹೇಳದೇ ಗೊತ್ತಿದೆ ಎಂದು ಹೇಳಿ ಸರಿಯಾದ ಮಾರ್ಗದರ್ಶನ ಮಾಡದೇ ಬಿಟ್ಟಿರಿ.

ಆಗುವುದಿಲ್ಲ, ಇಲ್ಲ ಎಂದು ಹೇಳಲು ಯಾಕೆ ಹಿಂಜರಿತ ಉಂಟಾಯಿತು.

ಯಾವುದಾದರೂ ಮಾತನ್ನು ಆಡಲು ಹೋದಾಗ ಗಂಟಲು ಕಟ್ಟಿದಂತೆ ಯಾಕಾಯಿತು.

ನೀವು ತುಂಬಾ ಮಾತನಾಡುತ್ತೀರಿ; ಯಾರೂ ಕೇಳಿಸಿಕೊಳ್ಳುತ್ತಲೇ ಇಲ್ಲ. ನೋಡುತ್ತಿಲ್ಲ, ಅವರಿಗೆ ಬೇಡ ಎನ್ನುವಂತೆ ವರ್ತಿಸುತ್ತಿದ್ದಾರೆ. ನಿರ್ಲಕ್ಷ್ಯ ಮಾಡುತ್ತಿದ್ದಾರೆ ಅಂದರೆ ನಿಮ್ಮ ಚಕ್ರವು ಸಮತೋಲನವನ್ನು ಕಳೆದುಕೊಂಡಿದೆ.

ಸರ್ವಾಂಗಾಸನ, ಮತ್ಸ್ಯಾಸನ, ಸಿಂಹಾಸನ, ಹಲಾಸನ, ಉಷ್ಟ್ರಾಸನಗಳು ಗಂಟಲಿನ ಸುತ್ತಮುತ್ತಲ ದೈಹಿಕ ಸಮಸ್ಯೆಗಳನ್ನು ನೇರಗೊಳಿಸುತ್ತದೆ.

ನನ್ನ ಧ್ವನಿ ತುಂಬಾ ಚೆನ್ನಾಗಿದೆ ಮತ್ತು ಮುಖ್ಯ. ನಾನು ಶಾಂತವಾಗಿ ಮಾತನಾಡುತ್ತೇನೆ. ನೇರ ಮತ್ತು ದಿಟ್ಟತನದಿಂದ ಮಾತನಾಡುತ್ತೇನೆ. ಪ್ರಾಮಾಣಿಕ ಮತ್ತು ದಯೆಯಿಂದ ಮಾತನಾಡುತ್ತೇನೆ. ಕೇಳುವುದು ನನ್ನ ಒಳ್ಳೆಯ ಗುಣ. ಹೀಗೆ ಒಂದು ಬಿಳಿ ಹಾಳೆಯ ಬರೆದು ನಿಮ್ಮ ಓದುವ ಸ್ಥಳದಲ್ಲಿ ಅಲ್ಲಲ್ಲಿ ತೂಗು ಹಾಕಿ.

ನಿಮ್ಮನ್ನು ನೀವೇ ನಿಯಂತ್ರಿಸಿಕೊಳ್ಳಿ

ಈ ಮೂರು ಪದಗಳ ವಾಕ್ಯದ ಆಚರಣೆ ಸುಲಭವಲ್ಲ. ನಿಮಗೆ ಹಿಂಜರಿಕೆ, ಸತ್ಯವನ್ನು ಹೇಳಲು ಭಯ. ಆತಂಕ.

ಇವುಗಳನ್ನು ಮೆಟ್ಟಿ ನಿಲ್ಲಲು; ಗಟ್ಟಿಯಾಗಿ ಓದಿ ಬರೆದು ಮಾಡಬೇಕು, ಇಲ್ಲ ಎಂದು ಹೇಳುವುದನ್ನು ಕಲಿಯಿರಿ. ನಿಮ್ಮ ಮಾತುಗಳನ್ನು ರೆಕಾರ್ಡ್ ಮಾಡಿ. ಯಾವುದೇ ರೀತಿಯ ಪ್ರತಿಕ್ರಿಯೆ ಇಲ್ಲದಂತೆ ಆಲಿಸಿ. ಯಾವುದೇ ಕಾರ್ಯಕ್ರಮವನ್ನು ಮಾಡುವಾಗ ನೀವೂ ಭಾಗವಹಿಸಿ. ಏಕಾಂತವಾಗಿದ್ದಾಗ ಹಾಡು ಹೇಳಿ. ಶವರ್ ಅಡಿಯಲ್ಲಿ ಬೇಕಾಬಿಟ್ಟಿ ಸ್ನಾನ ಮಾಡುತ್ತಾ ಹಾಡುಗಳನ್ನು ಹೇಳಿ. ಕಾರು ಹೋಗುತ್ತಿದ್ದಾಗ ದೊಡ್ಡದಾಗಿ ಕೂಗಿರಿ.

ಯಾವುದೇ ಸಂಗತಿಗಳನ್ನು ಕೇಳಬೇಕೆಂದರೆ, ಯಾವುದೇ ಅಡಚಣೆಗಳು ಇರಬಾರದು. ಅಗತ್ಯವಾದರೆ ಮೌನವಾಗಿರಿ. ಕೇಳಿದ್ದಕ್ಕೆ ಪ್ರತಿಕ್ರಿಯೆ ನೀಡಿ. ನಿಮ್ಮ ಅಭಿಪ್ರಾಯಗಳನ್ನು ಜೋಡಿಸಿಕೊಳ್ಳಿ. ಅಧಿಕಾರಿಗಳ ಎದುರೇ ಅವರ ತಪ್ಪುಗಳನ್ನು ಹೇಳಿ. ಯಾವುದನ್ನೂ ಪೂರ್ವ ಯೋಜಿಸಬೇಡಿ. ಎದೆಯಲ್ಲಿ ಕಂಪನವಾದರೆ, ಗಂಟಲಿನಲ್ಲಿ ನಡುಕ ಉಂಟಾದರೆ ಒಳ್ಳೆಯದೇ ತಿಳಿಯಿರಿ.

ಸಂವಹನವು ನಿಮ್ಮ ಮಾತುಗಳನ್ನು ಸಮತೋಲನಗೊಳಿಸುತ್ತದೆ. ಶುದ್ಧೀಕರಣ ಮಾಡುತ್ತದೆ. ನಿಮ್ಮೊಳಗಿನ ಶಕ್ತಿಯ ಕೇಂದ್ರ ಬಿಸಿಯಾಗುತ್ತದೆ. ನೀವು ಕಳೆದು ಹೋದ ವಿಸ್ತಾರವನ್ನು ವ್ಯಕ್ತಗೊಳಿಸುವಿರಿ, ಇಲ್ಲವೇ ಉತ್ಸಾಹ ಕಳೆದುಕೊಳ್ಳುತ್ತೀರಿ. ವಿಶುದ್ಧದಿಂದಾಗಿ ನಿಮ್ಮೊಳಗಿನ ಧ್ವನಿಯನ್ನು ಹುಡುಕಲು ಸಾಧ್ಯವಾಯಿತು. ನೀಲಿ ಏಕೆ ಬೇಕು ಎಂದು ತಿಳಿಯಿತು. ಕರ್ತವ್ಯವು ಎಲ್ಲದಕ್ಕಿಂತಾ ಮುಖ್ಯ.

ಮಾತೃಭಾಷೆ : ಒಂದು ಅವಲೋಕನ

ಡಾ. ಮೈತ್ರಿ ಭಟ್, ವಿಟ್ಲ



ಭಾಷೆ ನಮ್ಮ ಅಸ್ತಿತ್ವದ ಮೂಲ. ಭಾಷೆ ಕೇವಲ ಪದಗಳ ಸಮೂಹವಲ್ಲ; ಅದು ಆತ್ಮಗೌರವದ ಸಂಕೇತ. ಭಾಷಾ ವೈವಿಧ್ಯತೆಯೇ ಜಗತ್ತಿನ ಸೌಂದರ್ಯ. ಒಂದು ಹೂವಿನ ತೋಟವನ್ನು ಹೇಗೆ ನಾನಾ ಬಣ್ಣದ ಹೂವುಗಳು ಸುಂದರಗೊಳಿಸುತ್ತವೆಯೋ ಹಾಗೆಯೇ ನಾನಾ ಭಾಷೆಗಳು ಜಗತ್ತನ್ನು ಸುಂದರಗೊಳಿಸುತ್ತವೆ.

ಭಾಷೆ ಎಂದರೆ ಕೇವಲ ಸಂವಹನದ ಸಾಧನವಲ್ಲ. ಅದು ಒಂದು ಸಮುದಾಯದ ಇತಿಹಾಸ, ಸಂಸ್ಕೃತಿ, ಎಲ್ಲವೂ. ನಾವಾಡುವ ಪ್ರತಿಯೊಂದು ಪದವೂ ಒಂದು ಅನುಭವದ ಸಂಗ್ರಹ. ಪ್ರತಿಯೊಂದು ಮಾತೂ ಒಂದು ಕಾಲದ ಸಾಕ್ಷಿ. ಹೀಗಿರುವಾಗ ಭಾಷೆಯ ನಾಶವು ಕೇವಲ ಶಬ್ದಗಳ ನಾಶವಲ್ಲ; ಅದು ಒಂದು ಸಂಸ್ಕೃತಿಯ ಕುರುಹಿನ ಅಳಿವು. ಹೀಗೆ ಭಾಷೆಯ ಅಳಿವು ಎನ್ನುವುದು ಸಾಂಸ್ಕೃತಿಕ ವೈವಿಧ್ಯತೆಯೇ ಕಣ್ಮರೆಯಾಗುವ ಭೀತಿಯೂ ಹೌದು.

ಫೆಬ್ರುವರಿ 21 'ವಿಶ್ವ ಮಾತೃಭಾಷಾ ದಿನ'. ಬಹುಭಾಷೆ ಮತ್ತು ಬಹುಸಂಸ್ಕೃತಿಯ ಅಸ್ಮಿತೆಯನ್ನು ಉಳಿಸಲು ಈ ದಿನವನ್ನು ಆಚರಿಸಲಾಗುತ್ತದೆ. ವಿಶ್ವ ಮಾತೃಭಾಷಾ ದಿನದ ಹಿಂದೆ ಒಂದು ನೋವಿನ ಕಥೆ ಇದೆ. 1952ರಲ್ಲಿ ಬಾಂಗ್ಲಾ ದೇಶದ ವಿದ್ಯಾರ್ಥಿಗಳು ತಮ್ಮ ಭಾಷಾ ಹಕ್ಕಿಗಾಗಿ ಹೋರಾಡಿದಾಗ, ಅವರ ಹೃದಯದಲ್ಲಿ ಜ್ವಲಿಸಿದ್ದೇ ಮಾತೃಭಾಷೆಯ ಪ್ರೀತಿ. ಆ ಹೋರಾಟದಲ್ಲಿ ಹಲವರು ಪ್ರಾಣತ್ಯಾಗ ಮಾಡಿದರು. ಈ ದಿನವನ್ನು 1999ರಲ್ಲಿ ಯುನೆಸ್ಕೊ ವಿಶ್ವ ಮಾತೃಭಾಷಾ ದಿನ ಎಂದು ಘೋಷಿಸಿದ್ದು, ಭಾಷಾ ವೈವಿಧ್ಯತೆಯ ರಕ್ಷಣೆಗೆ ಜಾಗತಿಕ ಬದ್ಧತೆಯನ್ನು ಪ್ರತಿಪಾದಿಸುತ್ತದೆ.

ಭಾವಜೀವಿಯಾದ ಮನುಷ್ಯ ಸಾಮಾಜಿಕ ಜೀವಿಯೂ ಹೌದು. ಭಾವನೆಗಳನ್ನು ಹಂಚಿಕೊಳ್ಳಲು ಸಂವಹನ, ಸ್ಪಂದನ ಅಗತ್ಯ. ಇದಕ್ಕೆ ಚಂದದ ಸೇತುವೆಯೇ ಭಾಷೆ. ನಾವು ಎಷ್ಟೇ ಭಾಷೆ ಕಲಿತರೂ ಮೂಲ ಯೋಚನೆಗಳೆಲ್ಲ ರೂಪುಗೊಳ್ಳುವುದು, ಭಾವನೆಗಳು ಹುಟ್ಟಿ ಅವು ಮಾತಿನ ಅನುಭೂತಿಗೆ ನಿಲುಕುವುದೆಲ್ಲ ಮಾತೃಭಾಷೆಯಲ್ಲಿಯೇ. ಹಾಗಾಗಿ ತಾಯ್ನುಡಿ ಎನ್ನುವುದು ಹೃದಯದ ಭಾಷೆ.

ಮಾತೃಭಾಷೆಯೆಂದರೆ 'ತಾಯಿಯ ಭಾಷೆ' ಎನ್ನುವುದರ ಬದಲು ಮಗು ತನ್ನ ಬಾಲ್ಯದಲ್ಲಿ ತಂದೆ-ತಾಯಿ, ಮನೆಯವರಿಂದ ತನ್ನ ಆಪ್ತ ವಲಯದಲ್ಲಿ ರೂಢಿಸಿಕೊಳ್ಳುವ, ತಾನು ವಿಕಸನಗೊಂಡಂತೆ ತನ್ನೊಂದಿಗೆ ಬೆಳೆಯುತ್ತ ಹೋಗುವ ಭಾಷೆ ಅಥವಾ ಮಗು ತನ್ನ ಬಾಲ್ಯಾವಸ್ಥೆಯಲ್ಲಿ ಕಲಿಯುವ ಭಾಷೆ ಎಂದೂ ಅರ್ಥ ಮಾಡಿ ಕೊಳ್ಳಬಹುದು.

ಮಾತೃಭಾಷೆಯೆಂಬುದು ಕೇವಲ ಸಂಪರ್ಕ, ಸಂವಹನದ ಒಂದು ಸಾಧನವಷ್ಟೇ ಅಲ್ಲ. ಮಕ್ಕಳಿಗೆ ಮಾತೃಭಾಷೆ ಎಂದರೆ ತಾಯಿಯ ಹಾಲು ಇದ್ದ ಹಾಗೆ. ಅದು ಮಗುವಿನ ವೈಯಕ್ತಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ನೆಲೆಗಟ್ಟಿನ ಅವಿಭಾಜ್ಯ ಕುರುಹು. ಸಾಮಾಜಿಕ ನಡೆ-ನುಡಿಗಳ ಅಡಿಪಾಯ. ನೈತಿಕ ಹಾಗೂ ಭೌತಿಕ ವಿಕಸನಕ್ಕೆ ನಾಂದಿಯೂ ಆಗಿರುತ್ತದೆ.

ಮಕ್ಕಳ ತೊದಲು ನುಡಿ, ನಡೆ, ಅಭ್ಯಾಸಗಳು, ರೀತಿ-ನೀತಿ-ತತ್ವಗಳು, ನಂಬಿಕೆಗಳು ಮಾತೃ ಭಾಷೆಯಲ್ಲಿಯೇ ರೂಪುಗೊಳ್ಳುತ್ತಾ ಹೋಗುತ್ತವೆ. ಪುಟ್ಟ ಮಗುವೊಂದು ತನ್ನ ಸುತ್ತಲಿನ ಪ್ರಪಂಚವನ್ನು ಗ್ರಹಿಸುವುದು ತಾನು ಕಲಿತ ಮಾತೃಭಾಷೆಯಿಂದಲೇ ಆಗಿದೆ.

ಎಲ್ಲಾ ಭಾಷೆಯೂ ಸುಮಧುರವೇ. ಆದರೆ ಮಾತೃಭಾಷೆಯಲ್ಲಿ ಸ್ಪಷ್ಟವಾಗಿ ಓದು-ಬರೆಹ ಕಲಿತಾಗ ಬೇರೆ ಭಾಷೆಗಳ ಕಲಿಕೆ ಸುಗಮವಾಗುತ್ತದೆ. ಅದರೊಂದಿಗೆ ತಮ್ಮದೇ ಆದ ನೆಲ, ಜಲ, ನಾಡು, ಸಂಸ್ಕೃತಿ, ಆಚಾರ, ವಿಚಾರದ ಬಗ್ಗೆ ಜ್ಞಾನ ಹಾಗೂ ಹೆಮ್ಮೆಯೂ ಮೂಡುವಂತಾಗುತ್ತದೆ. ಆದುದರಿಂದ ಭಾಷೆಗಳು ಎಷ್ಟೇ ಇರಲಿ. ಹೃದಯದ ಭಾಷೆಗೆ ಆದ್ಯತೆ ಸಿಗಲಿ ಅಷ್ಟೇ.

ಇಂದಿನ ಜಾಗತೀಕರಣದ ಹೊಳಪಿನಲ್ಲಿ ಕೆಲವೇ ಭಾಷೆಗಳು ಜಗತ್ತಿನ ವೇದಿಕೆಯಲ್ಲಿ ಪ್ರಾಬಲ್ಯ ಸಾಧಿಸುತ್ತಿರುವಾಗ, ಅನೇಕ ಭಾಷೆಗಳು ನಿಧಾನವಾಗಿ ಮಂಕಾಗುತ್ತಿವೆ. 1900ರ ಭಾಷಾ ಗಣತಿಯ ಪ್ರಕಾರ ಪ್ರಪಂಚದಲ್ಲಿ ಆಗ ಹತ್ತು ಸಾವಿರ ಭಾಷೆಗಳಿದ್ದವು. ಆದರೆ 2000 ದ ವೇಳೆಗೆ 6700 ಭಾಷೆಗಳು ಮಾತ್ರ ಉಳಿದಿದ್ದವು; ಅಂದರೆ 3300 ಭಾಷೆಗಳು ಅಳಿದುಹೋಗಿವೆ. ಆ ಭಾಷೆಗಳಲ್ಲಿ ಮಾತನಾಡುವವರು ಒಬ್ಬರೂ ಇಲ್ಲ!

ಮಾನವನು ಜನಿಸಿದ ಕ್ಷಣದಿಂದಲೇ ಕೇಳುವ ನಾದ ಮಾತೃಭಾಷೆಯದು. ತಾಯಿಯ ಮೃದುವಾದ ಲಾಲಿ, ಮನೆಯವರ ಹೃದಯಸ್ಪರ್ಶಿ ಸಂಭಾಷಣೆ, ಬಾಲ್ಯದ ಆಟ-ಪಾಠ ಇವೆಲ್ಲವೂ ಮಾತೃಭಾಷೆಯ ನಿನಾದದಲ್ಲೇ ಅರಳುತ್ತವೆ. ಮಕ್ಕಳಿಗೆ ಮಾತೃಭಾಷೆಯಲ್ಲಿ ಶಿಕ್ಷಣ ನೀಡಿದಾಗ ಅವರ ಕಲಿಕೆ ಸ್ವಾಭಾವಿಕವಾಗುತ್ತದೆ. ತಮಗೆ ಪರಿಚಿತವಾದ ಭಾಷೆಯಲ್ಲಿ ವಿಷಯವನ್ನು ಅರ್ಥಮಾಡಿಕೊಳ್ಳುವಾಗ ಮಕ್ಕಳಲ್ಲಿ ಆತ್ಮವಿಶ್ವಾಸ ಮತ್ತು ಚಿಂತನಾಶಕ್ತಿ ಬೆಳೆಯುತ್ತದೆ. ಅನೇಕ ಅಧ್ಯಯನಗಳು ಮಾತೃಭಾಷಾ ಶಿಕ್ಷಣವು ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಅತ್ಯುತ್ತಮವೆಂದು ಸಾರಿವೆ.

ಕನ್ನಡದ ನೆಲದಲ್ಲಿ ತುಳು, ಕೊಂಕಣಿ, ಮಲಯಾಳಂ, ತಮಿಳು, ತೆಲುಗು ಹೀಗೆ ನಾನಾ ಮಾತೃಭಾಷೆಗಳನ್ನಾಡುವ ಜನರಿದ್ದರೂ ಹೆಚ್ಚಿನವರ



ಇಂದು 'ವಿಶ್ವ ಮಾತೃಭಾಷಾ ದಿನ'. ಆತ್ಮಗೌರವದಿಂದ ಮಾತನಾಡುವ ಭಾಷೆ ಜೀವಂತವಾಗಿರುತ್ತದೆ. ಬಾಲ್ಯದಿಂದಲೇ ಮಕ್ಕಳಿಗೆ ಮಾತೃಭಾಷೆಯನ್ನು ಕಲಿಸುವುದರಿಂದ ಹಲವಾರು ಲಾಭಗಳೂ ಇವೆ.

ಮಾತೃಭಾಷೆ ಕನ್ನಡ. ಕನ್ನಡದಲ್ಲಿಯೂ ಮೈಸೂರು ಕನ್ನಡ, ಮಂಗಳೂರು ಕನ್ನಡ, ಹುಬ್ಬಳ್ಳಿ ಕನ್ನಡ, ಕುಂದಾಪುರ ಕನ್ನಡ, ಹವ್ಯಕ ಕನ್ನಡ, ಅರೆಗನ್ನಡ ಹೀಗೆ ಭಾಷೆ ಪ್ರತಿ 60 ಕಿ.ಮೀ.ಗೆ ತನ್ನ ಸ್ವರೂಪವನ್ನು ಬದಲಾಯಿಸಿಕೊಂಡಿದೆ.

ಆದರೆ ನಗರೀಕರಣದ ಒತ್ತಡ ಮತ್ತು ಆಂಗ್ಲಭಾಷೆಯ ಆಕರ್ಷಣೆ ನಡುವೆ ಹಲವಾರು ಪೋಷಕರು ಮಕ್ಕಳಿಗೆ ಮಾತೃಭಾಷೆಯನ್ನು ಕಲಿಸಲು ಹಿಂಜರಿಯುತ್ತಿದ್ದಾರೆ. ಜಾಗತಿಕ ಭಾಷೆ ಗಳನ್ನು ಕಲಿಯುವುದು ಅಗತ್ಯವೇ ಆಗಿದ್ದರೂ ಮಾತೃಭಾಷೆಯನ್ನು ಕಡೆಗಣಿಸುವುದು ಜ್ಞಾನಾಭಿವೃದ್ಧಿಯ ಪಥವಲ್ಲ. ಒಟ್ಟಿನಲ್ಲಿ, ಭಾಷೆಗಳ ಮಧ್ಯೆ ಸ್ಪರ್ಧೆಯ ಬದಲು ಕೊಡು-ಕೊಳ್ಳುವಿಕೆ ಇರಬೇಕು.

ಇಂದಿನ ಡಿಜಿಟಲ್ ಯುಗದಲ್ಲಿ ಕನ್ನಡ ಸೇರಿದಂತೆ ಅನೇಕ ಪ್ರಾದೇಶಿಕ ಭಾಷೆಗಳು ಹೊಸ ಸವಾಲುಗಳನ್ನು ಎದುರಿಸುತ್ತಿವೆ. ಸಾಮಾಜಿಕ ಜಾಲತಾಣಗಳಲ್ಲಿ ಆಂಗ್ಲಭಾಷೆಯ ಪ್ರಾಬಲ್ಯ, ನಗರ ಜೀವನದಲ್ಲಿ ಮಿಶ್ರಭಾಷೆಯ ಬಳಕೆ – ಇವು ಭಾಷೆಯ ಶುದ್ಧತೆ ಮತ್ತು ಬಳಕೆಗೆ ಸವಾಲು. ಆದರೂ ತಂತ್ರಜ್ಞಾನವನ್ನು ಸದುಪಯೋಗಪಡಿಸಿಕೊಂಡರೆ ಭಾಷೆಯ ಪುನರುಜ್ಜೀವನ ಸಾಧ್ಯ.

ಇಂಟರ್ನೆಟ್ ಮತ್ತು ಸಾಮಾಜಿಕ ಮಾಧ್ಯಮಗಳು ಭಾಷೆಗಳಿಗೆ ಹೊಸ ವೇದಿಕೆಯನ್ನು ಒದಗಿಸಿವೆ. ಬ್ಲಾಗ್‌ಗಳು, ಇ-ಪುಸ್ತಕಗಳು, ಪಾಡ್ ಕಾಸ್ಟ್‌ಗಳು, ಯೂಟ್ಯೂಬ್ ಚಾನೆಲ್‌ಗಳು ಸ್ಥಳೀಯ ಭಾಷೆಗಳಲ್ಲಿ ವಿಷಯ ಸೃಷ್ಟಿಗೆ ಅವಕಾಶವನ್ನು ಒದಗಿಸುತ್ತಿವೆ. ಆದರೆ ಡಿಜಿಟಲ್ ಜಗತ್ತಿನಲ್ಲಿ ಕೆಲವು ಭಾಷೆಗಳ ಏಕಾಧಿಕಾರವು ಇತರೇ ಭಾಷೆಗಳ ಬಳಕೆಯನ್ನು ಕುಗ್ಗಿಸುತ್ತಿದೆ. ಈ ಸವಾಲನ್ನು ಎದುರಿಸಲು ಸರ್ಕಾರಗಳು, ಶಿಕ್ಷಣ ಸಂಸ್ಥೆಗಳು ಮತ್ತು ಸಮಾಜ ಒಟ್ಟಾಗಿ ಕೆಲಸ ಮಾಡಬೇಕು. ಭಾಷೆಯ ಡಿಜಿಟಲೀಕರಣ, ಶಬ್ದಕೋಶ ನಿರ್ಮಾಣ, ಆನ್‌ಲೈನ್ ಪಾಠಗಳು ಈ ಕಾಲದ ಅವಶ್ಯಕತೆಗಳು.

ವಿಶ್ವ ಮಾತೃಭಾಷಾ ದಿನವನ್ನು ಆಚರಿಸುವುದು, ಅದಕ್ಕಾಗಿ ಒಂದು ದಿನದ ಕಾರ್ಯಕ್ರಮಗಳು, ಭಾಷಣಗಳು, ಸಂಭ್ರಮಗಳಿಗಿಂತ ಮುಖ್ಯವಾದುದು ನಿತ್ಯ ಜೀವನದಲ್ಲಿ ಮಾತೃಭಾಷೆಯ ಬಳಕೆ. ಮನೆಯಲ್ಲಿ ಮಕ್ಕಳೊಂದಿಗೆ ಮಾತೃಭಾಷೆಯಲ್ಲಿ ಮಾತನಾಡುವುದು, ಸ್ಥಳೀಯ ಸಾಹಿತ್ಯವನ್ನು ಓದುವುದು, ಭಾಷೆಯ ಶುದ್ಧತೆಗೆ ಒತ್ತು ನೀಡುವುದೇ ನಿಜವಾದ ಗೌರವ.

ಭಾಷೆಯ ಪ್ರಗತಿಗೆ ಸರ್ಕಾರದ ನೀತಿಗಳು ಮಾತ್ರ ಸಾಲದು; ಜನರ ಮನೋಭಾವವೂ ಬದಲಾಗಬೇಕು. ಆತ್ಮಗೌರವದಿಂದ ಮಾತನಾಡುವ ಭಾಷೆ ಜೀವಂತವಾಗಿರುತ್ತದೆ. ಬಾಲ್ಯದಿಂದಲೇ ಮಕ್ಕಳಿಗೆ ಮಾತೃಭಾಷೆಯನ್ನು ಕಲಿಸುವುದರಿಂದ ಹಲವಾರು ಲಾಭಗಳೂ ಇವೆ ಎಂದು ಸಂಶೋಧನೆಗಳು ತೋರಿಸಿವೆ. ನಾವು ನಮ್ಮ ಮಾತೃಭಾಷೆಯನ್ನು ಉಳಿಸಿಕೊಂಡರೆ ನಮ್ಮ ಸಂಸ್ಕೃತಿ, ಇತಿಹಾಸ ಉಳಿಯುತ್ತದೆ.

ಜಾಗತಿಕ ಭಾಷೆ ಎನಿಸಿಕೊಂಡ ಇಂಗ್ಲಿಷ್‌ನೆಡೆಗಿನ ವ್ಯಾಮೋಹದಿಂದ ಮಾತೃಭಾಷೆಯನ್ನು ಸಮರ್ಪಕವಾಗಿ ಕಲಿಯುವ ವಾತಾವರಣವೇ ರೂಪುಗೊಳ್ಳುತ್ತಿಲ್ಲ. ಹೀಗಿರುವಾಗ ಮಕ್ಕಳಿಗೆ ಆರಂಭಿಕ ಹಂತದಲ್ಲಿಯೇ ಮಾತೃಭಾಷೆಯನ್ನು ಕಲಿಸೋಣ. ಶಾಲೆಯಲ್ಲಿ ಯಾವ ಮಾಧ್ಯಮದಲ್ಲಿ ಕಲಿತರೂ ಮನೆಯಲ್ಲಿ ಮಾತೃಭಾಷೆ ಬಳಸೋಣ. ಮಾತೃಭಾಷೆಯ ಜೊತೆಗೆ ಬೇರೆ ಭಾಷೆಗಳನ್ನು ಕಲಿಸಿದರೆ ಎರಡೂ ಭಾಷೆಗಳ ಮೇಲೆ ಹಿಡಿತ ಸಾಧಿಸಬಹುದು. ಜಾಗತಿಕವಾಗಿ ಯಾವುದೇ ಭಾಷೆ ಮನ್ನಣೆ ಗಳಿಸಿರಲಿ ಮಾತೃಭಾಷೆಯನ್ನು ಕಲಿಯೋಣ. ಮಾತೃಭಾಷೆ ಬಗ್ಗೆ ಅಭಿಮಾನ ವನ್ನು ಹೊಂದೋಣ. ಆ ಅಭಿಮಾನವೇ ಆತ್ಮವಿಶ್ವಾಸವಾಗಿ ರೂಪುಗೊಳ್ಳುತ್ತದೆ. ಇದು ಸಮಗ್ರ ವ್ಯಕ್ತಿತ್ವ ವಿಕಸನಕ್ಕೂ ಕಾರಣವಾಗುತ್ತದೆ.

ಕಾಮ ಮತ್ತು ಅಧ್ಯಾತ್ಮ

ನಾವು ಕಾಮದೊಂದಿಗೆ ಸತ್ಯ, ಪಾರದರ್ಶಕತೆ ಮತ್ತು ಜ್ಞಾನವನ್ನು ಜೋಡಿಸಬೇಕು.

ಒಳನೋಟ

ಹೆ.ಬಾ. ಮಲ್ಯ



'ಕಾಮವನ್ನು ಅಧ್ಯಾತ್ಮ ದೃಷ್ಟಿಯಿಂದ ಅನುಭವಿಸಿ, ಅದನ್ನು ಉದಾತ್ತ ದೃಷ್ಟಿಯಿಂದ ನೋಡಿ, ಇಲ್ಲವಾದರೆ ಅದು ಮಾನವ ಸಮಾಜವನ್ನು ವಿನಾಶದತ್ತ ಕೊಂಡೊಯ್ಯುತ್ತದೆ'- ಇದು ಯೋಗ ಗುರು ಬಾಬಾ ರಾಮದೇವ್ ಅವರ ಸಂದೇಶ. ಅವರ ಹಿಂದಿನ ಒಂದು ಭಾಷಣ ಕಣ್ಣಿಗೆ ಬಿತ್ತು. ಇಂಡಿಯಾ ಟುಡೇ ನಿಯತಕಾಲಿಕ ಸಾಪ್ತಾಹಿಕ ಪತ್ರಿಕೆ ಏರ್ಪಡಿಸಿದ "ಹೊಸದಶಕ-ಮಹಾನ್ ನಿರೀಕ್ಷೆಗಳು (New Decade- Great Expectations)" ಎಂಬ ವಿಚಾರ ಗೋಷ್ಠಿಯಲ್ಲಿ ಅವರು ಲೈಂಗಿಕತೆ ಮತ್ತು ಅಧ್ಯಾತ್ಮ ಎಂಬ ವಿಷಯದ ಬಗ್ಗೆ ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಪರಾಂಬರಿಸುವುದು ಸಾಮಾಜಿಕ ಸ್ವಾಸ್ಥ್ಯದ ದೃಷ್ಟಿಯಿಂದ ಸೂಕ್ತ ಎಂದೆನಿಸುತ್ತದೆ.

ಹಿಂದು ಧರ್ಮದಲ್ಲಿ ಕಾಮಕ್ಕೆ ಸೂಕ್ತ ಸ್ಥಾನ ನೀಡಲಾಗಿದೆ. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳಲ್ಲಿ ಕಾಮಕ್ಕೆ ಯೋಗ್ಯ ಸ್ಥಾನ ನೀಡಲಾಗಿದೆ. ಅರ್ಥ, ಕಾಮಗಳು ಮನುಷ್ಯನ ಸಹಜ ಅಪೇಕ್ಷೆಗಳು. ಆದರೆ ಅವುಗಳು ಹುಚ್ಚುಹೊಳೆಯಂತೆ ಕೊಚ್ಚಿಕೊಂಡು ಹೋಗದೆ ಧರ್ಮ ಮತ್ತು ಮೋಕ್ಷಗಳೆಂಬ ಎರಡು ದಂಡೆಗಳ ನಡುವೆ ಸಹಜವಾಗಿ ಹರಿದಾಗಲೇ ಮಾನವನ ವ್ಯಕ್ತಿಗತ ಹಾಗೂ ಸಾಮಾಜಿಕ ಬಾಳು ಹಸನಾಗುತ್ತದೆ ಎಂಬುದು ಅವರ ಸಂದೇಶದ ಸಾರಾಂಶ. ಅವರ ಅಭಿಪ್ರಾಯಗಳನ್ನು ಅವರ ಮಾತುಗಳಲ್ಲೇ ಕೇಳಿದರೆ, ಓದಿದರೆ ಚೆನ್ನ.

"ಆರೋಗ್ಯ ಹಾಗೂ ಅಧ್ಯಾತ್ಮದ ಮೇಲೆ ಮಾತನಾಡುವಂತೆ ನನಗೆ ಸೂಚಿಸಬಹುದೆಂದುಕೊಂಡರೆ, ಕಾಮ ಹಾಗೂ ಅಧ್ಯಾತ್ಮದ ಮೇಲೆ ಮಾತನಾಡುವಂತೆ ಕೇಳಿಕೊಂಡಿದ್ದಾರೆ. ಬಾಬಾ ಓರ್ವ ವಿವಾದಾಸ್ಪದ ವ್ಯಕ್ತಿ ಎಂದು ಕೆಲವರು ಹೇಳುತ್ತಿರುತ್ತಾರೆ. ಆದರೆ ವಿವಾದಾಸ್ಪದ ವಿಷಯಗಳನ್ನೇ ಚರ್ಚೆಗಾಗಿ ನನ್ನ ಮುಂದಿಡುತ್ತಾರೆ.

ಸರಳವಾಗಿ ಹೇಳುವುದಾದರೆ ಸೃಷ್ಟಿ ಕಾಮದ ಪರಿಣಾಮ. ಪುರುಷ-ಪ್ರಕೃತಿಯ ಸಂಯೋಗದಿಂದ ಸೃಷ್ಟಿ. ನಾವೆಲ್ಲರೂ ಕಾಮದ ಫಲವಾಗಿ ಜನಿಸಿದ ಶಿಶುಗಳೇ. ನಮ್ಮಲ್ಲಿನ ಕಾಮವಾಸನೆಯನ್ನು ದೈವತ್ವಕ್ಕೇರಿಸಬೇಕು. ಕಾಮವಾಸನೆಯನ್ನು ಅಧ್ಯಾತ್ಮವಾಗಿ ಉದಾತ್ತೀಕರಿಸಬೇಕು. ಇಲ್ಲವಾದರೆ ಅದು ಅನಾಹುತಕಾರಿಯಾಗುವ ಸಂಭವವಿದೆ. ಈ ಜೀವನ ಹಾಗೂ ಜಗತ್ತು ದೃಷ್ಟಿ, ವಾಕ್, ಕೈ, ಕಾಲುಗಳು, ಮನಸ್ಸು ಇವೇ ಮುಂತಾದ ನಮ್ಮ ಇಂದ್ರಿಯಗಳು ಮಾಡುವ ಕರ್ಮಗಳ ಪರಿಣಾಮವಾಗಿದೆ. 'ಉಪಸ್ಥಿ' (ಜನನೇಂದ್ರಿಯ) ಇವುಗಳಲ್ಲೊಂದು. ಇದರ ನಿಯಂತ್ರಣವನ್ನೇ ಬ್ರಹ್ಮಚರ್ಯ ಎನ್ನುತ್ತಾರೆ. ಈ ಇಂದ್ರಿಯದ ಯೋಗ್ಯ ಉಪಯೋಗವೇ ಕಾಮ ಅಥವಾ ಸೆಕ್ಸ್. ನಮ್ಮ ಯಾವುದೇ ಇಂದ್ರಿಯಗಳು ಹಾಗೂ ಅಂಗಗಳು ನಿಷ್ಕ್ರಿಯ ಅಥವಾ ನಿರುಪಯೋಗಿ ಅಲ್ಲ. ಇಂದು ಕಾಮ ಅಥವಾ ಸೆಕ್ಸ್ ಒಂದು ವಿವಾದಕ್ಕೊಳಪಟ್ಟ ವಿಷಯವಾಗಿದೆ. ಹಾಗೆ ನೋಡಿದರೆ ಕಾಮ ವಿವಾದಾಸ್ಪದ ವಿಷಯವೇ ಅಲ್ಲ. ಅದನ್ನು ನೋಡುವ ದೃಷ್ಟಿ ಸರಿಯಾಗಿದ್ದರೆ, ಶುದ್ಧವಾಗಿದ್ದರೆ ಯಾವ ಸಮಸ್ಯೆಯೂ ಇಲ್ಲ. ಕಾಮಕ್ಕೆ ಅದರದೇ ಆದ ಮಿತಿಗಳಿವೆ ಹಾಗೂ ಅದರದೇ ಆದ ಘನತೆಯೂ ಇದೆ. ಕೆಲವರು ನನ್ನ ಬಾಯಿಯಿಂದ ಸೆಕ್ಸ್ ಎಬ ಪದವನ್ನು ಕೇಳಲಿಚ್ಛಿಸುವುದಿಲ್ಲವಾದ್ದರಿಂದ ನಾನು ಕಾಮ ಎಂಬ ಪದವನ್ನು ಬಳಸಲು ಇಚ್ಛಿಸುವೆ. ಜನರಲ್ಲಿನ ಈ ರೀತಿಯ ಭಾವನೆ ಕೂಡ ನಮ್ಮ ದೃಷ್ಟಿಕೋನದ ಪರಿಣಾಮವೇ ಆಗಿದೆ.

ಕಾಮಕ್ಕೆ ತಕ್ಕ ವಯಸ್ಸು ಎಂಬುದಿದೆ. ಮಿಕ್ಕೆಲ್ಲ ಇಂದ್ರಿಯಗಳೂ ಬಾಲ್ಯದಿಂದ ವೃದ್ಧಾಪ್ಯದವರೆಗೆ ಸಕ್ರಿಯವಾಗಿರುತ್ತವೆ. ಆದರೆ 25ನೇ ವಯಸ್ಸಿಗಿಂತ ಮುಂಚೆ ಕಾಮ ಸಹಜ ಎಂದೆನಿಸುವುದಿಲ್ಲ. 5 ವರ್ಷ ವಯಸ್ಸಿನ ಒಂದು ಮಗುವನ್ನು ನೀವು ಲೈಂಗಿಕ ಚಟುವಟಿಕೆಯಲ್ಲಿ ತೊಡಗಿಸಲು ಪ್ರಯತ್ನಿಸಿದರೆ ಅದು ಪ್ರಕೃತಿ ವಿರುದ್ಧವಾದ ಕ್ರಿಯೆಯಾಗುತ್ತದೆ. ಅದೇ ನೀವು ವಯಸ್ಸಿಗೆ ಬಂದ ಹುಡುಗಿಯರು ಬಸುರಿಯಾಗುವುದನ್ನು ನೋಡಬಯಸಿದರೆ ನನ್ನ ಅಭ್ಯಂತರವೇನಿಲ್ಲ. ಅಷ್ಟು ಹೊತ್ತಿಗೆ ಅದಕ್ಕೆ ಕಾಮದ ಬಗ್ಗೆ ತಿಳಿವಳಿಕೆ ಬಂದಿರುತ್ತದೆ.

ನಾವು ಕಾಮದೊಂದಿಗೆ ಸತ್ಯ, ಪಾರದರ್ಶಕತೆ ಮತ್ತು ಜ್ಞಾನವನ್ನು ಜೋಡಿಸಬೇಕು. ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ, ಅಂದರೆ ಧರ್ಮ, ಅರ್ಥ, ಕಾಮ ಮೋಕ್ಷಗಳಲ್ಲಿ ಪ್ರಾಮಾಣಿಕತೆ ಅತಿ ಅಗತ್ಯ. ಅರ್ಥಶಾಸ್ತ್ರದ ಬಗ್ಗೆ ಅಜ್ಞಾನವಿದ್ದಾಗ ಅಲ್ಲಿ ಭ್ರಷ್ಟಾಚಾರ, ಬಡತನ ಹಾಗೂ ಅಭಾವ ಉಂಟಾಗುತ್ತದೆ. ಅದೇ ರೀತಿ ಲೈಂಗಿಕತೆಯಲ್ಲಿ ಜ್ಞಾನ ಮತ್ತು ಪ್ರಾಮಾಣಿಕತೆ ಇಲ್ಲದಾಗ ದುರಾಚಾರ ಹಾಗೂ ವ್ಯಭಿಚಾರಗಳು ಉತ್ಪನ್ನವಾಗುತ್ತವೆ. ಪರಿಣಾಮ ಏಡ್ಸ್ ಮತ್ತು ಎಚ್.ಐ.ವಿ. ತನ್ನ ಪಿತೃತ್ವವನ್ನು ಅಂದರೆ ತಂದೆಯನ್ನು ಗುರುತಿಸಲು ಡಿ.ಎನ್.ಎ. ಪರೀಕ್ಷೆ ಮಾಡುವಂಥ ಸನ್ನಿವೇಶ ನಿರ್ಮಾಣವಾಗುವುದನ್ನು ನೀವು ನೋಡಬಯಸುತ್ತೀರಾ? ಆಗ ಅದನ್ನು ನಾಗರಿಕ ಅಥವಾ ಸಭ್ಯ ಸಮಾಜ ಎನ್ನಲಾಗದು.

ಕಾಮದಲ್ಲಿ ಪಾರದರ್ಶಕತೆ ಇಲ್ಲದಿದ್ದರೆ ಮಕ್ಕಳ ಮುಂದೆ ಯಾವ ಆದರ್ಶವೂ ಇರಲಾರದು. ಜನಸಂಖ್ಯಾ ವೃದ್ಧಿ ನಿಯಂತ್ರಣ ತಪ್ಪಬಹುದು ಅಥವಾ ಭ್ರೂಣ ಹತ್ಯೆ ಹೆಚ್ಚಾಗಬಹುದು. ವಿವಾಹಿತ ದಂಪತಿಗಳು ತಾವು ಲೈಂಗಿಕ ಸಮಸ್ಯೆಗಳಿಂದ ಬಳಲುತ್ತಿದ್ದೇವೆಂದು ಹೇಳಿದಾಗ ನಾನು ಅವರಿಗೆ, ಕಾಮದಲ್ಲಿ ಆನಂದ ಕಾಣಬೇಕೆಂದಿದ್ದರೆ ಯೋಗ ಅಭ್ಯಾಸ ಮಾಡಿ ಎನ್ನುತ್ತೇನೆ. ಕಪಾಲಭಾತಿ ಉತ್ತಮ. ಯೋಗರಹಿತ ಭೋಗದಿಂದ ಅನಾರೋಗ್ಯ ಹಾಗೂ ದೌರ್ಬಲ್ಯ ಕಟ್ಟಿಟ್ಟದ್ದು. ಸಂತಾನಹೀನತೆ, ಲೈಂಗಿಕ ಸಮಸ್ಯೆಗಳಿಗೆ ಯೋಗ ಪರಿಹಾರ ನೀಡಬಹುದು.

ಕತ್ತಲೆಕೂಪದಿಂದ ಬೆಳಕಿನ ಶಿಖರಕ್ಕೆ, ಪಶುತ್ವದಿಂದ ದೈವತ್ವಕ್ಕೆ ನಮ್ಮ ಅಂತಃಪ್ರಜ್ಞೆಯನ್ನು ಏರಿಸುವುದೇ ಅಧ್ಯಾತ್ಮದ ಪ್ರಮುಖ ಉದ್ದೇಶ. ಅನಿರ್ಬಂಧಿತ ಲೈಂಗಿಕತೆ ಕ್ರಮೇಣ ಸಾವಿನತ್ತ ಮಾನವನನ್ನು ತಳ್ಳುತ್ತಿರುತ್ತದೆ.

ಬಾಬಾ ಅಧ್ಯಾತ್ಮದ ಬಗ್ಗೆ ದೊಡ್ಡದಾಗಿ ಮಾತನಾಡುತ್ತಾರೆ, ಆದರೆ ಅವರು ವಿಶಾಲವಾದ ಔದ್ಯಮಿಕ ಸಾಮ್ರಾಜ್ಯವನ್ನು ಕಟ್ಟಿದ್ದಾರೆ ಎಂದು ಕೆಲವರು ಹೇಳುವುದುಂಟು. ಅಂಥವರಿಗೆ ನಾನು ಹೇಳುತ್ತೇನೆ – "ನಿಮ್ಮ ಬಳಿ ನಾನು ಭಿಕ್ಷೆ ಬೇಡುತ್ತಿಲ್ಲ ಎಂಬುದೇ ನಿಮ್ಮ ಈ ಅಸಂತೋಷಕ್ಕೆ ಕಾರಣವಾಗಿದೆ"

ಬಡತನವೇ ಅಧ್ಯಾತ್ಮ ಎಂಬ ನಿಲುವಿಗೆ ಅಂಟಿಕೊಂಡವ ನಾನಲ್ಲ – ನಾನು ಸತ್ಯ ಹಾಗೂ ಪ್ರಾಮಾಣಿಕ ಜೀವನ ನಡೆಸಬೇಕು ಮತ್ತು ತನ್ಮೂಲಕ ಮಾನಸಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಬೆಳೆಯಬೇಕೆಂದು ಬಯಸುತ್ತೇನೆ. ಇದು ನಮ್ಮ ಸಂಸ್ಕೃತಿ ಹಾಗೂ ಸಂಪ್ರದಾಯಕ್ಕೆ ಅನುಗುಣವಾಗಿಯೇ ಇದೆ. ಎಲ್ಲ ವಿಧದಿಂದ ಜಗತ್ತನ್ನು ಸಂಪತ್ತು ಹಾಗೂ ಸಮೃದ್ಧಿಯತ್ತ ಕೊಂಡೊಯ್ಯುವ ಅತ್ಯುತ್ತಮ ದಾರಿ ಇದು. ನಾವು ಲೈಂಗಿಕತೆ ಬಗ್ಗೆ ಮುಕ್ತವಾಗಿ ಮಾತನಾಡುವ ಔಚಿತ್ಯದ ಬಗ್ಗೆ ಅನೇಕರು ಅಚ್ಚರಿ ವ್ಯಕ್ತಪಡಿಸುತ್ತಾರೆ. ನನ್ನದು ಓರ್ವ ವೈದ್ಯನ ಕೆಲಸದಂತೆ ಎಂದು ನಾನು ಅವರಿಗೆ ಹೇಳುತ್ತೇನೆ. ಕ್ಯಾನ್ಸರ್‌ಪೀಡಿತ ರೋಗಿಗೆ ಚಿಕಿತ್ಸೆ ನೀಡುವ ವೈದ್ಯ ಸ್ವತಃ ತಾನು ಕ್ಯಾನ್ಸರ್‌ಪೀಡಿತ ರೋಗಿ ಯಾಗಿರಬೇಕೆಂದೇನೂ ಇಲ್ಲ. ಕಾಮ ಮತ್ತು ಅಧ್ಯಾತ್ಮಗಳೆರಡೂ ನಮ್ಮ ಅಂತರಾತ್ಮದ ಭಾಗಗಳೇ ಆಗಿವೆ. ನಾವು ಜೀವನದ ಮಿಕ್ಕೆಲ್ಲ ಸಂಗತಿಗಳನ್ನು ಮರೆತು ಕೇವಲ ಲೈಂಗಿಕತೆಯಲ್ಲೇ ಮುಳುಗಿದ್ದರೆ, ನಮ್ಮ ಜೀವನ ಕ್ರೌರ್ಯ ಹಾಗೂ ದುಃಖದಲ್ಲಿ ಮುಳುಗುತ್ತದೆ –ಅತಿವಾದ ಯಾವಾಗಲೂ ವರ್ಜ್ಯ.

ಈಗ ಸಲಿಂಗ ಕಾಮದತ್ತ ದೃಷ್ಟಿ ಹೊರಳಿಸುವ. ಮನುಷ್ಯ ಸಹಜವಾಗಿ ಬಾಯಿಯಿಂದ ತಿನ್ನುತ್ತಾನೆ, ಉಣ್ಣುತ್ತಾನೆ. ಆದರೆ ಯಾರಾದರೂ ಆಹಾರವನ್ನು ಗುದದ್ವಾರದಿಂದ ಸ್ವೀಕರಿಸಲು ಬಯಸಿದಲ್ಲಿ ನನಗೇನೂ ಸಮಸ್ಯೆ ಇಲ್ಲ. ಆದರೆ ಇಂಥ ವಿಕೃತ ಮನಸ್ಸಿನ ಕೆಲವರು, ವಿದ್ಯಾವಂತ ಬುದ್ಧಿಗೇಡಿಗಳು ಸಮಾಜದಲ್ಲಿದ್ದಾರೆ. ಇಂಥ ಕಟು ಹಾಗೂ ಅಸಭ್ಯ ಭಾಷಾಪ್ರಯೋಗಕ್ಕಾಗಿ ಕ್ಷಮಿಸಿ. ಓರ್ವ ಆರೋಗ್ಯವಂತ ವ್ಯಕ್ತಿ ಯಾವಾಗಲೂ ಬಾಯಿಂದಲೇ ಆಹಾರ ಸ್ವೀಕರಿಸುತ್ತಾನೆ. ನಾನು ಈ ವಿಷಯದ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೇನೆಂದು ನನಗನ್ನಿಸುತ್ತದೆ.

ಈಗ ಮುಕ್ತ ಲೈಂಗಿಕತೆ ಬಗ್ಗೆ ಜಗತ್ತಿನಲ್ಲಿ ಯಾವುದೂ ಮುಕ್ತ ಅಥವಾ ಸ್ವಚ್ಛಂದ ಎಂಬುದಿಲ್ಲ. ಸೂರ್ಯನಾಗಲೀ, ಭೂಮಿಯಾಗಲೀ, ಎಲ್ಲವೂ ಕೆಲವು ನಿಯಮಗಳಿಗನುಸಾರವಾಗಿಯೇ ನಡೆಯುವುದು ಅನಿವಾರ್ಯ. ಕಿಂಚಿತ್ತು ಕ್ರಮ ತಪ್ಪಿ ಮುಕ್ತವಾಗಿ ತಮಗಿಷ್ಟ ಬಂದಂತೆ ಅವು ಚಲಿಸಿದರೆ ಜಗತ್ತು ಉಳಿಯಲಾರದು. ಅದೇ ರೀತಿ ಮುಕ್ತ ಲೈಂಗಿಕತೆ ಕೂಡಾ. ಪ್ರತಿಯೊಬ್ಬರೂ ಲೈಂಗಿಕತೆ ಅಥವಾ ಕಾಮದ ವಿಷಯದಲ್ಲಿ ಕೆಲವು ನಿಯಮಗಳನ್ನು, ಸ್ವಯಂ ನಿರ್ಬಂಧಗಳನ್ನು ಪಾಲಿಸಬೇಕಾಗುತ್ತದೆ. ಘನತೆಯನ್ನು ಕಾಯ್ದುಕೊಳ್ಳ ಬೇಕಾಗುತ್ತದೆ. ಅದು ಸುದ್ದಿ ಮಾಧ್ಯಮಗಳಾಗಲೀ, ಬಾಬಾ ಆಗಲೀ, ಬಾಬು ಆಗಲಿ, ಪ್ರತಿಯೊಬ್ಬರೂ ನಿಯಮ, ಘನತೆಗಳನ್ನು ಪಾಲಿಸಬೇಕಾಗುತ್ತದೆ. ಒಂದು ಆರೋಗ್ಯಕರ ಸಾಮಾಜಿಕ ವ್ಯವಸ್ಥೆಯ ದೃಷ್ಟಿಯಿಂದ ಇದು ಅನಿವಾರ್ಯವಾಗಿದೆ".

ಇದು ಬಾಬಾ ರಾಮದೇವ್ ಅವರ ಭಾಷಣದ ಸಾರಾಂಶ. ಸ್ವಾಮಿ ವಿವೇಕಾನಂದರು ಅಮೆರಿಕಾದಲ್ಲಿದ್ದಾಗ ಒಮ್ಮೆ ಓರ್ವ ಯುವತಿ ಅವರಿಂದ ಆಕರ್ಷಿತಗೊಂಡು ಹೇಳಿದಳಂತೆ. "ನನಗೆ ನಿಮ್ಮಿಂದ ನಿಮ್ಮಂಥವನೇ ಓರ್ವ ಮಗನನ್ನು ಪಡೆಯಬೇಕೆಂಬ ಆಸೆ ಇದೆ". ಆಕೆಯ ಇಂಗಿತ ಅರ್ಥ ಮಾಡಿಕೊಂಡ ವಿವೇಕಾನಂದರು ತಕ್ಷಣ ಬಗ್ಗಿ ನಮಸ್ಕಾರ ಮಾಡಿ ನನ್ನನ್ನೇ ನಿಮ್ಮ ಮಗನೆಂದು ತಿಳಿಯಿರಿ" ಎಂದರಂತೆ. ಅಧ್ಯಾತ್ಮದಲ್ಲಿ ಬ್ರಹ್ಮಚರ್ಯಕ್ಕೆ ಬಹಳ ಮಹತ್ವವಿದೆ. ಯಮನಿಯಮಗಳಲ್ಲಿ ಬ್ರಹ್ಮಚರ್ಯ ಅತ್ಯಂತ ಪ್ರಮುಖವಾದದ್ದು. ಸಾಧಕನಿಗೆ ಇದು ಅತೀ ಅಗತ್ಯ. ಏಕಾಂತದಲ್ಲಿದ್ದಾಗಲೂ, ಯಾರೂ ನೋಡದಿದ್ದಾಗಲೂ ಓರ್ವ ವ್ಯಕ್ತಿ ಹೇಗೆ ವರ್ತಿಸುತ್ತಾನೆ ಎಂಬುದು ಆತನ ನಿಜವಾದ ಚಾರಿತ್ರ್ಯವನ್ನು ತೋರಿಸುತ್ತದೆ. ಪ್ರಾಮಾಣಿಕತೆ, ಪಾರದರ್ಶಕತೆ ಅತಿ ಮುಖ್ಯ. ಸನ್ಯಾಸಿಗಳು, ಅನ್ಯಾನ್ಯ ಸಂಘ-ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುವ ಪೂರ್ಣಾವಧಿ ಕಾರ್ಯಕರ್ತರಿಗೆ ಅಧ್ಯಾತ್ಮ ಸಾಧನೆ, ಬ್ರಹ್ಮಚರ್ಯ ಪಾಲನೆ ಅತೀ ಅಗತ್ಯ. ಕಾಮ ಎಂಬುದು ದೇವರು ಮನುಷ್ಯನಲ್ಲಿ ಹಾಕಿದ್ದು. ಸಂತತಿ ಮುಂದುವರಿಯಲು ಇರುವ ಒಂದು ಸಾಧನ ಅಷ್ಟೆ. ಅದರಿಂದ ದೊರಕುವ ತೃಪ್ತಿ ಬೈ ಪ್ರಾಡಕ್ಟ್ ಅಷ್ಟೆ. ಮನುಷ್ಯರು ಪಾಪದಿಂದ ಹುಟ್ಟಿದ್ದಲ್ಲ. ಅದಕ್ಕೆ ಪವಿತ್ರತೆ ನೀಡಲಾಗಿದೆ. ನಾವು ಪಾಪಿಗಳಲ್ಲ, ಅಮೃತ ಪುತ್ರರು. ಹೀಗೆ ಕಾಮಕ್ಕೂ ಅಧ್ಯಾತ್ಮಕ್ಕೂ ಹತ್ತಿರದ ನಂಟು ಇದೆ.

ಕಿರುಸುದ್ದಿ

ಗೊಂಬೆಗಳ, ಆಟಿಕೆಗಳ ವೈವಿಧ್ಯಮಯ ಪ್ರದರ್ಶನ

ಕುಂದಾಪುರ: ಕುಂದಾಪುರದ ಶ್ರೀ ವೆಂಕಟರಮಣ ಆಂಗ್ಲ ಮಾಧ್ಯಮ ಶಾಲೆಯ ಪೂರ್ವ ಪ್ರಾಥಮಿಕ ವಿಭಾಗದ ಗೊಂಬೆಗಳ ಮತ್ತು ಆಟಿಕೆಗಳ ವೈವಿಧ್ಯಮಯ ಪ್ರದರ್ಶನವನ್ನು ಸಂಸ್ಥೆಯ ಕಾರ್ಯದರ್ಶಿ ಕೆ. ರಾಧಾಕೃಷ್ಣ ಶೆಣೈ ಉದ್ಘಾಟಿಸಿದರು. ಪ್ರೌಢಶಾಲಾ ಮುಖ್ಯೋಪಾಧ್ಯಾಯ ಕೃಷ್ಣ ಅಡಿಗ, ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯಿನಿ ರೇಷ್ಮಾ ಡಿಸೋಜ ಹಾಗೂ ಪೂರ್ವ ಪ್ರಾಥಮಿಕ ವಿಭಾಗದ ಮುಖ್ಯೋಪಾಧ್ಯಾಯಿನಿ ಪ್ರಮೀಳಾ ಡಿಸೋಜ ಉಪಸ್ಥಿತರಿದ್ದರು. ಶಿಕ್ಷಕಿಯರಾದ ಸುನೀತಾ ಡಿ. ಸ್ವಾಗತಿಸಿ, ದೀಪಾ ಭಟ್ ವಂದಿಸಿದರು. ಸಂಧ್ಯಾ ಶೆಟ್ಟಿ ಕಾರ್ಯಕ್ರಮವನ್ನು ಸಂಯೋಜಿಸಿದರು.

ಕುದ್ರೋಳಿ ತೀರ್ಥಾಟನೆಯಲ್ಲಿ 10 ಸಾವಿರಕ್ಕೂ ಅಧಿಕ ಭಕ್ತರ ಭಾಗಿ ನಿರೀಕ್ಷೆ

ಮಂಗಳೂರು: ಬ್ರಹ್ಮಶ್ರೀ ನಾರಾಯಣ ಗುರುಗಳು ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ನಡೆಸಿದ ಸಾಮಾಜಿಕ ಮತ್ತು ಧಾರ್ಮಿಕ ಕ್ರಾಂತಿಯ ಸ್ಮರಣಾರ್ಥವಾಗಿ ಫೆ. 21ರಂದು ಹಮ್ಮಿಕೊಳ್ಳಲಾಗಿರುವ 'ನಮ್ಮ ನಡಿಗೆ ಶ್ರೀ ಗುರುವಿನೆಡೆಗೆ' ಕುದ್ರೋಳಿ ತೀರ್ಥಾಟನೆಯಲ್ಲಿ ಸುಮಾರು 10 ಸಾವಿರಕ್ಕೂ ಅಧಿಕ ಅನುಯಾಯಿಗಳು ಪಾಲ್ಗೊಳ್ಳುವ ನಿರೀಕ್ಷೆಯಿದೆ. ಶಿವಗಿರಿ ಸೇರಿದಂತೆ ಅವಿಭಜಿತ ದ.ಕ ಜಿಲ್ಲೆಯ ವಿವಿಧ ಮಠಗಳ ಸ್ವಾಮೀಜಿಗಳು, ಕೇಂದ್ರದ ಮಾಜಿ ಸಚಿವ ಬಿ.ಜನಾರ್ದನ ಪೂಜಾರಿ, ವಿವಿಧ ಕ್ಷೇತ್ರದ ನಾಯಕರು ಪಾಲ್ಗೊಳ್ಳಲಿದ್ದಾರೆ. ಬೆಳಗ್ಗೆ 7.30ಕ್ಕೆ ಕುದ್ರೋಳಿ ಕ್ಷೇತ್ರದಲ್ಲಿ ವೈದಿಕರಿಂದ ಭಕ್ತಿಪೂರ್ವಕ ಗುರು ಪ್ರಾರ್ಥನೆ, ಬೆಳಗ್ಗೆ 9ಕ್ಕೆ ಮಂಗಳೂರು ಸೆಂಟ್ರಲ್ ರೈಲ್ವೆ ನಿಲ್ದಾಣದಿಂದ ಯಾತ್ರೆಯ ಸಾಂಕೇತಿಕ ಶುಭಾರಂಭ. 9.30ಕ್ಕೆ ಕುದ್ಮುಲ್ ರಂಗರಾವ್ ಪುರಭವನದಲ್ಲಿ ಶ್ರೀ ಗುರುಗಳ ಅನುಯಾಯಿಗಳ 'ಮಹಾ ಸಂಗಮ', ಬಳಿಕ ಬೆಳಗ್ಗೆ 11.30ಕ್ಕೆ ಶ್ರೀ ಕುದ್ರೋಳಿ ಕ್ಷೇತ್ರಕ್ಕೆ ತೀರ್ಥಾಟನೆ ಆಗಮನ, ಪವಿತ್ರ ಬಿಲ್ವ ಪತ್ರೆ ಅರ್ಚನೆ, ಸ್ವಾಮೀಜಿಗಳ ಆಶೀರ್ವಚನ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಹಿರಿಯ ನಾಗರಿಕರ ವೇದಿಕೆ ಸಭೆ

ಕುಂದಾಪುರ: ಕುಂದಾಪುರ ತಾಲೂಕು ಹಿರಿಯ ನಾಗರಿಕರ ವೇದಿಕೆಯ ಮಾಸಿಕ ಸಭೆ ಕುಂದಾಪುರದ ಶ್ರೀ ಕುಂದೇಶ್ವರ ದೇವಸ್ಥಾನದ ಸಭಾಭವನದಲ್ಲಿ ನಡೆಯಿತು. ಅಧ್ಯಕ್ಷತೆಯನ್ನು ವೇದಿಕೆ ಅಧ್ಯಕ್ಷ ಸಿ. ಎಚ್. ಜಗನ್ನಾಥ ಶೆಟ್ಟಿ ವಹಿಸಿದ್ದರು. ವೇದಿಕೆಯ ಸದಸ್ಯತ್ವ ಸ್ವೀಕರಿಸಿದ ನಾಗೇಶ ಗಾಣಿಗ ಅವರನ್ನು ಸನ್ಮಾನಿಸಿ ಬರಮಾಡಿಕೊಳ್ಳಲಾಯಿತು. ಜೊತೆಯಲ್ಲಿ ತಿಂಗಳಲ್ಲಿ ಜನ್ಮ ದಿನ ಆಚರಿಸಿಕೊಳ್ಳುವ ಸದಸ್ಯರಾದ ಸರ್ವೋತ್ತಮ ಕಿಣಿ ಮತ್ತು ಡಾ.ನಟರಾಜ ಎಂ.ಬಿ. ಅವರಿಗೆ ಶುಭ ಹಾರೈಸಲಾಯಿತು. ಸದಸ್ಯರಾದ ಎ. ಮುತ್ತಯ್ಯ ಶೆಟ್ಟಿ, ದಿನಕರ ಶೆಟ್ಟಿ ಮೊಳಹಳ್ಳಿ, ವಕ್ವಾಡಿ ಭಾಸ್ಕರ್ ಶೆಟ್ಟಿ, ಸಂಜೀವ ಮರಕಾಲ ಮತ್ತು ದಿನೇಶ್ ಶೆಣೈ ಮಾತನಾಡಿದರು. ಸಾವಿತ್ರಿ ಕೆ. ಹೆಗಡೆ ಪ್ರಾರ್ಥಿಸಿದರು. ಕಾರ್ಯದರ್ಶಿ ಬಾಬು ಪೂಜಾರಿ ವರದಿ ವಾಚಿಸಿದರು. ಖಜಾಂಚಿ ಜಯಲಕ್ಷ್ಮೀ ಕೊತ್ವಾಲ್ ಲೆಕ್ಕ ಪತ್ರ ಮಂಡಿಸಿದರು. ವಿನಯಾ ಶೆಣೈ ವಂದಿಸಿದರು. ರಘುವೀರ ಕೆ ನಿರೂಪಿಸಿದರು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಶಿವಶಕ್ತಿ ಫ್ರೆಂಡ್ಸ್ ಹಾಗೂ ಊರ ಹತ್ತು ಸಮಸ್ತರು, ತುಂಬೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ಬಂಟ್ವಾಳ (ತಾ).
2. ಜಯರಾಮ ಜೋಗಿ, 'ಅಕ್ಷಯ ನಿವಾಸ', ದೂಜಲಗುರಿ, ಪಾಂಪೈ ಕಾಲೇಜು ಹಿಂಬದಿ, ಐಕಳ.
3. ಲ। ಪಿ. ಲೋಕನಾಥ್ ಶೆಟ್ಟಿ ಪಜೀರು, ಕಂಬಳಪದವು, ಕೋಣಾಜೆ, ಮಂಗಳೂರು (ತಾ).
4. ಶ್ರೀ ದೇವಿ ಭಜನಾ ಮಂಡಳಿ, ಮೂಡುಶೆಡ್ಡೆ, ಮಂಗಳೂರು (ತಾ).
5. ಶ್ರೀ ಅಶ್ವತ್ಥಕಟ್ಟೆ ಸೇವಾ ಸಮಿತಿ, ಕಂಡೇರಿ, ಕಾಟುಕುಕ್ಕೆ, ಮಂಜೇಶ್ವರ, ಕಾಸರಗೋಡು.
6. ಶ್ರೀ ಪಂಚಲಿಂಗೇಶ್ವರ ದೇವಸ್ಥಾನ, ಕಾಶಿಪಟ್ನ, ವಯಾ ಶಿರ್ತಾಡಿ, ಮೂಡುಬಿದ್ರಿ.
7. ಸಂತೋಷ್ ಶೆಟ್ಟಿ ಮತ್ತು ಹತ್ತು ಸಮಸ್ತರು, ಕಾಂಜಿಲಕೋಡಿ, ಅಡ್ಡೂರು ವಯಾ ಪೊಳಲಿ.

ಶ್ರೀ ಧರ್ಮಸ್ಥಳ ಮೇಳ
ಕೊಪ್ಪ ಕಾಚ್ಗಲ್‌ನಲ್ಲಿ
ಶ್ರೀ ವೀರ ಭದ್ರೇಶ್ವರ ಯಕ್ಷಗಾನ ಬಯಲಾಟ ಸಮಿತಿ

ಶ್ರೀ ಸಾಲಿಗ್ರಾಮ ಮೇಳ
ಕಾರ್ಕಳ ಕುಕ್ಕುಂದೂರು ಗ್ರಾಮ ಪಂಚಾಯತ್ ಮೈದಾನದಲ್ಲಿ

ಶ್ರೀ ಪೆರ್ಡೂರು ಮೇಳ
ಜೋಡುಕಟ್ಟೆಯಲ್ಲಿ - ಬ್ರಹ್ಮಕಪಾಲ, ಕನಕಾಂಗಿ ಕಲ್ಯಾಣ

ಶ್ರೀ ಹನುಮಗಿರಿ ಮೇಳ
ಪೆರ್ಮುದೆ ನೀರಿನ ಟ್ಯಾಂಕ್ ಬಳಿ

ಶ್ರೀ ಪಾವಂಜೆ ಮೇಳ
ಮಂಗಳೂರಿನ ಶ್ರೀ ಮಂಗಳಾದೇವಿ ದೇವಸ್ಥಾನದಲ್ಲಿ
ಶ್ವೇತ ಕುಮಾರ ಚರಿತೆ



ಸಾಸ್ತಾನದ ಗುಂಡ್ಮಿಯ ಟೋಲ್ ಸಮೀಪದ ಶ್ರೀಕಂಬಿಗಾರ ಶ್ರೀ ಬಬ್ಬು ಸ್ವಾಮಿ ಪರಿವಾರ ದೈವಗಳ ದೈವಸ್ಥಾನಕ್ಕೆ ವಿಧಾನಸಭಾಧ್ಯಕ್ಷ ಯು. ಟಿ. ಖಾದರ್ ಭೇಟಿ ನೀಡಿದ್ದು, ಪ್ರಸಾದ ಮತ್ತು ಸ್ಮರಣಿಕೆ ನೀಡಿ ಕ್ಷೇತ್ರದ ಪರವಾಗಿ ಗೌರವಿಸಲಾಯಿತು. ಈ ಸಂದರ್ಭದಲ್ಲಿ ಆಡಳಿತ ಮಂಡಳಿ ಮತ್ತು ನೇಮೋತ್ಸವ ಸಮಿತಿಯ ಅಧ್ಯಕ್ಷರು, ಪದಾಧಿಕಾರಿಗಳು ಹಾಗೂ ಊರ ಹತ್ತು ಸಮಸ್ತರು ಉಪಸ್ಥಿತರಿದ್ದರು.

ಉಬರಡ್ಕ ಕೃಷಿಪತ್ತಿನ ಸಹಕಾರ ಸಂಘದ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಸುಳ್ಯ: ಉಬರಡ್ಕ ಮಿತ್ತೂರು ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಹರಿಪ್ರಸಾದ್ ಪಾನತ್ತಿಲ ಅವಿರೋಧವಾಗಿ ಆಯ್ಕೆಯಾದರೆ, ಉಪಾಧ್ಯಕ್ಷರಾಗಿ ವಿಜಯ ಕುಮಾರ್ ಉಬರಡ್ಕ ಆಯ್ಕೆಯಾಗಿದ್ದಾರೆ.



ಶುಕ್ರವಾರ ಚುನಾವಣಾಕಾರಿ ಸಹಕಾರ ಇಲಾಖೆಯ ಶಿವಲಿಂಗಯ್ಯ ನೇತೃತ್ವದಲ್ಲಿ ಪ್ರಕ್ರಿಯೆಯಲ್ಲಿ ಅಧ್ಯಕ್ಷತೆಗೆ ಹರಿಪ್ರಸಾದ್ ಪಾನತ್ತಿಲ ಹಾಗೂ ಉಪಾಧ್ಯಕ್ಷತೆಗೆ ಪ್ರಭಾಕರ ಅಮ್ಮೆ ನಾಮಪತ್ರ ಸಲ್ಲಿಸುವುದೆಂದು ಪಕ್ಷದೊಳಗೆ ಮಾತುಕತೆ ನಡೆದು ಅದರಂತೆ ಅಧ್ಯಕ್ಷತೆಗೆ ಹರಿಪ್ರಸಾದ್ ನಾಮಪತ್ರ ಸಲ್ಲಿಸಿದರೆ, ಉಪಾಧ್ಯಕ್ಷತೆಗೆ ಪ್ರಭಾಕರ ಅಮ್ಮೆ ಅಧಿಕೃತ ಅಭ್ಯರ್ಥಿಗಳಾಗಿ ನಾಮಪತ್ರ ಸಲ್ಲಿಸಿದರು. ಆದರೆ, ಉಪಾಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿದ್ದ ವಿಜಯ ಕುಮಾರ್ ಉಬರಡ್ಕ ಅವರು ಕೂಡಾ ನಾಮಪತ್ರ ಸಲ್ಲಿಸಿ ಚುನಾವಣಾ ಕಾವು ಹೆಚ್ಚಿಸಿದರು.

ಅಧ್ಯಕ್ಷತೆಗೆ ಒಂದು ನಾಮಪತ್ರ ಸಲ್ಲಿಕೆಯಾದ ಹಿನ್ನಲೆಯಲ್ಲಿ ಹರಿಪ್ರಸಾದ್ ಪಾನತ್ತಿಲ ಅವಿರೋಧವಾಗಿ ಆಯ್ಕೆಯಾದರು. ಉಪಾಧ್ಯಕ್ಷತೆಗೆ ವಿಜಯ ಕುಮಾರ್ ಉಬರಡ್ಕ ಹಾಗೂ ಪ್ರಭಾಕರ ಅಮ್ಮೆ ನಾಮಪತ್ರ ಸಲ್ಲಿಸಿದ ಹಿನ್ನಲೆಯಲ್ಲಿ ಚುನಾವಣೆ ನಡೆಯಿತು. ಒಟ್ಟು 12 ಸದಸ್ಯ ಬಲವಿರುವ ಸಂಘದಲ್ಲಿ ಸಹಕಾರ ಭಾರತಿಯ 9 ಹಾಗೂ ಸಹಕಾರ ಬಳಗದ 3 ಮಂದಿ ನಿರ್ದೇಶಕರಿದ್ದು ಮತದಾನದಿಂದ ಮಾಜಿ ಉಪಾಧ್ಯಕ್ಷ ರಾಜೇಶ್ ಭಟ್ ನೆಕ್ಕಿಲ ಗೈರಾದರು. ಶುಕ್ರವಾರ ಒಟ್ಟು 11 ನಿರ್ದೇಶಕ ಹಾಗೂ 1 ಡಿಸಿಸಿ ಬ್ಯಾಂಕ್ ಪ್ರತಿನಿಧಿ ಸೇರಿ 12 ಮಂದಿ ಮತ ಚಲಾಯಿಸಿದರು. ಮತ ಎಣಿಕೆ ನಡೆದಾಗ ವಿಜಯ ಕುಮಾರ್ ಉಬರಡ್ಕ ಹಾಗೂ ಪ್ರಭಾಕರ ಅಮ್ಮೆ ತಲಾ 6 ಮತ ಪಡೆದು ಸಮಬಲ ಸಾಸಿದರು. ಬಳಿಕ ಚೀಟಿಯಲ್ಲಿ ಹೆಸರು ಬರೆದು ಚೀಟಿ ಎತ್ತುವ ಮೂಲಕ ಉಪಾಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆಸಿದಾಗ ವಿಜಯ ಕುಮಾರ್ ಉಬರಡ್ಕ ಉಪಾಧ್ಯಕ್ಷರಾಗಿ ಆಯ್ಕೆಯಾದರು.

ಪುಣ್ಚಪ್ಪಾಡಿ ಶಾಲಾ ಮಕ್ಕಳ ಪ್ರಕೃತಿ ನಡಿಗೆ ಕಾರ್ಯಕ್ರಮ

ಪರಿಸರದೊಂದಿಗೆ ವಿಶೇಷ ಕಲಿಕೆ

ಸವಣೂರು: ಪುಣ್ಚಪ್ಪಾಡಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಇಕೋ ಕ್ಲಬ್ ವತಿಯಿಂದ ಇಲಾಖಾ ನಿಯಮದ ಪ್ರಕಾರ ಪರಿಸರ ನಡಿಗೆ ಕಾರ್ಯಕ್ರಮವನ್ನು ಹತ್ತಿರದ ಕಂಗು, ತೆಂಗು, ಹಣ್ಣಿನ ತೋಟಗಳ ವೀಕ್ಷಣೆಯೊಂದಿಗೆ ನಡೆಸಲಾಯಿತು.

ದೇವಸ್ಯ ಪಾರಂಪರಿಕ ಮನೆ, ತೋಟವನ್ನು ಮಕ್ಕಳಿಗೆ ಪರಿಚಯಿಸಿದ ನಂತರ ಸರಸ್ವತಿ ಡಿ. ರೈ, ಪಾರಂಪರಿಕ ಮನೆಯು ಅತಿ ಪುರಾತನ ವಾದದ್ದು ಹೈನುಗಾರಿಕೆ, ಕೃಷಿಯನ್ನು ನೆಚ್ಚಿ ಕೊಂಡು ಪ್ರಕೃತಿಯೊಂದಿಗೆ ಸಹಜವಾಗಿ ಬದುಕಿದ ಹಿರಿಯರು ಇಂದಿಗೂ ನಮಗೆ ಆದರ್ಶ ಎಂದು ಹೇಳಿದರು.

ನಾಟಿ ವೈದ್ಯ ಕೃಷ್ಣಪ್ಪ ಪೂಜಾರಿ ದೇವಸ್ಯರ ಮನೆಗೆ ಭೇಟಿ ನೀಡಲಾಯಿತು. ಔಷ ಸಸ್ಯಗಳನ್ನು ಪರಿಚಯಿಸಿದ ಹೊನ್ನಪ್ಪ ಪೂಜಾರಿ ದೇವಸ್ಯ ಅವರು ಹಲವು ಔಷ ಸಸ್ಯಗಳನ್ನು ಪರಿಚಯಿಸುತ್ತಾ ಹಿತ್ತಲಲ್ಲಿ ಇರುವ ಹಲವು ಗಿಡ ಮರಗಳು ನಮ್ಮ ಆರೋಗ್ಯ ಸಮಸ್ಯೆಗಳಿಗೆ ಔಷಯಾಗಬಲ್ಲದು ಎಂದು ಹೇಳಿದರು. ನಾಟಿ ವೈದ್ಯ ಸಜಿತ್ ದೇವಸ್ಯ ಅವರ ಮನೆಗೆ ಭೇಟಿ ನೀಡಿದಾಗ ಅವರು ಹಲವು ಗಿಡಮೂಲಿಕೆಗಳನ್ನು ಪರಿಚಯಿಸಿ, ನಾಟಿ ಚಿಕಿತ್ಸೆಯು ಪರಿಣಾಮಕಾರಿ ಚಿಕಿತ್ಸೆ ಪದ್ಧತಿಯಾಗಿದ್ದು ಹಲವು ರೋಗಗಳಿಗೆ ಇದು ರಾಮಬಾಣವಾಗಿದೆ ಎಂದು ತಿಳಿಸಿದರು. ಪ್ರಗತಿಪರ ಕೃಷಿಕ ಪಿ.ಡಿ. ಕೃಷ್ಣ ಕುಮಾರ್ ರೈ ದೇವಸ್ಯರವರ ಮನೆಗೆ ಭೇಟಿ ನೀಡಿದಾಗ ಅವರು ಪಾಮ್ ಮರಗಳು ಬೆಳೆಸುವುದು, ನಿರ್ವಹಣೆ, ಪಾಮ್ ಎಣ್ಣೆ ತಯಾರಿಸುವುದು, ಇದರ ಮಾರಾಟದ ಕುರಿತು ಮಾಹಿತಿ ನೀಡಿದರು. ಹಲವು ಹಣ್ಣಿನ ಗಿಡಗಳ ಕೃಷಿಗಳ ನಿರ್ವಹಣೆಯ ಬಗ್ಗೆಯೂ ಮಾಹಿತಿ ನೀಡಿದರು.



ಪ್ರಕೃತಿ ನಡಿಗೆಯ ನೇತೃತ್ವ ವಹಿಸಿದ ಸಮಾಜ ಸೇವಕ ಪ್ರಗತಿಪರ ಕೃಷಿಕ ಗಿರಿಶಂಕರ ಸುಲಾಯ ಅವರ ಮನೆಗೆ ಭೇಟಿ ನೀಡಿದಾಗ ಅವರು ಹೈನುಗಾರಿಕೆ ಮತ್ತು ಪರಿಸರದ ನಡುವಿನ ಸಂಬಂಧ, ಅಡಿಕೆ ತೋಟ ನಿರ್ವಹಣೆ, ನೀರಾವರಿ ವ್ಯವಸ್ಥೆ, ಕಾಡಿನಂಚಿನಲ್ಲಿ ಕೃಷಿಗಿರುವ ಸವಾಲುಗಳು ಮುಂತಾದವುಗಳ ಬಗ್ಗೆ ಸಮಗ್ರ ಮಾಹಿತಿ ನೀಡಿದರು. ವಿಶೇಷವಾಗಿ ಮಕ್ಕಳು ಕೃಷಿಗಾಗಿ ಮಾಡಿದ ನೀರಿನ ಸಂಗ್ರಹ ತೊಟ್ಟಿಯಲ್ಲಿ ಆಟವಾಡಿ ಖುಷಿಪಟ್ಟರು.

ಶಾಲಾ ಮುಖ್ಯ ಶಿಕ್ಷಕಿ ರಶ್ಮಿತಾ ಜೈನ್ ನರಿಮೊಗರು, ಇಕೋ ಕ್ಲಬ್ ನೋಡಲ್ ಶಿಕ್ಷಕಿ ಶೋಭಾ ಕೆ. ಕಾರ್ಯಕ್ರಮ ಸಂಯೋಜಿಸಿದರು. ಅತಿಥಿ ಶಿಕ್ಷಕರಾದ ಭಾಗೀರಥಿ ಲೀಲಾವತಿ ಭವಾನಿ ಕೆ. ಕಾರ್ಯಕ್ರಮ ನಿರ್ವಹಿಸಿದರು. ಪೋಷಕರಾದ ಪ್ರದೀಪ್, ಪೂರ್ಣಿಮಾ, ವಾರಿಜಾ, ನಳಿನಿ, ಜಯಶ್ರೀ ಭಾಗವಹಿಸಿದರು.

ಕಾರ್ಯಕ್ರಮದ ವಿಶೇಷತೆ

ಪ್ರಗತಿಪರ ಕೃಷಿಕ ಗಿರಿಶಂಕರ ಸುಲಾಯಯವರ ನೇತೃತ್ವದಲ್ಲಿ ಶಾಲೆಯ ಮಕ್ಕಳು ಪುಣ್ಚಪ್ಪಾಡಿ ಗ್ರಾಮದ ದೇವಸ್ಯ ಊರಿನ ಪರಿಸರ, ಕಾಡು, ಗುಡ್ಡೆ, ತೋಟಗಳು, ಕೆರೆಗಳಿಗೆ ಕಾಲ್ನಡಿಗೆಯಲ್ಲಿ ಸಂಚರಿಸಿ ಅಪೂರ್ವ ಮಾಹಿತಿ ಪಡೆದುಕೊಂಡರು. ಈ ಸಂದರ್ಭ ತರವಾಡು ಮನೆ, ದೈವಸ್ಥಾನಗಳು, ನಾಗಬನಗಳು ಮತ್ತು ಪರಿಸರ ರಕ್ಷಣೆಗಿರುವ ಸಂಬಂಧದ ಬಗ್ಗೆ ಮಾಹಿತಿ ಪಡೆದುಕೊಂಡರು. ಅಲ್ಲಲ್ಲಿ ಕಂಡ ವಿಶೇಷ ಪ್ರಾಣಿ, ಪಕ್ಷಿಗಳು ಕೀಟಗಳು, ಗಿಡ ಮರಗಳು, ಹೂಗಳು ಹೀಗೆ ವೈವಿಧ್ಯಮಯವಾದ ಪ್ರಕೃತಿಯೊಂದಿಗೆ ಮುಖಾಮುಖಿ ಯಾಗಿ ಸಂಭ್ರಮದ ಕಲಿಕೆಗೆ ಸಾಕ್ಷಿಯಾದರು.

110 ಕೃಷಿಕರಿಗೆ ಏಣಿ ವಿತರಣೆ



ಸುಬ್ರಹ್ಮಣ್ಯ: ವಿಟ್ಲದ ಭಾರತ ಕೃಷಿ ಅಭಿವೃದ್ಧಿ ಸಂಸ್ಥೆಯ ವತಿಯಿಂದ ದೇವಚಳ್ಳ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿನ ಕೃಷಿಕರಿಗೆ ಏಣಿಗಳ ವಿತರಣೆ ಕಾರ್ಯಕ್ರಮ ಮಂಗಳವಾರ ನಡೆಯಿತು. ಸುಮಾರು 110 ರೈತರು ಸೌಲಭ್ಯವನ್ನು ಪಡೆದುಕೊಂಡರು.

ಗುತ್ತಿಗಾರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಜಯಪ್ರಕಾಶ್ ಮೊಗ್ರ ರೈತರಿಗೆ ಏಣಿ ವಿತರಿಸಿದರು. ದೇವಚಳ್ಳ ಗ್ರಾಮ ಪಂಚಾಯತ್ ಅಧ್ಯಕ್ಷ ಶೈಲೇಶ್ ಅಂಬೆಕಲ್ಲು ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ತಾಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿ ರಾಜಣ್ಣ, ಪಿಡಿಒ ಅಜಿತ್, ಗ್ರಾ.ಪಂ. ಉಪಾಧ್ಯಕ್ಷೆ ಲೀಲಾವತಿ ಸೇವಾಜೆ, ಸದಸ್ಯರಾದ ಪ್ರೇಮಲತಾ ಕೇರ, ರಮೇಶ್ ಪಡ್ಪು, ದುರ್ಗಾದಾಸ್ ಮೆತ್ತಡ್ಕ, ಪ್ರಶಾಂತ ಮೆದು, ಸುಲೋಚನಾ ದೇವ, ಭವಾನಿ ಶಂಕರ್ ಮುಂಡೋಡಿ, ರಾಜೇಶ್ವರಿ ಮಾವಿನಕಟ್ಟೆ, ಸೀತಮ್ಮ ವೇದಿಕೆಯಲ್ಲಿದ್ದರು.

ರೈತರಿಗೆ ಮಾಹಿತಿ

ಕೃಷಿ ಅಭಿವೃದ್ಧಿ ಕೇಂದ್ರದ ಮೋಹಿನಿ ವಿಶ್ವನಾಥ್ ಸಂಪಾಜೆ ಭಾರತ ಕೃಷಿ ಅಭಿವೃದ್ಧಿ ಸಂಸ್ಥೆಯಿಂದ ರೈತರಿಗೆ ಲಭ್ಯವಿರುವ ವಿವಿಧ ಕೃಷಿ ಸೌಲಭ್ಯಗಳ ಕುರಿತು ವಿವರಿಸಿದರು. ರೇಷ್ಮೆ ಹಾಗೂ ತಾಳೆ ಕೃಷಿ ಕುರಿತು ಮಾಹಿತಿ ನೀಡಿದರು. ದೇವಚಳ್ಳ ಗ್ರಾಮಕ್ಕೆ ಸಂಸ್ಥೆಯ ಯೋಜನೆಯನ್ನು ಪರಿಚಯಿಸಿ ಕೃಷಿಕರಿಗೆ ಏಣಿಗಳನ್ನು ಕೊಡಿಸುವಲ್ಲಿ ಸಹಕರಿಸಿದ ರಾಜೇಶ್ ಬಟ್ಟಕಜೆ ಹಾಗೂ ಶ್ವೇತಾ ಬಟ್ಟಕಜೆ ಅವರನ್ನು ಸಭೆಯಲ್ಲಿ ಸನ್ಮಾನಿಸಲಾಯಿತು.

ದ.ಕ. ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಅಭಿವೃದ್ಧಿ

ಶಾಲೆ ಬಗ್ಗೆ ಜನರಲ್ಲಿ ಪ್ರೀತಿ ಬೇಕು



ಮಂಗಳೂರು: ನಗರದ ಪದವು ಬಿಕರ್ನಕಟ್ಟೆ ದ.ಕ. ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸುಮಾರು 15 ಲಕ್ಷ ರೂ. ವೆಚ್ಚದಲ್ಲಿ ಕೈಗೊಂಡ ವಿವಿಧ ಅಭಿವೃದ್ಧಿ ಕಾಮಗಾರಿಯನ್ನು ಶಾಸಕ ವೇದವ್ಯಾಸ ಕಾಮತ್ ಸೋಮವಾರ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಕಾಮತ್, ಶಾಲೆ ಅಭಿವೃದ್ಧಿಯಾಗಬೇಕಾದರೆ ಶಾಲೆಗೆ ಹೊಂದಿಕೊಂಡ ಜನರಲ್ಲಿ ಶಾಲೆಯ ಬಗ್ಗೆ ಪ್ರೀತಿ, ಗೌರವದ ಭಾವನೆ ಮುಖ್ಯ. ಆಗ ವಿವಿಧ ಮೂಲಗಳಿಂದ ನೆರವು ಪಡೆದು ಶಾಲೆಯನ್ನು ಸಶಕ್ತವಾಗಿ ರೂಪಿಸಲು ಸಾಧ್ಯ ಎಂದರು.

ಬಿಕರ್ನಕಟ್ಟೆಶಾಲೆಯನ್ನುಸರ್ವರೀತಿಯಲ್ಲಿಯೂ ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಹಲವರ ನಿರಂತರ ಶ್ರಮವಿದೆ. ಶಾಲೆಯ ಶಿಕ್ಷಕವೃಂದದ ನಿರಂತರ ಶ್ರಮದ ಮೂಲಕ ಶಾಲೆಯಲ್ಲಿ ಉತ್ತಮ ಫಲಿತಾಂಶ ಇದೆ. ಮುಂಬರುವ ದಿನದಲ್ಲಿ ಶಾಲೆಗೆ ಕಂಪ್ಯೂಟರ್ ಲ್ಯಾಬ್, ಪ್ರಯೋಗ ಶಾಲೆ ಆರಂಭಿಸುವ ನಿಟ್ಟಿನಲ್ಲಿ ವಿಶೇಷ ಪ್ರಯತ್ನ ಮಾಡಲಾಗುವುದು ಎಂದರು.

ಶಾಲೆಯ ಹಳೆಯ ಕಟ್ಟಡ ರಿಪೇರಿಯನ್ನು ಪ್ರಾರಂಭದಲ್ಲಿ ನಡೆಸಲಾಗಿತ್ತು. ಬಳಿಕ ರಿಟೈನಿಂಗ್ ವಾಲ್ ನಿರ್ಮಾಣ ಮಾಡಲಾಗಿದೆ. 2 ವಿವೇಕ ಕೊಠಡಿ, ಶಾಲೆಗೆ ಸುಣ್ಣ ಬಣ್ಣದ ವ್ಯವಸ್ಥೆ, ಶಾಲೆಯ ಒಳಗೆ ವಿವಿಧ ಕಾಮಗಾರಿ, ಶಾಲೆಯ ಮುಂಭಾಗ ಚರಂಡಿ, ಚಪ್ಪಡಿ ಕಲ್ಲು, ಹೈಮಾಸ್ಕ್ ಜೋಡಣೆ, ವೇದಿಕೆ ನಿರ್ಮಾಣ ಮಾಡಲಾಗಿದೆ ಎಂದರು.

ಎಸ್‌ಡಿಎಂಸಿ ಅಧ್ಯಕ್ಷೆಸಂಧ್ಯಾ ರಾವ್, ಗೌರವಾಧ್ಯಕ್ಷ ಸಂಜೀವ ಮರೋಳಿ, ಡಾ.ಗಣೇಶ್ ಕುಮಾರ್, ಸವಿತಾ ಸಂತೋಷ್, ಸಮೂಹ ಸಂಪನ್ಮೂಲ ವ್ಯಕ್ತಿ ಕುಮುದಿನಿ, ಶಿಕ್ಷಕರ ಸಂಘದ ಅಧ್ಯಕ್ಷ ಜಗದೀಶ್ ಶೆಟ್ಟಿ, ಮಾಜಿ ಕಾರ್ಪೊರೇಟರ್ ಕಾವ್ಯ ನಟರಾಜ್, ಮುಖ್ಯ ಶಿಕ್ಷಕಿ ರಾಜೀವಿ, ಹಳೆ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ರಮೇಶ್ ಕಂಡೆಟ್ಟು, ಪ್ರಮುಖರಾದ ಗಿರೀಶ್ ಕೊಟ್ಟಾರಿ, ನಾಗರಾಜ್ ಕೆ.ಬಿಕರ್ನಕಟ್ಟೆ, ಪಿ.ಶರತ್ ಕುಮಾರ್, ಗಣ್ಯರು ಉಪಸ್ಥಿತರಿದ್ದರು.

ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷೆ ಶೈಲಜಾ ಸುರೇಶ್ ಸ್ವಾಗತಿಸಿದರು. ಚಂದ್ರಶೇಖರ ಶೆಟ್ಟಿ ವಂದಿಸಿದರು. ಶೀಲಾವತಿ, ದೇವದಾಸ್ ಮರೋಳಿ ನಿರೂಪಿಸಿದರು.

ಮಲ್ಯರಮಠ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಬ್ರಹ್ಮರಥೋತ್ಸವ



ಗಂಗೊಳ್ಳಿ: ಪುರಾಣ ಪ್ರಸಿದ್ಧ 350 ವರ್ಷ ಪುರಾತನವಾದ ಗಂಗೊಳ್ಳಿಯ ಮಲ್ಯರಮಠ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಕಾಲಂಪ್ರತಿ ಜರಗುವ ಬ್ರಹ್ಮರಥೋತ್ಸವದ ಧಾರ್ಮಿಕ ಕಾರ್ಯಕ್ರಮಗಳು ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶ ಶ್ರೀಮದ್ ವಿದ್ಯಾಧೀಶ ಶ್ರೀಪಾದ ವಡೇರ ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ಶುಕ್ರವಾರ ಪ್ರಾರಂಭಗೊಂಡಿತು.

ಮಹಾಪ್ರಾರ್ಥನೆ ಬಳಿಕ ರಥೋತ್ಸವದ ಧಾರ್ಮಿಕ ಅನುಷ್ಠಾನಗಳು, ಧ್ವಜಾರೋಹಣದ ಧಾರ್ಮಿಕ ಕಾರ್ಯಕ್ರಮಗಳು ನಡೆಯಿತು. ದೇವಳದ ಪ್ರಧಾನ ಅರ್ಚಕ ವೇದಮೂರ್ತಿ ಎಸ್.ವೆಂಕಟರಮಣ ಆಚಾರ್ಯ ಮತ್ತು ದೇವಳದ ತಾಂತ್ರಿಕ ವೇದಮೂರ್ತಿ ಜಿ.ವಸಂತ ಭಟ್ ನೇತೃತ್ವದಲ್ಲಿ ರಥೋತ್ಸವದ ಧಾರ್ಮಿಕ ಕಾರ್ಯಕ್ರಮಗಳು ಮತ್ತು ಅನುಷ್ಠಾನಗಳು ಜರುಗಿತು. ದೇವಳದ ಆಡಳಿತ ಮಂಡಳಿ ಸದಸ್ಯರು, ಪುರೋಹಿತರು, ಅರ್ಚಕರು, ಊರಿನ ಹತ್ತು ಸಮಸ್ತರು, ಸಮಾಜ ಬಾಂಧವರು ಮೊದಲಾದವರು ಉಪಸ್ಥಿತರಿದ್ದರು.

ಫೆ.22ರಂದು ರಾತ್ರಿ ಬಂಡಿ ಉತ್ಸವ, 23ರಂದು ರಾತ್ರಿ ಪುಷ್ಪ ರಥೋತ್ಸವ, 24ರಂದು ಸಂಜೆ ಬ್ರಹ್ಮರಥೋತ್ಸವವು ಜರುಗಲಿದೆ. 25ರಂದು ಧ್ವಜಅವರೋಹಣದೊಂದಿಗೆ ಬ್ರಹ್ಮರಥೋತ್ಸವದ ಧಾರ್ಮಿಕ ಕಾರ್ಯಕ್ರಮಗಳು ಸಮಾಪನಗೊಳ್ಳಲಿದೆ.

ಸ್ನೇಹಿತನನ್ನೇ ಕೊಲೆ ಮಾಡಿದ ನಾಲ್ವರಿಗೆ ಕಠಿಣ ಜೀವಾವಧಿ ಶಿಕ್ಷೆ

ಮಡಿಕೇರಿ: ತೀವ್ರವಾಗಿ ಹಲ್ಲೆಮಾಡಿ ಸ್ನೇಹಿತನನ್ನು ಕೊಲೆ ಮಾಡಿದ ಆರೋಪ ದೃಢಪಟ್ಟ ಹಿನ್ನೆಲೆಯಲ್ಲಿ ಒಂದನೇ ಅಧಿಕ ಜಿಲ್ಲಾ ಮತ್ತು ಮಡಿಕೇರಿ ಸೆಷನ್ಸ್ ನ್ಯಾಯಾಲಯ ನಾಲ್ಕು ಅಪರಾಧಿಗಳಿಗೆ ಕಠಿಣ ಜೀವಾವಧಿ ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.

ಪಾಂಡವಪುರ ತಾಲೂಕಿನ ಗಿರೀಶ್, ಕಿರಣ್, ಅನಿಲ್ ಕುಮಾರ್ ಹಾಗೂ ಶಿವಕುಮಾರ್ ಎಂಬವರೇ ತಮ್ಮ ಜೊತೆಗಿದ್ದ ಸ್ನೇಹಿತ ಮಹದೇವನನ್ನು ಕೊಲೆಗೈದ ಅಪರಾಧಕ್ಕಾಗಿ ಜೀವಾವಧಿ ಶಿಕ್ಷೆಗೆ ಗುರಿಯಾದವರಾಗಿದ್ದಾರೆ.

ಆರೋಪಿಗಳನ್ನು ಬಂಧಿಸಿ ವಿಚಾರಣೆ ನಡೆಸಿದಾಗ ಕ್ಷುಲ್ಲಕ ಕಾರಣಕ್ಕೆ ಜಗಳ ತೆಗೆದು, ಗುದದ್ವಾರಕ್ಕೆ ಖಾರದ ಪುಡಿ ಸವರಿದ ದೊಣ್ಣೆಯನ್ನು ತುರುಕಿ, ತೀವ್ರವಾಗಿ ಹಲ್ಲೆ ಮಾಡಿರುವುದು ಬೆಳಕಿಗೆ ಬಂದಿತ್ತು.

ಈ ಕುರಿತು ಅಂದಿನ ಪೊಲೀಸ್ ಇನ್ಸ್ಪೆಕ್ಟರ್ ನಾಗೇಶ್ ಅವರು ಆರೋಪಿತರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ಮಡಿಕೇರಿಯ ಒಂದನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಜಿ. ಸುರೇಂದ್ರ ಅವರು, ಕೊಲೆ ಮಾಡಿದ ಅಪರಾಧಕ್ಕಾಗಿ ನಾಲ್ವರಿಗೂ ಕಠಿಣ ಜೀವಾವಧಿ ಶಿಕ್ಷೆ ಹಾಗೂ ತಲಾ ರೂ. 10ಸಾವಿರ ದಂಡ ವಿಧಿಸಿ ತೀರ್ಪು ಘೋಷಿಸಿದ್ದಾರೆ.

ಇದರೊಂದಿಗೆ ಮೃತ ಮಹದೇವನ ಕುಟುಂಬಕ್ಕೆ ದಂಡದ ಹಣವನ್ನು ಪರಿಹಾರ ರೂಪದಲ್ಲಿ ನೀಡಬೇಕು. ಕಾನೂನು ಸೇವೆಗಳ ಪ್ರಾಧಿಕಾರಿ ಸೂಕ್ತ ಪರಿಹಾರ ನಿರ್ಧರಿಸಿ ನೀಡಬೇಕೆಂದು ಆದೇಶಿಸಿದ್ದಾರೆ.

ಪ್ರಾಸಿಕ್ಯೂಷನ್ ಪರ ಸರಕಾರಿ ಅಭಿಯೋಜಕ ಎನ್.ಪಿ. ದೇವೇಂದ್ರ ವಾದ ಮಂಡಿಸಿದರು.

ಘಟನೆಯ ಹಿನ್ನಲೆ

ಸೋಮವಾರಪೇಟೆ ತಾಲೂಕಿನ ಕೊಡ್ಲಿಪೇಟೆಯ ಅವರೆದಾಳು ಗ್ರಾಮದ ಮಹದೇಶ್ವರ ಎಂಬವರು ಗುತ್ತಿಗೆ ಪಡೆದು ಕಟ್ಟಡ ನಿರ್ಮಿಸುವ ಕೆಲಸ ಮಾಡುತ್ತಿದ್ದು, ಕೆಲಸಗಾರರಾಗಿ ಗಿರೀಶ್, ಕಿರಣ್, ಅನಿಲ್, ಶಿವಕುಮಾರ್ ಹಾಗೂ ಮಹದೇವ ಸೇರಿಕೊಂಡಿದ್ದರು. ಇವರಿಗೆ ತೋಟದ ಲೈನ್‌ಮನೆಯಲ್ಲಿ ವಾಸಕ್ಕೆ ವ್ಯವಸ್ಥೆಯನ್ನೂ ಮಾಡಿಕೊಟ್ಟಿದ್ದರು. ಕೆಲಸವಿದ್ದ ಸಂದರ್ಭ ಮಹದೇಶ್ವರ ಅವರೇ ಕರೆದೊಯ್ದು ಮರಳಿ ಮನೆಗೆ ತಂದು ಬಿಡುತ್ತಿದ್ದರು. ಆದರೆ 2023ರ ಏಪ್ರಿಲ್ 17ರಂದು ಗುತ್ತಿಗೆದಾರ ಮಹದೇಶ್ವರ ಅವರು ಕಾರ್ಮಿಕರು ವಾಸವಿದ್ದ ಮನೆಗೆ ತೆರಳಿ ನೋಡಿದಾಗ ತೀವ್ರ ಹಲ್ಲೆಯಾಗಿ ಮಹದೇವ ಸಾವನ್ನಪ್ಪಿರುವುದು ಕಂಡು ಬಂದಿದೆ. ಜೊತೆಗಿದ್ದ ಇತರರು ನಾಪತ್ತೆಯಾಗಿದ್ದರು. ಈ ಕುರಿತು ತಕ್ಷಣ ಮಹದೇಶ್ವರ ಅವರು ಪೊಲೀಸರಿಗೆ ಮಾಹಿತಿ ನೀಡಿದ್ದು, ಸ್ಥಳಕ್ಕಾಗಮಿಸಿ ಮಹಜರು ನಡೆಸಿದ ಶನಿವಾರಸಂತೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು.

ದಲಿತ ಯುವಕನ ಎದೆ ಸೀಳಿದ ಗುಂಡು-ನ್ಯಾಯ ದೊರಕುವುದು ಎಂದು?

ರಕ್ಷಿತ್ ಬೆಳಪು

ಬ್ರಹ್ಮಾವರ: 2006-07ರ ಅವಧಿಯಲ್ಲಿ ಮೊದಲ ಬಾರಿಗೆ ಬ್ರಹ್ಮಾವರದ ಮಟಪಾಡಿಯ ರಸ್ತೆಯಲ್ಲಿ ಮೊರೆದ ಗುಂಡು 'ಪದ್ಮಾ' ಎಂಬ ಮಹಿಳೆಯನ್ನು ಬಲಿ ಪಡೆದಿತ್ತು. ರೋನಿ ಕೊಲೆಗೆ ಪ್ರತಿಕಾರವಾಗಿ ನಡೆದ ಈ ಕೊಲೆಯಲ್ಲಿ ಆರೋಪಿಗಳು ಪತ್ತೆಯಾಗಿದ್ದರು. ಅಲ್ಲಿ ಅಂಡರ್‌ವಲ್ಡ್ ನಂಟಿನ ಗುಟ್ಟಿತ್ತು. ಇದು ಜಿಲ್ಲೆಯಲ್ಲೇ ಗುಂಡಿಕ್ಕಿ ಹತ್ಯೆಮಾಡಿದ ಮೊದಲ ಪ್ರಕರಣವಾಗಿತ್ತು.



ಇದಾದ 17 ವರ್ಷಗಳ ಬಳಿಕ ಮತ್ತೊಮ್ಮೆ ಬ್ರಹ್ಮಾವರದಲ್ಲಿ ಗುಂಡಿನ ಸದ್ದು ಮೊರೆತ ಕೇಳಿ ಬಂದಿತ್ತು. ಈ ಬಾರಿಯ ಗುಂಡಿಗೆ ಶೂಟರ್‌ಗಳಿಂದ ಕೊಲೆಯಾದದ್ದು ದಲಿತ ಯುವಕ ಕೃಷ್ಣ. ದಲಿತ ಯುವಕನೊಬ್ಬನನ್ನು ಗುಂಡು ಹಾರಿಸಿ ಕೊಂದದ್ದಾದರೂ ಏಕೆ..? ಯಾರು..? ಎಂಬ ಪ್ರಶ್ನೆಗೆ ಎರಡು ವರ್ಷವಾದರೂ ಉತ್ತರ ಸಿಕ್ಕಿಲ್ಲ. ಸರಕಾರದ ಯೋಜನೆಗಳಲ್ಲಿ ದಲಿತರಿಗೆ ಅನ್ಯಾಯವಾಗುತ್ತಿದೆ. ಈಗ ಕೊಲೆಯಾದರೂ, ನ್ಯಾಯ ದೊರಕಿಲ್ಲ ಎಂದು ಸಮತಾ ಸೈನಿಕ ದಳ ದೂರಿದೆ.

ಬ್ರಹ್ಮಾವರ ತಾಲೂಕಿನ ಹನೇಹಳ್ಳಿಯಲ್ಲಿ 2024 ರ ಮಾ.2 ರಾತ್ರಿ ತನ್ನದೇ ಮನೆಯಲ್ಲಿ ಊಟ ಮಾಡುತ್ತಿದ್ದ 'ಕೃಷ್ಣ' ಎಂಬ ಯುವಕನನ್ನು 7.65 ಎಮ್‌ಎಮ್ ಪಿಸ್ತೂಲಿನಿಂದ ನಾಲ್ಕು ಗುಂಡು ಹಾರಿಸಿ ಕಗ್ಗತ್ತಲಲ್ಲಿ ಕಗ್ಗೊಲೆ ನಡೆಸಿ ಹೊರಟು ಹೋಗಿದ್ದರು ಆಗಂತುಕರು. ಆದರೆ ಪೊಲೀಸ್ ತನಿಖೆಯಲ್ಲಿ ಆರೋಪಿಗಳ ಯಾವ ಸುಳಿವು ಸಿಕ್ಕಿರಲೇ ಇಲ್ಲ. ಪ್ರಕರಣದ ತನಿಖೆಗಾಗಿ ಪ್ರತ್ಯೇಕ ತಂಡವನ್ನು ಮಾಡಿದರೂ, ಆರೋಪಿಗಳ ಎಸ್ಕೇಪ್ ರೂಟ್ ಪೊಲೀಸರ ರಾಡಾರ್‌ಗೆ ಬರಲೇ ಇಲ್ಲ.

ಸೆಂಟ್ರಿಂಗ್ ಕೆಲಸ

ಸೆಂಟ್ರಿಂಗ್ ಕೆಲಸಕ್ಕೆ ತೆರಳುತ್ತಿದ್ದ ಕೃಷ್ಣ (37), ಸರಳ ಜೀವಿಯಾಗಿದ್ದ. ಈತನ ಚಲನವಲನದ ಬಗ್ಗೆ ಸ್ಥಳೀಯರಿಗೆ ಹೆಚ್ಚೇನೂ ಆಕ್ಷೇಪವಿರಲಿಲ್ಲ. ದಲಿತ ಸಮುದಾಯಕ್ಕೆ ಸೇರಿದ ಯುವಕ, ಸೆಂಟ್ರಿಂಗ್ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದವನನ್ನು ಗುಂಡು ಹಾರಿಸಿ ಕೊಲೆ ಮಾಡುವಷ್ಟು ದ್ವೇಷ ಯಾರಿಗೆ ಇತ್ತು ಎಂಬುದೇ ಎಲ್ಲರ ಪ್ರಶ್ನೆಯಾಗಿದೆ.

ಮಂಪರು ಪರೀಕ್ಷೆಗೆ ಅರ್ಜಿ

ಬ್ರಹ್ಮಾವರ ಪೊಲೀಸರ ತಂಡವು ಸ್ಥಳೀಯ ದಂಪತಿಗಳ ಮಂಪರು ಪರೀಕ್ಷೆಗೆ ಅನುಮತಿ ನೀಡುವಂತೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಆದರೆ ನ್ಯಾಯಾಲಯವು ಅರ್ಜಿಯನ್ನು ತಿರಸ್ಕರಿಸಿದ್ದು, ಪೊಲೀಸರು ಮೇಲ್ಮನವಿ ಸಲ್ಲಿಸುವ ಸಾಧ್ಯತೆ ಇದೆ ಎಂದು ಉನ್ನತ ಅಧಿಕಾರಿಗಳು ತಿಳಿಸಿದ್ದಾರೆ.

> ಬ್ರಹ್ಮಾವರದ ಹನೆಹಳ್ಳಿಯಲ್ಲಿ ನಡೆದ ಶೂಟೌಟ್ ಪ್ರಕರಣದಲ್ಲಿ ಜಿಲ್ಲಾ ಪೋಲಿಸ್ ಇಲಾಖೆ ತನಿಖೆಯನ್ನು ನಡೆಸಿದೆ. ಈ ಪ್ರಕರಣವನ್ನು ಸಿಐಡಿಗೆ ವರ್ಗಾಯಿಸಲು ಪತ್ರವನ್ನು ಬರೆದಿದ್ದೇನೆ.
> ■ ಹರಿರಾಂ ಶಂಕರ್, ಜಿಲ್ಲಾ ಎಸ್ಪಿ, ಉಡುಪಿ.

> ಪ್ರಕರಣ ನಡೆದು ಎರಡು ವರ್ಷ ಕಳೆದರೂ ಆರೋಪಿಗಳ ಸುಳಿವು ಸಿಕ್ಕಿಲ್ಲ. ಪ್ರಕರಣದ ತನಿಖೆಗೆ ಜಿಲ್ಲಾ ಪೊಲೀಸರು ಮೂರು ತಂಡ ಮಾಡಲಾಗಿತ್ತು. ಆದರೆ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿಲ್ಲ. ಹೀಗಾಗಿ ಪ್ರಕರಣವನ್ನು ಸಿಐಡಿಗೆ ನೀಡಬೇಕೆಂದು ಆಗ್ರಹಿಸಿ ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ ನಡೆಸಿದ್ದೇವೆ.
> ■ ವಿಶ್ವನಾಥ್ ಪೇತ್ರಿ, ಜಿಲ್ಲಾಧ್ಯಕ್ಷ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ (ಎ)

ವಿದ್ಯಾರ್ಥಿಗಳಿಗೆ ಅಧ್ಯಯನ ಪ್ರವಾಸ, ವನಭೇಟಿ



ಮೂಡುಬಿದಿರೆ: ಗಾಂಧಿನಗರದಲ್ಲಿರುವ ದ.ಕ ಜಿ.ಪಂ ಹಿರಿಯ ಪ್ರಾಥಮಿಕ ಶಾಲೆಯ ಇಕೋ ಕ್ಲಬ್ ವತಿಯಿಂದ ವಿದ್ಯಾರ್ಥಿಗಳಿಗೆ ಅಧ್ಯಯನ ಪ್ರವಾಸ ಹಾಗೂ ವನಭೇಟಿ ಕಾರ್ಯಕ್ರಮವನ್ನು ಪುತ್ತಿಗೆ ಗ್ರಾಮದ ಹಂಡೇಲು ಚಿಕ್ಪಾಡಿಯಲ್ಲಿ ಆಯೋಜಿಸಲಾಯಿತು.

ಪರಿಸರ ಸಂರಕ್ಷಣೆ ಹಾಗೂ ಪ್ರಕೃತಿ ಅರಿವು ಮೂಡಿಸುವ ಉದ್ದೇಶದಿಂದ ಹಮ್ಮಿಕೊಂಡ ಈ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿದರು. ಪ್ರಕೃತಿ ನಡಿಗೆಯ ಮೂಲಕ ವಿದ್ಯಾರ್ಥಿಗಳು ಸುತ್ತಮುತ್ತಲಿನ ಸಸ್ಯವೈವಿಧ್ಯ, ತೋಟ-ಗದ್ದೆಗಳ ವೀಕ್ಷಣೆ ನಡೆಸಿದರು. ತರಕಾರಿ ಗಿಡಗಳ ಬೆಳವಣಿಗೆ ಕ್ರಮ, ಅವುಗಳ ಪೋಷಣೆ ಹಾಗೂ ಉಪಯೋಗಗಳ ಬಗ್ಗೆ ಸ್ಥಳದಲ್ಲೇ ಮಾಹಿತಿ ನೀಡಲಾಯಿತು. ಅಪರೂಪದ ತೋಡು ಪ್ರದೇಶವನ್ನು ವೀಕ್ಷಿಸಿ, ಅಲ್ಲಿ ಕಂಡುಬರುವ ಜೀವಜಾಲ ಮತ್ತು ಪರಿಸರ ವೈಶಿಷ್ಟ್ಯಗಳ ಕುರಿತು ಶಿಕ್ಷಕರು ವಿವರಿಸಿದರು. ಇದೇ ವೇಳೆ ಕೊಬ್ಬರಿಯಿಂದ ಎಣ್ಣೆ ತೆಗೆಯುವ ಪಾರಂಪರಿಕ ವಿಧಾನವನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಲಾಯಿತು. ಕೃಷಿ ಆಧಾರಿತ ಜೀವನಶೈಲಿ, ನೈಸರ್ಗಿಕ ಸಂಪನ್ಮೂಲಗಳ ಮಹತ್ವ ಹಾಗೂ ಸ್ವಾವಲಂಬನೆಯ ಬಗ್ಗೆ ತಿಳಿವಳಿಕೆ ನೀಡಲಾಯಿತು.

ಸ್ಥಳೀಯರಾದ ಅಶೋಕ್ ಕುಲಾಲ್ ಹಾಗೂ ಮಲ್ಲಿಕಾ ಅವರು ವಿದ್ಯಾರ್ಥಿಗಳಿಗೆ ಮಾಹಿರಿ ನೀಡಿದರು. ಇಕೋ ಕ್ಲಬ್ ವತಿಯಿಂದ ಹಮ್ಮಿಕೊಂಡ ಈ ಅಧ್ಯಯನ ಪ್ರವಾಸ ವಿದ್ಯಾರ್ಥಿಗಳಲ್ಲಿ ಪರಿಸರ ಜಾಗೃತಿ ಹಾಗೂ ಪ್ರಕೃತಿ ಪ್ರೀತಿ ಹೆಚ್ಚಿಸುವಲ್ಲಿ ಸಹಕಾರಿಯಾಯಿತು. ಮುಖ್ಯ ಶಿಕ್ಷಕಿ ಕಸ್ತೂರಿ ಎಚ್., ಶಿಕ್ಷಕಿಯರಾದ ಸುಪ್ರಿತಾ, ಅಕ್ಷತಾ ಉಪಸ್ಥಿತರಿದ್ದರು.

ಲಕ್ಕಿಡಿಪ್ ಡ್ರಾ ಫಲಿತಾಂಶ

ದಕ್ಷಿಣ ಕನ್ನಡ ಜಿಲ್ಲಾ ಟ್ಯಾಕ್ಸಿಮನ್ಸ್ ಮತ್ತು ಮ್ಯಾಕ್ಸಿ ಕ್ಯಾಬ್ ಅಸೋಸಿಯೇಶನ್(ರಿ.) 34. ಚಾಲಕರ ಕ್ಷೇಮನಿಧಿ ಸಹಾಯಾರ್ಥ 17-02-2026ರಂದು ನಡೆದ ಲಕ್ಕಿಡಿಪ್ ಡ್ರಾ ಫಲಿತಾಂಶ

ಪ್ರಥಮ-6273, ದ್ವಿತೀಯ 7081

ಸಮಾಧಾನಕರ ಬಹುಮಾನ

9492, 3675, 6424.

IN THE COURT OF THE SENIOR CIVIL JUDGE AND JMFC BANTWAL

Crl. Mc. No.293/2025

Between,
Ravichandra and another ...Petitioners

-And-

Thahashildar/Birth and Death Registrar Bantwal Taluk, Bantwal ...Respondent

NOTICE

Take Notice that the above named petitioners have filed the above petition to this court for issue of direction to the Respondent to make entry of the death of the above named deceased Sunanada W/o. Vamana Bhandry resident of Kolya House, Eliyanadugodu Village of Bantwal Taluk D.K. who died on **10-03-1981.**

The above petition has been posted on **18-03-2026 at 11.00 A.M.** before this court. Persons desiring to oppose the same may appear on the said date and time, failing will be heard and decided the petition as exparte.

Given under my hand and seal of the court on 20th day of Feb 2026.

(By order of the court)
Sd/- Chief Ministrial Officer
Sr.Civil Judge & JMFC,
Bantwal, D.K.
Sd/- Suresh Shetty
Advocate for petitioners

ಮಾನ್ಯ ಹೆಚ್ಚುವರಿ ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಬೆಳ್ತಂಗಡಿ

ಕ್ರಿಮಿನಲ್ ಎಮ್. ಸಿ. ನಂಬ್ರ: 38/2026

ಮಧ್ಯ.

ಅಬ್ದುಲ್ ಹಮೀದ್
ಬಿನ್: ಅಹಮ್ಮದ್ ಕುಂಞ
ಮಲ್ಲಿಗೆ ಮಜಲು ಮನೆ,
ಕೊಕ್ಕಡ ಗ್ರಾಮ ಮತ್ತು ಅಂಚೆ,
ಬೆಳ್ತಂಗಡಿ ತಾಲೂಕು. ದ.ಕ.
...ಅರ್ಜಿದಾರರು

ಮತ್ತು

ಜನನ ಮತ್ತು ಮರಣಗಳ ರಿಜಿಸ್ಟ್ರಾರರು. (ತಹಶೀಲ್ದಾರರು), ಬೆಳ್ತಂಗಡಿ, ದ.ಕ.
...ಪ್ರತಿವಾದಿ

ನೋಟೀಸು

ಈ ಮೇಲೆ ಕಾಣಿಸಿದ ಹೆಸರು. ವಿಳಾಸದ ಅರ್ಜಿದಾರರ ಮಗನಾದ ನವಫ್ ಇಸ್ಮಾಯಿಲ್ ಬಿನ್:ಅಬ್ದುಲ್ ಹಮೀದ್ ಇವರು ಬೆಳ್ತಂಗಡಿ ತಾಲೂಕು ಕೊಕ್ಕಡ ಗ್ರಾಮದ ಮಲ್ಲಿಗೆ ಮಜಲು ಮನೆ ಎಂಬಲ್ಲಿ ದಿನಾಂಕ: 01-10-2024 ರಂದು ಮೃತಪಟ್ಟ ಬಗ್ಗೆ ಮರಣ ರಿಜಿಸ್ಟರ್ ನಲ್ಲಿ ನೋಂದಾವಣೆಗೊಳಿಸುವಂತೆ ಎದ್ರಿದಾರರ ವಿರುದ್ಧ ಅರ್ಜಿದಾರರು ಈ ಮೇಲ್ಕಾಣಿಸಿದ ನ್ಯಾಯಾಲಯದಲ್ಲಿ ಕೇಸು ದಾಖಲಿಸಿದ್ದು, ಸದ್ರಿ ಕೇಸಿನಲ್ಲಿ ಆಸಕ್ತಿಯುಳ್ಳ ವ್ಯಕ್ತಿಗಳು ಖುದ್ದಾಗಿ ಇಲ್ಲವೇ ವಕೀಲರ ಮುಖಾಂತರ ಹಾಜರಾಗಲು **ದಿನಾಂಕ: 12-03-2026 ರಂದು ಬೆಳಿಗ್ಗೆ 11.00 ಗಂಟೆಗೆ** ನ್ಯಾಯಾಲಯದಲ್ಲಿ ಕೇಸನ್ನು ಕರೆಯಲಾಗುವುದು. ಒಂದು ವೇಳೆ ಆಸಕ್ತಿಯುಳ್ಳ ವ್ಯಕ್ತಿಗಳು ಹಾಜರಾಗದೇ ಇದ್ದ ಪಕ್ಷದಲ್ಲಿ ತಮ್ಮ ಅನುಪಸ್ಥಿತಿಯಲ್ಲಿ ಕಾನೂನು ಪ್ರಕಾರ ಮುಂದಿನ ಕ್ರಮವನ್ನು ಕೈಗೊಳ್ಳಲಾಗುವುದು.

(ನ್ಯಾಯಾಲಯದ ಆದೇಶದ ಮೇರೆಗೆ)
ಸಹಿ/- ಶಿರಸ್ತೇದಾರರು
ಮಾನ್ಯ ಹೆಚ್ಚುವರಿ ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬೆಳ್ತಂಗಡಿ, ದ.ಕ.
ಸಹಿ/- (ಸಂತೋಷ್ ಕುಮಾರ್)
ಅರ್ಜಿದಾರರ ಪರ ನ್ಯಾಯವಾದಿ

ಪ್ರಕಟಣೆ

ಕೆಳಗೆ ತಪಶೀಲಿನಲ್ಲಿ ವಿವರಿಸಿದ ಜಮೀನನ್ನು ಮೂಲತಹವಾಗಿ ಬಂಟ್ವಾಳ ತಾಲೂಕು ಸರಪಾಡಿ ಗ್ರಾಮದ **ಬಿ. ಕೊರಗಪ್ಪ ಶೆಟ್ಟಿ** ಎಂಬವರು ತಾರೀಕು 22-08-1972ರಲ್ಲು ಬಂಟ್ವಾಳ ಸ.ರಿ.ಆಫೀಸಿನ ದಸ್ತಾವೇಜು ನಂಬ್ರ 258/1972-73 ರಂತೆ ರಿಜಿಸ್ಟ್ರಿ ಆದ ಕ್ರಯ ದಸ್ತಾವೇಜು ಪ್ರಕಾರ ಕ್ರಯಕ್ಕೆ ಪಡೆದಿರುತ್ತಾರೆ. ಸದ್ರಿ ಬಿ.ಕೊರಗಪ್ಪ ಶೆಟ್ಟಿ ಮೃತಪಟ್ಟ ನಂತರ ಅವರ ಪತ್ನಿ ಮತ್ತು ಮಕ್ಕಳು ತಾರೀಕು 20-11-2007 ರಲ್ಲು ಬಂಟ್ವಾಳ ಸ.ರಿ.ಆಫೀಸಿನ ದಸ್ತಾವೇಜು ನಂಬ್ರ BNT-1-01620/2007-08ರಂತೆ ರಿಜಿಸ್ಟ್ರಿ ಆದ ಸ್ಥಿರಾಸ್ತಿಯ ಜೊತೆ ಹಕ್ಕು ರಿಲೀಸ್ ದಸ್ತಾವೇಜು ಬರಕೊಟ್ಟು ಜಮೀನಿನಲ್ಲಿದ್ದಂತಹ ತಮ್ಮ ಅವಿಭಜಿತ ಹಕ್ಕನ್ನು ಸುಕುಮಾರ.ಕೆ ಶೆಟ್ಟಿ ಎಂಬವರಿಗೆ ಬಿಟ್ಟು ಕೊಟ್ಟಿರುತ್ತಾರೆ. ಸದ್ರಿ ಸುಕುಮಾರ ಶೆಟ್ಟಿಯವರು ಮೃತ ಪಟ್ಟ ನಂತರ ಅವರ ಪತ್ನಿ ಮತ್ತು ಮಕ್ಕಳು ಕೆಳಗೆ ವಿವರಿಸಿದ ಜಮೀನನ್ನು ತಾರೀಕು 24-09-2024 ರಲ್ಲು ಬಂಟ್ವಾಳ ಸ.ರಿ.ಆಫೀಸಿನ ದಸ್ತಾವೇಜು ನಂಬ್ರ BNT-1-03101/2024-25ರಂತೆ ರಿಜಿಸ್ಟ್ರಿ ಆದ ಕ್ರಯ ಪತ್ರದ ಪ್ರಕಾರ ಶುಭಂ ನಾಯಕ್ ಎಂಬವರಿಗೆ ಮಾರಾಟ ಮಾಡಿರುತ್ತಾರೆ. ಸದ್ರಿ ಜಮೀನನ್ನು ನನ್ನ ಕಕ್ಷಿಗಾರರು ಖರೀದಿಸುವರೇ ನಾನು ಹಕ್ಕು ದಾಖಲೆಗಳನ್ನು ಪರಿಶೀಲಿಸುತ್ತಿದ್ದು ಮೇಲೆ ಹೇಳಿದ ತಾರೀಕು 20-11-2007 ರಲ್ಲು ಬಂಟ್ವಾಳ ಸ.ರಿ.ಆಫೀಸಿನ ದಸ್ತಾವೇಜು ನಂಬ್ರ BNT-1-01620/2007-08 ರಂತೆ ರಿಜಿಸ್ಟ್ರಿ ಆದ ಸ್ಥಿರಾಸ್ತಿಯ ಜೊತೆ ಹಕ್ಕು ರಿಲೀಸ್ ದಸ್ತಾವೇಜಿನ ಮೂಲಪ್ರತಿ ಕಳೆದು ಹೋಗಿರುತ್ತದೆ ಎಂದು ತಿಳಿಸಿರುತ್ತಾರೆ.

ಆದ್ದರಿಂದ ಸದ್ರಿ ಜೊತೆ ಹಕ್ಕು ರಿಲೀಸ್ ದಸ್ತಾವೇಜಿನ ಮೂಲ ಪ್ರತಿ ಯಾರದ್ದಾದರೂ ವಶ ಇದ್ದಲ್ಲಿ ಯಾ ಜಮೀನಿನ ಹಕ್ಕಿನ ಬಗ್ಗೆ ಯಾರಾದ್ದಾದರು ಕ್ಲೇಮು, ತಕರಾರು ವಗೈರೆ ಇದ್ದಲ್ಲಿ, ಯಾ ಜಮೀನಿನ ಮಾರಾಟದ ಬಗ್ಗೆ ಯಾವುದೇ ಆಕ್ಷೇಪ ಇದ್ದಲ್ಲಿ ಈ ಪ್ರಕಟಣೆಯ ಏಳು ದಿನದ ಒಳಗೆ ಕೆಳಗೆ ಸಹಿಮಾಡಿದ ನನಗೆ ಲಿಖಿತವಾಗಿ ತಿಳಿಸತಕ್ಕದ್ದು, ಇಲ್ಲವಾದಲ್ಲಿ ಆಕ್ಷೇಪ ಇಲ್ಲವೆಂದು ತಿಳಿಯಲಾಗುವುದು.

ತಪಶೀಲು

ಬಂಟ್ವಾಳ ತಾಲೂಕು, ಬಂಟ್ವಾಳ ಸ.ರಿ.ಆಫೀಸು ವ್ಯಾಪ್ತಿಯ ಸರಪಾಡಿ ಗ್ರಾಮದ ಬಾಬ್ತು ಸ್ಥಿರಾಸ್ತಿ, ಸರ್ವೆ ನಂಬ್ರ 220/1-ಖುಷ್ಕಿ-4.15 ಎಕ್ರೆ.

ಸಹಿ/- **ಅಶ್ವಥ್ ಎನ್.**, ವಕೀಲರು,
ರಾಯಲ್ ಹೌಸ್, ಸಿವಿಲ್ ನ್ಯಾಯಾಲಯದ ಎದುರು, ಬಿ.ಸಿ.ರೋಡ್, ಬಂಟ್ವಾಳ ತಾಲೂಕು.

IN THE COURT OF THE V ADDITIONAL PRINCIPAL JUDGE FAMILY COURT AT BENGALURU

M.C. No. 7657/2025

BETWEEN : Smt. Suchitra .S.R. ...Petitioner
AND : Sri. Nagaraj .S.V. ...Respondent

SUMMONS TO RESPONDENT UNDER ORDER V RULE 20 OF CPC.

Sri. Nagaraj .S.V, S/o Late Venkataramana Setty Aged about 50 years, R/at No. Shanthalli Village & Post, Somavarapete Taluk, Kodagu District-571236.

Whereas the petitioner has filed the above petition for Decree of Divorce against respondent. Therefore, you are hereby summoned to appear before The V Addl. Principal Judge, Family Court **on 23/04/2026 at 11.00 AM** either in person or through a pleader duly instructed and able to answer all material questions relating to the above divorce petition. Take notice that in default of your appearance on the day mentioned the above matrimonial case will be heard and decided Exparte.

Given under my hand and seal of this Hon'ble court this the 09th day of February 2026 at Bengaluru.

By Order of the Court, Senior Sheristedar, Family Court, Bengaluru.

Advocate for Petitioner : **D. Narayana Shetty** & **Chandra Shekar .G.A.,** Advocates,
Nature Law Associates
No.4, 1st Floor, 4th Main, K.R. Road, Obalappa Garden, Bengaluru-560 070. Ph: 9342258224

IN THE COURT OF THE PRL CIVIL JUDGE AND JMFC AT MADIKERI

C.RMC.NO. 54 OF 2026

Petitioners:

1. Keshava.H. A. S/o Late Annu Aged 48 years, R/o Udathmotte, Heravanadu Village And Post, Madikeri Taluk, Kodagu District.
2. **Janaki H. A.** W/o. late Annu Aged 63 years R/o Udathmotte, Heravanadu Village And Post, Madikeri Taluk, Kodagu District
3. **Sri P.A.Chandra** S/o Late Annu Aged 48 years, R/o Udathmotte, Heravanadu Village And Post, Madikeri Taluk, Kodagu District

Vs

Respondent:
The Birth and Death Registrar, Represented by The Tahasildar, Madikeri Taluk, Kodagu District.

PUBLIC NOTICE

Take notice that the petitioners have filed the above case to obtain death certificate of father of the petitioner No.1 and 3 and husband of the petitioner No.2. Respectively P. Annu he died on 15.09.2017 at Heravanadu Village and Post, Madikeri Taluk, Kodagu District. Whoever having any objection to the above petition may appear before the Hon'ble Prl. Civil Judge and JMFC at Madikeri vide **Cr.M.C.54/2026 on 07.04.2026 at 11.00 A.M.** either personally are through advocate failing which the case will be heard and procedure with as per law.

Dated 19th Day of February, 2026 at Madikeri, Kodagu District, Karnataka State.

(By Order of the Court)
Sd/- Chief Ministerial Officer
Civil Judge & JMFC Madikeri at Kodagu
Sd/- **Sri H.U.Sudeesh**
Advocate, Madikeri, Kodagu

IN THE COURT OF THE PRINCIPAL SENIOR CIVIL JUDGE, MANGALORE

G&WC. No. 18/2026

(IN THE MATTER OF APPOINTMENT OF GUARDIAN OF THE MINOR, MASTER ADITHYA BHAT)

Between,
Mr.Dinkar Bhat,
S/O.Lalitha, Aged about 49 years, Residing at 16-138A, Panchajanya, Near Katyayani Apartment, Ananthanagar, 2nd Stage, Manipal, Udupi-576104
- Petitioner

AND

Nil - Respondent

TO WHOMSOEVER MAY IT CONCERN

That the petitioner has filed the above petition under Section 7 to 10, 28 and 29 of the Guardian and Wards Act before this court for appointing him as the guardian in respect of the property of the minor **MASTER ADITHYA BHAT.**

That the said case is now posted to the **13th day of March 2026** for hearing. Anyone desiring to oppose the said application may appear before this court on the above said date and contest the case, failing which the case will be heard and determined as if there is no objection.

Given under my hand and seal of the court on this the 16th day of February 2026.

(By order of court)
Sd/-Chief Ministerial Officer,
Civil Judge (Sr. Dn), Mangalore
Sd/-Y.B. Prakhyath Rai,
Advocate, Mannagudda, Mangalore
(Advocate for the Petitioner)
Place: Mangalore.
Date: 20-02-2026

IN THE COURT OF THE II ADDL. SENIOR CIVIL JUDGE AND CJM COURT AT MANGALORE, D.K.

Mis Case 12/2023

Bank of Baroda Surathkal Branch ...Petitioner

And

Mohammad Iqbal ...Respondent

NOTICE

To the Respondent
1. Mr. Mohammad Iqbal
S/o Krishnapura Mohammad
Aged 44 years
R/at Door No 6-30,
6th Block, Krishnapura
Katipalla Surathkal
Mangaluru Tq-575014

Please take notice that the petitioner named above has filed the above suit against you. The said suit stands posted for your appearance in person or through pleader before the above said Honourable Court at **11.00 A.M. on 06-04-2026.** If you fail to appear, the matter will be decided in your absence according the merits of the case treating you ex-parte by the court.

Given under my hand and the sea of the court on this 16-02- 2026.

Sd/- Chief Ministerial Officer
Court of Senior Civil Jedge & CJM Mangaluru, D.K.
Sd/- (ABS)
Advocate
Mangalore, D.K.
Date: 12-02-2026

ಪುತ್ತೂರು ಮಾರುಕಟ್ಟೆ ಧಾರಣೆ

20-02-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	260 - 485	ಹಳೆ ಕರಿಗೋಟು	240 - 270
ಚೋಲ್ ಅಡಿಕೆ	515 - 545	ಹಸಿ ಕೊಕ್ಕೋ	80 - 110
ಡಬಲ್ ಚೋಲ್	515 - 545	ಒಣ ಕೊಕ್ಕೋ	380 - 380
ಹೊಸ ಪಟೋರ	365 - 415		
ಹಳೆ ಪಟೋರ	400 - 430		
ಹೊಸ ಉಳ್ಳಿ	115 - 300		
ಹಳೆ ಉಳ್ಳಿ	105 - 305		
ಹೊಸ ಕೋಕಾ	330 - 350		
ಹಳೆ ಕೋಕಾ	355 - 375		
ಹೊಸ ಕರಿಗೋಟು	240 - 270		

ಕಾಳುಮೆಣಸು ಧಾರಣೆ

ಕಾಳುಮೆಣಸು	465 - 665

ರಬ್ಬರ್ ಧಾರಣೆ : ಗ್ರೇಡ್

ಆರ್‌ಎಸ್‌ಎಸ್ 1	209.50
ಆರ್‌ಎಸ್‌ಎಸ್ 2	191.00
ಸ್ಕ್ರಾಪ್ 1	132.00
ಸ್ಕ್ರಾಪ್ 2	123.00

ಕರ್ನಾಟಕ ಗೃಹ ಮಂಡಳಿ

Karnataka Housing Board

3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು-560009

ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದಿರುವ ಗುತ್ತಿಗೆದಾರರು ಹಾಗೂ ಪಡೆಯಲು ಇಚ್ಛಿಸುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗೆ ಟೆಂಡರ್‌ನ್ನು ಕರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

ಕಾಮಗಾರಿಯ ಹೆಸರು: ಮಂಡ್ಯ ಜಿಲ್ಲೆ, ಚಿಕ್ಕಮಂಡ್ಯ ಕೆ.ಹೆಚ್.ಬಿ ಬಡಾವಣೆಯಲ್ಲಿ ಜಂಗಲ್ ಕ್ಲಿಯರೆನ್ಸ್ ಮತ್ತು ಇತರೆ ಅಭಿವೃದ್ಧಿ ಕಾಮಗಾರಿ. **Work Indent :** KHB/2025-26/OW/Work_Indent 715 & IFT No.158/2025-26 Date: 20.02.2026. ಟೆಂಡರ್‌ಗಿಟ್ಟ ಮೊತ್ತ : ರೂ.1,71,94,978/-.

ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ: 07.03.2026 ಸಂಜೆ 4.00 ಗಂಟೆಗೆ

ಕಾಮಗಾರಿಗಳ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080-22273511/ 080-22100077 website: https://kppp.karnataka.gov.in

ಸಹಿ/- ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/5795/ಆಕಾರ್/2025-26

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ

ಕಾಮಗಾರಿ ಇಲಾಖೆ, ಹುಬ್ಬಳ್ಳಿ.

ಸಂ:ವಾಕರಸಾಸಂ:ಕಾನಿಅ:ನಕ್ಷೆ:ಹು:1168:2025-26 ದಿನಾಂಕ: 20-02-2026

ಟೆಂಡರ್ ಪ್ರಕಟಣೆ

KPPP Portal ಪದ್ಧತಿಯಲ್ಲಿ ಕೆ.ಪಿ.ಡಬ್ಲ್ಯೂ.ಡಿ/ಸಿ.ಪಿ.ಡಬ್ಲ್ಯೂ.ಡಿ/ಎಂ.ಇ.ಎಸ್ ನಲ್ಲಿ ನೋಂದಾಯಿತ ಅರ್ಹತೆಯುಳ್ಳ ಸಿವಿಲ್ ಗುತ್ತಿಗೆದಾರರಿಂದ ದ್ವಿ-ಲಕೋಟೆ ಆಧಾರದ ಮೇಲೆ ಈ ಕೆಳಕಂಡ ಕಾಮಗಾರಿಗಳಿಗೆ KPPP Portal ಸ್ಟ್ಯಾಂಡರ್ಡ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರನ್ನು ಆಹ್ವಾನಿಸಲಾಗಿದೆ. ಈ ಕೆಳಕಂಡ ಕಾಮಗಾರಿಗಳಿಗೆ KPPP Portal ನಲ್ಲಿ ಬಿಡುಗಡೆಯಾಗಿರುವಂತೆ ಅರ್ಹ ದರ್ಜೆ 1 ಹಾಗೂ ಮೇಲ್ಪಟ್ಟ ಗುತ್ತಿಗೆದಾರರು ಇ-ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ **http://kppp.karnataka.gov.in** ನಲ್ಲಿ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರ್‌ನಲ್ಲಿ ಭಾಗವಹಿಸಬಹುದು. ಯಾವುದೇ ತಿದ್ದುಪಡಿ/ದಿನಾಂಕಗಳಲ್ಲಿನ ಬದಲಾವಣೆಗಳಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್ ನಲ್ಲಿ ಮಾತ್ರ ಪ್ರಕಟಿಸಲಾಗುವುದು, ಈ ಕುರಿತು ಪ್ರತ್ಯೇಕ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಟೆಂಡರ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 07.03.2026, 16.00 ಘಂಟೆ

ಕಾಮಗಾರಿಯ ಹೆಸರು	ಕಾಮಗಾರಿ ಇಂಡೆಂಟ್ ಸಂಖ್ಯೆ	ಟೆಂಡರಿಗೆ ಇಟ್ಟ ಅಂದಾಜು ಮೊತ್ತ(ರೂ. ಗಳಲ್ಲಿ)	ಮುಂಗಡ ಠೇವಣಿ ಹಣ(ರೂ. ಗಳಲ್ಲಿ)
ಧಾರವಾಡ ಬಸ್ ಘಟಕದಲ್ಲಿ ಅಭಿವೃದ್ಧಿ ಕೆಲಸಗಳನ್ನು ನಿರ್ವಹಿಸುವುದು	NWKRTC/2025-26/BD/ WORK_INDENT72	6,77,66,500/-	10,16,500/-

ಹೆಚ್ಚಿನ ವಿವರಗಳಿಗೆ ಸಹಾಯವಾಣಿ (help desk) 91-8046010000, 91-8068948777, 0836-2332383 ಗೆ ಸಂಪರ್ಕಿಸಬಹುದಾಗಿದೆ.

ಸಹಿ/-
ಕಾರ್ಯನಿರ್ವಾಹಕ ಅಭಿಯಂತರರು,
ವಾಕರಸಾಸಂಸ್ಥೆ, ಕಾಮಗಾರಿ ಇಲಾಖೆ, ಕೇಂದ್ರ ಕಛೇರಿ, ಹುಬ್ಬಳ್ಳಿ.
ವಾಸಾಸಂಇ/ಧಾ/ದಿಶಾ/1258/2025-26

ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಇಲಾಖೆ

ಬೆಂಗಳೂರು ವಿಭಾಗ, 2ನೇ ಮಹಡಿ, ಲೋ.ಇ. ಪೂರಕ ಕಟ್ಟಡ, ಕೆ.ಆರ್. ವೃತ್ತ, ಬೆಂಗಳೂರು-560 001. ದೂರವಾಣಿ: 080-22133370

ಸಂಖ್ಯೆ: 58/2025-26 ದಿನಾಂಕ: 19.02.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ರಾಜ್ಯಪಾಲರ ಪರವಾಗಿ ಕೆ.ಟಿ.ಪಿ.ಪಿ. 2000 ರನ್ವಯ ಮತ್ತು ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಬೆಂಗಳೂರು ವಿಭಾಗ ವ್ಯಾಪ್ತಿಯಲ್ಲಿನ **ನೆಲಮಂಗಲ ಉಪವಿಭಾಗಕ್ಕೆ** ಸಂಬಂಧಿಸಿದಂತೆ **01 ಸಂಖ್ಯೆಯ (ರೂ. 185.00 ಲಕ್ಷಗಳ)** ಕಾಮಗಾರಿಗೆ ಟೆಂಡರ್ ಪ್ರಕಟಣೆಯನ್ನು ಹೊರಡಿಸಿದ್ದು, ಕಾಮಗಾರಿಯ ವಿವರಗಳನ್ನು ಮೇಲ್ಕಂಡ ಕಛೇರಿಯ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ. ಟೆಂಡರ್ ಪ್ರಕ್ರಿಯೆಗೆ ಈ ಕೆಳಕಂಡಂತೆ ದಿನಾಂಕಗಳನ್ನು ನಿಗದಿಪಡಿಸಲಾಗಿದೆ. ಕಾಮಗಾರಿಯ ಇ.ಎಂ.ಡಿ **ಮೊತ್ತವನ್ನು ಮತ್ತು ಟೆಂಡರ್ ಪ್ರೊಸೆಸಿಂಗ್ ಶುಲ್ಕವನ್ನು ಕೆಪಿಪಿ-ಪೋರ್ಟಲ್‌ನಲ್ಲಿ ಸೂಚಿಸಲಾಗಿದೆ.**

(1) ಟೆಂಡರ್‌ಗಳನ್ನು ಆನ್‌ಲೈನ್‌ನಲ್ಲಿ ಇ-ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ **ದಿನಾಂಕ: 26.02.2026 ಸಂಜೆ 4.00 ಗಂಟೆಯವರೆಗೆ.**
(2) ಟೆಂಡರ್‌ಗಳನ್ನು ಇ-ಪೋರ್ಟಲ್ ಮೂಲಕ ತೆರೆಯುವ **ದಿನಾಂಕ: 27.02.2026 ಸಂಜೆ 4.30 ಗಂಟೆಗೆ** ಅಥವಾ ಮುಂದೆ ತಿಳಿಸಬಹುದಾದ ದಿನಾಂಕ ಮತ್ತು ಸಮಯ.
ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಸಂಪರ್ಕಿಸುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು.
ವಾಸಾಸಂಇ/ಉನಿ-ಸಿ.ಪಿ/5768/ಕೆಎಸ್‌ಎಂಸಿಎ/2025-26

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ಬಳ್ಳಾರಿ

ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ.

ಕ್ರ.ಸಂ/ಕಾನಿಅ/ಗ್ರಾ.ಕು.ನೀ.ನೈ.ವಿ/ಬ/ಸ.ಇಂ/ CMIDP/ಟೆಂಡರ್.ಪ್ರ/2025-26/1684
ದಿನಾಂಕ:19.02.2026

ಇ-ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ-2000 ರಂತೆ)

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ ಇವರು ಬಳ್ಳಾರಿ ಜಿಲ್ಲೆಯ ಬಳ್ಳಾರಿ ಜಿಲ್ಲೆಯ ಕಂಪ್ಲಿ ತಾಲ್ಲೂಕಿಗೆ ಮಾನ್ಯ ಮುಖ್ಯಮಂತ್ರಿಗಳ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿಯಲ್ಲಿ **(CMIDP)** ಅನುಮೋದನೆಗೊಂಡ "Construction of an Overhead Tank (OHT) in Korlagundi village OF Ward No. 1 and Ward No. 6, in Shridharagadde, in Jalibenchi, in Shriramarangapura and in Yerangalli villages. (Indent No: RWSSD/ 2025 26/WS/WORK_INDENT9832/CALL-2)" ಕಾಮಗಾರಿಯನ್ನು ಕರ್ನಾಟಕ ಸರ್ಕಾರದ ಲೋಕೋಪಯೋಗಿ ಇಲಾಖೆಯಿಂದ ನೊಂದಾಯಿತ ಅರ್ಹ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನ ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ದಿನಾಂಕ:20.02.2026 ರಿಂದ 27.02.2026 ರಂದು ಸಂಜೆ 4.00 ರವರೆಗೆ ಸಲ್ಲಿಸ ಬಹುದಾಗಿರುತ್ತದೆ, ತಾಂತ್ರಿಕ ಬಿಡ್ ದಿನಾಂಕ:02.03.2026 ರಂದು ಸಂಜೆ 5.00 ಗಂಟೆಗೆ ತೆರೆಯಲಾಗುವುದು ಹಾಗೂ ದಿನಾಂಕ 23.02.2026 ರಂದು ಬೆಳಗ್ಗೆ 11.30 ಗಂಟೆಗೆ ಪೂರ್ವಭಾವಿ ಸಭೆಯನ್ನು, ಮಾನ್ಯ ಅಧೀಕ್ಷಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತ, ಬಳ್ಳಾರಿ ಕಛೇರಿಯಲ್ಲಿ ಕರೆಯಲಾಗಿದೆ, ಕಾಮಗಾರಿಗಾಗಿ ಟೆಂಡರ್ ಸಲ್ಲಿಸಲು ನಿಗಧಿ ಪಡಿಸಿದ ಅರ್ಹತೆ, ಷರತ್ತುಗಳು, ಕಾಮಗಾರಿ ವಿವರ ಇತ್ಯಾದಿಗಳನ್ನು ದಿನಾಂಕ: 23.02.2026 ರ ಸಂಜೆ 4.00 ಗಂಟೆಯವರಗೆ ವಿಭಾಗ, ಕಛೇರಿಯಲ್ಲಿ ಅಥವಾ "ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ" ಹೆಲ್ಪ್ ಡೆಸ್ಕನಿಂದ ಪಡೆಯಬಹುದು. ಇನ್ನೂ ಹೆಚ್ಚಿನ ಮಾಹಿತಿಗಾಗಿ ಈ ವಿಭಾಗ ಕಛೇರಿ ಸಮಯದಲ್ಲಿ ಭೇಟಿ ನೀಡಿ ಮಾಹಿತಿಯನ್ನು ಪಡೆಯ ಬಹುದು.

ಸಹಿ/-ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಕುನೀ&ನೈ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/1034/ಕೆಎಸ್‌ಎಂಸಿಎ/2025-26

ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಮೈಸೂರು ವಿಭಾಗ, ಮೈಸೂರು.
www:eepwdmys21@gmail.com
ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821-2420810

ಈ ಕಛೇರಿ ಐಟಂವಾರು ಟೆಂಡರ್ ಪ್ರಕಟಣೆ ಸಂ:34/2025-26 ದಿ:16.02.2026

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರಿಂದ ಈ ವಿಭಾಗದಡಿಯಲ್ಲಿನ ನಂ.2 ವಿಶೇಷ ಉಪ ವಿಭಾಗ, ಮೈಸೂರು ವ್ಯಾಪ್ತಿಯಲ್ಲಿ ಲೆಕ್ಕ ಶೀರ್ಷಿಕೆ-8443 ಠೇವಣಿ ವಂತಿಕೆ ಅಡಿಯಲ್ಲಿ ಅನುಮೋದನೆಯಾದ "ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ವರುಣ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ತಗಡೂರು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಕಟ್ಟಡ ನಿರ್ಮಾಣ ಕಾಮಗಾರಿಗೆ" ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ-4ರ ಷರತ್ತು ಮತ್ತು ನಿಯಮಗಳನ್ವಯ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪಾರದರ್ಶಕ ನಿಯಮ 2000 ರಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಕೆಪಿಪಿ ಪೋರ್ಟ್‌ಲ್‌ನಲ್ಲಿ ನೊಂದಾಯಿಸಿರುವ 1ನೇ ದರ್ಜೆ ಲೋಕೋಪಯೋಗಿ ಗುತ್ತಿಗೆದಾರರು ಕೆಪಿಪಿ ಪೋರ್ಟ್‌ಲ್‌ನಲ್ಲಿ (viz https://kppp.karnataka.gov.in/) ಭಾಗವಹಿಸಬಹುದಾಗಿರುತ್ತದೆ. ಸದರಿ ಕಾಮಗಾರಿಗೆ ದಿ:17.02.2026 ರಿಂದ 20.03.2026, ರ ಸಂಜೆ 17:00ರ ವರೆಗೆ ಟೆಂಡರ್ ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಿಟ್ಟ ಮೊತ್ತ ರೂ. 555.69 ಲಕ್ಷಗಳು ಹಾಗೂ ಇ.ಎಂ.ಡಿ ರೂ.8.34 ಲಕ್ಷಗಳಾಗಿರುತ್ತದೆ, ಕಾಮಗಾರಿಗಳನ್ನು ಪೂರ್ಣಗೊಳಿಸುವ ಕಾಲಮಿತಿ:11 ತಿಂಗಳು(ಮಳೆಗಾಲ ಸೇರಿದಂತೆ). ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಯಾವುದೇ ಟೆಂಡರ್‌ನ್ನು ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಹೊಂದಿರುತ್ತಾರೆ. ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಕೆಪಿಪಿ ಪೋರ್ಟ್‌ಲ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

DIPR/DDMYS/1701/KSMCA/964/2025-26 ಸಹಿ/- ಕಾರ್ಯಪಾಲಕ ಇಂಜಿನಿಯರ್

ಕರ್ನಾಟಕ ಸರಕಾರ (ಲೋಕೋಪಯೋಗಿ, ಇಲಾಖೆ)

ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ ಲೋಕೋಪಯೋಗಿ ಇಲಾಖೆ, ಸೇಡಂ ವಿಭಾಗ ಜಿಲ್ಲೆಃ ಕಲಬುರಗಿ.

ಸಂ:ಕಾನಿಇಂ/ಲೋಇ./ಸೇವಿ/ತಾಶಾ-2/2025-26/3186 ದಿನಾಂಕ : 18-02-2026

-:: ಅಲ್ಪಾವಧಿ ಇ-ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ ::-

1) ಕಾಮಗಾರಿಯ ವಿವರ : 1. **ಸೇಡಂ ತಾಲೂಕಿನ** 04 ಕಾಮಗಾರಿಗಳ ಇಂಡೆಂಟ್ ಸಂ : 33021, 32859, 33191 (ಪ.ಜಾತಿ), & 33028 (ಪ್ರ-2ಎ), 2. **ಚಿತ್ತಾಪೂರ ತಾಲೂಕಿನ** 12 ಕಾಮಗಾರಿಗಳ ಇಂಡೆಂಟ್ ಸಂ : 32613 (ಪ.ಜಾತಿ), 32615 (ಪ್ರ-2ಎ), 32619 (ಪ್ರ-2ಎ), 32623 (ಪ.ಪಂಗಡ), 31953 (ಪ್ರ-2ಎ), 31947 (ಪ.ಜಾತಿ), 31957 (ಪ.ಪಂಗಡ), 31955 (ಪ್ರ-1), 32612 (ಪ.ಜಾತಿ), 32790, 32818, & 11245, 3. **ಚಿಂಚೋಳಿ ತಾಲೂಕಿನ** 03 ಕಾಮಗಾರಿಗಳ ಇಂಡೆಂಟ್ ಸಂ : 32443, 32676, 32454 (ಪ.ಪಂಗಡ), 2) ಲೆಕ್ಕ ಶೀರ್ಷಿಕೆ: 2025-26ನೇ ಸಾಲಿನ ಕೆ.ಕೆ.ಆರ್.ಡಿ.ಬಿ., 2018-19ನೇ ಸಾಲಿನ ಪ್ರಗತಿ ಕಾಲೋನಿ/ ಕಾಲೋನಿ ಅಭಿವೃದ್ಧಿ, 2025-26ನೇ ಸಾಲಿನ 5054 & 2023-24ನೇ ಸಾಲಿನ 8443 ಯೋಜನೆಯಡಿಯಲ್ಲಿನ ಕಾಮಗಾರಿಗಳು, 3) ಟೆಂಡರಿಗಿಟ್ಟ ಮೊತ್ತ: **ಕನಿಷ್ಠ ರೂ. 18.00 ಲಕ್ಷಗಳು, ಗರಿಷ್ಠ ರೂ. 324.16 ಲಕ್ಷಗಳು,** 4) ಗುತ್ತಿಗೆದಾರರ ಅರ್ಹತೆ: 4ನೇ ದರ್ಜೆ & ಮೇಲ್ಪಟ್ಟು, 5) ಪೂರ್ವಬಾವಿ ಸಭೆ : **25-02-2026 ಬೆಳಿಗ್ಗೆ 11:00 ಗಂಟೆಗೆ,** 6) ಟೆಂಡರ್ ಸ್ಪಷ್ಟೀಕರಣ ಪಡೆಯುವ ದಿನಾಂಕ: **27-02-2026 ಸಾಯಂಕಾಲ 17:30 ಗಂಟೆಯವರೆಗೆ,** 7) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ :ಟೆಂಡರ್ ಫಾರಂ ಬೆಲೆ & ಇ.ಎಮ್.ಡಿ ಇ-ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ, 8) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: **02-03-2026 ರ ಸಾಯಂಕಾಲ 16:00 ಗಂಟೆಯವರೆಗೆ.** 9) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **03-03-2026 ರ ಸಾಯಂಕಾಲ 16:30 ಗಂಟೆಯವರೆಗೆ.** 10) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: **05-03-2026 ರ ಸಾಯಂಕಾಲ 16:30 ಗಂಟೆಯವರೆಗೆ.** 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಇಂಜೀನಿಯರ್, ಲೋಕೋಪಯೋಗಿ ಇಲಾಖೆ, ವಿಭಾಗ ಸೇಡಂ, 12) ಅಂತರಜಾಲ ತಾಣದ ವಿಳಾಸ: www.kppp.karnataka.gov.in, 13) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ: ಯಾವುದೇ ಮಾರ್ಪಾಡು ಬದಲಾವಣೆಗಳನ್ನು www.kppp.karnataka.gov.in ಮಾಡಲಾಗುವುದು.

ಟಿಪ್ಪಣಿ : 1) ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಪ್ರಕ್ರಿಯೆಯ ಮುಂದೂಡುವಿಕೆ/ ಸಂಪೂರ್ಣವಾಗಿ ಟೆಂಡರ್ ರದ್ದುಗೊಳಿಸುವ/ಟೆಂಡರ್ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2) ಇನ್ನು ಮುಂದೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ, ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರ್
ವಾ.ಸಾ.ಸಂ.ಇ/ಕಲಬುರಗಿ/1102/ಕೆ.ಎಸ್.ಎಂ.ಸಿ.&ಎ/2025-26 ಲೋಕೋಪಯೋಗಿ, ಇಲಾಖೆ ವಿಭಾಗ ಸೇಡಂ

ಮಂಗಳೂರು ಮಹಾನಗರಪಾಲಿಕೆ

ಲಾಲ್ ಭಾಗ್, ಎಂ.ಜಿ.ರಸ್ತೆ, ಮಂಗಳೂರು - 575 003, ಕರ್ನಾಟಕ, ಭಾರತ
ಫೋನ್: 0824 2220313 -18, ಫ್ಯಾಕ್ಸ್: 0824 2220310 ವೆಬ್ ಸೈಟ್: www.mangalorecity.gov.in

ಕಂದಾವಿ/ಕದ್ರಿ ವಲಯ/ಆರ್ 6077/ಸಿ.ಆರ್ 499/2025-26/ಹೆಚ್-2/PLO:218730 ದಿನಾಂಕ: 19-02-2026

ಇ-ಟೆಂಡರ್ ಪ್ರಕಟಣೆ

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (KPPP-PORTAL) ಮುಖಾಂತರ)

ಮಂಗಳೂರು ಮಹಾನಗರಪಾಲಿಕೆ ಅಧೀನದ ಕದ್ರಿ ವಲಯ ಕಛೇರಿ ಕಾರ್ಯ ವ್ಯಾಪ್ತಿಯಲ್ಲಿರುವ ಕಣ್ಣೂರು ಮಾರುಕಟ್ಟೆಯ ನೆಲ ಅಂತಸ್ತಿನ ಅಂಗಡಿ/ಕೋಣೆ ನಂಬ್ರ-3 ರ 1 ವಾಣಿಜ್ಯ ಕೊಠಡಿಯನ್ನು 12 ವರ್ಷದ ಅವಧಿಗೆ ಟೆಂಡರ್ ಶರ್ತಕ್ಕೊಳಪಟ್ಟು ಗುತ್ತಿಗೆಗೆ ವಹಿಸಿ ವಿಲೇವಾರಿ ಮಾಡುವ ಕುರಿತು (ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (KPPP-PORTAL) ಮುಖಾಂತರ) ಟೆಂಡರ್ ಆಹ್ವಾನಿಸಲಾಗಿದೆ. ಮಾಸಿಕ ಬಾಡಿಗೆಯನ್ನು ಸರಕಾರಿ ಸವಾಲು ಎಂದು ಪರಿಗಣಿಸಿದ್ದು, ಮಾಸಿಕ ಬಾಡಿಗೆಯ ಮೇಲೆ ಅತೀ ಹೆಚ್ಚು ಬಿಡ್ಡು ಮೊತ್ತವನ್ನು ಸೂಚಿಸುವ ಬಿಡ್ಡುದಾರರು ಯಶಸ್ವಿ ಬಿಡ್ಡುದಾರರಾಗುತ್ತಾರೆ. ಆಸಕ್ತಿಯುಳ್ಳ ಸಂಸ್ಥೆ ಯಾ ವ್ಯಕ್ತಿಗಳು ಇ.ಎಂ.ಡಿ, ಮೊತ್ತವನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (KPPP-PORTAL) ಮುಖಾಂತರ ಪಾವತಿಸಿ ಟೆಂಡರ್ ಪ್ರಕ್ರಿಯೆಯಲ್ಲಿ ಭಾಗ ವಹಿಸಬಹುದಾಗಿದೆ.

ಟೆಂಡರ್ ಪ್ರಕಟಣೆ ಸಂಖ್ಯೆ: MCC/REV/KADRI ZONE/R.6077/CR.499/2025-26/H-2

ಇ.ಎಂಡಿ ಮೊತ್ತ	ರೂ. 10,000/- (ರೂಪಾಯಿ ಹತ್ತು ಸಾವಿರ ಮಾತ್ರ)
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ದಿನಾಂಕ: 18-03-2026 ಅಪರಾಹ್ನ 04.30
ಟೆಂಡರ್ ತೆರೆಯುವ ದಿನಾಂಕ	ದಿನಾಂಕ: 20-03-2026 ಅಪರಾಹ್ನ 04.30

ಕ್ರ. ಸಂ	ಇಂಡೆಂಟ್ ನಂ:	ಕೊಠಡಿ ಸಂಖ್ಯೆ	ಅಂತಸ್ತು	ವಿಸ್ತೀರ್ಣ (ಚ.ಅ)	(ನಿಗದಿಪಡಿಸಿದ ಮಾಸಿಕ ಬಾಡಿಗೆ ಸರಕಾರಿ ಸವಾಲು) (ಜಿ.ಎಸ್.ಟಿ ತೆರಿಗೆ ಹೊರತು ಪಡಿಸಿ)	ನಿಗದಿಪಡಿಸಿದ ಠೇವಣಿ ಮೊತ್ತ	ಕಾಯ್ದಿರಿಸಲಾದ ಅಂಗಡಿ/ ಕೋಣೆ
1	DMA/2025-26/SE 7343	ಕಣ್ಣೂರು ಮಾರುಕಟ್ಟೆಯ ನೆಲ ಅಂತಸ್ತಿನ ಅಂಗಡಿ/ಕೋಣೆ ನಂ-3	ನೆಲ	125	2,300/-	1,33,750/-	ಸಾಮಾನ್ಯ

1. ಟೆಂಡರ್ ಶರ್ತಕ್ಕೊಳಪಟ್ಟು ನಿಗದಿಪಡಿಸಿದ ಮಾಸಿಕ ಬಾಡಿಗೆ ಮೊತ್ತದ ಮೇಲೆ ಅತೀ ಹೆಚ್ಚು ಮೊತ್ತವನ್ನು ಸೂಚಿಸುವ ಸವಾಲನ್ನು ಸ್ವೀಕರಿಸಲಾಗುವುದು. (2) ಹೆಚ್ಚಿನ ವಿವರಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (KPPP-PORTAL) ವೆಬ್‌ಸೈಟ್: www.kppp.karnataka.gov.in ನಲ್ಲಿ ಮಾಹಿತಿಯನ್ನು ಪಡೆಯಬಹುದು. (3) ಟೆಂಡರ್ ಮೊತ್ತದ (ಮಾಸಿಕ ಬಾಡಿಗೆ) ಮೇಲೆ ಅನ್ವಯವಾಗುವ ಜಿ.ಎಸ್.ಟಿ/ತೆರಿಗೆಯನ್ನು ಗುತ್ತಿಗೆದಾರರೇ ಪ್ರತ್ಯೇಕವಾಗಿ ಪಾವತಿಸತಕ್ಕದ್ದು.

ಸಹಿ/-, ಆಯುಕ್ತರು,
ಮಂಗಳೂರು ಮಹಾನಗರಪಾಲಿಕೆ,
DIPR/DK/KSMCA/1642/25-26 dt.20.02.2026

ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಅಭಿಯಂತರವರ ಕಛೇರಿ, ಲೋಕೋಪಯೋಗಿ ಇಲಾಖೆ, ದಾವಣಗೆರೆ ವಿಭಾಗ, ದಾವಣಗೆರೆ.

ಪ್ರಕಟಣೆ ಸಂ: ಐಎಫ್‌ಟಿ-46/ಎಇ-1/2025-26 ದಿನಾಂಕ:- 20.02.2026

ಅಲ್ಪಾವಧಿ ಕೆಪಿಪಿಪಿ ಟೆಂಡರ್ ಪ್ರಕಟಣೆ (2ನೇ ಕರೆ)

ಉಲ್ಲೇಖ: ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ : ಕಾಅ/ದಾವಿದಾ/ಐ.ಎಫ್.ಟಿ 46/ಎಇ-1/2025-26 ದಿನಾಂಕ: 20.02.2026.

ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ ವಿಭಾಗ ವ್ಯಾಪ್ತಿಯಲ್ಲಿನ ದಾವಣಗೆರೆ ತಾಲ್ಲೂಕಿಗೆ ಸಂಬಂಧಿಸಿದಂತೆ ಕೆಳಗೆ ಸಹಿ ಮಾಡಿರುವವರಿಂದ ಕರ್ನಾಟಕ ರಾಜ್ಯಪಾಲರ ಪರವಾಗಿ ಕೆಟಿಪಿಪಿ-2000ರನ್ವಯ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದಂತೆ ಲೆಕ್ಕಶೀರ್ಷಿಕೆ : 4059~80~051~0~60~132~ ಮುಖ್ಯ ಮಂತ್ರಿಗಳ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ ಇತರೆ ಬಂಡವಾಳ ವೆಚ್ಚಗಳು 1 ಕಾಮಗಾರಿಗೆ ಮೊತ್ತ 350.00 ಲಕ್ಷ (ಇಂಡೆಂಟ್ ನಂ. 31680/CALL-2) ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್ ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿ ಮಾಡಿದ ಅರ್ಹ ಟೆಂಡರ್‌ದಾರರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ಅನ್ನು ಆಹ್ವಾನಿಸಲಾಗಿದೆ.

(1) ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 20.02.2026 ಸಂಜೆ 4.00 ಗಂಟೆಗೆ
(2) ಪ್ರಿಬಿಡ್ ಮೀಟಿಂಗ್ ಸ್ಥಳ : ಕಾರ್ಯಪಾಲಕ ಇಂಜಿನಿಯರ್, ಲೋಇ ವಿಭಾಗ, ಪಿ.ಬಿ ರಸ್ತೆ, ದಾವಣಗೆರೆ, ದಿನಾಂಕ 23.02.2026 ಬೆಳಗ್ಗೆ 11.30 ಗಂಟೆಗೆ
(3) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 06.03.2026 ಸಂಜೆ 4.00 ಗಂಟೆಗೆ
(4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 07.03.2026 ಸಂಜೆ 4.30 ಗಂಟೆಗೆ
ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯ ಕೆಲಸದ ವೇಳೆಯಲ್ಲಿ (ದೂರವಾಣಿ : 08192 234951, 231530) ಅಥವಾ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದು.

ವಾಸಾಇ/ಡಿವಿಜಿ/762/ಕೆಎಸ್‌ಎಂಸಿಎ/2025-26
ಸಹಿ/- ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ ದಾವಣಗೆರೆ

ತುಮಕೂರು ಜಿಲ್ಲಾ ಪಂಚಾಯತ್

ಕಾರ್ಯಪಾಲಕ ಅಭಿಯಂತರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ತುಮಕೂರು ವಿಭಾಗ, ತುಮಕೂರು
ದೂರವಾಣಿ ಸಂಖ್ಯೆ: 0816-2252937.

ಸಂ: 22/ ಕಾಪಾಅ/ಗ್ರಾ.ಕು.ನೀ.ನೈ ವಿ/ತುಮ/ಸ.ಇಂ/MVS O&M/2025-26/3594 ದಿನಾಂಕ: 16-02-2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 22/2025-26

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ ಮತ್ತು ನೈರ್ಮಲ್ಯ ವಿಭಾಗ, ತುಮಕೂರು ಇವರು 2025-26 ನೇ ಸಾಲಿಗೆ ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಸೂಕ್ತ ನೊಂದಾಯಿತ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ನ ವಿವರ ಈ ಕೆಳಕಂಡಂತಿರುತ್ತದೆ.

ತುಮಕೂರು ಜಿಲ್ಲೆ ವ್ಯಾಪ್ತಿಯಲ್ಲಿ ಬಹು ಗ್ರಾಮ ಕುಡಿಯುವ ನೀರಿನ ಯೋಜನೆಯಡಿ ಅನುಮೋದನೆಗೊಂಡಿರುವ ಗುಬ್ಬಿ ತಾಲ್ಲೂಕಿನ 03 ಕಾಮಗಾರಿಗಳಿಗೆ ಕೊರಟಗೆರೆ ತಾಲ್ಲೂಕಿನ 01 ಕಾಮಗಾರಿಗಳಿಗೆ ಮತ್ತು ತುಮಕೂರು ತಾಲ್ಲೂಕಿನ 04 ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ **https://kppp.karnataka.gov.in/** ಬಿಡ್ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ಅ) ಕಾಮಾರಿ ಕನಿಷ್ಠ ಮೊತ್ತ **ರೂ. 65.56 ಲಕ್ಷಗಳು** ಇ.ಎಂ.ಡಿ ಮೊತ್ತ **ರೂ. 1,31,200/-** ಗಳು ಆ) ಕಾಮಗಾರಿ ಗರಿಷ್ಠ ಮೊತ್ತ **ರೂ. 156.20 ಲಕ್ಷಗಳು,** ಇಂಎಂಂಡಿ ಮೊತ್ತ **ರೂ. 2,34,300/-** ಗಳು (1) ಭರ್ತಿ ಮಾಡಿದ ಟೆಂಡರನ್ನು ಸಲ್ಲಿಸುವ ಅಂತಿಮ **ದಿನಾಂಕ: 06-03-2026 ಸಂಜೆ 5:00 ಘಂಟೆವರೆಗೆ** (2) ಪೂರ್ವಭಾವಿ ಸಭೆ **ದಿನಾಂಕ: 27-02-2026** ಕಾರ್ಯಪಾಲಕ ಅಭಿಯಂತರರು ಗ್ರಾ.ಕು.ನೀ & ನೈರ್ಮಲ್ಯ ವಿಭಾಗ ತುಮಕೂರು (3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 07-03-2026 ಸಂಜೆ 05.30 ಘಂಟೆಯ** ನಂತರ (4) ಆರ್ಥಿಕ ಬಿಡ್ ತೆರೆಯುವ **ದಿನಾಂಕ : 10-03-2026 ಬೆಳಿಗ್ಗೆ 11.00 ಘಂಟೆಯ** ನಂತರ

ಸಹಿ/- ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ತುಮಕೂರು ವಿಭಾಗ, ತುಮಕೂರು
DIPR/TUM/RO-276/25-26/Oysters

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಸುವರ್ಣ ಕೇರಳಂ (ನಂ.SK-41) ಡ್ರಾ ಫೆಬ್ರವರಿ 20ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
RK 245689 (KOLLAM)

Consolation Prize Rs.5,000/-
RA 245689 RB 245689 RC 245689 RD 245689
RE 245689 RF 245689 RG 245689 RH 245689
RJ 245689 RL 245689 RM 245689

2nd Prize Rs.30,00,000/- [30 Lakhs]
RL 832012 (ALAPPUZHA)

3rd Prize Rs.5,00,000/- [5 Lakhs]
RL 332535 (NEYYATTINKARA)

FOR THE TICKETS ENDING WITH THE FOLLOWING NUMBERS

4th Prize Rs.5,000/-
2048 2175 2674 3474 3844 4000 4484 4498 5152 5959 6081 6630 7842 8275 8586 8669 8736 9121 9901

5th Prize Rs.2,000/-
1802 3288 4199 4736 5945 6908

6th Prize Rs.1,000/-
1052 1143 1437 1745 2483 2557 2779 2798 3187 3197 3302 3470 3702 4431 4658 4737 5021 6188 6727 6865 7106 7847 8414 9195 9411

7th Prize Rs.500/-
0047 0124 0199 0345 0474 0566 0749 0809 0865 0906 0977 1279 1536 1717 2074 2198 2391 2404 2451 2531 2636 2660 3064 3074 3321 3514 3597 3609 3677 3707 3753 3789 3797 4105 4139 4339 4405 4617 4750 4942 5139 5174 5195 5384 5741 5781 5825 5899 6159 6243 6342 6353 6377 6556 7142 7363 7540 7704 7742 7830 7855 7938 7993 8363 8412 8486 8594 8624 8865 8998 9215 9225 9299 9407 9808 9820

8th Prize Rs.200/-
0445 0466 0634 0799 0940 1018 1019 1036 1060 1219 1321 1325 1820 2058 2206 2245 2255 2478 2502 2510 2693 2698 2775 2866 2978 3060 3119 3156 3233 3274 3364 3378 3490 3564 3575 3620 3636 3806 3860 4044 4088 4185 4212 4292 4394 4529 4897 5038 5067 5160 5441 5504 5546 5548 5611 5904 6015 6031 6053 6058 6513 6553 7015 7290 7368 7475 7592 7810 7957 7975 8122 8128 8248 8340 8401 8473 8490 8509 8581 8620 8681 8830 8968 9003 9025 9061 9125 9177 9533 9639 9719 9844

9th Prize Rs.100/-
0048 0062 0162 0326 0397 0411 0642 0695 0728 0740 0746 0871 1063 1099 1103 1116 1220 1230 1341 1355 1463 1567 1644 1857 1978 2003 2013 2094 2246 2283 2285 2317 2384 2515 2697 2829 2840 2863 2893 2992 3013 3071 3087 3136 3181 3276 3289 3307 3363 3487 3541 3556 3600 3728 3738 3801 3865 4021 4054 4108 4114 4127 4157 4259 4390 4488 4496 4508 4629 4669 4677 4688 4719 4739 4746 4760 4763 4787 4888 4910 5018 5047 5054 5094 5427 5485 5604 5674 5834 5938 6078 6143 6201 6252 6368 6369 6462 6465 6576 6646 6716 6996 7060 7152 7231 7485 7490 7582 7640 7675 7679 7683 7741 7746 7765 7779 7781 7879 7926 7958 7959 8192 8202 8227 8286 8321 8391 8498 8655 8670 8714 8715 8776 8815 8869 8921 9094 9202 9214 9455 9475 9491 9799 9971

ಎಂಸಿಎ ವಿಭಾಗದಿಂದ ಟೆಕ್–ನೋ'26 ತಾಂತ್ರಿಕ ಮಹೋತ್ಸವ ಆಯೋಜನೆ



ನಿಟ್ಟೆ: 'ಕೃತಕ ಬುದ್ಧಿಮತ್ತೆಯು ಉದ್ಯೋಗಾವಕಾಶಗಳನ್ನು ಕಡಿತಗೊಳಿಸುತ್ತದೆ ಎಂದು ದೂರುವುದರ ಬದಲು ಅದನ್ನ ಬಳಸಿಕೊಂಡು ನಮ್ಮ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಕೌಶಲ್ಯವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು' ಎಂದು ಉಡುಪಿಯ ಥಾಟ್ ಗ್ರೈನ್ಸ್ ಸೊಲ್ಯೂಶನ್ಸ್ ಸಂಸ್ಥೆಯ ಸಹ ಸಂಸ್ಥಾಪಕ ಅರುಣಾಚಲ ಶೆಟ್ಟಿ ಅಭಿಪ್ರಾಯಪಟ್ಟರು.

ಅವರು ನಿಟ್ಟೆ ಮಹಾಲಿಂಗ ಅಡ್ಯಂತಾಯ ಸ್ಮಾರಕ ತಾಂತ್ರಿಕ ಮಹಾವಿದ್ಯಾಲಯದ ಎಂಸಿಎ ವಿಭಾಗವು ಉಡುಪಿಯ ಥಾಟ್ ಗ್ರೈನ್ಸ್ ಸೊಲ್ಯೂಶನ್ಸ್ ನ ಸಹಯೋಗದಲ್ಲಿ ಫೆ.20 ರಂದು ಹಮ್ಮಿಕೊಂಡ 'ಟೆಕ್–ನೋ'26' ತಾಂತ್ರಿಕ ಮಹೋತ್ಸವವನ್ನು ಉದ್ಘಾಟಿಸಿ ಮಾತನಾಡಿದರು. ತಂತ್ರಜ್ಞಾನ ಬೆಳವಣಿಗೆಯಿಂದ ನಮ್ಮ ಬದುಕು ಹೇಗೆ ಸುಲಭದಾಯಕವಾಗಲಿದೆ ಎಂಬುದನ್ನು ನಾವು ಮನನ ಮಾಡಬೇಕು. ವಿಭಿನ್ನ ಪ್ರೋಗ್ರಾಮಿಂಗ್ ಭಾಷೆಗಳ ಮೇಲೆ ಗಮನಹರಿಸಿ ನಿರಂತರ ಅಧ್ಯಯನದಲ್ಲಿ ತೊಡಗಿಸಿಕೊಳ್ಳುವ ಅಗತ್ಯವಿದೆ ಎಂದು ಅವರು ತಿಳಿಸಿದರು.

ಗೌರವ ಅತಿಥಿಯಾಗಿ ಭಾಗವಹಿಸಿದ್ದ ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯದ ತಾಂತ್ರಿಕ ಶಿಕ್ಷಣ ವಿಭಾಗದ ಉಪಾಧ್ಯಕ್ಷ ಡಾ. ಗೋಪಾಲ್ ಮುಗೆರಾಯ ಅವರು ಮಾತನಾಡಿ 'ಎಐ ಎಂಬುದು ಮಾನವರ ಭಾವನಾತ್ಮಕ ನಿರ್ಧಾರಶಕ್ತಿ ಹಾಗೂ ಸಾಮಾನ್ಯ ವಿವೇಕವನ್ನು ಯಾವುದೇ ಸಂದರ್ಭದಲ್ಲೂ ಬದಲಾಯಿಸಲು ಸಾಧ್ಯವಿಲ್ಲ. ಇಂದಿನ ದಿನದ ತಂತ್ರಜ್ಞಾನಕ್ಕೆ ನಾವು ಒಗ್ಗಿಕೊಳ್ಳುವುದು ಅನಿವಾರ್ಯ. ಎಐಯಿಂದ ಆರೋಗ್ಯದಂತಹ ಕ್ಷೇತ್ರಗಳಲ್ಲಿ ಉತ್ತಮ ಬೆಳವಣಿಗೆ ಕಾಣಲು ಸಹಕಾರಿ' ಎಂದು ಅಭಿಪ್ರಾಯಪಟ್ಟರು. ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಿದ ಎಂಸಿಎ ವಿಭಾಗವನ್ನು ಅಭಿನಂದಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಂಶುಪಾಲ ಡಾ. ನಿರಂಜನ್ ಚಿಪ್ಪುಣ್ಕರ್ ಅವರು, ತಾಂತ್ರಿಕ ಜ್ಞಾನವನ್ನು ವಿಸ್ತರಿಸುವ ಮತ್ತು ವಿದ್ಯಾರ್ಥಿಗಳಲ್ಲಿ ನವೀನ ಚಿಂತನೆಗೆ ಪ್ರೇರಣೆ ನೀಡುವ ಉದ್ದೇಶದಿಂದ ಆಯೋಜಿಸಲಾದ ಈ ಕಾರ್ಯಕ್ರಮದ ಉಪಯೋಗವನ್ನು ಪಡೆಯುವಂತೆ ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಕರಾವಳಿ ಜಿಲ್ಲೆಯ ವಿವಿಧ ಶಿಕ್ಷಣ ಸಂಸ್ಥೆಗಳ 120ಕ್ಕೂ ಹೆಚ್ಚು ಪದವಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಎಂಸಿಎ ವಿಭಾಗದ ಮುಖ್ಯಸ್ಥೆ ಡಾ. ಮಮತಾ ಬಲಿಪ ಅವರು ಅತಿಥಿಗಳನ್ನು ಸ್ವಾಗತಿಸಿ ಕಾರ್ಯಕ್ರಮದ ಉದ್ದೇಶ ಮತ್ತು ವೈಶಿಷ್ಟ್ಯಗಳ ಕುರಿತು ವಿವರಿಸಿದರು. ಟೆಕ್–ನೋ'26 ಸಂಯೋಜಕರಾದ ಡಾ. ಸ್ಫೂರ್ತಿ ಪಿ. ಶೆಟ್ಟಿ ಮುಖ್ಯ ಅತಿಥಿಯನ್ನು ಪರಿಚಯಿಸಿದರು ಹಾಗೂ ಡಾ. ಮಂಗಳ ಶೆಟ್ಟಿ ವಂದಿಸಿದರು. ವಿದ್ಯಾರ್ಥಿನಿ ಸಾತ್ವಿಕಾ ಜೈನ್ ಕಾರ್ಯಕ್ರಮ ನಿರೂಪಿಸಿದರು.

ಅಣುಕು ನ್ಯಾಯಾಲಯ ಸ್ಪರ್ಧೆಯ ಕರಪತ್ರ ಬಿಡುಗಡೆ



ಪುತ್ತೂರು: ವಿವೇಕಾನಂದ ಕಾನೂನು ಮಹಾವಿದ್ಯಾಲಯದಲ್ಲಿ ಮೇ 9, 10ರಂದು ನಡೆಯಲಿರುವ ಮೂರನೇ ರಾಷ್ಟ್ರೀಯ ಮಟ್ಟದ ಅಣುಕು ನ್ಯಾಯಾಲಯ ಸ್ಪರ್ಧೆಯ ಕರಪತ್ರ ಬಿಡುಗಡೆ ಸಮಾರಂಭ ಫೆ. 20 ರಂದು ಕಾಲೇಜಿನ ಸುಜ್ಞಾನ ದೀಪಿಕಾ ಸಭಾಂಗಣದಲ್ಲಿ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಸಂಚಾಲಕ ವಿಜಯನಾರಾಯಣ ಕೆ.ಎಂ. ವಹಿಸಿದ್ದರು. ಮುಖ್ಯಅತಿಥಿ, ವಕೀಲರಾದ ಮನೋಹರ್ ಕೆ.ವಿ. ಪುತ್ತೂರು ಕರಪತ್ರವನ್ನು ಬಿಡುಗಡೆಗೊಳಿಸಿ ಕಾನೂನು ಮಹಾವಿದ್ಯಾಲಯದಲ್ಲಿ ಅಣುಕು ನ್ಯಾಯಾಲಯ ಸ್ಪರ್ಧೆಗಳ ಪ್ರಾಮುಖ್ಯತೆ ಮತ್ತು ವಿಶಿಷ್ಟತೆಯನ್ನು ವಿವರಿಸಿದರು. ಕಾಲೇಜಿನ ಕಾನೂನು ಅಧ್ಯಯನ ವಿಭಾಗದ ನಿರ್ದೇಶಕ ಡಾ. ಬಿ.ಕೆ. ರವೀಂದ್ರ, ಅಣುಕು ನ್ಯಾಯಾಲಯದ ಸಮಿತಿಯನ್ನು ಘೋಷಿಸಿದರು. ಮನೀಶ್ ಕೆ. ಸಾಲಿಯಾನ್, ಸ್ಲೇರಾ ಎಲ್. ಎಲ್. ಸಿ. ಉಡುಪಿ ಇವರು ಅಣುಕು ನ್ಯಾಯಾಲಯದ ರೂಪುರೇಷೆಗಳನ್ನು ವಿವರಿಸಿದರು. ಸಹಾಯಕ ಕಾರ್ಯನಿರ್ವಹಣಾಧಿಕಾರಿ ವೆಂಕಟರಮಣರಾವ್, ಪ್ರಾಂಶುಪಾಲೆ ಅಕ್ಷತಾ ಎ. ಪಿ., ಸಹಾಯಕ ಪ್ರಾಧ್ಯಾಪಕರಾದ ಸುಭಾಷಿನಿ ಜೆ., ಸಂಗೀತಾ ಎಸ್. ಎಂ, ಅಣುಕು ನ್ಯಾಯಾಲಯದ ಸಮಿತಿಯ ಸಂಯೋಜಕರು ಇವರುಗಳು ಉಪಸ್ಥಿತರಿದ್ದರು. ಕಾಲೇಜಿನ ಆಡಳಿತ ಮಂಡಳಿಯ ಸದಸ್ಯರು, ಭೋಧಕ ಮತ್ತು ಭೋಧಕೇತರ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಬೆಂಗಳೂರು ಅಧಿಕಾರಿಗಳ ಸಕ್ಷಮ ದಕ್ಷಿಣ ಕನ್ನಡ ಭೇಟಿ



ಮಂಗಳೂರು: ಭಾರತದ ಪ್ರತಿಷ್ಠೆಯ ಸಂಸ್ಥೆ ಹಾಲ್ ಬೆಂಗಳೂರು ಅವರ ಫ್ಯಾಮಿಲಿ ವೆಲ್‌ಫೇರ್ ಅಸೋಸಿಯೇಶನ್ ಅಧಿಕಾರಿಗಳು ಸಕ್ಷಮ ದಕ್ಷಿಣ ಕನ್ನಡ ಘಟಕದ ಕೋರಿಕೆ ಮೇರೆಗೆ ಮಂಗಳೂರಿಗೆ ಭೇಟಿ ನೀಡಿ ಸಕ್ಷಮ ದಕ್ಷಿಣ ಕನ್ನಡ ಘಟಕದ ಕಾರ್ಯಕ್ರಮಗಳ ಬಗ್ಗೆ ಸಮಾಲೋಚನೆ ನಡೆಸಿ ಸಕ್ಷಮವು ಮಾಡುತ್ತಿರುವ ದಿವ್ಯಾಂಗರ ಸಬಲೀಕರಣ ಮತ್ತು ಸಾಮಾಜಿಕ ಅರಿವು ಮೂಡಿಸುವ ಕೆಲಸವನ್ನು ಶ್ಲಾಘಿಸಿದರು.

ಈ ಭೇಟಿಯನ್ನು ಸೇವಾ ಭಾರತಿ ಮಂಗಳೂರು ನಡೆಸುವ ಚೇತನ ಬಾಲ ವಿಕಾಸ ಕೇಂದ್ರದಲ್ಲಿ ಏರ್ಪಡಿಸಲಾಗಿತ್ತು. ಅಸೋಸಿಯೇಶನ್‌ನ ಮುಖ್ಯ ಸಂಚಾಲಕ ಡಾ. ಶುಭ ಸುನಿಲ್, ಸಂಚಾಲಕರಾದ ಅಂಜಲಿ ಶ್ರೀವಾಸ್ತವ್, ಕಾರ್ಯದರ್ಶಿ ರೇಷ್ಮಾ ರಮಾನಂದ, ಸದಸ್ಯರಾದ ವಿಜಯಶಾಂತಿ, ಮಾಧವಿ, ಚಕ್ರವರ್ತಿ ಅಲ್ಲದೆ ಹಾಲ್ ಕುಂಬಳೆ ಘಟಕದ ಮುಖ್ಯಸ್ಥ ಜೋಸೆಫ್, ಮಾನವ ಸಮನ್ಮೂಲ ಅಧಿಕಾರಿ ಮಂಜುನಾಥ ಅವರನ್ನು ಚೇತನ ಶಾಲೆಯ ದಿವ್ಯಾಂಗ ವಿದ್ಯಾರ್ಥಿಗಳು ಸಾಂಪ್ರದಾಯಿಕವಾಗಿ ಅವರೇ ತಯಾರಿಸಿದ ಹೂಗುಚ್ಛ ಕೊಟ್ಟು ಸ್ವಾಗತಿಸಿದರು. ಶಾಲಾ ಮುಖ್ಯೋಪಾಧ್ಯಾಯಿನಿ ಸುಪ್ರೀತಾ ತನುಜ್ ಅವರು ಶಾಲು ಹೊದಿಸಿ ಗಣ್ಯರನ್ನು ಬರಮಾಡಿಕೊಂಡರು. ಸೇವಾ ಭಾರತೀಯ ಖಜಾಂಚಿ ವಿನೋದ್ ಶೆಣೈ, ಮುಖ್ಯ ಕಾರ್ಯದರ್ಶಿ ನಾಗರಾಜ್ ಭಟ್ ಮತ್ತು ಶಾಲಾ ಸಿಬ್ಬಂದಿವರ್ಗ ಶಾಲೆಯ ವ್ಯವಸ್ಥೆಯನ್ನು ವಿವರಿಸಿದರು. ಸೇವಾ ಭಾರತಿಯ ಸ್ವಯಂ ಸೇವಕರಾದ ಪ್ರಕಾಶ್ ಪೈ, ಗಣರಾಜ್ ಭಟ್ ಮತ್ತು ಶಾಂತಾರಾಮ್ ಪೈ ಉಪಸ್ಥಿತರಿದ್ದರು.

ಸಕ್ಷಮ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಅಧ್ಯಕ್ಷ ರಾಜಶೇಖರ ಭಟ್ ಕಾಕುಂಜೆ, ಕಾರ್ಯದರ್ಶಿ ಹರೀಶ್ ಪ್ರಭು, ಸಹ ಕಾರ್ಯದರ್ಶಿ ಭಾಸ್ಕರ ಹೊಸಮನೆ ಮತ್ತು ಉಪಾಧ್ಯಕ್ಷರು ಏವಂ ವಿಕಾಸಂ ಸೇವಾ ಫೌಂಡೇಷನ್ ಸ್ಥಾಪಕ ನಿರ್ದೇಶಕರಾದ ಗಣೇಶ ಭಟ್ ದಂಪತಿ ಹಾಜರಿದ್ದರು.

ಈ ಸಂದರ್ಭದಲ್ಲಿ ಅಸೋಸಿಯೇಶನ್‌ನ 50 ನೇ ವಾರ್ಷಿಕೋತ್ಸವದ ನೆನಪಿನಲ್ಲಿ ಸಕ್ಷಮ ದಕ. ಕ್ಕೆ ಸುಮಾರು ಒಂದು ಲಕ್ಷ ಮೊತ್ತದ ದಿವ್ಯಾಂಗ ಉಪಯೋಗಿ ಉಪಕರಣಗಳನ್ನು ಸಮಾಜದಲ್ಲಿ ವಿತರಿಸುವ ಸಲುವಾಗಿ ಕೊಡಮಾಡಿದರು.

ಮಾನವ ಸಂಪನ್ಮೂಲ ಅಧಿಕಾರಿ ರುಚಿ ಪಾಂಡ್ಯ ಕಾರ್ಯಕ್ರಮ ಆಯೋಜನೆಯಲ್ಲಿ ಸಹಕರಿಸಿದರು.

ಹರಿಶ್ಚಂದ್ರ ಪೂಜಾರಿ ನಿಧನ

ಬಂಟ್ವಾಳ: ಆರ್‌ಎಸ್‌ಎಸ್, ಬಿಜೆಪಿ ಮುಂದಾಳು, ಸಹಕಾರಿ ಧುರೀಣ ಬಡಗಕಜೆಕಾರು ಗ್ರಾಮದ ಕನಪಾಡಿಬೆಟ್ಟು ನಿವಾಸಿ ಹರಿಶ್ಚಂದ್ರ ಪೂಜಾರಿ ಕನಪಾಡಿಬೆಟ್ಟು (62) ಅವರು ಸುದೀರ್ಘ ಕಾಲದ ಅಸೌಖ್ಯದಿಂದ ಸ್ವಗೃಹದಲ್ಲಿ ಗುರುವಾರ ನಿಧನ ಹೊಂದಿದರು.



ಮೃತರು ಪತ್ನಿ, ಇಬ್ಬರು ಪುತ್ರರನ್ನು ಅಗಲಿದ್ದಾರೆ. ಪಾರ್ಶ್ವವಾಯು ಪೀಡಿತರಾಗಿದ್ದ ಅವರು ಸುಮಾರು 8 ವರ್ಷಗಳಿಂದ ಮನೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘ ಹಾಗೂ ಭಾರತೀಯ ಜನಸಂಘದ ಹಿರಿಯ ಕಾರ್ಯಕರ್ತರಾಗಿದ್ದು, ತೆಂಕಕಜೆಕಾರು, ಬಡಗಕಜೆಕಾರು ಭಾಗದಲ್ಲಿ ಹಾಗೂ ಸರಪಾಡಿ ಜಿಲ್ಲಾ ಪಂಚಾಯತ್ ಕ್ಷೇತ್ರದಲ್ಲಿ ಬಿಜೆಪಿಯ ಬಲವರ್ಧನೆಗೆ ಶ್ರಮಿಸಿದ್ದರು. ಜನಪರವಾದ ಹಲವಾರು ಹೋರಾಟಗಳಲ್ಲಿ ಮುಂಚೂಣಿಯಲ್ಲಿರುತ್ತಿದ್ದರು. ಬಡಗಕಜೆಕಾರು ಗ್ರಾ.ಪಂ.ಅಧ್ಯಕ್ಷರಾಗಿ, ಕಜೆಕಾರು ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಕಜೆಕಾರು ಶ್ರೀ ಮಹಾದೇವ ದೇವೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷರಾಗಿ ದೇವಸ್ಥಾನವನ್ನು ಅಭಿವೃದ್ಧಿಗೊಳಿಸಿ ಬ್ರಹ್ಮಕಲಶೋತ್ಸವ ನಡೆಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಕ್ರೀಡಾಭಿಮಾನಿಯಾಗಿದ್ದ ಅವರು ಕಬಡ್ಡಿ ಪಂದ್ಯಾಟ ನಡೆಸುತ್ತಿದ್ದರು. ಹವ್ಯಾಸಿ ರಂಗಭೂಮಿ ಕಲಾವಿದರಾಗಿದ್ದರು.

ಮೃತರ ನಿಧನಕ್ಕೆ ಬಂಟ್ವಾಳ ಶಾಸಕ ರಾಜೇಶ್ ನಾಯ್ಕ್ ಉಳಿಪ್ಪಾಡಿಗುತ್ತು, ಸಂಸದ ಕ್ಯಾ.ಬ್ರಿಜೇಶ್ ಚೌಟ, ಮಾಜಿ ಸಂಸದ ನಳಿನ್ ಕುಮಾರ್ ಕಟೀಲು, ಮಾಜಿ ಶಾಸಕರಾದ ಎ.ರುಕ್ಮಯ ಪೂಜಾರಿ, ಪದ್ಮನಾಭ ಕೊಟ್ಟಾರಿ, ಬಿ.ನಾಗರಾಜ ಶೆಟ್ಟಿ, ಪ್ರಮುಖರಾದ ಹರಿಕೃಷ್ಣ ಬಂಟ್ವಾಳ, ಸುಲೋಚನಾ ಜಿ.ಕೆ.ಭಟ್, ಬಂಟ್ವಾಳ ಬಿಜೆಪಿ ಅಧ್ಯಕ್ಷ ಚೆನ್ನಪ್ಪ ಆರ್. ಕೋಟ್ಯಾನ್ ಸಹಿತ ಪಕ್ಷದ ಮುಖಂಡರು, ಸಹಕಾರಿಗಳು, ಮತ್ತಿತರ ಗಣ್ಯರು ಸಂತಾಪ ವ್ಯಕ್ತಪಡಿಸಿದ್ದಾರೆ.

ವಿವೇಕಾನಂದ ಕಾಲೇಜಿನಲ್ಲಿ ಶಿವಾಜಿ ಜೀವನ ಚರಿತ್ರೆ ವಿಚಾರ ಸಂಕಿರಣ



ಪುತ್ತೂರು: ಭಾರತದದುದ್ದಕ್ಕೂ ಶಿವಾಜಿಯನ್ನು ಪೂಜಿಸುವವರೇ ಹೆಚ್ಚು. ಭಾರತದ ಮೇಲೆ ಬಹಳಷ್ಟು ಯುದ್ಧಗಳಾಗಿವೆ. ಅವೆಲ್ಲವನ್ನು ಚಾಕಚಕ್ಯತೆಯಿಂದ ಸರಿಪಡಿಸಿಕೊಂಡು ಹೋದವರು ಶಿವಾಜಿ ಮಹಾರಾಜ್. ಶಿವಾಜಿ ಭಾರತಕ್ಕೆ ಮಾತ್ರ ಸೀಮಿತವಲ್ಲದೇ, ಇಡೀ ಪ್ರಪಂಚವೇ ಅವರನ್ನು ತಿಳಿದಿದೆ. ಶಿವಾಜಿಯ ಧ್ಯೇಯ, ಆತ್ಮ ವಿಶ್ವಾಸವನ್ನು ನಮ್ಮಲ್ಲಿ ಅಳವಡಿಸಿಕೊಳ್ಳುವುದರ ಜೊತೆಗೆ, ಶಿವಾಜಿ ಅಂತರ್ ಶಕ್ತಿ ಹಾಗೂ ಶ್ರದ್ಧೆ ನಮ್ಮೆಲ್ಲರಲ್ಲೂ ಮೂಡಬೇಕು ಎಂದು ವಿವೇಕಾನಂದ ಸ್ನಾತಕೋತ್ತರ ವಿಭಾಗದ ಡೀನ್ ಡಾ. ವಿಜಯ ಸರಸ್ವತಿ ಬಿ. ಹೇಳಿದರು.

ವಿವೇಕಾನಂದ ಕಾಲೇಜಿನ(ಸ್ವಾಯತ್ತ) ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ವಿವೇಕಾನಂದ ಪದವಿ ಕಾಲೇಜ್ ಘಟಕ ಮತ್ತು ವಿವೇಕಾನಂದ ವಿದ್ಯಾರ್ಥಿ ಸಂಘದ ಸಹಯೋಗದಲ್ಲಿ ನಡೆದ ಶಿವಾಜಿ ಜೀವನ ಚರಿತ್ರೆ ಕುರಿತು ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಕಾಲೇಜಿನ ಪ್ರಾಚಾರ್ಯ ಕೃಷ್ಣ ಗಣರಾಜ್ ಭಟ್ ಅಧ್ಯಕ್ಷತೆ ವಹಿಸಿದ್ದು, ವಿದ್ಯಾರ್ಥಿಗಳು ಸಾಹಸ ಮಯ ಪುಸ್ತಕಗಳನ್ನು ಓದುವುದರ ಜೊತೆಗೆ ಅದನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ಮುಖ್ಯ ಎಂದರು.

ನರೇಂದ್ರ ಕಾಲೇಜಿನ ಪ್ರಾಚಾರ್ಯ, ಪುತ್ತೂರು ಅ.ಭಾ.ವಿ.ಪ. ಅಧ್ಯಕ್ಷ ಪ್ರಸಾದ್ ಶಾನ್‌ಭಾಗ್, ಐಕ್ಯೂ ಎಸಿ ಘಟಕದ ಸಂಯೋಜಕಿ ಡಾ. ರವಿಕಲಾ, ಕಾಲೇಜಿನ ವಿದ್ಯಾರ್ಥಿ ಘಟಕದ ಅಧ್ಯಕ್ಷ ಪ್ರಣವ್ ಹಾಗೂ ಅ.ಭಾ.ವಿ.ಪ. ಕಾರ್ಯಕರ್ತ ಭುವನ್ ಉಪಸ್ಥಿತರಿದ್ದರು.

ಕಾಲೇಜಿನ ವಿದ್ಯಾರ್ಥಿ ಚೇತನ್ ಸ್ವಾಗತಿಸಿ, ಧರಿತ್ರಿ ವಂದಿಸಿದರು. ಚರಣ್ ಕಾರ್ಯಕ್ರಮ ನಿರ್ವಹಿಸಿದರು.

ಬೆಸೆಂಟ್ ಮಂದಿರದಲ್ಲಿ ಅಡೆಯಾರ್ ದಿನಾಚರಣೆ

ಮಂಗಳೂರು: ದಿ ಥಿಯೋಸಾಫಿಕಲ್ ಸೊಸೈಟಿ (ಬ್ರಹ್ಮ ವಿದ್ಯಾ ಸಮಾಜ) ಬೆಸೆಂಟ್ ಮಂದಿರದಲ್ಲಿ ಅಡೆಯಾರ್ ದಿನಾಚರಣೆಯನ್ನು ಇತ್ತೀಚೆಗೆ ಆಚರಿಸಲಾಯಿತು. ಪ್ರಾರಂಭದಲ್ಲಿ ಶ್ರೀ ಶಂಕರ ಶಾರದಾ ಭಕ್ತ ಭಜನಾ ಮಂಡಳಿಯವರಿಂದ ಭಕ್ತಿ ಸಂಗೀತ ಕಾರ್ಯಕ್ರಮವು ನೆರವೇರಿಸಲ್ಪಟ್ಟಿತು. ಸದಸ್ಯರಾದ ಕುಸುಮಾ ನವೀನ್ ಕುಮಾರ್, ಕೃಷ್ಣರಾಜ ರಾವ್, ಪುಷ್ಪಾವತಿ ಶ್ರೀನಿವಾಸರಾವ್, ಸುಜಾತ ಕಟೀಲ್, ಶ್ರೀನಿವಾಸ್ ರಾವ್, ಶ್ರೀಧರ್ ರಾವ್, ರತ್ನ ರಾಜೇಂದ್ರ ಮತ್ತು ಶುಭ ಕಿರಣ್ ಪಾಲ್ಗೊಂಡಿದ್ದರು. ನಂತರ ಸಂಸ್ಥೆಯ ಅಧ್ಯಕ್ಷ ವಿದ್ವಾನ್ ತುಪ್ಪೆಕಲ್ಲು ನರಸಿಂಹ ಶೆಟ್ಟಿ ಸ್ವಾಗತಿಸಿದರು.

ಚಿತ್ರ ಪ್ರಭು ಅಡೆಯಾರ್ ಡೇ ಮಹತ್ವದ ಬಗ್ಗೆ ಮಾಹಿತಿ ನೀಡಿದರು. ಡಾ. ಎಚ್. ಆರ್. ವಿಶ್ವಾಸ್ (ಅಖಿಲ ಭಾರತ ಕಾರ್ಯ ಗಣ ಸದಸ್ಯ ಸಂಸ್ಕೃತ ಭಾರತೀ) ವಿಷ್ಣುಶರ್ಮ ವಿರಚಿತ ಪಂಚತಂತ್ರದಲ್ಲಿನ ಮೌಲ್ಯಗಳ ಬಗ್ಗೆ ಉಪನ್ಯಾಸವನ್ನಿತ್ತರು. ಸಂಸ್ಥೆಯ ಕಾರ್ಯದರ್ಶಿ ಕೃಷ್ಣಾನಂದ ಶೆಣೈ ವಂದಿಸಿದರು.

ವೇದಿಕೆಯಲ್ಲಿ ಸಂಸ್ಥೆಯ ಖಜಾಂಚಿ ನಾರಾಯಣ ಶೆಟ್ಟಿ ಕೆ. ಅವರು ಉಪಸ್ಥಿತರಿದ್ದರು.

ಮಂಗಳೂರು ಕೊಡಿಯಲ್‌ಬೈಲಿನಲ್ಲಿರುವ ಬೆಸೆಂಟ್ ಮಂದಿರದಲ್ಲಿ ಪ್ರತಿ ಸೋಮವಾರ ದಿವಾನ್ ಕೇಶವ ಭಟ್ ಅವರಿಂದ ರಾಮಾಯಣ, ಪ್ರತಿ ಮಂಗಳವಾರ, ವಿದ್ವಾನ್ ತುಪ್ಪೆಕಲ್ಲು ನರಸಿಂಹ ಶೆಟ್ಟಿ ಅವರಿಂದ ಮರುಳ ಮುನಿಯ ಕಗ್ಗದ ಪ್ರವಚನಗಳು ನಡೆಯುತ್ತಿವೆ. ಪ್ರತಿ ಬುಧವಾರ ಶ್ರೀಕರ ಅವರಿಂದ ಭಗವದ್ಗೀತಾ ಆಧಾರಿತ ಧ್ಯಾನದ ಪ್ರಕ್ರಿಯೆ ನಡೆಸಲ್ಪಡುತ್ತದೆ. ಪ್ರತಿದಿನ ಸಂಜೆ 5 ರಿಂದ 6 ರ ತನಕ ಕಾರ್ಯಕ್ರಮಗಳು ನಡೆಯುತ್ತಿವೆ.

ಮೆರವಣಿಗೆ ಮೇಲೆ ಕಲ್ಲು ತೂರಾಟ: ಸೂಕ್ತ ಕಾನೂನು ಕ್ರಮಕ್ಕೆ ಆಗ್ರಹ

• **ಬೆಂಗಳೂರು:** ಬಾಗಲಕೋಟೆಯಲ್ಲಿ ಛತ್ರಪತಿ ಶಿವಾಜಿ ಮಹಾರಾಜರ ಮೆರವಣಿಗೆ ಮೇಲೆ ಹಾಗೂ ಕಟೌಟ್ ಮೇಲೆ ಮುಸ್ಲಿಂ ಮತಾಂಧರು ಕಲ್ಲು ತೂರಾಟ ಮಾಡಿ ಅವಮಾನ ಮಾಡಿದ್ದಾರೆ. ಅವರ ವಿರುದ್ಧ ಗೂಂಡಾ ಕಾಯ್ದೆಯಡಿ ಕ್ರಮ ಕೈಗೊಳ್ಳಬೇಕೆಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಆಗ್ರಹಿಸಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇವೆಲ್ಲವೂ ಪೂರ್ವ ನಿಯೋಜಿತ ಕೃತ್ಯವಾಗಿದೆ. ಈ ಹಿಂದೆ ಮಂಡ್ಯದಲ್ಲಿ ಗಣೇಶ ವಿಸರ್ಜನೆ ಮೆರವಣಿಗೆ ಮೇಲೆ ಕಲ್ಲು ತೂರಾಟ, ಶ್ರೀರಾಮನ ಫ್ಲೆಕ್ಸ್ ಹರಿದುಹಾಕಿರುವುದು.. ಹೀಗೆ ಮೊದಲಾದ ರೀತಿಯಲ್ಲಿ ಮುಸ್ಲಿಂ ಮೂಲಭೂತವಾದಿಗಳು ದಾಳಿ ಮಾಡಿದ್ದರು. ಇಂತಹ ಮತಾಂಧರನ್ನು ಬಂಧಿಸಬಾರದು ಎಂದು ಕಾಂಗ್ರೆಸ್ ಸರ್ಕಾರ ಪೊಲೀಸರಿಗೆ ಸೂಚನೆ ನೀಡಿದೆ ಎಂದು ಆರೋಪಿಸಿದರು. ಕುಕ್ಕರ್ ಬಾಂಬ್ ಸ್ಫೋಟ ಮಾಡುವವರು ನಮ್ಮ ಬ್ರದರ್‌ಗಳು, ವಿಧಾನಸೌಧದಲ್ಲಿ ಪಾಕ್ ಪರ ಘೋಷಣೆ ಕೂಗಿದವರು ನಮ್ಮ ಬಂಧುಗಳು ಎಂದು ಕಾಂಗ್ರೆಸ್ ನಾಯಕರು ಹೇಳಿದ್ದಾರೆ. ಅವರ ವಿರುದ್ಧ ಪ್ರಕರಣ ದಾಖಲಿಸಬಾರದು ಎಂದು ಪೊಲೀಸರಿಗೆ ಸೂಚಿಸಿದ್ದಾರೆ. ಆದ್ದರಿಂದಲೇ ಇಂತಹ ಘಟನೆಗಳು ಎಲ್ಲ ಜಿಲ್ಲೆಗಳಲ್ಲಿ ನಡೆಯುತ್ತಿವೆ ಎಂದರು.

ಮಾಧ್ಯಮಕ್ಕೆ ನಿರ್ಬಂಧ ಆದೇಶ ಹಿಂಪಡೆಯಲಿ

ವಿಧಾನಸೌಧದಲ್ಲಿ ಪಾಕಿಸ್ತಾನಕ್ಕೆ ಜೈಕಾರ ಹಾಕಿದಾಗ ಸರ್ಕಾರ ಸುಮ್ಮನಿತ್ತು. ಈಗ ವಿಧಾನಸೌಧದಲ್ಲಿ ಮಾಧ್ಯಮಗಳಿಗೆ ನಿರ್ಬಂಧ ಹೇರಲಾಗಿದೆ. ನನ್ನ ಕಚೇರಿಯಲ್ಲೂ ಸುದ್ದಿಗೋಷ್ಠಿ ನಡೆಸಲು ಸಾಧ್ಯವಿಲ್ಲದ ಸ್ಥಿತಿ ನಿರ್ಮಿಸಲಾಗಿದೆ. ಮಾಧ್ಯಮಗಳಿಂದ ಕಾನೂನು ಭಂಗವಾಗುತ್ತದೆ ಎಂದು ಹೇಳಲಾಗಿದೆ. ಸಚಿವ ಮಹದೇವಪ್ಪ ಅವರ ಪ್ರಕಾರ ನಾಯಿಗಳು ಕೂಡ ವಿಧಾನಸೌಧದಲ್ಲಿ ಓಡಾಡಬಹುದು, ಆದರೆ ಮಾಧ್ಯಮ ಪ್ರತಿನಿಧಿಗಳು ಅವರ ಕರ್ತವ್ಯ ನಿರ್ವಹಿಸಬಾರದೆ? ಎಂದು ಅಶೋಕ ಪ್ರಶ್ನಿಸಿದರು.

ಬಜೆಟ್ ಚರ್ಚೆ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದಲಿತ ಸಂಘಟನೆಗಳ ಮುಖಂಡರುಗಳ ಜತೆಗೆ 2026-27ನೇ ಸಾಲಿನ ಬಜೆಟ್‌ಗೆ ಸಂಬಂಧಿಸಿದಂತೆ ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಚರ್ಚೆ ನಡೆಸಿದರು. ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಮತ್ತು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್ ಹಾಗೂ ಆರ್ಥಿಕ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಸದ್ಯದಲ್ಲೇ ಎಂಆರ್‌ಐ, ಸಿಟಿ ಸ್ಕ್ಯಾನ್ ಪೂರೈಕೆ

• **ಬೆಂಗಳೂರು:** ಏಳು ಸರ್ಕಾರಿ ಆಸ್ಪತ್ರೆಗಳಲ್ಲಿ ಎಂಆರ್‌ಐ ಗಳು ಹಾಗೂ ಮೂರು ಸಿಟಿ ಸ್ಕ್ಯಾನ್‌ಗಳಿಗೆ ಟೆಂಡರ್ ಕರೆಯಲಾಗಿದೆ. ಇಲಾಖೆ ವತಿಯಿಂದ ಸದ್ಯದಲ್ಲೇ ಯಂತ್ರ ಪೂರೈಕೆ ಮಾಡುತ್ತೇವೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.



ವಿಧಾನಸೌಧದ ಕೆಂಗಲ್ ಗೇಟ್ ಬಳಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕೃಷ್ಣಾ ಡಯಾಗ್ನೋಸ್ಟಿಕ್ ಕಂಪನಿ ವತಿಯಿಂದ ನಡೆಯುತ್ತಿದ್ದ ಸರ್ಕಾರಿ ಆಸ್ಪತ್ರೆಗಳಲ್ಲಿ ಎಂಆರ್‌ಐ ಮತ್ತು ಸಿಟಿ ಸ್ಕ್ಯಾನ್‌ಗಳು ಸ್ಥಗಿತ ವಿಚಾರದಲ್ಲಿ ವಿರೋಧ ಪಕ್ಷ ಸತ್ಯಕ್ಕೆ ದೂರವಾದ ವಿಚಾರ ಮಾತಾಡಿದೆ. ದುಡ್ಡು ಕೊಟ್ಟಿಲ್ಲಾ ಎಂದು ಕಂಪನಿ ಪತ್ರ ಬರೆದಿದ್ದಕ್ಕೆ, ವಿಪಕ್ಷಗಳು ಇದನ್ನು ಬೇರೆ-ಬೇರೆ ರೀತಿ ಬಿಂಬಿಸುತ್ತಿದ್ದಾರೆ. ಅವರು ಟೀಕೆ ಮಾಡುತ್ತಿದ್ದಾರೆ ಎಂದು ನಾನು ಟೀಕೆ ಮಾಡುವುದಿಲ್ಲ. ಕೆಲಸ ಮಾಡುವುದು ನಮ್ಮ ಕರ್ತವ್ಯ. ಜನರಿಗೆ ಸಮಸ್ಯೆ ಆಗಬಾರದು ಎಂಬುದು ನಮ್ಮ ಉದ್ದೇಶಗವಾಗಿದೆ ಎಂದರು.

ಮೊದಲು ಇದಕ್ಕೊಂದು ವ್ಯವಸ್ಥೆಯೇ ಇರಲಿಲ್ಲ. ಕಂಪನಿಯವರು ಹೇಳಿದ್ದೇ ಲೆಕ್ಕ. ಇದಕ್ಕೊಂದು ವ್ಯವಸ್ಥೆ, ನಿಯಮವನ್ನು ತಂದ ನಂತರ ಸ್ಕ್ಯಾನಿಂಗ್ ಪ್ರಮಾಣ ಗಣನೀಯವಾಗಿ ಕಡಿಮೆಯಾಗುತ್ತಾ ಬಂದಿದೆ. ಇದ್ಯಾವುದನ್ನು ತಿಳಿಯದೇ ವಿರೋಧ ಪಕ್ಷ ಕಂಪನಿಯ ಪರವಾಗಿ ಮಾತನಾಡುತ್ತಿದೆ. ಕಂಪನಿಯವರು ಏನೇ ಹೇಳಲಿ. ನಮ್ಮ ಉದ್ದೇಶ ಜನರಿಗೆ ಸಮಸ್ಯೆಯಾಗಬಾರದು. ಸರ್ಕಾರದ ಹಣ ದುರುಪಯೋಗವಾಗಲು ಅವಕಾಶ 2019 ರಿಂದ ಹಿಂಬಾಕಿ ಹಣ 143 ಕೋಟಿ ರೂ. ಕೊಡಿ ಎಂದು ಕಂಪನಿಯವರು ಕೇಳಿದ್ದಾರೆ. ನಾವು ಅಷ್ಟು ಕೊಡಲು ಸಾಧ್ಯವಿಲ್ಲವೆಂದು ಎಂದು ಖಡಾಖಂಡಿತವಾಗಿ ಹೇಳಿದ್ದೇವೆ ಎಂದರು. 2019 ರಿಂದ ಪ್ರತಿ ವರ್ಷ ಶೇ.5 ರಷ್ಟು ಹೆಚ್ಚುವರಿ ನೀಡಬೇಕು ಎಂದು ಹೇಳಿದ್ದಾರೆ.

ಕಿರುಸುದ್ದಿ

ಸ್ಥಳೀಯರ ಉದ್ಯೋಗಕ್ಕಾಗಿ ಮೇಳ ಆಯೋಜನೆ: ಬಿವೈವಿ

• **ಶಿಕಾರಿಪುರ:** ಶಿಕಾರಿಪುರ ತಾಲೂಕು ಜಿಲ್ಲಾ ಕೇಂದ್ರಕ್ಕೆ ಅಗತ್ಯವಿರುವ ಸಕಲ ಸೌಲಭ್ಯ ಹೊಂದಿದ್ದು, ಯಡಿಯೂರಪ್ಪನವರಿಗೆ ರಾಜಕೀಯವಾಗಿ ಜನ್ಮ ನೀಡಿದ ತಾಲೂಕಿನ ಪೋಷಕರ ಮಕ್ಕಳಿಗೆ ಉದ್ಯೋಗ ದೊರಕಿಸುವ ಮಹತ್ವಾಕಾಂಕ್ಷೆಯ ಮೇರೆಗೆ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ, ಶಾಸಕ ಬಿ.ವೈ.ವಿಜಯೇಂದ್ರ ತಿಳಿಸಿದರು.



ಪಟ್ಟಣದ ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆಯ ಆವರಣದಲ್ಲಿ ಮಾಜಿ ಸಿ.ಎಂ. ಯಡಿಯೂರಪ್ಪನವರ ಹುಟ್ಟುಹಬ್ಬದ ಅಂಗವಾಗಿ ಮೂಡಬಿದರೆ ಆಳ್ವಾಸ್ ಫೌಂಡೇಶನ್ ಟ್ರಸ್ಟ್ ಸಹಯೋಗ ದಲ್ಲಿ ಶುಕ್ರವಾರ ಆಯೋಜಿಸಿದ್ದ ಬೃಹತ್ ಉದ್ಯೋಗ ಮೇಳ 2026ಕ್ಕೆ ಚಾಲನೆ ನೀಡಿ ಮಾತನಾಡಿದರು. ಮಾಜಿ ಸಿಎಂ ಯಡಿಯೂರಪ್ಪ ನವರಿಗೆ ರಾಜಕೀಯ ಜನ್ಮ ನೀಡಿದ ತಾಲೂಕಿನ ಯುವಕ- ಯುವತಿಯರಿಗೆ ಉದ್ಯೋಗ ದೊರಕಿಸಿಕೊಡುವ ಬಹು ಮಹತ್ವಾಕಾಂಕ್ಷೆಯ ಕನಸು ಇದೀಗ ನನಸಾಗಿದೆ. ಈ ದಿಸೆಯಲ್ಲಿ ಕಳೆದ 2-3 ತಿಂಗಳಿನಿಂದ ಸತತ ಶ್ರಮವಹಿಸಿ ಯಶಸ್ವಿಯಾಗಲು ಸಹಕರಿಸಿದ ಆಳ್ವಾಸ್ ಫೌಂಡೇಶನ್ ಟ್ರಸ್ಟಿ ವಿವೇಕ್ ಆಳ್ವಸಹಿತ ಪ್ರತಿಯೊಬ್ಬರಿಗೂ ಧನ್ಯವಾದ ಸಲ್ಲಿಸಿದರು.

ಪ್ರಸನ್ನಾನಂದ ಶ್ರೀಗಳ ಆರೋಗ್ಯ ಚೇತರಿಕೆ

• **ಹರಿಹರ:** ಲಘು ಹೃದಯಾಘಾತಕ್ಕೀಡಾಗಿದ್ದ ತಾಲೂಕಿನ ರಾಜನಹಳ್ಳಿಯ ಮಹರ್ಷಿ ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಶ್ರೀಗಳಿಗೆ ಸ್ಟಂಟ್ ಅಳವಡಿಕೆ ಮಾಡಲಾಗಿದ್ದು ಆರೋಗ್ಯದಲ್ಲಿ ಚೇತರಿಕೆ ಕಂಡುಬಂದಿದೆ. ವಿವಿಧ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಪ್ರವಾಸ ದಲ್ಲಿದ್ದ ಶ್ರೀಗಳು ರಾಯ ಚೂರು ಜಿಲ್ಲೆಯ ಹಟ್ಟಿ ಗ್ರಾಮದಲ್ಲಿ ಬುಧವಾರ ರಾತ್ರಿ ವಾಸ್ತವ್ಯವಾಗಿದ್ದಾಗ ಹೃದಯ ಸಂಬಂಧಿತ ಸಮಸ್ಯೆ ಕಾಣಿಸಿಕೊಂಡಿತು. ಅವರನ್ನು ರಾಯಚೂರಿನ ವಿ.ಜಿ. ಕುಲಕರ್ಣಿ ಆಸ್ಪತ್ರೆಗೆ ದಾಖಲಿಸಿ ಪ್ರಾಥಮಿಕ ಚಿಕಿತ್ಸೆ ನೀಡಿದ ನಂತರ ಮಧ್ಯರಾತ್ರಿ ಹೆಚ್ಚಿನ ಚಿಕಿತ್ಸೆಗಾಗಿ ಹೈದರಾಬಾದ್‌ನ ಅಪೋಲೋ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ಗುರುವಾರ ಬೆಳಗಿನ ಜಾವ ಸ್ಟಂಟ್ ಅಳವಡಿಕೆ ಮಾಡಲಾಗಿದೆ. ಶ್ರೀಗಳು ಈಗ ಚೇತರಿಸಿಕೊಂಡಿದ್ದು ವೈದ್ಯರ ಸಲಹೆ ಮೇರೆಗೆ ಮುಂದಿನ 2-3 ದಿನಗಳ ಕಾಲ ಆಸ್ಪತ್ರೆಯಲ್ಲಿ ವಿಶ್ರಾಂತಿ ಪಡೆಯಬೇಕಿದೆ. ನಂತರ ಅವರು ಮಠಕ್ಕೆ ಮರಳುವರು. ಭಕ್ತರು ಆತಂಕಪಡಬೇಕಿಲ್ಲ ಎಂದು ಮಠದ ಧರ್ಮದರ್ಶಿ ಕೆ.ಬಿ.ಮಂಜುನಾಥ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫ್ಯಾಕ್ಸ್ ಸಿಲಿಕಾಗೆ ಭಾರತ ಸೇರ್ಪಡೆ

• **ಹೊಸದಿಲ್ಲಿ :** ನಿರ್ಣಾಯಕ ಖನಿಜಗಳು ಮತ್ತು ಕೃತಕ ಬುದ್ಧಿಮತ್ತೆಗೆ ಸ್ಥಿತಿಸ್ಥಾಪಕ ಪೂರೈಕೆ ಸರಪಣಿಯನ್ನು ನಿರ್ಮಿಸುವ ಗುರಿ ಹೊಂದಿರುವ ಅಮೆರಿಕ ನೇತೃತ್ವದ ಕಾರ್ಯತಂತ್ರದ ಮೈತ್ರಿಕೂಟ 'ಪ್ಯಾಕ್ಸ್ ಸಿಲಿಕಾ'ಗೆ ಭಾರತ ಸೇರ್ಪಡೆಗೊಂಡಿದೆ.ಹೊಸದಿಲ್ಲಿಯಲ್ಲಿ ನಡೆದ ಎಐ 'ಇಂಪ್ಯಾಕ್ಟ್' ಶೃಂಗಸಭೆಯಲ್ಲಿ ನಡೆದ ಸಮಾರಂಭದಲ್ಲಿ ಭಾರತವು ಈ ಮೈತ್ರಿಕೂಟಕ್ಕೆ ಸೇರುವ ಒಪ್ಪಂದಕ್ಕೆ ಸಹಿ ಹಾಕಿದ್ದು, ಇದು ಭಾರತದ ಪಾಲಿಗೆ ಒಂದು ಮಹತ್ವದ ವರವಾಗುವ ನಿರೀಕ್ಷೆಯಿದೆ. ಕೃತಕ ಬುದ್ಧಿಮತ್ತೆ (ಎಐ) ಮತ್ತು ಅಪರೂಪದ ಖನಿಜಗಳಿಗೆ ಸುರಕ್ಷಿತ, ದೃಢವಾದ ಮತ್ತು ವಿಶ್ವಾಸಾರ್ಹ ಪೂರೈಕೆ ಸರಪಣಿಯನ್ನು ನಿರ್ಮಿಸುವತ್ತ ಈ ಕ್ರಮವು ಒಂದು ಪ್ರಮುಖ ಹೆಜ್ಜೆ ಎನಿಸಿದೆ. ಪ್ರಸ್ತುತ, ಅಪರೂಪದ ಖನಿಜಗಳ ಪೂರೈಕೆ, ಸಂಸ್ಕರಣೆ ಮತ್ತು ಗಣಿಗಾರಿಕೆಗಾಗಿ ವಿಶ್ವವೆಂದು ಚೀನಾವನ್ನು ಅವಲಂಬಿಸಿದೆ. ಚೀನಾದ ಮೇಲಿನ ಅವಲಂಬನೆಯನ್ನು ತೊಡೆದುಹಾಕಲು ಅಮೆರಿಕ ನೇತೃತ್ವದ ಹೊಸ ಅಂತರರಾಷ್ಟ್ರೀಯ ಉಪಕ್ರಮವೇ ಈ 'ಫ್ಯಾಕ್ಸ್ ಸಿಲಿಕಾ'.

ಅಧಿಕಾರಿಗಳ ಸಭೆಯಲ್ಲಿ ಸಚಿವ ಕೃಷ್ಣಬೈರೇಗೌಡ ಹೇಳಿಕೆ

ಯುಎಲ್‌ಎಂಎಸ್ ಜಾರಿಗೆ ಬದ್ಧ

• **ಬೆಂಗಳೂರು:** ಭೂಮಿಗೆ ಸಂಬಂಧಿಸಿದ ಸರ್ಕಾರದ ಎಲ್ಲಾ ಸೇವೆಗಳನ್ನು ಒಂದೇ ವ್ಯವಸ್ಥೆಯಲ್ಲಿ ತರುವ ಮಹತ್ವಕಾಂಕ್ಷಿ ಯುಎಲ್‌ಎಂಎಸ್ (ಯುನಿಫೈಡ್ ಲ್ಯಾಂಡ್ ಮ್ಯಾನೇಜ್ಮೆಂಟ್ ಸಿಸ್ಟಮ್) ಯೋಜನೆಯ ಅನುಷ್ಠಾನಕ್ಕೆ ಸರ್ಕಾರ ದೃಢ ಹೆಜ್ಜೆಯನ್ನಿಟ್ಟಿದೆ.

ಇದಕ್ಕೆ ಸಂಬಂಧಿಸಿದ ಕಂದಾಯ, ನಗರಾಭಿವೃದ್ಧಿ, ನೋಂದಣಿ, ಲೋಕೋಪಯೋಗಿ, ನೀರಾವರಿ, ವಸತಿ, ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮೊದಲಾದ ಇಲಾಖೆಗಳ ಹಿರಿಯ ಅಧಿಕಾರಿಗಳ ಸಭೆಯು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಯುಎಲ್‌ಎಂಎಸ್ ಗಣಕೀಕೃತ ಏಕ ವ್ಯವಸ್ಥೆಯಡಿ ಸರ್ವೆ, ಭೂ ಪರಿವರ್ತನೆ, ಬಡಾವಣೆ ಪ್ಲಾನ್ ಮಂಜೂರು, ಮನೆ ಪ್ಲಾನ್ ಮಂಜೂರು, ನಿವೇಶನ ಮಾರಾಟ, ಇ-ಖಾತಾ ಸೃಜನೆ (ಸ್ಥಳೀಯ ಸಂಸ್ಥೆಯಲ್ಲಿ), ಆಸ್ತಿ ತೆರಿಗೆ ಸಂಗ್ರಹ, ಭೂಸ್ವಾಧೀನ ಹಾಗೂ ಇನ್ನೂ ಅನೇಕ ಭೂ ಸಂಬಂಧಿತ ಚಟುವಟಿಕೆಗಳನ್ನು ಸರಾಗ, ಸುಲಭ, ಪಾರದರ್ಶಕ ಮತ್ತು ಜನಸ್ನೇಹಿಯಾದ ಒಂದೇ ಆನ್‌ಲೈನ್ ವ್ಯವಸ್ಥೆಗೆ ತರುವ ಯೋಜನೆ ಇದಾಗಿದೆ. ಇದರಿಂದ ಜನರಿಗೆ ಬೇರೆ ಬೇರೆ ಕಚೇರಿಗಳಿಗೆ ಅಲೆದಾಡುವುದನ್ನು ತಪ್ಪಿಸಿ ಭೂಮಿಗೆ ಸಂಬಂಧಿಸಿದ ಸೇವೆಗಳನ್ನು ಸರಳವಾಗಿ ಪಡೆದುಕೊಳ್ಳಬಹುದಾದ ಅತ್ಯಂತ ಪ್ರಮುಖ ಆಡಳಿತ ಸುಧಾರಣಾ ಕ್ರಮವಾಗಿದೆ.



ಪ್ರತ್ಯೇಕ ಅರ್ಜಿಗಳ ಅಗತ್ಯವಿಲ್ಲ: ಯುಎಲ್‌ಎಂಎಸ್ ಮುಖಾಂತರ ಭೂ ಮಾಲೀಕತ್ವದ ಮೂಲ ದಾಖಲೆ ಗಳನ್ನು ದೃಢಪಡಿಸುವುದು, ಸರ್ವೆ ನಕ್ಷೆಯನ್ನು ಡಿಜಿಟಲ್ ರೂಪದಲ್ಲಿ ಒದಗಿಸುವುದು, ಭೂ ಪರಿವರ್ತನೆ, ಬಡಾವಣೆಗಳ ಅನುಮೋದನೆ, ಕಟ್ಟಡ ನಕ್ಷೆ ಅನುಮೋದನೆ, ಖಾತೆ ಪಡೆಯುವುದು ಇತ್ಯಾದಿ ಪ್ರಕ್ರಿಯೆಗಳನ್ನು ಏಕೀಕೃತ ನೇರ ಆನ್‌ಲೈನ್ ವ್ಯವಸ್ಥೆಯಲ್ಲಿ ತರಲಾಗುವುದು. ಇದರಿಂದ ಭೂಮಿ ಬಡಾವಣೆ ನಿವೇಶನದ ದಾಖಲೆಗಳು ಒಂದೇ ಕಡೆ ದೊರೆಯುವಂತಾಗುತ್ತದೆ. ಒಂದು ಹಂತದಿಂದ ಮತ್ತೊಂದು ಹಂತಕ್ಕೆ ಸರಾಗವಾಗಿ, ವಿವಿಧ ಕಚೇರಿ ಅಥವಾ ಇಲಾಖೆಗಳಿಗೆ ಆನ್‌ಲೈನ್‌ನಲ್ಲಿ ಪ್ರತ್ಯೇಕ ಅರ್ಜಿಗಳನ್ನು ಸಲ್ಲಿಸುವ ಅವಶ್ಯಕತೆ ಇಲ್ಲದೆ, ಸ್ವಯಂಚಾಲಿತವಾಗಿ ಕಡತ ಸಾಗುವ ವ್ಯವಸ್ಥೆ ಇದಾಗಿದೆ ಎಂದರು.

ಅಧಿಕೃತ ಅಧಿಕಾರಿಯಿಂದ ಮೂಲ ದಾಖಲೆ

ಆನ್‌ಲೈನ್ ವ್ಯವಸ್ಥೆಯಲ್ಲಿ ಮೂಲ ದಾಖಲೆಗಳನ್ನು ನೇರವಾಗಿ ಅಧಿಕೃತ ಅಧಿಕಾರಿಯಿಂದ ಪಡೆಯಲಾಗುವುದು. ನಂಬಿಕಾರ್ಹ ಮೂಲ (ಅಧಿಕಾರಿ/ಪ್ರಾಧಿಕಾರ)ದ ಮೂಲಕ ದಾಖಲೆ ಪಡೆಯಲಾಗುವುದರಿಂದ ಅನುಮಾನಕ್ಕೆ ಅವಕಾಶವಿರುವುದಿಲ್ಲ. ಸರ್ವೆ ನಕ್ಷೆಯನ್ನು ಸಂಬಂಧಿಸಿದ ಅಧಿಕಾರಿ ನೇರವಾಗಿ ಒದಗಿಸಬೇಕಾಗುತ್ತದೆ. ದಾಖಲೆಗಳು ದೃಢೀಕೃತವಾದರೆ, ನಕಲಿ ಅಥವಾ ಅಕ್ರಮ ಇಲ್ಲವೇ ವ್ಯಾಜ್ಯಗಳು ತಗ್ಗಿದರೆ ಭ್ರಷ್ಟಾಚಾರವೂ ತಗ್ಗುತ್ತದೆ. ಸರಾಗವಾಗಿ ಭೂ ವ್ಯವಹಾರ ನಡೆಸಲು ಇದು ಸಹಕಾರಿಯಾದ ಹೆಜ್ಜೆಯಾಗಿದೆ.

ಆರು ತಿಂಗಳಲ್ಲಿ ಅನುಷ್ಠಾನ: ಸಚಿವ

ದೇಶದ ನ್ಯಾಯಾಲಯಗಳಲ್ಲಿರುವ ಶೇ.50ಕ್ಕೂ ಹೆಚ್ಚು ವ್ಯಾಜ್ಯಗಳು ಭೂಮಿ ಅಥವಾ ಮಾಲೀಕತ್ವ ಸಂಬಂಧಿಸಿದವು. ಈ ಭೂವ್ಯಾಜ್ಯಗಳಿಂದ ಮತ್ತು ಅನಿಶ್ಚಿತತೆಯಿಂದ ನಾವು ಭೂ ಗ್ಯಾರಂಟಿಯಡಿಗೆ ಸಾಗಲು ಯುಎಲ್‌ಎಂಎಸ್ ಪರಿಣಾಮಕಾರಿ ಮಾರ್ಗವಾಗಲಿದೆ. ಇದರಿಂದ ಜನಗಳ ಕೇಂದ್ರಿತ, ಜನಪರ ಆಡಳಿತ ಸುಧಾರಣೆ ಸಾಧ್ಯ. ಈ ಏಕೀಕೃತ ವ್ಯವಸ್ಥೆಯನ್ನು ಸಂಬಂಧಿಸಿದ ಎಲ್ಲಾ ಇಲಾಖೆಗಳು ಮುಂದಿನ 6 ತಿಂಗಳುಗಳಲ್ಲಿ ಅನುಷ್ಠಾನಕ್ಕೆ ತರಬೇಕೆಂದು ಕಂದಾಯ ಸಚಿವರು ಸೂಚಿಸಿದ್ದಾರೆ.

12ರಿಂದ 15 ಪೈಸೆ ವಿದ್ಯುತ್ ದರ ಏರಿಕೆ?

• **ಬೆಂಗಳೂರು:** ಆರ್ಥಿಕ ನಷ್ಟವನ್ನು ಸರಿದೂಗಿಸಲು ಹೆಚ್ಚುವರಿ ದರ ಏರಿಕೆಗೆ ರಾಜ್ಯದ ವಿದ್ಯುತ್ ಸರಬರಾಜು ಕಂಪನಿ (ಎಸ್ಕಾಂ)ಗಳು ಕರ್ನಾಟಕ ವಿದ್ಯುತ್ ಸುಧಾರಣಾ ಆಯೋಗ(ಕೆಇಆರ್‌ಸಿ)ಕ್ಕೆ ಪ್ರಸ್ತಾವನೆ ಸಲ್ಲಿಸಿವೆ. ಪ್ರಸಾವನೆ ಒಪ್ಪಿಗೆಯಾದಲ್ಲಿ ಏಪ್ರಿಲ್ 1 ರಿಂದ ಯೂನಿಟ್‌ಗೆ 12 ರಿಂದ 15 ಪೈಸೆ ಹೆಚ್ಚುವರಿ ಶುಲ್ಕ ವಿಧಿಸುವ ಸಾಧ್ಯತೆ ಇದೆ.



ಈಗಾಗಲೇ 2025-26, 2026-27 ಮತ್ತು 2027-28ನೇ ಆರ್ಥಿಕ ವರ್ಷಗಳಿಗೆ ಕೆಇಆರ್‌ಸಿ ದರ ನಿಗದಿ ಮಾಡಿತ್ತು. ಆದರೆ ಈಗ ಎದುರಾಗಿರುವ ಆರ್ಥಿಕ ನಷ್ಟವನ್ನು ಸರಿದೂಗಿಸಲು ಹೆಚ್ಚುವರಿ ದರ ಏರಿಕೆಗೆ ಕೆಇಆರ್‌ಸಿ ಎಸ್ಕಾಂಗಳ ಪ್ರಸ್ತಾವನೆ ಆಧಾರದಲ್ಲಿ ಚಿಂತನೆ ನಡೆಸಿದೆ. ಆದರೆ ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಿದ ನಂತರ ಬೆಲೆ ಹೆಚ್ಚಳದ ಬಗ್ಗೆ ನಿರ್ಧರಿಸಲಿದ್ದು, ಹೆಚ್ಚಳ ಮಾಡುವ ನಿರ್ಧಾರ ಮಾಡಿದಲ್ಲಿ ಏ.1ರಿಂದ ಜಾರಿಗೆ ಬರುವಂತೆ ಪರಿಷ್ಕೃತ ವಿದ್ಯುತ್ ದರ ಪ್ರಕಟವಾಗುವ ಸಾಧ್ಯತೆಯಿದೆ.

ನಿಗಮವಾರು ಪ್ರಸ್ತಾವಿತ ಬೇಡಿಕೆ

ನಿಗಮ	ಪ್ರಸ್ತಾವಿತ ದರ (ಪೈಸೆಗಳು)
ಬೆಸ್ಕಾಂ	98
ಎಸ್ಕಾಂ	96
ಮೆಸ್ಕಾಂ	91
ಜೆಸ್ಕಾಂ	99
ಚೆಸ್ಕಾಂ	97

ಯೂನಿಟ್‌ಗೆ 12-15 ಪೈಸೆ ಹೆಚ್ಚಳ: ಒಟ್ಟಾರೆ ಪ್ರತಿ ಯೂನಿಟ್‌ಗೆ ಸರಾಸರಿ 12 ರಿಂದ 15 ಪೈಸೆ ಏರಿಕೆಯಾಗಬಹುದು. ರಾಜ್ಯದ ಐದು ಎಸ್ಕಾಂಗಳು ಸಲ್ಲಿಸಿರುವ ಪ್ರಸ್ತಾವನೆಯ ಪ್ರಕಾರ, 2026-27ಕ್ಕೆ ಸರಾಸರಿ 64 ಪೈಸೆಯಷ್ಟು ದರ ಏರಿಕೆ ಕೇಳಲಾಗಿದೆ. ಆದರೆ ಕೆಲವು ವರ್ಗಗಳಲ್ಲಿ ಇದು 67 ರಿಂದ 99 ಪೈಸೆಗಳವರೆಗೆ ಏರಿಕೆಯಾಗಬಹುದು ಎಂದು ಸೂಚನೆಗಳಿವೆ. ದಿನಬಳಕೆ ವಿದ್ಯುತ್‌ನಲ್ಲಿ ಅಲ್ಪಪ್ರಮಾಣದ ಏರಿಕೆಯಾಗಬಹುದು.

ಕೈಗಾರಿಕಾ, ವಾಣಿಜ್ಯ ವಲಯದಲ್ಲಿ ಬಳಸುವ ವಿದ್ಯುತ್ ದರದಲ್ಲೂ ಹೆಚ್ಚಳ ಸಾಧ್ಯತೆ ಇದೆ. ಫಿಕ್ಸೆಡ್ ದರದಲ್ಲೂ 10 ರಿಂದ 20 ರೂ. ವರೆಗೆ ಏರಿಕೆ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ.

ಆದಾಯ ಕೊರತೆ: ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳು ಆದಾಯ ಕೊರತೆ ಎದುರಿಸುತ್ತಿವೆ. ರಾಜ್ಯದ ಎಲ್ಲಾ ಎಸ್ಕಾಂಗಳು ಸೇರಿ ಅಂದಾಜು 4,500 ಕೋಟಿ ರೂ. ನಷ್ಟದಲ್ಲಿವೆ. ಇದರಲ್ಲಿ ಬೆಸ್ಕಾಂ ಒಂದರಲ್ಲೇ 2024-25ನೇ ಸಾಲಿನಲ್ಲಿ 2,800 ಕೋಟಿಗೂ ಹೆಚ್ಚು ನಷ್ಟ ಉಂಟಾಗಿದೆ.

ಶಂಕಿತ ಉಗ್ರನ ಪತ್ತೆಗೆ ಎನ್‌ಐಎ ಬಲೆ

• **ಬೆಂಗಳೂರು:** ಸಿಲಿಕಾನ್ ಸಿಟಿಯಲ್ಲಿ ವಿಧ್ವಂಸಕ ಕೃತ್ಯ ಎಸಗಲು ಸಂಚು ರೂಪಿಸಿದ್ದ ಲಷ್ಕರ್-ಎ-ತೊಯ್ಬಾ ಸಂಘಟನೆಯ ಶಂಕಿತ ಉಗ್ರ ಜುನೈದ್ ಅಹಮದ್ ಪತ್ತೆಗೆ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಬಲೆ ಬೀಸಿದೆ. ತಲೆಮರೆಸಿಕೊಂಡಿರುವ ಈತನ ಬಗ್ಗೆ ಸುಳಿವು ನೀಡಿದವರಿಗೆ 5 ಲಕ್ಷ ರೂ. ನಗದು ಬಹುಮಾನ ನೀಡುವುದಾಗಿ ಎನ್‌ಐಎ ಅಧಿಕೃತವಾಗಿ ಘೋಷಿಸಿದೆ.

ಜುಲೈ 2023 ರಲ್ಲಿ ಬೆಂಗಳೂರು ಸಿಸಿಬಿ ಪೊಲೀಸರು ಹೆಬ್ಬಾಳ ಮತ್ತು ಆರ್.ಟಿ. ನಗರದಲ್ಲಿ ಕಾರ್ಯಾಚರಣೆ ನಡೆಸಿ ಐವರು ಶಂಕಿತರನ್ನು ಬಂಧಿಸಿದ್ದರು. ಇವರಿಂದ 4 ಸಜೀವ ಗ್ರೆನೇಡ್‌ಗಳು, 7 ಪಿಸ್ತೂಲುಗಳು ಹಾಗೂ 45 ರೌಂಡ್ಸ್ ಗುಂಡುಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಈ ಇಡೀ ಭಯೋತ್ಪಾದನಾ ಮಾಡ್ಯೂಲ್‌ನ ಸೂತ್ರಧಾರಿ ಜುನೈದ್ ಅಹಮದ್ ಎಂಬುದು ತನಿಖೆಯಲ್ಲಿ ದೃಢಪಟ್ಟಿದೆ.

ಜೈಲಿನಲ್ಲಿ ಶುರುವಾದ ಉಗ್ರ ಸಂಪರ್ಕ: 2017ರ ಕೊಲೆ ಪ್ರಕರಣವೊಂದರಲ್ಲಿ ಜೈಲು ಪಾಲಾಗಿದ್ದ ಜುನೈದ್‌ಗೆ, 2008ರ ಬೆಂಗಳೂರು ಸರಣಿ ಸ್ಫೋಟದ ಮಾಸ್ಟರ್‌ಮೈಂಡ್ ಟಿ.ನಸೀರ್ ಸಂಪರ್ಕ ಉಂಟಾಗಿತ್ತು. ಜೈಲಿನಲ್ಲೇ ಈತ ತೀವ್ರಗಾಮಿ ವಿಚಾರಗಳಿಗೆ ಮಾರುಹೋಗಿದ್ದು, ಬಿಡುಗಡೆಯಾದ ನಂತರ ವಿದೇಶಿ ಹ್ಯಾಂಡ್ಲರ್‌ಗಳ ಸೂಚನೆಯಂತೆ ಬೆಂಗಳೂರಿನಲ್ಲಿ ಸ್ಫೋಟ ನಡೆಸಲು ಸಂಚು ರೂಪಿಸಿದ್ದ ಎನ್ನಲಾಗಿದೆ.

ಕಳೆದ ನಾಲ್ಕು ವರ್ಷಗಳಿಂದ ತಲೆಮರೆಸಿಕೊಂಡಿರುವ ಜುನೈದ್, ಪೊಲೀಸರ ಕಣ್ಣು ತಪ್ಪಿಸಲು ಒಟ್ಟು 9 ಬೇರೆ ಬೇರೆ ಹೆಸರುಗಳನ್ನು ಬಳಸುತ್ತಿದ್ದಾನೆ. ಈ ಪ್ರಕರಣದ ಗಂಭೀರತೆಯನ್ನು ಪರಿಗಣಿಸಿ ಸಿಸಿಬಿಯಿಂದ ತನಿಖೆಯನ್ನು ಎನ್‌ಐಎ ವಹಿಸಿಕೊಂಡಿದೆ. ಸಾರ್ವಜನಿಕರಿಗೆ ಮಾಹಿತಿ ನೀಡಲು ನಗರದ ಪ್ರಮುಖ ಸ್ಥಳಗಳಲ್ಲಿ ಈತನ ಭಾವಚಿತ್ರವಿರುವ ಪೋಸ್ಟರ್‌ಗಳನ್ನು ಅಂಟಿಸಲಾಗಿದೆ. ಎನ್‌ಐಎಗೆ ಮಾಹಿತಿ ನೀಡಿದವರ ಹೆಸರನ್ನು ಗೌಪ್ಯವಾಗಿಡಲಾಗುವುದು ಎಂದು ತಿಳಿಸಿದೆ.

ಪರೀಕ್ಷಾ ಮೇಲ್ವಿಚಾರಕರ ಮೇಲೆ ವಿದ್ಯಾರ್ಥಿ ಹಲ್ಲೆ

• **ಕಲಬುರಗಿ:** ಪರೀಕ್ಷೆಯಲ್ಲಿ ನಕಲು ಮಾಡುತ್ತಿರುವುದನ್ನು ಪ್ರಶ್ನಿಸಿ ತಡೆದಿದಕ್ಕೆ ಪರೀಕ್ಷಾ ಮೇಲ್ವಿಚಾರಕರ ಮೇಲೆ ವಿದ್ಯಾರ್ಥಿ ಹಲ್ಲೆ ಮಾಡಿರುವ ಘಟನೆ ನಗರದ ಡಾ.ಮಾಲಕರೆಡ್ಡಿ ಹೋಮಿಯೋಪಥಿಕ್ ಕಾಲೇಜ್‌ನಲ್ಲಿ ನಡೆದಿದೆ.

ಕಾಲೇಜಿನಲ್ಲಿ ಹೋಮಿಯೋಪಥಿಕ್ ಮಟೇರಿಯಾ ಮೆಡಿಕಾ ವಿಷಯದ ಇಂಟರ್ನಲ್ ಪರೀಕ್ಷೆ ವೇಳೆ ವಿದ್ಯಾರ್ಥಿ ಶಹಬಾಜ್ ಎಂಬಾತ ಮೊಬೈಲ್ ಬಳಸಿ ನಕಲು ಮಾಡಲು ಮುಂದಾಗಿದ್ದ. ಶಹಬಾಜ್ ನಕಲು ಮಾಡುತ್ತಿರುವುದನ್ನು ಸಹಾಯಕ ಪ್ರಾಧ್ಯಾಪಕ ಶಿವರಾಜಕುಮಾರ್ ಪ್ರಶ್ನಿಸಿ ಉತ್ತರ ಪತ್ರಿಕೆ ಪಡೆದು ಕ್ಲಾಸ್ ರೂಮ್‌ನಿಂದ ಹೊರ ಹೋಗುವಂತೆ ಹೇಳಿದಕ್ಕೆ ವಿದ್ಯಾರ್ಥಿ ಶಹಬಾಜ್ ಸಹಾಯಕ ಪ್ರಾಧ್ಯಾಪಕ ಶಿವರಾಜ್ ಕುಮಾರ್ ಮೇಲೆ ಹಲ್ಲೆ ಮಾಡಿದ್ದಾನೆ.

ಉಳಿದ ವಿದ್ಯಾರ್ಥಿಗಳು ಹಲ್ಲೆ ಮಾಡೋದನ್ನು ತಡೆದ ಬಳಿಕ ಪರೀಕ್ಷಾ ಕೊಠಡಿಯಿಂದ ಶಹಬಾಜ್ ತೆರಳಿದ್ದಾನೆ. ಹಲ್ಲೆ ಮಾಡುತ್ತಿರುವ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ.

ಕ್ವಿಂಟಾಲ್‌ಗಿಂತ ಹೆಚ್ಚು ತೂಕದ ಕಡಲಾಮೆ ರಕ್ಷಣೆ

• **ಕಾರವಾರ:** ಇಲ್ಲಿನ ಕೋಡಿಭಾಗ ಸಂತೋಷಿ ಮಾತಾ ದೇವಾಲಯದ ಸಮೀಪ ಕಾಳಿ ನದಿ ಸಂಗಮ ಪ್ರದೇಶದ ನಾಲೆಯೊಂದರ ಕಿರು ಸೇತುವೆಯ ಕೆಳಗೆ ನಿತ್ರಾಣ ಸ್ಥಿತಿಯಲ್ಲಿ ಸುಮಾರು ಒಂದು ಕ್ವಿಂಟಾಲ್‌ಗಿಂತ ಹೆಚ್ಚಿನ ತೂಕ ಇರುವ ಕಡಲಾಮೆಯೊಂದು ಕಂಡುಬಂದಿದ್ದು, ಅರಣ್ಯ ಇಲಾಖೆಯ ಸಾಗರ ಜೀವ ವಿಭಾಗದ ಅಧಿಕಾರಿಗಳು ಮತ್ತು ಸಿಬ್ಬಂದಿ ಭೇಟಿ ನೀಡಿ ಆಮೆ ರಕ್ಷಣೆಗೆ ಕ್ರಮ ಕೈಗೊಂಡಿದ್ದಾರೆ.



ಹಸಿರು ಕಡಲಾಮೆ ಗ್ರೀನ್ ಸೀ ಟರ್ಟಲ್ ಜಾತಿಗೆ ಸೇರಿರುವ ಸುಮಾರು 60 ವರ್ಷದ ಕಡಲಾಮೆ, 130 ಕಿಲೋ ಭಾರದ್ದಾಗಿದ್ದು, ಸಮುದ್ರದ ಉಬ್ಬರದ ಸಮಯದಲ್ಲಿ ಕಾಳಿ ನದಿ ಅಳಿವೆ ಪ್ರದೇಶ ಸೇರಿಕೊಂಡ ನೀರು ಇಳಿತದ ಸಂದರ್ಭದಲ್ಲಿ ಅಳಿವೆ ಪ್ರದೇಶದಲ್ಲಿ ಮೀನುಗಾರರ ಗಮನಕ್ಕೆ ಬಂದಿದ್ದು, ಅವರು ಕಡಲ ಜೀವಶಾಸ್ತ್ರ ಅಧ್ಯಯನ ಕೇಂದ್ರಕ್ಕೆ ಮಾಹಿತಿ ನೀಡಿದ್ದಾರೆ. ಕೇಂದ್ರದ ತಜ್ಞರು ಮತ್ತು ಅರಣ್ಯ ಇಲಾಖೆಯ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ರಕ್ಷಣಾ ಕಾರ್ಯಾಚರಣೆ ನಡೆಸಿದರು.

ಪಶುವೈದ್ಯರು ಆಗಮಿಸಿ ಆಮೆಗೆ ಚಿಕಿತ್ಸೆ ನೀಡಿದ್ದು, ಅರಣ್ಯ ಇಲಾಖೆಯ ಸುಪರ್ದಿಯಲ್ಲಿರುವ ಕಡಲಾಮೆಗೆ ವಿಶೇಷ ತಜ್ಞರು ಚಿಕಿತ್ಸೆ ನೀಡಿ ಚೇತರಿಸಿಕೊಂಡ ನಂತರ ಸಮುದ್ರಕ್ಕೆ ಬಿಡಲಾಗುತ್ತದೆ ಎಂದು ತಿಳಿದುಬಂದಿದೆ. ಚೆಲೋನಿಯಾ ಮೈದಾಸ್ ಎಂದು ವೈಜ್ಞಾನಿಕ ಹೆಸರನ್ನು ಹೊಂದಿರುವ ಹಸಿರು ಕಡಲಾಮೆ ಪಶ್ಚಿಮ ಕರಾವಳಿಯಲ್ಲಿ ಕಂಡುಬರುವುದು ಅಪರೂಪ.

ಸ್ನೇಹಮಯಿ ಕೃಷ್ಣ ಬಂಧನ

• **ಬೆಂಗಳೂರು:** ನನ್ನದಲ್ಲದ ಧ್ವನಿಯನ್ನು ಮೈಸೂರಿನಲ್ಲಿ ನಕಲಿ ಆಡಿಯೋ ಸೃಷ್ಟಿಸಿ ಜಾಲತಾಣದಲ್ಲಿ ಹಾಕಿ ಅಪಪ್ರಚಾರ ಮಾಡಿದ್ದಾರೆಂದು ಆರೋಪಿಸಿ ಮುಡಾ ಮಾಜಿ ಆಯುಕ್ತ ಡಿ.ಬಿ. ನಟೇಶ್ ಸಿಸಿಬಿಗೆ ದೂರು ನೀಡಿದ್ದ ಹಿನ್ನೆಲೆಯಲ್ಲಿ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಅವರನ್ನು ಸಿಸಿಬಿ ಅಧಿಕಾರಿಗಳು ಬಂಧಿಸಿದ್ದಾರೆ. ಅಲ್ಲದೇ ಸ್ನೇಹಮಯಿ ಕೃಷ್ಣ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ವಿರುದ್ಧವೂ ಕೋಟ್ಯಂತರ ರೂಪಾಯಿ ಲಂಚ ಆರೋಪ ಮಾಡಿದ್ದರು.



ಮುಡಾ ಮಾಜಿ ಆಯುಕ್ತ ಡಿ.ಬಿ. ನಟೇಶ್ ಬಡ್ತಿ ಪಡೆಯಲು ಶಾಲಿನಿ ರಜನೀಶ್‌ಗೆ ಲಂಚ ನೀಡಿದ್ದಾರೆ ಎಂದು ಸ್ನೇಹಮಯಿ ಕೃಷ್ಣ ಗಂಭೀರ ಆರೋಪ ಮಾಡಿದ್ದರು. ಈ ಆರೋಪ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದ್ದಂತೆಯೇ ನಟೇಶ್ ದೂರು ನೀಡಿದ್ದು, ಈ ದೂರಿನ ಅನ್ವಯ ಸಿಸಿಬಿಯ ಸೈಬರ್ ಕ್ರೈಮ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದ್ದು, ಸಿಸಿಬಿ ಅಧಿಕಾರಿಗಳು ಸ್ನೇಹಮಯಿ ಕೃಷ್ಣರನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದಾರೆ.

ಧ್ವನಿಯನ್ನು ಸೃಷ್ಟಿಸಿ ಸಾಮಾಜಿಕ ಜಾಲತಾಣದಲ್ಲಿ ಹಾಕಿ ಅಪಪ್ರಚಾರ ಮಾಡಿದ್ದ ಆರೋಪದ ಮೇಲೆ ಮೊದಲು ಸ್ನೇಹಮಯಿ ಕೃಷ್ಣ ಅವರನ್ನು ಸಿಸಿಬಿ ವಶಕ್ಕೆ ಪಡೆದುಕೊಂಡು ತೀವ್ರ ವಿಚಾರಣೆಗೊಳಪಡಿಸಿದೆ. ಬಳಿಕ ಬಂಧನ ಮಾಡಿದೆ. ಮತ್ತೊಂದೆಡೆ ನ್ಯಾಯಾಲಯದಲ್ಲಿ ಸರ್ಚ್ ವಾರಂಟ್ ಪಡೆದು, ಸ್ನೇಹಮಯಿ ಕೃಷ್ಣ ಅವರ ಮೈಸೂರು ನಿವಾಸದ ಮೇಲೆ ಬೆಂಗಳೂರು ಸಿಸಿಬಿ ದಾಳಿ ಮಾಡಿ ಪರಿಶೀಲನೆ ನಡೆಸಿದ್ದಾರೆ.



“ ಸಿಎಂ ಸಿದ್ದರಾಮಯ್ಯನವರ ವಿರುದ್ಧ ಆರೋಪ ಮಾಡಿದರು ಎಂದು ಸ್ನೇಹಮಯಿ ಕೃಷ್ಣ ವಿರುದ್ಧ ರಾಜ್ಯ ಸರ್ಕಾರ ಸೇಡು ತೀರಿಸಿಕೊಳ್ಳಲು ಹೊರಟಿದೆ.

■ **ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

“ ಸಿಸಿಬಿ ಪೊಲೀಸರು ಸರ್ಚ್ ವಾರಂಟ್ ಪಡೆದು ನಮ್ಮ ಮನೆಯಲ್ಲಿ ತಪಾಸಣೆ ಮಾಡಿ, ಪೆನ್ ಡ್ರೈವ್, ಸ್ಕ್ಯಾನರ್, ದಾಖಲೆ, ಹಾರ್ಡ್‌ಡಿಸ್ಕ್ ವಶಕ್ಕೆ ಪಡೆದರು.

■ **ವಿನೋದಾ,** ಸ್ನೇಹಮಯಿ ಕೃಷ್ಣ ಪತ್ನಿ

ರಾಷ್ಟ್ರೀಯ ಹಿಂದು ಆರ್ಥಿಕ ಮಹಾಸಂಗಮಕ್ಕೆ ಸ್ವಾಮಿ ವಿಜ್ಞಾನಾನಂದ ಚಾಲನೆ

ಆರ್ಥಿಕ ಪ್ರೋತ್ಸಾಹ ಎಚ್‌ಇಎಫ್ ಉದ್ದೇಶ

• **ಹುಬ್ಬಳ್ಳಿ:** ಹು-ಧಾ ಚಾಪ್ಟರ್‌ನಿಂದ ನಗರದ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಮಟ್ಟದ ಹಿಂದು ಆರ್ಥಿಕ ಮಹಾಸಂಗಮ-2026ಕ್ಕೆ ಶುಕ್ರವಾರ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆ ಹಾಗೂ ಹಿಂದು ಆರ್ಥಿಕ ಒಕ್ಕೂಟದ (ಎಚ್‌ಇಎಫ್) ಮುಖ್ಯಸ್ಥ ಸ್ವಾಮಿ ವಿಗ್ನಾನಂದ ಚಾಲನೆ ನೀಡಿದರು.

ವಿವಿಧ ರಾಜ್ಯಗಳ ಹಾಗೂ ಕರ್ನಾಟಕದ 250ಕ್ಕೂ ಹೆಚ್ಚು ಉದ್ಯಮಿಗಳು ಹಾಗೂ ನವೋದ್ಯಮಿಗಳು ಸಮಾರಂಭದಲ್ಲಿ ಭಾಗವಹಿಸಿ ಸದುಪಯೋಗ ಪಡೆದುಕೊಂಡರು. ಹಿಂದು ಉದ್ಯಮಿಗಳ ಒಗ್ಗೂಡಿಸಲು, ಆರ್ಥಿಕವಾಗಿ ಪ್ರೋತ್ಸಾಹಿಸುವುದು ಹಿಂದು ಆರ್ಥಿಕ ಒಕ್ಕೂಟದ (ಎಚ್‌ಇಎಫ್) ಉದ್ದೇಶವಾಗಿದೆ.

ಈ ವೇಳೆ ಹಿಂದು ಆರ್ಥಿಕ ಒಕ್ಕೂಟದ (ಎಚ್‌ಇಎಫ್) ಮುಖ್ಯಸ್ಥ ಸ್ವಾಮಿ ವಿಜ್ಞಾನಾನಂದಜಿ ಮಾತನಾಡಿ, ಹಿಂದು ನವೋದ್ಯಮಿಗಳಿಗೆ ಆರ್ಥಿಕವಾಗಿ ಬೆಳವಣಿಗೆ ಹೊಂದಲು, ಸಲಹೆ ಜೊತೆಗೆ ಮೂಲ ಸೌಕರ್ಯ ಒದಗಿಸುವುದು ಹಿಂದು ಆರ್ಥಿಕ ಒಕ್ಕೂಟದ ಮುಖ್ಯ ಗುರಿಯಾಗಿದೆ. 2030ರ ವೇಳೆಗೆ ಯುವಕರು ಉದ್ಯೋಗ ಹುಡುವುದಕ್ಕಿಂತ ಉದ್ಯೋಗ ಸೃಷ್ಟಿಯ ಸಂಸ್ಕೃತಿ ಬೆಳೆಸಿಕೊಂಡು ಇತರರಿಗೆ ಉದ್ಯೋಗ ನೀಡುವಂತಾಗಬೇಕು ಎಂದರು.



“ ಕಾಶ್ಮೀರದಿಂದ ಹಿಡಿದು ಕನ್ಯಾ ಕುಮಾರಿವರೆಗೂ ಹಿಂದುಗಳ ಒಗ್ಗೂಡಿಸುವ ಮೂಲಕ ಆರ್ಥಿಕ ವಾಗಿ ಬಲಗೊಳ್ಳಬೇಕಿದೆ. ಹಿಂದು ಆರ್ಥಿಕ ಒಕ್ಕೂಟದಿಂದ ಸಂಘಟನೆ ಕಾರ್ಯ ನಡೆದಿದ್ದು, ಅದರ ಸಲಹೆ, ಸಹಾಯದಿಂದ ಉದ್ಯಮ ಬೆಳವಣಿಗೆ ಕಾಣಲಿದೆ.

■ **ಡಾ.ವೀರೇಂದ್ರ ಹೆಗ್ಗಡೆ,** ಧರ್ಮಸ್ಥಳದ ಧರ್ಮಾಧಿಕಾರಿ

ಆರ್ಥಿಕ ತಜ್ಞ ಡಾ.ಆರ್.ವೈದ್ಯನಾಥನ್ ಮಾತನಾಡಿ, ಕೇಂದ್ರ ಸರ್ಕಾರದ ವ್ಯಾಪಾರ ಒಪ್ಪಂದಗಳು, ಜಿಎಸ್‌ಟಿ ದರ ಪರಿಷ್ಕರಣೆ ಮತ್ತು ಕೃಷಿ ಉತ್ಪಾದನೆಯಲ್ಲಿ ಹೆಚ್ಚಳವು ಜಿಡಿಪಿ ಪರಿಷ್ಕರಣೆಗೆ ಕಾರಣವಾಗಿದೆ. ದೇಶದಲ್ಲಿ ಜನರ ಖರೀದಿ ಸಾಮರ್ಥ್ಯ ಮತ್ತು ಸ್ಥಿರವಾದ ಹೂಡಿಕೆಯ ಪ್ರಮಾಣ ಹೆಚ್ಚಳವಾಗಿದೆ ಎಂದು ತಿಳಿಸಿದರು.

ಕಾಡಾನೆ ಸೆರೆ ವೇಳೆ ಸಾಕಾನೆ ಜೂ.ಅರ್ಜುನ ನಾಪತ್ತೆ | 1 ಗಂಟೆ ಕಾರ್ಯಾಚರಣೆ ಬಳಿಕ ಪತ್ತೆ

ಸಾಕಾನೆ ನಾಪತ್ತೆ: ಅರಣ್ಯ ಸಿಬ್ಬಂದಿ ಪೇಚು

• **ಚಿಕ್ಕಮಗಳೂರು:** ಕಾಡಾನೆ ಸೆರೆಗೆ ಹೋಗಿದ್ದ ಸಾಕಾನೆ ಜೂನಿಯರ್ ಅರ್ಜುನ ದಾರಿ ತಪ್ಪಿ ಅರಣ್ಯ ಸಿಬ್ಬಂದಿಯನ್ನು ಪೇಚಿಗೆ ಸಿಲುಕಿಸಿದ ಘಟನೆ ತಾಲೂಕಿನ ಹುಣಸೇಹಳ್ಳಿ ಅರಣ್ಯದಲ್ಲಿ ಶುಕ್ರವಾರ ನಡೆದಿದೆ.

ಉಪಟಳ ನೀಡುತ್ತಿದ್ದ ಕಾಡಾನೆಯನ್ನು ಹಿಡಿಯುವ ಕಾರ್ಯಾಚರಣೆ ವೇಳೆ ಕಾಡಾನೆಗೆ ಮದವೇರಿದ್ದ ಹಿನ್ನೆಲೆಯಲ್ಲಿ ಹಿಂದಿರುಗುವಾಗ ಜೂನಿಯರ್ ಅರ್ಜುನ ದಾರಿ ತಪ್ಪಿದ್ದಾನೆ. ಕಳೆದ 5 ದಿನಗಳ ಹಿಂದೆ ಕಾಫಿ ತೋಟದಲ್ಲಿ ಕಾರ್ಮಿಕನನ್ನು ಬಲಿ ಪಡೆದಿದ್ದ ಕಾಡಾನೆಯನ್ನು ಸೆರೆ ಹಿಡಿಯಲು ರಾಜ್ಯದ ವಿವಿಧ ಶಿಬಿರಗಳಿಂದ 7 ಸಾಕಾನೆಗಳು ಬಂದಿದ್ದವು. ನಿನ್ನೆಯಿಂದ ಕಾರ್ಯಾಚರಣೆ ಕೂಡ ಆರಂಭಗೊಂಡಿತ್ತು.

ಶುಕ್ರವಾರ ಸಾಕಾನೆ ಜೂನಿಯರ್ ಅರ್ಜುನನ ನೇತೃತ್ವದಲ್ಲಿ ಅರಣ್ಯ ಸಿಬ್ಬಂದಿ ಕಾಡಾನೆಗಾಗಿ ಹುಡುಕಾಟ ನಡೆಸುತ್ತಿದ್ದಾಗ ಮದವೇರಿದ್ದ ಕಾಡಾನೆ ಏಕಾಏಕಿ ದಾಳಿಗೆ ಮುಂದಾಗಿದೆ. ಈ ಕಾದಾಟದ ಸಂದರ್ಭದಲ್ಲಿ ಜೂನಿಯರ್ ಅರ್ಜುನ ಕಾಡಿನೊಳಗೆ ಓಡಿಹೋಗಿ ಒಂದು ಗಂಟೆ ಕಾಲ ನಾಪತ್ತೆಯಾಗಿದ್ದ.



ಅರಣ್ಯದಲ್ಲಿ ಸಾಕಾನೆಯೇ ಮಿಸ್ ಆಗಿದ್ದರಿಂದ ಅಧಿಕಾರಿಗಳು ಹಾಗೂ ಇ.ಟಿ.ಎಫ್ ಸಿಬ್ಬಂದಿ ಒಂದು ಗಂಟೆ ಕಾಲ ತೀವ್ರ ಹುಡುಕಾಟ ನಡೆಸಿ ಅರ್ಜುನನನ್ನ ಪತ್ತೆ ಹಚ್ಚಿದ್ದಾರೆ. ಒಂದೆಡೆ ಮದವೇರಿದ್ದ ಕಾಡಾನೆ ಭೀತಿ. ಮತ್ತೊಂದೆಡೆ ಕಾರ್ಯಾಚರಣೆಯ ಪ್ರಮುಖ ಆನೆಯೇ ನಾಪತ್ತೆಯಾದ ಕಾರಣ ಅರಣ್ಯಾಧಿಕಾರಿಗಳು ಮತ್ತು ಇಟಿಎಫ್ ಸಿಬ್ಬಂದಿ ಸಂಕಷ್ಟಕ್ಕೆ ಸಿಲುಕಿದ್ದರು. ಸುಮಾರು ಒಂದು ಗಂಟೆ ಕಾಲ ಅರಣ್ಯದಾದ್ಯಂತ ಹುಡುಕಾಡಿದ ಬಳಿಕ ಕೊನೆಗೂ ಜೂನಿಯರ್ ಅರ್ಜುನ ಪತ್ತೆಯಾಗಿದ್ದು ಅಧಿಕಾರಿಗಳು ನಿಟ್ಟುಸಿರು ಬಿಟ್ಟಿದ್ದಾರೆ.

ಸದ್ಯ ಆನೆಯನ್ನು ಸುರಕ್ಷಿತವಾಗಿ ಕಟ್ಟಿ ಹಾಕಲಾಗಿದ್ದು ಮದವೇರಿದ ಕಾಡಾನೆಯ ಉಗ್ರ ರೂಪದಿಂದಾಗಿ ಸದ್ಯಕ್ಕೆ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿ ಸಿಬ್ಬಂದಿ ಹಿಂದಿರುಗಿದ್ದಾರೆ.

ಎಚ್ಚರಿಕೆಯ ಸೂಚನೆ

ಬಲಿಷ್ಠ ಗಂಡು ಕಾಡಾನೆಗೆ ಮದವೇರಿರುವುದರಿಂದ ಅರಣ್ಯಾಧಿಕಾರಿಗಳಿಗೆ ಕಾಡಾನೆ ಕಾರ್ಯಾಚರಣೆ ಸವಾಲಾಗಿ ಪರಿಣಮಿಸಿದೆ. ಸುತ್ತಮುತ್ತಲಿನ ಹಳ್ಳಿಗರು, ಕಾಫಿ ತೋಟದ ಕಾರ್ಮಿಕರು, ವಾಹನ ಸವಾರರು ಎಚ್ಚರಿಕೆಯಿಂದ ಇರುವಂತೆ ಅರಣ್ಯ ಇಲಾಖೆ ಸೂಚನೆ ನೀಡಿದೆ.

ಇಂದಿನ ಪಂದ್ಯ
ನ್ಯೂಜಿಲೆಂಡ್ VS ಪಾಕಿಸ್ತಾನ
ಸಂಜೆ 7 (ಕೊಲಂಬೋ)

ಪ್ರಮುಖ ಹಂತಕ್ಕೆ ಟಿ20 ವಿಶ್ವಕಪ್ | ಎಲ್ಲ ತಂಡಗಳಿಗೂ 3 ಪಂದ್ಯ | ಮೊದಲನೇ ಗುಂಪಿನಲ್ಲಿ ಭಾರತ

ಇಂದಿನಿಂದ ಸೂಪರ್ ಪಂದ್ಯಗಳು

▸ ದ.ಆಫ್ರಿಕಾ, ಜಿಂಬಾಬ್ವೆ ಹಾಗೂ ವೆಸ್ಟ್ ಇಂಡೀಸ್ ವಿರುದ್ಧ ಭಾರತ ಪಂದ್ಯ

ವಿಶ್ವದ ಕ್ರಿಕೆಟ್ ಅಭಿಮಾನಿಗಳನ್ನು ರಂಜಿಸುತ್ತಿರುವ ಟಿ20 ವಿಶ್ವಕಪ್ ಪಂದ್ಯಾವಳಿಯ ಮುಖ್ಯ ಘಟ್ಟಕ್ಕೆ ತಲುಪಿದೆ. ಹತ್ತಾರು ಬಾರಿ ಅಭಿಮಾನಿಗಳನ್ನು ನಿಬ್ಬೆರಗಾಗಿಸಿ ತುದಿಗಾಲಲ್ಲಿ ನಿಲ್ಲುವಂತೆ ಮಾಡಿದ ನಂತರ ಲೀಗ್ ಹಂತದ ಪಂದ್ಯಗಳು ಶುಕ್ರವಾರ ಮುಕ್ತಾಯಗೊಂಡಿವೆ. ಶನಿವಾರದಿಂದ ಸೂಪರ್ ಪಂದ್ಯಗಳು ಶುರುವಾಗಲಿವೆ.

20 ತಂಡಗಳಲ್ಲಿ 12 ತಂಡಗಳ ಆಟಗಾರರು ತಮ್ಮ ಮನೆ ಸೇರಲಿದ್ದಾರೆ. ಇದರಲ್ಲಿ ಆಸ್ಟ್ರೇಲಿಯಾ ತಂಡವೂ ಸೇರಿದೆ ಎಂಬುದು ಆಶ್ಚರ್ಯದಿಂದ ನೋಡಬೇಕಾಗಿರುವ ಸಂಗತಿ. ಫೆಬ್ರವರಿ 7ರಿಂದ ಶುರುವಾದ ಪಂದ್ಯಗಳು ದಿನಕ್ಕೆ ಮೂರರಂತೆ ನಡೆದವು. ಹತ್ತಾರು ಪಂದ್ಯಗಳಲ್ಲಿ ನೂರಾರು ಬ್ಯಾಟರ್‌ಗಳು ಮಿಂಚಿದರು. ತಮ್ಮ ತಂಡಗಳನ್ನು ಗೆಲ್ಲಿಸಿದರು. ಅಭಿಮಾನಿಗಳ ಎದೆಬಡಿತ ಹೆಚ್ಚಿಸಿದರು. ಬೌಲರ್‌ಗಳೂ ಕೂಡ ಅದಕ್ಕೆ ಕಿಕ್ ನೀಡಿ ಪಂದ್ಯಗಳನ್ನು ಗೆಲ್ಲಿಸಿದರು. ಕೆಲವು ದಂಡಿಸಿಕೊಂಡರು. ಇನ್ನು ಕೆಲವರು ಹೀರೋ ಎನಿಸಿಕೊಂಡರು.

ಶನಿವಾರದಿಂದ ನಡೆಯಲಿರುವ ಸೂಪರ್ -8ರ ಪಂದ್ಯಗಳಿಂದ ಅಭಿಮಾನಿಗಳಿಗೆ ಇನ್ನಷ್ಟು ರೋಮಾಂಚನಗೊಳಿಸುವುದು ಸುಳ್ಳಲ್ಲ. ಯಾಕೆಂದರೆ ಇಲ್ಲಿಂದ ನಡೆಯಲಿರುವ ಪಂದ್ಯಗಳು ಸೋತ ತಂಡಗಳಿಗೆ ಮನೆ ಹಾದಿ ತೋರಿಸುತ್ತವೆ. ಗೆದ್ದವರಿಗೆ ಟ್ರೋಫಿ ಇರುವ ಹಾದಿ. ಈ ಬೆನ್ನಲ್ಲೇ ಆಟಗಾರರು ಪ್ರತಿಯೊಂದು ಪಂದ್ಯದಲ್ಲಿ ತಮ್ಮ ಅನುಭವ, ಕೌಶಲ ಮತ್ತು ಉತ್ಸಾಹಕ್ಕೂ ಮೀರಿದ ಕ್ರಿಕೆಟ್ ಆಡಲಿದ್ದಾರೆ. ಹೀಗಾಗಿ ಈ ಆಟ ಅಭಿಮಾನಿಗಳ ಭರವಸೆ, ಎಕ್ಸೈಟ್‌ಮೆಂಟ್ ಮತ್ತು ಆತಂಕಗಳು ಉಲ್ಬಣಗೊಳ್ಳುವುದರಲ್ಲಿ ಸಂಶಯವೇ ಇಲ್ಲ. ಸೂಪರ್-8 ಪಂದ್ಯಗಳೇ ಹಾಗೇ.



11 ಪಂದ್ಯಗಳು

ಸೂಪರ್ 8ರಲ್ಲಿ 11 ಪಂದ್ಯಗಳು ನಡೆಯಲಿವೆ. ವಿಶ್ವಕಪ್‌ನಲ್ಲಿ ಭಾಗವಹಿಸಿದ್ದ 20 ತಂಡಗಳ ಪೈಕಿ ಐದರಂತೆ ನಾಲ್ಕು ಗುಂಪುಗಳಲ್ಲಿ ವಿಂಗಡಿಸಲಾಗಿತ್ತು. ತಲಾ ಎರಡು ತಂಡಗಳು ಈಗ ಸೂಪರ್-8ಕ್ಕೆ ಲಗ್ಗೆ ಹಾಕಿವೆ. ಹಂತಕ್ಕೆ ಬಂದ ಎಲ್ಲ ತಂಡಗಳನ್ನು ಎರಡು ಗುಂಪಿನಲ್ಲಿ ಸೇರಿಸಲಾಗಿದೆ. ಇದರಲ್ಲಿ ಟಾಪ್ ಎರಡು ತಂಡಗಳು ಸೆಮಿಗೆ ಮುನ್ನೆಯುತ್ತವೆ. ಇನ್ನುಳಿದ ತಂಡಗಳು ಮನೆಗೆ ಹೋಗುತ್ತವೆ.

ಭಾರತಕ್ಕೆ ಮೂರು ಪಂದ್ಯ

ಸೂಪರ್ ಎಂಟರಲ್ಲಿ ಭಾರತ ಮೂರು ಪಂದ್ಯಗಳನ್ನಾಡಲಿದೆ. ಮೊದಲನೇ ಗುಂಪಿನಲ್ಲಿರುವ ಭಾರತ ಜಿಂಬಾಬ್ವೆ, ದ.ಆಫ್ರಿಕಾ, ವಿಂಡೀಸ್ ತಂಡಗಳನ್ನೊಮ್ಮೆ ಎದುರಿಸಲಿದೆ. ರನ್‌ರೇಟ್ ಮತ್ತು ಗೆಲುವು ಫೈನಲ್ ಹಾದಿಯಲ್ಲಿಡುತ್ತವೆ. ಭಾನುವಾರದಂದು ಮೊದಲ ಪಂದ್ಯವಾಡಲಿರುವ ಭಾರತ, ದ.ಆಫ್ರಿಕಾ ತಂಡವನ್ನು ಎದುರಿಸಲಿದೆ. ಎರಡನೇ ಪಂದ್ಯದಲ್ಲಿ ಜಿಂಬಾಬ್ವೆ ಹಾಗೂ ಮೂರನೇ ಪಂದ್ಯದಲ್ಲಿ ವಿಂಡೀಸ್ ತಂಡವನ್ನು ಎದುರಿಸಲಿದೆ.

ಮೊದಲ ಪಂದ್ಯದಲ್ಲಿ ಪಾಕ್-ಕಿವೀಸ್ ಫೈಟ್

ಸೂಪರ್-8ರ ಮೊದಲನೇ ಪಂದ್ಯದಲ್ಲಿ ಪಾಕಿಸ್ತಾನ ಮತ್ತು ಕಿವೀಸ್ ಪಂದ್ಯಗಳು ಶನಿವಾರದಂದು ಮುಖಾಮುಖಿಯಾಗಲಿವೆ. ಭಾರತದೊಂದಿಗೆ ಸೋತರೂ ಇನ್ನುಳಿದ ಎಲ್ಲ ಪಂದ್ಯಗಳಲ್ಲಿ ಗೆದ್ದು ನಿಂತಿದೆ ಪಾಕಿಸ್ತಾನ. ಮತ್ತೊಂದೆಡೆ ದ.ಆಫ್ರಿಕಾದೊಂದಿಗೆ ಸೋತರೂ ಇನ್ನುಳಿದ ಪಂದ್ಯಗಳಲ್ಲಿ ಸ್ಪಷ್ಟ ಪ್ರಾಬಲ್ಯ ಸಾಧಿಸಿರಯವ ನ್ಯೂಜಿಲೆಂಡ್ ಸನ್ನದ್ಧವಾಗಿ ನಿಂತಿದೆ. ಕೊಲಂಬೋ ವಿಶ್ವಕಪ್‌ನ ಮೊದಲ ಸೂಪರ್-8 ಪಂದ್ಯಕ್ಕೆ ಸಜ್ಜಾಗಿದೆ. ಮೊದಲ ಪಂದ್ಯದಲ್ಲೇ ಗೆದ್ದು ಮುನ್ನಡೆ ಸಾಧಿಸುವ ತವಕದಲ್ಲಿ ಪಾಕಿಸ್ತಾನ ಕಾಣಿಸಿಕೊಂಡರೆ, ತಮ್ಮ ಸೆಮಿ ಖಚಿತತೆಗೆ ಕಿವೀಸ್ ಸಿದ್ಧವಾಗಿದೆ.



ಬಲಿಷ್ಠ ಜಿಂಬಾಬ್ವೆ ಲಗ್ಗೆ

ವಿಶ್ವ ಕ್ರಿಕೆಟ್ ಅನ್ನೇ ನಿಬ್ಬೆರಗಾಗಿ ನಿಲ್ಲಿಸಿರುವ ಜಿಂಬಾಬ್ವೆ ತಂಡವು ತನ್ನ ಲೀಗ್ ಪಂದ್ಯಗಳಲ್ಲಿ ಆಶ್ಚರ್ಯಗಳೊಂದಿಗೆ ಮಿಂಚಿದೆ. ಸೂಪರ್-8ಕ್ಕೆ ಲೀಲಾಜಾಲವಾಗಿ ಎಂಟ್ರಿಕೊಟ್ಟಿರುವ ಜಿಂಬಾಬ್ವೆ ದೊಡ್ಡ ದೊಡ್ಡ ತಂಡಗಳನ್ನು ಸೋಲಿಸಿದೆ. ಶಾಕ್ ನೀಡಿದೆ ಮತ್ತು ಸಂಪೂರ್ಣ ಪ್ರಾಬಲ್ಯ ಸಾಧಿಸಿದೆ. ಒಂದು ಪಂದ್ಯ ರದ್ದಾಗಿರುವುದನ್ನು ಬಿಟ್ಟರೂ ಶ್ರೀಲಂಕಾ ಮತ್ತು ಆಸ್ಟ್ರೇಲಿಯಾ ತಂಡಗಳನ್ನು ಸೋಲಿಸಿ ಮೆರೆದಿದೆ ಜಿಂಬಾಬ್ವೆ. ಈ ಬೆನ್ನಲ್ಲೇ ಎಲ್ಲಾ ವಿಶ್ವ ಕ್ರಿಕೆಟ್ ಅಭಿಮಾನಿಗಳ ಪ್ರಮುಖ ಆಕರ್ಷಣೆಯಾಗಿದೆ.



ಸೂಪರ್-8ರ ವೇಳಾಪಟ್ಟಿ

ದಿನಾಂಕ	ಪಂದ್ಯ	ಸ್ಥಳ	ಸಮಯ
ಫೆ.21	ನ್ಯೂಜಿಲೆಂಡ್-ಪಾಕ್	ಕೊಲಂಬೋ	ಸಂಜೆ 7
ಫೆ.22	ಇಂಗ್ಲೆಂಡ್-ಶ್ರೀಲಂಕಾ	ಪಲ್ಲೆಕೆಲೆ	ಮಧ್ಯಾಹ್ನ 3
ಫೆ.22	ಭಾರತ-ದ.ಆಫ್ರಿಕಾ	ಅಹಮದಾಬಾದ್	ಸಂಜೆ 7
ಫೆ.23	ಜಿಂಬಾಬ್ವೆ-ವಿಂಡೀಸ್	ಮುಂಬೈ	ಸಂಜೆ 7
ಫೆ.24	ಪಾಕ್-ಇಂಗ್ಲೆಂಡ್	ಪಲ್ಲೆಕೆಲೆ	ಸಂಜೆ 7
ಫೆ.25	ನ್ಯೂಜಿಲೆಂಡ್-ಶ್ರೀಲಂಕಾ	ಕೊಲಂಬೋ	ಸಂಜೆ 7
ಫೆ.26	ದ.ಆಫ್ರಿಕಾ-ವಿಂಡೀಸ್	ಅಹಮದಾಬಾದ್	ಮಧ್ಯಾಹ್ನ 3
ಫೆ.26	ಭಾರತ-ಜಿಂಬಾಬ್ವೆ	ಚೆನ್ನೈ	ಸಂಜೆ 7
ಫೆ.27	ಇಂಗ್ಲೆಂಡ್-ನ್ಯೂಜಿಲೆಂಡ್	ಕೊಲಂಬೋ	ಸಂಜೆ 7
ಫೆ.28	ಶ್ರೀಲಂಕಾ-ಪಾಕ್	ಪಲ್ಲೆಕೆಲೆ	ಸಂಜೆ 7
ಮಾ.1	ಜಿಂಬಾಬ್ವೆ-ದ.ಆಫ್ರಿಕಾ	ದಿಲ್ಲಿ	ಮಧ್ಯಾಹ್ನ 7
ಮಾ.1	ವಿಂಡೀಸ್-ಭಾರತ	ಕೋಲ್ಕತ್ತಾ	ಸಂಜೆ 7

ಕಿರುಸುದ್ದಿ

ಕೊನೆಯ ಪಂದ್ಯದಲ್ಲಿ ಆಸ್ಟ್ರೇಲಿಯಾಗೆ ಗೆಲುವು



ಪಲ್ಲೆಕೆಲೆ: ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾರೀ ಹಿನ್ನಡೆ ಅನುಭವಿಸಿದ್ದಲ್ಲದೆ, ಲೀಗ್ ಹಂತದಲ್ಲೇ ಬರಿಗೈಯಿಂದ ಹೊರಬಿದ್ದ ಆಸ್ಟ್ರೇಲಿಯಾ ತಂಡವು ತನ್ನ ನೈಜ ಲಯಕ್ಕೆ ಕೊನೆಯ ಪಂದ್ಯದ ವೇಳೆ ಮರಳಿದೆ. ಜಿಂಬಾಬ್ವೆ, ಶ್ರೀಲಂಕಾ ಅಂತಹ ತಂಡಗಳ ವಿರುದ್ಧ ತೀರಾ ಗರ್ವಭಂಗವಾಗುವಂತೆ ಸೋತಿರುವ ಆಸೀಸ್, ಕೊನೆಯ ಲೀಗ್ ಪಂದ್ಯದಲ್ಲಿ ಮಿಂಚಿತು. ಒಂಥರಾ ಆಟ ಮುಗಿದ ಮೇಲೆ ಮೈದಾನಕ್ಕಿಳಿದಂತೆ ಮಾಡಿತು. ಒಮನ್ ವಿರುದ್ಧದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಒಮನ್ ತಂಡವನ್ನು 104 ರನ್ ಮಾತ್ರಕ್ಕೆ ಆಲೌಟ್ ಮಾಡಿತು. 9.4 ಓವರ್‌ಗಳಲ್ಲೇ ತನ್ನ ಗುರಿಯನ್ನು ಭೇದಿಸಿತು. ಸೋತ ಕಹಿ ನೆನಪಿನೊಂದಿಗೆ ಒಂದು ಸಮಾಧಾನಕರ ಗೆಲುವು ಜೇಬಿಗೆ ಹಾಕಿಕೊಂಡಿರುವ ಮಾರ್ಷ್ ಪಡೆ, ಮುಂದಿನ ಕೂಟಗಳಲ್ಲಿ ವಿಶೇಷ ಕಂಬ್ಯಾಕ್ ಮಾಡುವ ಭರವಸೆ ನೀಡಿತು. ಬೌಲರ್‌ಗಳು ಸಮತೋಲಿತ ಪ್ರದರ್ಶನ ನೀಡಿದರು. ಮೊದಲಿನಿಂದಲೂ ಲೆಗ್ ಸ್ಪಿನ್ನರ್ ಆ್ಯಡಮ್ ಜಂಪಾ 4 ವಿಕೆಟ್ ಕಿತ್ತಿ ಮೆರೆದರು. ಮ್ಯಾಕ್ಸವೆಲ್ 2 ಮತ್ತು ಬಾರ್ಟ್‌ಲೆಟ್ 2 ವಿಕೆಟ್ ಪಡೆದರು. ಬ್ಯಾಟಿಂಗ್ ಮಾಡುವಾಗ ತನ್ನ ಹಳೆಯ ಲಯ ನೆನಪಿಸಿಕೊಂಡ ಆಸ್ಟ್ರೇಲಿಯಾ ಒಮನ್ ಬೌಲರ್‌ಗಳ ಬೆವರಿಳಿಸಿದರು. ಮನಬಂದಂತೆ ದಂಡಿಸಿದರು. ಮಿಚೆಲ್ ಮಾರ್ಷ್ 33 ಬಾಕ್ ಮಾತ್ರದಲ್ಲಿ 7 ಬೌಂಡರಿ ಮತ್ತು 4 ಸಿಕ್ಸರ್‌ಗಳೊಂದಿಗೆ 64 ರನ್ ಗಳಿಸಿದರು. ಅಜೇಯರಾದರು. ಹೆಡ್ 32 ರನ್ ಬಾರಿಸಿ ಭದ್ರ ಬುನಾದಿ ಹಾಕಿಕೊಟ್ಟರು. ಇನ್ನುಳಿದಂತೆ ಇಂಗ್ಲಿಸ್ 8 ರನ್ ಗಳಿಸಿ ಬ್ಯಾಟಿಂಗ್ ಮಾಡುತ್ತಿದ್ದರು. ಅಷ್ಟೊತ್ತಿಗಾಗಲೇ ಪಂದ್ಯ ಮುಗಿಯಿತು. ಇಲ್ಲಿಗೆ ಲೀಗ್ ಹಂತದ ಪಂದ್ಯಗಳು ಮುಕ್ತಾಯಗೊಂಡವು.

ಹಂಡ್ರೆಡ್ ಲೀಗ್ ಹರಾಜಿನಲ್ಲಿ 17 ಭಾರತೀಯರು

ಹೊಸದಿಲ್ಲಿ: ದಿ ಹಂಡ್ರೇಡ್ ಲೀಗ್ ಪಂದ್ಯಾವಳಿಯ ಹರಾಜಿಗಾಗಿ 17ಭಾರತೀಯ ಆಟಗಾರ್ತಿಯರು ನೋಂದಿಸಿಕೊಂಡಿದ್ದು, ದೀಪ್ತಿ ಶರ್ಮ, ರಿಚಾ ಘೋಷ್ ನಮ್ಮ ದೇಶದ ಪ್ರಮುಖ ಆಕರ್ಷಣೆಯಾಗಿದ್ದಾರೆ. ರಿಚಾ ಘೋಷ್ ತಮ್ಮನ್ನು 50 ಸಾವಿರ ಪೌಂಡ್ ಮೂಲ ಬೆಲೆಯ ಬ್ರಾಕೆಟ್‌ನಲ್ಲಿ ನೋಂದಾಯಿಸಿಕೊಂಡಿದ್ದಾರೆ. ದೀಪ್ತಿ ಶರ್ಮ 27,500 ಪೌಂಡ್‌ಗಳ ಪಟ್ಟಿಯಲ್ಲಿ ನೋಂದಾಯಿಸಿಕೊಂಡಿದ್ದಾರೆ. ಇಬ್ಬರೂ ಆಟಗಾರ್ತಿಯರು ಈ ಮೊದಲೇ ಹಂಡ್ರೇಡ್ ಲೀಗ್ ಆಡಿದ್ದರು. ಇವರನ್ನು ಹೊರತುಪಡಿಸಿ ಪ್ರತಿಕಾ ರಾವಲ್, ಚಾರಣಿ, ಪೂಜಾ ವಸ್ತ್ರಕರ್ ಅವರೂ ನೋಂದಾಯಿಸಿಕೊಂಡಿದ್ದಾರೆ. **ನೋಂದಾಯಿಸಿಕೊಂಡ ಭಾರತೀಯರು:** ರಿಚಾ ಘೋಷ್,ಪ್ರತೀಕಾ ರಾವಲ್, ದೀಪ್ತಿ ಶರ್ಮ, ಎನ್. ಶ್ರೀ ಚಾರಣಿ, ಪೂಜಾ ವಸ್ತ್ರಕರ್,ಯಾಸ್ತಿಕಾ ಭಾಟಿಯಾ, ವೃಂದಾ ದಿನೇಶ್, ಕಾಶ್ವೀ ಗೌತಮ್, ಶಿಖಾ ಪಾಂಡೆ, ಶ್ರೇಯಾಂಕಾ ಪಾಟೀಲ್, ನಿಕಿ ಪ್ರಸಾದ್, ಅರುಂಧತಿ ರೆಡ್ಡಿ, ಸಜೀವನ್ ಸಜನಾ, ನಂದನಿ ಶರ್ಮ, ಆಶಾ ಸೋಭಾನ, ದೀಯಾ ಯಾದವ್, ರಾಧಾ ಯಾದವ್.

ಒಲಿಂಪಿಕ್ಸ್‌ನ ಅಥ್ಲೆಟಿಕ್ಸ್ ಕಮಿಷನ್‌ಗೆ ಪೌಲ್ ಅಧ್ಯಕ್ಷ

ಹೊಸದಿಲ್ಲಿ: ಸ್ಪೇನ್‌ನ ಬಾಸ್ಕೆಟ್‌ಬಾಲರ್ ಪೌಲ್ ಗ್ಯಾಸಲ್ ಅವರು ಅಂತಾರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಯ ಅಥ್ಲೆಟಿಕ್ಸ್ ಸಮಿತಿಯ ಅಧ್ಯಕ್ಷರಾಗಿ ಆಯ್ಕೆಯಾದರು. ಒಲಿಂಪಿಕ್ಸ್ ಸಂಬಂಧಿಸಿದ ಕೆಲಸಗಳು ವಿರಾಮರಹಿತವಾಗಿ ನಡೆಯುತ್ತಿವೆ. ಒಂದು ಕಡೆ ವಿಂಟರ್ ಒಲಿಂಪಿಕ್ಸ್ ಸಿದ್ಧತೆಗಳೂ ನಡೆಯುತ್ತಿವೆ. ಇದೇ ವೇಳೆ ಹೊಸ ತಂಡದ ಆಯ್ಕೆಗಾಗಿ ಚುನಾವಣೆ ನಡೆಸಿದೆ. ಈ ಚುನಾವಣೆಯಲ್ಲಿ ಅವರು ಗೆದ್ದು ಬೀಗಿದರು. ಭಾರತದ ಶೂಟರ್, ಚಿನ್ನದ ಪದಕ ವಿಜೇತ ಅಭಿನವ್ ಬಿಂದ್ರಾ ಅವರು, ತಮ್ಮ ಎರಡನೇ ಉಪಾಧ್ಯಕ್ಷ ಸ್ಥಾನಕ್ಕಾಗಿ ಚುನಾವಣೆಯಲ್ಲಿ ಸ್ಪರ್ಧಿಸಲಿದ್ದಾರೆ. 2018ರಲ್ಲಿ ಅವರು ಉಪಾಧ್ಯಕ್ಷರಾಗಿ ಆಯ್ಕೆಯಾಗಿ ಒಂದು ಅವಧಿ ಮುಗಿಸಿದ್ದಾರೆ. ಒಲಿಂಪಿಕ್ಸ್ ಸಂಸ್ಥೆಯು ಉಪಾಧ್ಯಕ್ಷ ಹುದ್ದೆಗೆ ಎರಡು ಸ್ಥಾನಗಳನ್ನು ಹೊಂದಿದೆ. ಮೊದಲನೇ ಉಪಾಧ್ಯಕ್ಷರಾಗಿ ಕೆನಡಾದ ಸ್ಮಿತ್ ಅವರನ್ನು ಆಯ್ಕೆ ಮಾಡಲಾಗಿದೆ.

ಕರ್ನಾಟಕ ಶೂಟಿಂಗ್ ಲೀಗ್ | ಬಿಕರಿಯಾದ ಶೂಟರ್‌ಗಳಿಗಿಲ್ಲ ನಯಾ ಪೈಸೆ

ಶೂಟಿಂಗ್ ಹರಾಜು ಅಣಕು ಮಾತ್ರ!

ಬೆಂಗಳೂರು: ಕರ್ನಾಟಕ ಶೂಟಿಂಗ್ ಲೀಗ್‌ಗಾಗಿ ಹರಾಜುಗೊಂಡ ಶೂಟರ್‌ಗಳಿಗೆ ದುಡ್ಡು ಸಿಗಲ್ಲ. ಅದೆಲ್ಲಾ ಒಂದು ಅಣಕು ಪ್ರದರ್ಶನವಷ್ಟೇ ಎಂಬ ಆಘಾತಕಾರಿ ಮಾಹಿತಿ ಹೊರಬಿದ್ದಿದೆ.

ಕರ್ನಾಟಕ ಶೂಟಿಂಗ್ ಲೀಗ್ ಎಂಬ ಕೂಟವೊಂದನ್ನು ನಡೆಸುವುದಾಗಿ ಹೇಳಿದ್ದ ಕರ್ನಾಟಕ ರಾಜ್ಯ ರೈಫಲ್ ಸಂಸ್ಥೆ, ಮಂಗಳವಾರದಂದು ಕಾರ್ಯಕ್ರಮವೊಂದನ್ನು ಮಾಡಿತ್ತು. ಫ್ರಾಂಚೈಸಿ ಮಾದರಿಯಲ್ಲಿ ನಡೆಯುವ ಕೂಟಕ್ಕಾಗಿ ಹರಾಜು ನಡೆಸುವುದಾಗಿ ಹೇಳಿ ಕಾರ್ಯಕ್ರಮ ಅಚ್ಚುಕಟ್ಟಾಗಿ ನಡೆಸಿತ್ತು. 8 ಫ್ರಾಂಚೈಸಿಗಳ ನಡುವೆ ಐಪಿಎಲ್ ಮಾದರಿಯಲ್ಲಿ ನಡೆದಿದ್ದ ಹರಾಜಿನಲ್ಲಿ ಶೂಟರ್‌ಗಳು ಲಕ್ಷ ರೂ.ಗಳ ಮೊತ್ತದಲ್ಲಿ ಬಿಕರಿಯಾಗಿದ್ದರು. ಒಟ್ಟು 88 ಶೂಟರ್‌ಗಳು ವಿವಿಧ ಫ್ರಾಂಚೈಸಿಗಳಿಗೆ ಬಿಕರಿಯಾಗಿದ್ದರು. ಫ್ರಾಂಚೈಸಿಗಳಿಗೆ ತಲಾ 1.75 ಕೋಟಿ ರೂ. ಪರ್ಸ್ ನೀಡಲಾಗಿತ್ತು. ಈ ಪರ್ಸ್‌ನಿಂದ ಫ್ರಾಂಚೈಸಿಗಳು ಲಕ್ಷಾನುಗಟ್ಟಲೇ ಹಣ ನೀಡಿ ಶೂಟರ್‌ಗಳನ್ನು ಖರೀದಿಸಿದ್ದವು. ಆದರೆ ಶೂಟರ್‌ಗಳಿಗೆ ಯಾವುದೇ ನಯಾ ಪೈಸಾ ನೀಡಲಾಗಲ್ಲ. ಅದು ವರ್ಚುವಲ್ ಹಣವಷ್ಟೇ ಎಂದು ಸಂಸ್ಥೆ ಸುದ್ದಿ ಪ್ರಕಟವಾದ ನಂತರ ಹೇಳುತ್ತಿದೆ.

ಸುದ್ದಿ ಹೊರಬಂದ ನಂತರ ಸಂಸ್ಥೆ ಸ್ಪಷ್ಟನೆ

ಅಣಕು ಹರಾಜಿಗಾಗಿ 136 ಶೂಟರ್‌ಗಳು ನೋಂದಣಿ ಮಾಡಿಕೊಂಡಿದ್ದರು. ಎಲ್ಲ ಶೂಟರ್‌ಗಳ ಮೂಲ ಬೆಲೆ 10 ಲಕ್ಷ. ಫ್ರಾಂಚೈಸಿಗಳ ಮಧ್ಯೆ ನಡೆದಿದ್ದ ಬಿಡ್ಡಿಂಗ್‌ನಲ್ಲಿ ಚಿತಪರಿಚಿತ ಶೂಟರ್ ಕೃಥಾರ್ಥ್ ಸವ್ಯಸಾಚಿ 44 ಲಕ್ಷಕ್ಕೆ ಬಿಕರಿಯಾಗಿದ್ದರು. ಅಕುಷ್ಕಾ 43 ಲಕ್ಷ ರೂ.ಗೆ ಬಿಕರಿಯಾಗಿದ್ದರು. ಈ ಬಗ್ಗೆ ಪ್ರಮುಖ ಮಾಧ್ಯಮಗಳು ಸುದ್ದಿ ಪ್ರಕಟಿಸಿದ್ದವು. ಸುದ್ದಿ ಜನರ ಮನೆ ಮುಟ್ಟಿತ್ತು. ಆದರೆ ಶೂಟರ್‌ಗಳಿಗೆ ದುಡ್ಡು ನೀಡಲಾಗಲ್ಲ ಎಂಬ ನಿಬ್ಬೆರಗಾಗಿಸುವ ಸುದ್ದಿ ಹೊರಬಿದ್ದಿದೆ. ವಿಷಯ ಬೇರೆ ಕಡೆಯಿಂದ ಮಾಧ್ಯಮಗಳಿಗೆ ಮುಟ್ಟಿದ ನಂತರ ಅದೊಂದು ಅಣಕು ಅಷ್ಟೆ, ಇದು ಶೂಟರ್‌ಗಳಿಗೆ ಮೊದಲೇ ಗೊತ್ತಿತ್ತು ಎನ್ನುವ ಮೂಲಕ ವಿವಾದ ಮೈಮೇಲಿಂದ ಜಾಡಿಸಿಕೊಳ್ಳುತ್ತಿದೆ ಕರ್ನಾಟಕ ರೈಫಲ್ ಸಂಸ್ಥೆ.



ವಿಷಯದ ಬಗ್ಗೆ ಹೇಳೇ ಇಲ್ಲ: ಮಂಗಳವಾರದ ಇವೆಂಟಿನಲ್ಲಿ ಅಣಕು ದುಡ್ಡಿನ ಬಗ್ಗೆ ಯಾವುದೇ ಮಾಹಿತಿ ನೀಡಿರಲಿಲ್ಲ. ಹರಾಜಿಗೆ ಬಿಡ್ಡಿಂಗ್ ಮಾಡುವ ವೇಳೆ ಲಕ್ಷ ರೂ. ಮೌಲ್ಯದಲ್ಲೇ ಘೋಷಣೆ ಕೂಗಿದ್ದಾರೆ. ಪತ್ರಕರ್ತರಿಗೆ ಮಾಹಿತಿ ನೀಡುವಾಗಲೂ ವರ್ಚುವಲ್ ದುಡ್ಡಿನ ಬಗ್ಗೆ ಪ್ರಸ್ತಾವನೆ ಮಾಡಿಲ್ಲ. ನೈಜ ದುಡ್ಡು ಎಂಬಂತೆ ಮಾಹಿತಿ ನೀಡಿದ್ದಾರೆ. ಅಷ್ಟೇ ಅಲ್ಲದೆ ತಾವೇ ನೀಡಿದ ಮಾಧ್ಯಮ ಪ್ರಕಟಣೆಯಲ್ಲೂ ಈ ಬಗ್ಗೆ ಉಲ್ಲೇಖಿಸಿಲ್ಲ. ಯಾಮಾರಿಸಿದ ವಿಚಾರ ಬಹಿರಂಗವಾದ ತಕ್ಷಣ, ಎಲ್ಲ ಶೂಟರ್‌ಗಳಿಗೆ ತಿಳಿಸಲಾಗಿತ್ತು, ಮಾಧ್ಯಮದೊಂದಿಗೆ ಮಾತನಾಡುವಾಗ ಮಿಸ್ ಕಮ್ಯೂನಿಕೇಶನ್ ಆಗಿದೆ. ನಾವು ಆಗ ಸ್ಪಷ್ಟನೆ ನೀಡಿಲ್ಲ ಎಂದು ತಪ್ಪು ಒಪ್ಪಿಕೊಂಡು, ಸ್ಪಷ್ಟನೆ ನೀಡಿದೆ.

ಸ್ಪಷ್ಟನೆಯಲ್ಲೇನಿದೆ?: ಶೂಟರ್‌ಗಳಿಗೆ ದುಡ್ಡು ನೀಡಲಾಗಲ್ಲ ಎಂಬ ವಿಚಾರ ಹೇಳದೆ ಸುದ್ದಿಗಾರರನ್ನು ಯಾಮಾರಿಸಿದ ನಂತರ ಪ್ರಮುಖ ಮಾಧ್ಯಮಗಳಲ್ಲಿ ದುಡ್ಡಿನ ಮೌಲ್ಯದಲ್ಲೇ ಖರೀದಿ ಮಾಡಲಾಗಿದೆ ಎಂದು ಪ್ರಕಟವಾಗಿದೆ. ಈ ಬಗ್ಗೆ ಸುದ್ದಿ ನೋಡಿದ ಶೂಟರ್‌ಗಳು ಮತ್ತು ಶೂಟರ್‌ಗಳ ಪಾಲಕರು ಪತ್ರಿಕೆಗಳಿಗೆ ಕರೆ ಮಾಡಿ, ದುಡ್ಡು ನೀಡಲಾಗಿಲ್ಲ ಎಂಬ ವಿಚಾರ ಬಹಿರಂಗಪಡಿಸಿದ್ದಾರೆ. ಈ ಬಗ್ಗೆ ಸ್ಪಷ್ಟನೆ ಕೇಳುದಾಗ ರೈಫಲ್ ಸಂಸ್ಥೆ (ಬಿಡ್ಡಿಂಗ್ ಸಂಪೂರ್ಣ ಅಣಕು ಹಣದ ಮೇಲೆ ಆಧಾರವಾಗಿದೆ. ಅಲ್ಲಿ ಉಲ್ಲೇಖಿಸಲಾದ ಮೊತ್ತ ನೈಜವಾಗಿ ನೀಡಲಾಗಲ್ಲ. ಆದರೆ ಈ ವಿಚಾರ ಶೂಟರ್‌ಗಳಿಗೆ ಮೊದಲೇ ಗೊತ್ತಿತ್ತು) ಎಂದು ಹೇಳಿದೆ.

ಕೂಟ ನಡೆಯುತ್ತೆ: ಕೂಟ ಯಥಾಪ್ರಕಾರ 28 ಫೆ. ಮತ್ತು ಮಾ.1ರಂದು ನಡೆಯಲಿದೆ. ಶೂಟರ್‌ಗಳಿಗೆ ಯಾವುದೇ ಮೊತ್ತ ನೀಡಲಾಗಲ್ಲ. ಬದಲಾಗಿ ಗೆದ್ದ ತಂಡಕ್ಕೆ ಮಾತ್ರ ನಿಗದಿತ ನೀಡಲಾಗುವುದು ಎಂದು ಸಂಸ್ಥೆಗೆ ಸಂಬಂಧಿಸಿದ ಅಧಿಕಾರಿಗಳು ತಿಳಿಸಿದ್ದಾರೆ.

ರೈಸಿಂಗ್ ಏಷ್ಯಾಕಪ್: ಫೈನಲ್‌ಗೆ ಭಾರತ

ಬ್ಯಾಂಕಾಕ್: ಸಮತೋಲಿತ ಪ್ರದರ್ಶನ ನೀಡಿದ ಭಾರತ ಎ ಮಹಿಳೆಯರ ತಂಡವು ಇಲ್ಲಿ ನಡೆದ ರೈಸಿಂಗ್ ಸ್ಟಾರ್ಸ್ ಏಷ್ಯಾಕಪ್ ಪಂದ್ಯಾವಳಿಯ ಫೈನಲ್‌ಗೇರಿದರು. ಶುಕ್ರವಾರದ ಸೆಮಿಫೈನಲ್ ಪಂದ್ಯದಲ್ಲಿ ಶ್ರೀಲಂಕಾ ತಂಡವನ್ನು ಮಣಿಸಿ ಮನೆಗೆ ಕಳುಹಿಸಿದ ಭಾರತ, ಮುಂದಿನ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು ಎದುರಿಸಲಿದೆ.

ಶ್ರೀಲಂಕಾ ಆಟಗಾರರನ್ನು ನಿಬ್ಬೆರಗಾಗಿ ನಿಲ್ಲುವಂತೆ ಮಾಡಿದ ಭಾರತ, ಕರಾರುವಾಕ್ಕಾಗಿ ಐದು ವಿಕೆಟ್‌ಗಳ ಜಯ ಸಾಧಿಸಿತು. ನಾಯಕಿ ರಾಧಾ ಯಾದವ್ ಸಮರ್ಥ ಪ್ರದರ್ಶನ ನೀಡಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಬೌಲಿಂಗ್‌ನಲ್ಲಿ 4/19 ಅಂಕಿಅಂಶಗಳೊಂದಿಗೆ ಲಂಕಾ ಎ' ಬ್ಯಾಟಿಂಗ್ ಪಂಗಡವನ್ನು ಕುಗ್ಗಿಸಿದ ಅವರು, ನಂತರ ಕಠಿಣ ಚೇಸ್‌ನಲ್ಲಿ ಕೇವಲ 18 ಎಸೆತಗಳಲ್ಲಿ ಅಜೇಯ 31 ರನ್ ಸಿಡಿಸಿ ತಂಡವನ್ನು ಗುರಿ ದಾಟಿಸಿದರು.



ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಶ್ರೀಲಂಕಾ ಎ' 118 ರನ್‌ಗಳಿಗೆ ಆಲೌಟ್ ಆಯಿತು. ರಾಧಾ ಯಾದವ್ ಮಾರಕ ದಾಳಿ ನಡೆಸಿದರೆ, ತನೂಜಾ ಕನ್ವರ್ ಹಾಗೂ ಪ್ರೇಮಾ ರಾವತ್ ತಲಾ ಎರಡು ವಿಕೆಟ್ ಪಡೆದು ರನ್ ಮಟ್ಟ ನಿಯಂತ್ರಿಸಿದರು. ಪ್ರತ್ಯುತ್ತರವಾಗಿ ವೃಂದಾ ದಿನೇಶ್ ಆರಂಭದಲ್ಲೇ ದಿಟ್ಟ ಆಟವಾಡಿ 20 ಚೆಂಡುಗಳಲ್ಲಿ 42 ರನ್ ಗಳಿಸಿ ಭದ್ರ ಬುನಾದಿ ಹಾಕಿಕೊಟ್ಟರು. ಮಧ್ಯದಲ್ಲಿ ಕೆಲವು ವಿಕೆಟ್ ಕಳೆದುಕೊಂಡರೂ, ರಾಧಾ ಅವರ ಕೊನೆಯ ಓವರ್‌ಗಳ ಸ್ಫೋಟಕ ಬ್ಯಾಟಿಂಗ್ ಭಾರತ ಎ' ತಂಡಕ್ಕೆ ಸುಲಭ ಜಯ ತಂದಿತು. ಫೆಬ್ರವರಿ 22ರಂದು ನಡೆಯಲಿರುವ ಫೈನಲ್‌ನಲ್ಲಿ ಭಾರತ ಎ ತಂಡವು ಬಾಂಗ್ಲಾದೇಶ ವಿರುದ್ಧ ಸೆಣಸಲಿದೆ.

ಅಂಧರ ಕ್ರಿಕೆಟ್‌ಗೆ ಬೆಂಬಲ



ಬೆಂಗಳೂರು: ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಭಾರತದ ಪಾರುಪತ್ಯ ಇನ್ನಷ್ಟು ಬಲಪಡಿಸಲು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಮಹತ್ವದ ಹೆಜ್ಜೆ ಇಟ್ಟಿದೆ. ಪುರುಷರ-ಮಹಿಳೆಯರ ಕ್ರಿಕೆಟ್ ನಡೆಸುವ ಅಧಿಕಾರ ಹೊಂದಿರುವ ಬಿಸಿಸಿಐ ಇದೀಗ ಅಂಧರ ಕ್ರಿಕೆಟ್‌ಗೂ ಬೆಂಬಲ ನೀಡುವುದಾಗಿ ಘೋಷಿಸಿದೆ.

ಕಳೆದ ದಶಕದಲ್ಲಿ ಭಾರತದ ದೃಷ್ಟಿ ವೈಕಲ್ಯ ಕ್ರಿಕೆಟ್ ತಂಡವು ಜಾಗತಿಕ ವೇದಿಕೆಯಲ್ಲಿ ಅದ್ಭುತ ಸಾಧನೆ ಮಾಡಿದೆ. 2012ರಿಂದ ಹಲವು ಪುರುಷರ ವಿಶ್ವಕಪ್ ಪ್ರಶಸ್ತಿಗಳನ್ನು ಗೆದ್ದಿರುವ ಭಾರತ, ಮಹಿಳಾ ವಿಭಾಗದಲ್ಲೂ ಪ್ರಥಮ ವಿಶ್ವಕಪ್ ಜಯ ಸಾಧಿಸಿ ಇತಿಹಾಸ ನಿರ್ಮಿಸಿದೆ. ಭಾರತದಲ್ಲಿ ಕ್ರಿಕೆಟ್ ಅನ್ನು ಬಿಸಿಸಿಐ ನಿಯಂತ್ರಿಸುವುದಾದರೂ ಅಂಧರ ಕ್ರಿಕೆಟ್‌ಗೆ ಬೇರೊಂದು ಸಂಸ್ಥೆಯಿದೆ. ಹಣಕಾಸು ವಿಚಾರದಿಂದ ಹಿಡಿದು, ಟೂರ್ನಿಗಳ ಆಯೋಜನೆ, ಅಭ್ಯಾಸ ಮತ್ತು ಆಟಗಾರರ ಪಾಲನೆ ಕೂಡ ಅದೇ ಬೇರೆ ಸಂಸ್ಥೆ ನೋಡಿಕೊಳ್ಳುತ್ತದೆ. ಇದೀಗ ಬಿಸಿಸಿಐ ಬೆಂಬಲ ನೀಡುವುದಾಗಿ ಹೇಳಿದೆ.

ಶುಕ್ರವಾರದಂದು ಭಾರತೀಯ ಮಹಿಳೆಯರ ತಂಡಕ್ಕೆ ಭೇಟಿ ನೀಡಿದ ಐಸಿಸಿ ಅಧ್ಯಕ್ಷ ಮತ್ತು ಬಿಸಿಸಿಐ ಮಾಜಿ ಕಾರ್ಯದರ್ಶಿ ಜಯ್ ಶಾ ಈ ಬಗ್ಗೆ ಘೋಷಿಸಿದ್ದಾರೆ.

ಕ್ಯಾಬಿ ಅಧ್ಯಕ್ಷ ಡಾ. ಮಹಾಂತೇಶ್ ಜಿ. ಕಿವಾಡಸಣ್ಣನವರ ಹಾಗೂ ಪ್ರಧಾನ ಕಾರ್ಯದರ್ಶಿ ಶೈಲೇಂದ್ರ ಯಾದವ್ ಅವರೊಂದಿಗೆ ಸಮಾಲೋಚನೆ ನಡೆಸಿದ ಅವರು ಕ್ರಿಕೆಟ್‌ಗೆ ಸಂಸ್ಥಾತ್ಮಕ ಬೆಂಬಲ ಒದಗಿಸುವ ಭರವಸೆ ನೀಡಿದ್ದಾರೆ.

ಏನೇನು ಬೆಂಬಲ?

ಬಿಸಿಸಿಐ ಇನ್ನುಮುಂದೆ ಸಿಎಸ್‌ಆರ್ ಅನುದಾನಗಳ ಮೂಲಕ ದೊರಕುತ್ತಿದ್ದ ಸಹಾಯದಲ್ಲಿ ಇರುವ ಕೊರತೆಯನ್ನು ಈ ಸಹಭಾಗಿತ್ವ ಭರ್ತಿ ಮಾಡಲಿದೆ. ವಿಶೇಷವಾಗಿ ವಿದೇಶಿ ಟೂರ್ನಿಗಳ ಆಯೋಜನೆ ಮತ್ತು ಪ್ರವಾಸ ಸರಣಿಗಳಲ್ಲಿ ಭಾಗವಹಿಸುವಿಕೆ ಹೆಚ್ಚಿಸಲು ಇದು ಸಹಕಾರಿ ಆಗಲಿದೆ. ಇದರಿಂದ ಜಾಗತಿಕ ಮಟ್ಟದಲ್ಲಿ ಈ ಮಾದರಿಯ ಕ್ರಿಕೆಟ್ ಪ್ರಚಾರ ಮತ್ತಷ್ಟು ವಿಸ್ತರಿಸಲಿದೆ.

ಪ್ರಮುಖ ಬೆಂಬಲಗಳು

- ಪ್ರತಿ ತಂಡಕ್ಕೂ ವರ್ಷಕ್ಕೆ ಎರಡು ವಿದೇಶಿ ಟೂರ್ನಿಗಳಿಗೆ ಅಂತಾರಾಷ್ಟ್ರೀಯ ಪ್ರಯಾಣ ಹಾಗೂ ವಸತಿ ವ್ಯವಸ್ಥೆ.
- ಭಾರತದಲ್ಲಿ ನಡೆಯುವ ದ್ವಿಪಕ್ಷೀಯ ಸರಣಿಗಳಲ್ಲಿ ಆತಿಥೇಯ ಹಾಗೂ ಅತಿಥಿ ತಂಡಗಳಿಗೆ ವಸತಿ ವ್ಯವಸ್ಥೆ.
- ದೇಶೀಯ ಮತ್ತು ಅಂತಾರಾಷ್ಟ್ರೀಯ ಪಂದ್ಯಗಳಿಗೆ ಬಿಸಿಸಿಐ ಬೆಂಬಲಿತ ಕ್ರೀಡಾಂಗಣಗಳು ಒದಗಿಸುವುದು.
- ವಿಶ್ವ ದರ್ಜೆಯ ಸೌಲತ್ತಿನ ಮೈದಾನಗಳಲ್ಲಿ ಪಂದ್ಯಗಳನ್ನು ನಡೆಸಿಕೊಡುವುದು.

ಕ್ಯಾಬಿ ಕೃತಜ್ಞತೆ


ನಮ್ಮ ಕ್ರಿಕೆಟಿಗರ ಪ್ರಯಾಣವನ್ನು ಗೌರವಿಸಿ ಬೆಂಬಲ ನೀಡಿದ ಬಿಸಿಸಿಐ ಮತ್ತು ಜಯ್ ಶಾ ಅವರಿಗೆ ನಾವು ಹೃತ್ಪೂರ್ವಕ ಧನ್ಯವಾದಗಳನ್ನು ತಿಳಿಸುತ್ತೇವೆ, ಎಂದು ಕ್ಯಾಬಿ ಅಧ್ಯಕ್ಷ ಡಾ. ಮಹಾಂತೇಶ್ ಜಿ. ಕಿವಾಡ ಸಣ್ಣವರ ಹೇಳಿದರು. ಬಿಸಿಸಿಐ ಬೆಂಬಲ ದೊರೆತಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ಕ್ಷಣ. ಇದು ನಮ್ಮ ಆಟಗಾರರ ತಲೆಗೆ ಮತ್ತೊಂದು ಕಿರೀಟದ ಪಿಂಚು'. ಇನ್ನು ಮುಂದೆ ಅಂಧರ ಕ್ರಿಕೆಟ್ ಇನ್ನಷ್ಟು ಬೆಳೆಯಲಿದೆ ಮತ್ತು ಅನೇಕ ಮಂದಿಗೆ ಪ್ರೇರಣೆಯಾಗಲಿದೆ ಎಂದರು.

ಬೆಂಗಳೂರು ಓಪನ್: ಸೆಮಿಗೆ ವೈಷ್ಣವಿ

ಬೆಂಗಳೂರು: ಇಲ್ಲಿನ ಟೆನಿಸ್ ಕ್ರೀಡಾಂಗಣದಲ್ಲಿದ್ದ ಅಭಿಮಾನಿಗಳು, ಆಟಗಾರರು ಮತ್ತು ಆಯೋಜಕರು ಇತಿಹಾಸ ಆಗುವುದನ್ನ ಪ್ರತ್ಯಕ್ಷವಾಗಿ ಕಂಡರು. ಭಾರತೀಯ ಆಟಗಾರ್ತಿ ತನ್ನ ದೇಶವನ್ನು ಹೆಮ್ಮೆ ಪಡೆಸುವುದನ್ನು ನೋಡಿದರು. ಕರಾರುವಾಕ್ಕಾಗಿ ತನಗಿಂತ ಹೆಚ್ಚು ಶ್ರೇಯಾಂಕಿತ ಆಟಗಾರ್ತಿಯನ್ನು ಸೋಲಿಸುವುದನ್ನು ನಿಬ್ಬೆರಗಾಗಿ ನೋಡುತ್ತ ನಿಂತರು. ಅವರ ಹೆಸರು ವೈಷ್ಣವಿ ಅಡ್ಕರ್.

ಪ್ರತಿಷ್ಠಿತ ಎಸ್.ಎಮ್. ಕೃಷ್ಣ ಟೆನಿಸ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಬೆಂಗಳೂರು ಓಪನ್ ಪಂದ್ಯಾವಳಿಯ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ವೈಷ್ಣವಿ ವಿಶ್ವ ಕ್ರಮಾಂಕ 148 ಹಾಗೂ ನಾಲ್ಕನೇ ಸೀಡ್ ತಾಯಲ್ಹಾ ಪ್ರೆಸ್ಟನ್ ಅವರನ್ನು 6–3, 1–6, 6–4 ಅಂಕಗಳಿಂದ ಸೋಲಿಸಿ ಸಂಭ್ರಮ ಪಟ್ಟರು.

21 ವರ್ಷದ ವೈಷ್ಣವಿ ಭಯವಿಲ್ಲದ ಬೇಸ್ ಲೈನ್ ಆಟ ಹಾಗೂ ಒತ್ತಡದ ಕ್ಷಣಗಳಲ್ಲಿ ತೋರಿದ ಸಮಾಧಾನದಿಂದ ಉನ್ನತ ಕ್ರಮಾಂಕದ ಆಸ್ಟ್ರೇಲಿಯಾ ಆಟಗಾರ್ತಿಯನ್ನು ಮಣಿಸಿದರು. ಮೊದಲ ಸೆಟ್ ಆರಂಭದಲ್ಲೇ ಬ್ರೇಕ್ ಕಳೆದುಕೊಂಡರೂ ತಕ್ಷಣವೇ ಪ್ರತಿಕ್ರಿಯೆ ನೀಡಿ ಪಂದ್ಯಕ್ಕೆ ಮರಳಿದ ಅಡ್ಕರ್, ಆರುನೇ ಗೇಮ್‌ನಲ್ಲಿ ಮತ್ತೊಮ್ಮೆ ಬ್ರೇಕ್ ಸಾಧಿಸಿ 4–2 ಮುನ್ನಡೆ ಪಡೆದರು. ಪ್ರೆಸ್ಟನ್ ಬ್ರೇಕ್ ಮಾಡಿ 4–3ಕ್ಕೆ ಬಂದರೂ, ಅಡ್ಕರ್ ರ್ಯಾಲಿಗಳ ಮೇಲೆ ಹಿಡಿತ ಸಾಧಿಸಿ 6–3ರಿಂದ ಸೆಟ್ ಮುಗಿಸಿದರು. ಎರಡನೇ ಸೆಟ್‌ನಲ್ಲಿ ಪ್ರೆಸ್ಟನ್ ಪ್ರಬಲ ಸರ್ವ್ ಮತ್ತು ಆಕ್ರಮಣಾತ್ಮಕ ಆಟದಿಂದ 3–0 ಮುನ್ನಡೆ ಪಡೆದು 6–1ರಿಂದ ಸೆಟ್ ಕಬಳಿಸಿ ಪಂದ್ಯವನ್ನು ನಿರ್ಣಾಯಕ ಸೆಟ್‌ಗೆ ತಳ್ಳಿದರು.




ನಿರ್ಣಾಯಕ ಸೆಟ್‌ನಲ್ಲಿ: ಮೂರನೇ ಸೆಟ್‌ನಲ್ಲಿ ಆರಂಭಿಕ ಬ್ರೇಕ್ ಕಳೆದುಕೊಂಡ ಅಡ್ಕರ್ ಧೈರ್ಯ ಕಳೆದುಕೊಳ್ಳದೆ 3–3ಕ್ಕೆ ಸಮಬಲ ಸಾಧಿಸಿದರು. ನಂತರ ಪ್ರೆಸ್ಟನ್ ಮಾಡಿದ ಡಬಲ್ ಫಾಲ್ಟ್‌ಗಳನ್ನು ಸದುಪಯೋಗಪಡಿಸಿಕೊಂಡು 5–3 ಮುನ್ನಡೆ ಪಡೆದರು. ಕೊನೆಗೆ ಹತ್ತನೇ ಗೇಮ್‌ನಲ್ಲಿ ಮೂರು ಮ್ಯಾಚ್ ಪಾಯಿಂಟ್ ಗಳಿಸಿ, ಪ್ರೆಸ್ಟನ್ ಬ್ಯಾಕ್‌ಹ್ಯಾಂಡ್ ಔಟ್ ಆಗುತ್ತಿದ್ದಂತೆ ವಿಜಯೋತ್ಸವ ಆಚರಿಸಿದರು.

ಸೆಮಿಫೈನಲ್‌ನಲ್ಲಿ ಅಡ್ಕರ್ ಈಗ ದ್ವಿತೀಯ ಸೀಡ್ ಲಾನ್ಲಾ ಅವರನ್ನು ಎದುರಿಸಲಿದ್ದಾರೆ. ತಾರರುದೀ, ಎಲೆನಾ ಪ್ರಿದಾಂಕಿನಾ ವಿರುದ್ಧ 6–1, 6–3 ಸರಳ ಜಯ ಸಾಧಿಸಿ ಸೆಮಿಫೈನಲ್ ಪ್ರವೇಶಿಸಿದರು.

ಪದಬಂಧ

▸ ರಾಜಾ ಸಂಗಮೇಶ ಹಿರೇಮಠ



5902

ಎಡದಿಂದ ಬಲಕ್ಕೆ
2.ಮತದ ನಡುವೆ ಈ ಮಹಾಕಾವ್ಯವಿದೆ (5)
5.ಇದು ತಾತ್ಕಾಲಿಕವಾಗಿ ತಂಗುವ ಸ್ಥಳ (3)
7.ಆಕಾಶವೂ ಹೌದು-ಬಟ್ಟೆಯೂ ಹೌದು (3)
9.ಶಿವನ ಒಂದು ಉಗ್ರವಾದ ನೃತ್ಯ (3)
11. ಕಲದ ನಡುವೆ ಅಂತಿಮ ಸಮಯವಿದೆ (4)
13. ಹೊರತುಪಡಿಸು-ಪ್ರತ್ಯೇಕಗೊಳಿಸುವಿಕೆ (4)
16. ವಿದೂಷಕನಿಲ್ಲಿ ತಿರುಗಿದ್ದಾನೆ (4)
17.ಅರ್ಥಂಬರ್ಥ ಮಾಡುವ ಜಳಕ (4)

ಮೇಲಿನಿಂದ ಕೆಳಕ್ಕೆ
1.ಉತ್ತರಪ್ರದೇಶದಲ್ಲಿರುವ ಪವಿತ್ರ ಕ್ಷೇತ್ರ (2)
2.ಅರಮನೆಯ ನಡುವೆ ಅಡಗಿದ ವೃಕ್ಷ (2)
3.ಕೊನೆ ಎಂಬರ್ಥದ ಸಿನಿಮಾ ತಲೆಕೆಳಗಾಗಿದೆ (2)
4.ಧೈರ್ಯಶಾಲಿ ವ್ಯಕ್ತಿಯೀತ (2)
6.ಬಂಧನದಿಂದ ಮುಕ್ತವಾಗುವಿಕೆ (4)
8.ಅಶಕ್ತ-ನಿರ್ಗತಿಕನೀತ (4)
9.ವೀಲೆಯದೆಲೆ-ಸುಣ್ಣ ಸಮೇತವಾದುದು (3)
10.ಎರಡನೆಯ ಸಂವತ್ಸರ ತಲೆಕೆಳಗಾಗಿದೆ (3)
11.ಕರದ ನಡುವೆ ಅಡಗಿದ ಸಮುದ್ರದ ಅಂಚು (5)
12.ಕಾಜಿನಿಂದ ಮಾಡಿದ ಸೀಸೆ (5)
14.ನಾಕದ ನಡುವೆ ಹಾಳು ಮಾಡುವಂಥಾದ್ದಿದೆ (5)
15.ದೈವಿಕ ವಂಶದಲ್ಲಿ ಜನಿಸಿದವರು (5)

5901 ಉತ್ತರ

ಎಡದಿಂದ ಬಲಕ್ಕೆ:
1.ಗುಂಡಿಗೆ 3.ಸಂಭ್ರಮ
5.ಸಂಗಮವರಿ
10.ಸಂಚಾಲಕ
11.ಮಹೋನ್ನತಿ
12.ಪತ್ರವಾಹನ 16.ವಿಕೃತ
17.ಗುಗ್ಗುಳ

ಮೇಲಿನಿಂದ ಕೆಳಕ್ಕೆ :
1.ಗುಂಗು 2.ಸಂಡಿಗೆ
3.ಸಂಚಾರಿ 4.ಮನ
6.ಗಣಕಯಂತ್ರ
7.ವಸತಿಗೃಹ 8.ಹಾಸಂಗಿ
9.ಡುಮುಕಿ 12.ಪರಾತ
13.ನಜುಗು 14.ಕವಿ
15.ಮೊಳ

ಕಿರುಸುದ್ದಿ

ಮಾ.3ರಂದು ಚಂದ್ರಗ್ರಹಣ: ಧರ್ಮಸ್ಥಳದಲ್ಲಿ ದೇವರ ದರ್ಶನ ಸಮಯ ವ್ಯತ್ಯಯ

ಧರ್ಮಸ್ಥಳ: ಮಾರ್ಚ್ 3ರಂದು ಅಪರಾಹ್ನ ಗಂಟೆ 3.19 ರಿಂದ ಸಂಜೆ ಗಂಟೆ 6.48ರ ವರೆಗೆ ಚಂದ್ರಗ್ರಹಣ ಇರುವುದರಿಂದ ಮಂಗಳವಾರ ಮಧ್ಯಾಹ್ನ ಒಂದೂವರೆ ಗಂಟೆವರೆಗೆ ಮಾತ್ರ ಧರ್ಮಸ್ಥಳದಲ್ಲಿ ದೇವರ ದರ್ಶನಕ್ಕೆ ಅವಕಾಶವಿದೆ ಎಂದು ದೇವಸ್ಥಾನದ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ರಾತ್ರಿ ಗಂಟೆ 7.30ರ ನಂತರ ಚಂದ್ರಗ್ರಹಣ ಮುಕ್ತಾಯವಾದ ಬಳಿಕ ದೇವಸ್ಥಾನದ ಶುದ್ಧೀಕರಣ ಹಾಗೂ ಇತರ ಧಾರ್ಮಿಕ ವಿಧಿ-ವಿಧಾನಗಳು ಮುಗಿದ ನಂತರ ದೇವರ ದರ್ಶನಕ್ಕೆ ಅವಕಾಶವಿದೆ. ದೂರದ ಊರುಗಳಿಂದ ಬರುವ ಭಕ್ತರು ದೇವರ ದರ್ಶನದ ಸಮಯ ವ್ಯತ್ಯಯವನ್ನು ಗಮನಿಸಿ ಸಹಕರಿಸುವಂತೆ ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: ಮೊಬೈಲ್9945725511

ಅಕ್ರಮ ಮರಳು ದಾಸ್ತಾನು: ಕೇಸು ದಾಖಲು

ಉಪ್ಪಿನಂಗಡಿ: ನದಿ ಬದಿಯಲ್ಲಿ ಅಕ್ರಮವಾಗಿ ಮರಳನ್ನು ತೆಗೆದು ದಾಸ್ತಾನಿರಿಸಿದ ಪ್ರಕರಣದ ಬಗ್ಗೆ ಉಪ್ಪಿನಂಗಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಬಜತ್ತೂರು ಗ್ರಾಮದ ವಳಾಲು ಎಂಬಲ್ಲಿನ ನೇತ್ರಾವತಿ ನದಿ ದಂಡೆಯಲ್ಲಿ ಅಕ್ರಮವಾಗಿ ಮರಳು ತೆಗೆದು ದಾಸ್ತಾನು ಮಾಡುತ್ತಿರುವುದಾಗಿ ಉಪ್ಪಿನಂಗಡಿ ಪೊಲೀಸರಿಗೆ ಮಾಹಿತಿ ಬಂದಿದ್ದು, ಪೊಲೀಸರು ಸ್ಥಳಕ್ಕೆ ತೆರಳಿದಾಗ ಆರೋಪಿ ಜೈನುದ್ದೀನ್ ಎಂಬಾತನ ನಿರ್ದೇಶನದಂತೆ ಮರಳು ಸಂಗ್ರಹಿಸುತ್ತಿರುವುದಾಗಿ ತಿಳಿಸಲಾಗಿದೆ. ಸ್ಥಳದಲ್ಲಿ ಸುಮಾರು 30 ಟನ್‌ನಷ್ಟು ಮರಳು ದಾಸ್ತಾನಿರುವುದು ಕಂಡು ಬಂದಿದ್ದು, ಸ್ಥಳದಲ್ಲಿದ್ದ ಒಂದು ದೋಣಿ, 4 ಹಾರೆ, 11 ಕಬ್ಬಿಣದ ಬಕೆಟ್, 10 ಪ್ಲಾಸ್ಟಿಕ್ ಬಕೆಟ್‌ಗಳನ್ನು ವಶಕ್ಕೆ ಪಡೆಯಲಾಗಿದೆ. ಸರಕಾರದ ಅನುಮತಿ ಇಲ್ಲದೆ ಸರಕಾರಿ ಜಾಗದಿಂದ ನದಿಯಿಂದ ಮರಳು ಕಳ್ಳತನ ಮಾಡಿ ದೋಣಿ ಮೂಲಕ ಸಾಗಿಸಿ ಇಲ್ಲಿ ಅಕ್ರಮ ದಾಸ್ತಾನು ಮಾಡಿರುವುದು ದೃಢಪಟ್ಟಿದ್ದು, ಈ ಬಗ್ಗೆ ಉಪ್ಪಿನಂಗಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಾಹನಕ್ಕೆ ಕಾಡುಕೋಣ ಡಿಕ್ಕಿ: ಕಾಲು ಮುರಿತ

ಮಡಿಕೇರಿ: ವಾಹನಕ್ಕೆ ಕಾಡುಕೋಣ ಡಿಕ್ಕಿಯಾದ ಘಟನೆ ಸಿದ್ದಾಪುರದ ಕರಡಿಗೋಡು ಗ್ರಾಮದಲ್ಲಿ ಶುಕ್ರವಾರ ಬೆಳಗ್ಗೆ ನಡೆದಿದೆ. ಬೆಳಗ್ಗೆ ಕೆಲಸಕ್ಕೆ ತೆರಳುವ ಸಂದರ್ಭ ಏಕಾಏಕಿ ಅಡ್ಡ ಬಂದ ಕಾಡುಕೋಣ ಡಿಕ್ಕಿಯಾದ ಪರಿಣಾಮ ಗೂಡ್ಸ್ ವಾಹನ ಪಲ್ಟಿಯಾಗಿದೆ. ಅಲ್ಲದೆ ಕಾಡುಕೋಣದ ಕಾಲು ಮುರಿದು, ಅಸ್ವಸ್ಥಗೊಂಡಿದೆ. ಅದೃಷ್ಟವಶಾತ್ ವಾಹನದಲ್ಲಿದ್ದ ಕಾರ್ಮಿಕರು ಅಪಾಯದಿಂದ ಪಾರಾಗಿದ್ದಾರೆ. ಅರಣ್ಯ ಇಲಾಖೆ ಸಿಬ್ಬಂದಿಗಳು ಭೇಟಿ ಪರಿಶೀಲನೆ ನಡೆಸಿದ್ದಾರೆ.

ಕಾರ್ಮಿಕ ಸಾವು

ಮಡಿಕೇರಿ: ಕಾಫಿ ತೋಟದಲ್ಲಿ ಮರ ಕಪಾತ್ ಮಾಡುತ್ತಿದ್ದ ವೇಳೆ ಕಾರ್ಮಿಕ ಬಿದ್ದು ಸಾವಿಗೀಡಾದ ಘಟನೆ ವೀರಾಜಪೇಟೆ ಸಮೀಪದ ನಲ್ವತ್ತೊಕ್ಲು ಗ್ರಾಮದಲ್ಲಿ ನಡೆದಿದೆ. ಪೊನ್ನಂಪೇಟೆ ತಾಲೂಕಿನ ಜೋಡುಬೀಟಿ ನಿವಾಸಿ ಜೇನುಕುರುಬರ ಮಧು ಎಂಬವರ ಪುತ್ರ ಜೆ.ಎಂ. ರವಿ (32) ಮೃತನಾದ ಕಾರ್ಮಿಕ. ರವಿಗೆ ಮೂರ್ಛೆ ರೋಗವೂ ಇತ್ತೆನ್ನಲಾಗಿದ್ದು, ಗುರುವಾರ ಮಧ್ಯಾಹ್ನ ಮರವನ್ನು ಕಪಾತ್ ಮಾಡುತ್ತಿದ್ದ ಸಂದರ್ಭ ದಿಢೀರಾಗಿ ಮೂರ್ಛೆ ರೋಗ ಉಲ್ಬಣಗೊಂಡು ಮರದಿಂದ ನೆಲಕ್ಕೆ ಉರುಳಿರುವುದಾಗಿ ಹೇಳಲಾಗಿದೆ. ತಕ್ಷಣವೇ ಸನಿಹದಲ್ಲಿದ್ದ ಇತರ ಕಾರ್ಮಿಕರು ವೀರಾಜಪೇಟೆ ಸರ್ಕಾರಿ ಆಸ್ಪತ್ರೆಗೆ ಆತನನ್ನು ದಾಖಲಿಸಿದ್ದು, ವೈದ್ಯರು ತಲೆಗೆ ಪೆಟ್ಟಾದ ಪರಿಣಾಮ ಕಾರ್ಮಿಕ ಮೃತನಾಗಿದ್ದಾನೆ ಎಂದು ತಿಳಿಸಿದ್ದಾರೆ. ಮೃತನ ಪತ್ನಿ ಜ್ಯೋತಿ ನೀಡಿರುವ ದೂರಿನ ಮೇರೆಗೆ ವೀರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವ್ಯಕ್ತಿ ನಾಪತ್ತೆ

ಪೆರ್ಲ: ಪೆರ್ಲ ಸಮೀಪದ ನಲ್ಕ ನಿವಾಸಿ ವಿವೇಕಾನಂದ ಆಚಾರ್ಯ (56) ಬುಧವಾರ ಬೆಳಗ್ಗೆಯಿಂದ ನಾಪತ್ತೆಯಾಗಿದ್ದಾರೆ. ಬಡಗಿ ವೃತ್ತಿ ನಡೆಸುತ್ತಿದ್ದ ಅವರು ಮಾನಸಿಕವಾಗಿ ಖಿನ್ನತೆಯನ್ನು ಹೊಂದಿದ್ದು, ಮನೆಯಲ್ಲಿ ಚಹಾ ತಯಾರಿಯ ಸಂದರ್ಭ ಕಾಣೆಯಾಗಿದ್ದಾರೆ. ವಿಟ್ಲ ಭಾಗಕ್ಕೆ ಬಸ್‌ನಲ್ಲಿ ತೆರಳುವುದನ್ನು ಕಂಡವರಿದ್ದು ಬಳಿಕ ವಿಟ್ಲದಿಂದ ಯಾವ ಕಡೆಗೆ ತೆರಳಿದ್ದಾರೆಂಬುದು ತಿಳಿದಿಲ್ಲ. ಮೊಬೈಲ್ ಫೋನ್ ಮನೆಯಲ್ಲಿಯೇ ಇರಿಸಿದ್ದಾರೆ. ಯಾರಿಗಾದರೂ ಅವರ ಬಗ್ಗೆ ಏನಾದರೂ ಮಾಹಿತಿ ಲಭಿಸಿದಲ್ಲಿ 9778358176 ಮೊಬೈಲ್ ನಂಬರ್‌ಗೆ ಕರೆ ಮಾಡಲು ಕೋರಲಾಗಿದೆ. ಈ ಬಗ್ಗೆ ಬದಿಯಡ್ಕ ಪೊಲೀಸರಿಗೆ ಮಾಹಿತಿ ನೀಡಲಾಗಿದೆ.



ಕುಟುಂಬಶ್ರೀ ಜಿಲ್ಲಾ ಮಿಷನ್ ನೇತೃತ್ವ | ಕಾಸರಗೋಡು ಜಿಲ್ಲಾ ಪಂಚಾಯತ್‌ನ ಸಹಯೋಗ

ಇಂಗ್ಲಿಷ್ ಕಲಿಕೆಗೆ ಅಮ್ಮ ಟೀಚರ್ ಯೋಜನೆ

ಕಾಸರಗೋಡು: ಜಿಲ್ಲೆಯಲ್ಲಿ ತಾಯಂದಿರಿಗೆ ಇಂಗ್ಲಿಷ್ ಕಲಿಸಲು ಅಮ್ಮ ಟೀಚರ್ ಎಂಬ ಮಹತ್ವದ ಹಾಗೂ ವಿನೂತನ ಯೋಜನೆಯನ್ನು ಜಾರಿಗೊಳಿಸಲು ನಿರ್ಧರಿಸಲಾಗಿದೆ. ಮಕ್ಕಳ ಶಿಕ್ಷಣಕ್ಕೆ ಸಹಕರಿಸುವ ಪ್ರಧಾನ ಉದ್ದೇಶದೊಂದಿಗೆ ಕುಟುಂಬಶ್ರೀ ಜಿಲ್ಲಾ ಮಿಷನ್ ನೇತೃತ್ವದಲ್ಲಿ ಜಿಲ್ಲಾ ಪಂಚಾಯತ್‌ನ ಸಹಯೋಗದಲ್ಲಿ ಈ ಯೋಜನೆಯನ್ನು ಕಾರ್ಯಗತಗೊಳಿಸಲು ತೀರ್ಮಾನಿಸಲಾಗಿದೆ.

ಕುಟುಂಬಶ್ರೀ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ದಿನೇಶ್ ಅವರು ಕುಟುಂಬಶ್ರೀ ಜಿಲ್ಲಾ ಮಿಷನ್ ಜಾರಿಗೆ ತಂದಿರುವ ಅಮ್ಮ ಟೀಚರ್ ಸೇಫ್ ಚೈಲ್ಡ್‌ಹುಡ್ ಮತ್ತು ಎಕ್ಸಲೆಂಟ್ ಪೇರೆಂಟಿಂಗ್ ಯೋಜನೆಯ ಮೋಡೆಲ್‌ನ್ನು ಕಾಸರಗೋಡಿನಲ್ಲಿ ಬಿಡುಗಡೆಗೊಳಿಸಿದ್ದಾರೆ.

ಮಕ್ಕಳು ಕಲಿಕೆಯಲ್ಲಿ ಬಹಳಷ್ಟು ಚುರುಕಾಗಿದ್ದರೂ ವಿವಿಧ ಸಂದರ್ಶನಗಳ ಸಂದರ್ಭ ಇಂಗ್ಲಿಷ್‌ನಲ್ಲೇ ಸಂಭಾಷಣೆ ನಡೆಸಬೇಕಾದಾಗ ಹೆತ್ತವರು ಅದರಲ್ಲೂ ತಾಯಂದಿರು ಹಿಂಜರಿಯುತ್ತಾರೆ. ಅಂತಹ ತಾಯಂದಿರ ಮನೋಸ್ಥಿತಿಯನ್ನು ಬದಲಾಯಿಸಲು ಹಾಗೂ ಅವರ ಮನೆಯಲ್ಲಿ ಮಕ್ಕಳ ಅಧ್ಯಯನಕ್ಕೆ ಸಹಕಾರ ಒದಗಿಸಲು ಅನುವಾಗುವಂತೆ ಅಮ್ಮ ಟೀಚರ್ ಯೋಜನೆಯು ಅನುಷ್ಠಾನಗೊಳ್ಳಲಿದೆ. ಈ ಯೋಜನೆಯು ಜಿಲ್ಲೆಯಲ್ಲಿ ಹೊಸ ಅಕ್ಷರ ಕ್ರಾಂತಿಗೆ ನಾಂದಿ ಹಾಡಲಿದೆ ಎಂಬುದಾಗಿ ವಿಶ್ಲೇಷಿಸಲಾಗಿದೆ.

ಮಕ್ಕಳು ಶಾಲೆಯಿಂದ ಪಡೆಯುವ ಜ್ಞಾನಕ್ಕೆ ಪೂರಕವಾಗಿ ಮನೆಯಿಂದಲೂ ಪ್ರೋತ್ಸಾಹ ಅತ್ಯಗತ್ಯವಾಗಿದೆ. ಒಂದರಿಂದ ನಾಲ್ಕನೇ ತರಗತಿ ತನಕ ಕಲಿಯುವ ಮಕ್ಕಳಿಗೆ ಇಂಗ್ಲಿಷ್‌ನಲ್ಲಿ ಸಮರ್ಪಕ ಅಡಿಪಾಯ ಹಾಕಿದಾಗ ಇಂಗ್ಲಿಷ್‌ನಲ್ಲಿ ಸಂವಹನವೂ ಸುಲಭವಾಗುತ್ತದೆ. ಅಂತಹ ಮಕ್ಕಳ ತಾಯಂದಿರಿಗೆ ಅಮ್ಮ ಟೀಚರ್ ಯೋಜನೆ ಇರುವುದಾಗಿದೆ.

ಶಾಲೆಯಲ್ಲಿ ಕಲಿಯುವುದನ್ನು ತಾಯಂದಿರು ತಮ್ಮ ಮಕ್ಕಳಿಗೆ ಮನೆಯಲ್ಲಿ ಪುನರಾವರ್ತಿಸಲು ಮತ್ತು ಅವರೊಂದಿಗೆ ಸರಳ ಇಂಗ್ಲಿಷ್‌ನಲ್ಲಿ ಮಾತನಾಡಲು ಅವಕಾಶ ನೀಡುವುದು ಈ ಯೋಜನೆಯ ಮುಖ್ಯ ಗುರಿಯಾಗಿದೆ. ಕುಟುಂಬಶ್ರೀ ಜಿಲ್ಲಾ ಮಿಷನ್ ಈ ಯೋಜನೆಯನ್ನು ಜಿಲ್ಲೆಯಾದ್ಯಂತ ಪ್ರತೀ ಮನೆಗಳಿಗೆ ವಿಸ್ತರಿಸುವ ಉದ್ದೇಶ ಹೊಂದಿದೆ. ತಮ್ಮ ಮಾತೃಭಾಷೆಯಲ್ಲಿ ಪರಿಶುದ್ಧವಾಗಿ ಹಾಗೂ ನಿರರ್ಗಳವಾಗಿ ಮಾತನಾಡುವ ಮಕ್ಕಳು ಇಂಗ್ಲಿಷ್ ಭಾಷೆಗೆ ಭಯಪಡುತ್ತಾರೆ. ಆದ್ದರಿಂದ ತಾಯಂದಿರ ಮೂಲಕ ಅವರಿಗೆ ಇಂಗ್ಲಿಷ್ ಪಾಠಗಳನ್ನು ಒದಗಿಸಿ ಕಲಿಕೆಯ ತೊಂದರೆಗಳನ್ನು ನಿವಾರಿಸಬಹುದು.

ಇಂಗ್ಲಿಷ್ ಜ್ಞಾನವು ಸಮಕಾಲೀನ ಡಿಜಿಟಲ್ ಜಗತ್ತಿನಲ್ಲಿನ ಅವಕಾಶಗಳನ್ನು ಬಳಸಿಕೊಳ್ಳಲು ಮತ್ತು ವಿವಿಧ ಆನ್‌ಲೈನ್ ಸೇವೆಗಳನ್ನು ಸುಲಭವಾಗಿ ಪಡೆಯಲು ಸಹಾಯ ಮಾಡುತ್ತದೆ. ವೈಯಕ್ತಿಕ ಬೆಳವಣಿಗೆ ಸಾಧಿಸಲು, ಶೈಕ್ಷಣಿಕ ಪ್ರಗತಿ ಹೊಂದಲು ಮತ್ತು ಹೊಸ ಉದ್ಯೋಗಾವಕಾಶಗಳನ್ನು ಹುಡುಕಲು ಇಂಗ್ಲಿಷ್ ಭಾಷಾ ಕೌಶಲ್ಯಗಳು ಅತ್ಯಂತ ಉಪಯುಕ್ತವಾಗುತ್ತವೆ ಎಂಬುದು ಯೋಜನೆಯ ಪ್ರಮುಖ ಅಂಶವಾಗಿದೆ.



ಅಮ್ಮ ಟೀಚರ್ ಯೋಜನೆಯ ಮೋಡೆಲ್ ಬಿಡುಗಡೆ

ಅಮ್ಮ ಟೀಚರ್ ಆಗಲು ವ್ಯಾಕರಣ ಅಥವಾ ಪರೀಕ್ಷೆಗಳಿಲ್ಲ

ಅಮ್ಮ ಟೀಚರ್ ಆಗಲು ವ್ಯಾಕರಣ ಅಥವಾ ಪರೀಕ್ಷೆಗಳ ಭಯವಿರುವುದಿಲ್ಲ. ಸಾಮಾನ್ಯ ತರಗತಿ ಕೊಠಡಿಗಳ ಆವಶ್ಯಕತೆಯಿಲ್ಲ. ಜೊತೆಗೆ ಯಾವುದೇ ಮಾನಸಿಕ ಒತ್ತಡಗಳು ಇರುವುದಿಲ್ಲ. 25 ದಿನಗಳಲ್ಲಿ 50 ಗಂಟೆಗಳ ಕಾಲ ನಡೆಯುವ ಈ ತರಬೇತಿಯಲ್ಲಿ ತಾಯಂದಿರು ಪುಸ್ತಕಗಳಿಂದ ಪಾಠಗಳನ್ನು ನಿರೀಕ್ಷಿಸಬೇಕಾಗಿಲ್ಲ. ಬದಲಿಗೆ ತಮ್ಮ ಸ್ವಂತ ಜೀವನ ಅನುಭವಗಳನ್ನು ಹಂಚಿಕೊಳ್ಳುವ ಮೂಲಕ ಇಂಗ್ಲಿಷ್ ಕಲಿಯುವ ಸರಳ ಮತ್ತು ಸುಲಭ ವ್ಯವಸ್ಥೆ ಇದಾಗಿದೆ. ತಾಯಂದಿರ ಮೇಲೆ ಯಾವುದೇ ಒತ್ತಡ ಬೀಳದ ರೀತಿಯಲ್ಲಿ ತರಬೇತಿಯನ್ನು ವಿನ್ಯಾಸಗೊಳಿಸಲಾಗಿದೆ. ಕುಟುಂಬಶ್ರೀಯ ಆಯ್ದ ನೆರೆಹೊರೆ ಕೂಟಗಳ ತಾಯಂದಿರಿಗೆ ಒಟ್ಟಿಗೆ ತರಬೇತಿ ನೀಡಲು ಯೋಜನೆ ರೂಪಿಸಲಾಗಿದೆ.

ತರಬೇತುದಾರರಿಗೆ ತರಗತಿ ವ್ಯವಸ್ಥೆ

ಕಾಸರಗೋಡು ಜಿಲ್ಲೆಯಲ್ಲಿ ತಾಯಂದಿರಿಗೆ ಇಂಗ್ಲಿಷ್ ಕಲಿಸುವ ಹಿನ್ನೆಲೆಯಲ್ಲಿ ತರಬೇತುದಾರರಿಗೆ ತರಬೇತಿ ನೀಡಲು ನಿರ್ಧರಿಸಲಾಗಿದೆ. ಅದರಂತೆ ಜಿಲ್ಲಾ ಮತ್ತು ಬ್ಲಾಕ್ ಮಟ್ಟದಲ್ಲಿ ತರಗತಿ ನಡೆಯಲಿದೆ. ಪ್ರತೀ ವಾರ್ಡ್‌ನಿಂದ ಆಯ್ಕೆಯಾದ ಇಬ್ಬರು ತರಬೇತುದಾರರಿಗೆ ಬ್ಲಾಕ್ ಮಟ್ಟದಲ್ಲಿ ಮೂರು ದಿನಗಳ ವಸತಿ ರಹಿತ ತರಬೇತಿ ನೀಡಲಾಗುವುದು. ನಂತರ ಅವರು ತಮ್ಮ ವಾರ್ಡ್‌ಗಳಲ್ಲಿ ಶಾಲಾ ಮಕ್ಕಳ ತಾಯಂದಿರಿಗೆ ತರಗತಿಗಳನ್ನು ನಡೆಸುತ್ತಾರೆ. ಬ್ಲಾಕ್ ಆಧಾರದ ಮೇಲೆ ರಜಾದಿನಗಳಲ್ಲಿ ಸಮೀಪದ ಸಾರ್ವಜನಿಕ ಶಾಲೆಗಳಲ್ಲಿ ತರಗತಿಗಳನ್ನು ಹಮ್ಮಿಕೊಳ್ಳಲು ಯೋಜನೆ ಹಾಕಿಕೊಳ್ಳಲಾಗಿದೆ.

■ ಕೆ.ರತೀಶ್ ಕುಮಾರ್, ಸಂಯೋಜಕರು, ಕುಟುಂಬಶ್ರೀ ಜಿಲ್ಲಾ ಮಿಷನ್

ಈಗ ಕರ್ನಾಟಕದ ಕಾಶ್ಮೀರದಲ್ಲೂ ಬೆವರಿಳಿಸುತ್ತಿದೆ ಸುಡು ಬಿಸಿಲ ಧಗೆ

ಮಡಿಕೇರಿ: ಕರ್ನಾಟಕದ ಕಾಶ್ಮೀರ ಎಂದೇ ಹೆಸರಾದ ಕೊಡಗು ಜಿಲ್ಲೆಯಲ್ಲಿ ತಾಪಮಾನ ದಿನೇದಿನೇ ಹೆಚ್ಚುತ್ತಿದೆ.

ಜಿಲ್ಲೆಯ ಗರಿಷ್ಠ ತಾಪಮಾನ 30 ಡಿಗ್ರಿ ಸೆಲ್ಸಿಯಸ್ ಹಾಗೂ ಕನಿಷ್ಠ ತಾಪಮಾನ 18 ಡಿಗ್ರಿಗಳಿಗೆ ಏರಿಕೆಯಾಗಿತ್ತು.

ಜಿಲ್ಲೆಯಲ್ಲಿ ರಾತ್ರಿ ಹಾಗೂ ಬೆಳಗಿನ ವೇಳೆ ತಂಪಾದ ವಾತಾವರಣವಿದ್ದರೆ, ಮಧ್ಯಾಹ್ನದ ವೇಳೆಗೆ ಉರಿ ಬಿಸಿಲು ನೆತ್ತಿ ಸುಡುವಂತಿದೆ. ಕೊಡಗು ಜಿಲ್ಲೆಯ ಸರಾಸರಿ ಉಷ್ಣಾಂಶ ಗರಿಷ್ಠ 33 ಹಾಗೂ ಕನಿಷ್ಠ 23 ಡಿಗ್ರಿ ಸೆಲ್ಸಿಯಸ್‌ಗಳಾಗಿದ್ದು, ಕಳೆದ ವರ್ಷ ಈ ಅವಧಿಯಲ್ಲಿ ಗರಿಷ್ಠ 33 ಹಾಗೂ ಕನಿಷ್ಠ 26 ಡಿಗ್ರಿಗಳಷ್ಟಿತ್ತು. ಕಳೆದ ವರ್ಷಕ್ಕೆ ಹೋಲಿಸಿದರೆ ಜಿಲ್ಲೆಯಲ್ಲಿ ಪ್ರಸಕ್ತ ಇರುವ ತಾಪಮಾನ ಕಡಿಮೆ ಎನ್ನಬಹುದಾದರೂ, ಬಿಸಿಲಿನ ಪ್ರಖರತೆ ಮಾತ್ರ ಬೇಸಿಗೆಯನ್ನು ನೆನಪಿಸುತ್ತಿದೆ. ಮುಂದಿನ ದಿನಗಳಲ್ಲಿ ಬಿಸಿಲಿನ ಬೇಗೆ ಮತ್ತಷ್ಟು ಹೆಚ್ಚಾಗುವ ಸಾಧ್ಯತೆಗಳಿರುವುದಾಗಿ ಹವಾಮಾನ ಇಲಾಖೆ ತಿಳಿಸಿದೆ. ಇದೀಗ ಜಿಲ್ಲೆಯಲ್ಲಿ ಕಾಫಿ ಕೊಯ್ಲು ಬಹುತೇಕ ಮುಗಿಯುವ ಹಂತ ತಲುಪುತ್ತಿದ್ದು, ಬೆಳೆಗಾರರು ಮಳೆಯ ನಿರೀಕ್ಷೆಯಲ್ಲಿದ್ದಾರೆ. ಸಾಮಾನ್ಯವಾಗಿ ಜಿಲ್ಲೆಯಲ್ಲಿ ಫೆಬ್ರವರಿ ಎರಡನೇ ವಾರದ ಬಳಿಕ ಸಾಧಾರಣ ಹೂ ಮಳೆ (ಫ್ಲವರ್ ಶವರ್) ಯಾಗುವುದು ವಾಡಿಕೆಯಾಗಿದ್ದು, ಇದು ಕಾಫಿ ಬೆಳೆಗೆ ಅಗತ್ಯವೂ ಹೌದು. ಆದರೆ ಇತ್ತೀಚಿನ ವರ್ಷಗಳಲ್ಲಿ ಹವಾಮಾನ ವೈಪರೀತ್ಯಗಳಿಂದಾಗಿ ಅಕಾಲಿಕವಾಗಿ ಮಳೆಯಾಗುತ್ತಿರುವುದು ಬೆಳೆಗಾರರಿಗೆ ನುಂಗಲಾರದ ತುತ್ತಾಗಿದೆ.

ಪ್ರಸಕ್ತ ಸಾಲಿನಲ್ಲೂ ಜನವರಿ ತಿಂಗಳಲ್ಲಿ ಕೆಲವಡೆ ಮಳೆಯಾಗಿದ್ದು, ಇದು ಮುಂದಿನ ಸಾಲಿನ ಕಾಫಿ ಉತ್ಪಾದನೆಯ ಮೇಲೆ ಪ್ರತಿಕೂಲ ಪರಿಣಾಮವನ್ನು ಬೀರಲಿದೆ ಎನ್ನಲಾಗಿದೆ. ನೀರಿನ ಸೌಲಭ್ಯ ಹಾಗೂ ಆರ್ಥಿಕವಾಗಿ ಸ್ವಲ್ಪ ಮಟ್ಟಿಗೆ ಸದೃಢವಾಗಿರುವ ಬೆಳೆ ಗಾರರು ಇದೀಗ ತುಂತುರು (ಸ್ಪ್ರಿಂಕ್ಲರ್) ನೀರಾವರಿ ಮೂಲಕ ಮುಂದಿನ ಕಾಫಿ ಬೆಳೆ ತೆಗೆಯಲು ಮುಂದಾಗಿದ್ದರೆ, ಹಣಕಾಸಿನ ಸಮಸ್ಯೆ ಇರುವ ಬೆಳೆಗಾರರು ಮಳೆಗಾಗಿ ಎದುರು ನೋಡುತ್ತಿದ್ದಾರೆ.

ಬೆಳೆಗಾರರ ಪ್ರಾರ್ಥನೆ

ಮಲೆನಾಡು ಭಾಗದ ಅಲ್ಲಲ್ಲಿ ಸಾಧಾರಣ ಮಳೆಯಾಗಲಿರುವುದಾಗಿ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆಯಾದರೂ, ಜಿಲ್ಲೆಯಲ್ಲಿ ಮೋಡ ಹಾಗೂ ಬಿಸಿಲಿನ ಕಣ್ಣಾಮುಚ್ಚಾಲೆ ಮುಂದುವರಿದಿದೆ. ಒಂದೆರಡು ದಿನಗಳಲ್ಲಿ ಮಳೆಯಾಗಲಿ ಎಂದು ಬೆಳೆಗಾರರು ಪ್ರಾರ್ಥಿಸುತ್ತಿದ್ದಾರೆ.

ಪೆರ್ಲದ ಅಡ್ಕ ಅಂಗನವಾಡಿ ಪರಿಸರದಲ್ಲಿ ಬೆಂಕಿ ಅನಾಹುತ

ಕಾಸರಗೋಡು: ಎಣ್ಮಕಜೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಪೆರ್ಲ ಬಳಿಯ ಅಡ್ಕ ಅಂಗನವಾಡಿ ಪರಿಸರ ಪ್ರದೇಶದಲ್ಲಿ ಶುಕ್ರವಾರ ಮಧ್ಯಾಹ್ನ ವೇಳೆಗೆ ಅಗ್ನಿ ಅನಾಹುತ ಸಂಭವಿಸಿದ್ದು, ಗ್ರಾಮ ಪಂಚಾಯತ್ ಅಧಿಕೃತರ ಮತ್ತು ಊರವರ ಸಕಾಲಿಕ ಸ್ಪಂದನೆಯಿಂದ ಬೆಂಕಿ ಶಮನ ಪ್ರಕ್ರಿಯೆ ನಡೆಸಲಾಯಿತು.

ಅಂಗನವಾಡಿ ಅಧ್ಯಾಪಿಕೆಯವರು ಘಟನೆ ಕುರಿತು ಕೂಡಲೇ ಎಣ್ಮಕಜೆ ಹೆಲ್ತ್ ಇನ್‌ಸ್ಪೆಕ್ಟರ್ ಬಾಬುರಾಜ್ ಅವರಿಗೆ ಮಾಹಿತಿ ನೀಡಿದ್ದು ತಕ್ಷಣ ಸ್ಥಳಕ್ಕೆ ಆಗಮಿಸಿದ ಪಂಚಾಯತ್ ಅಧಿಕೃತರು ಸ್ಥಳೀಯರ ಜೊತೆಗೂಡಿ ಬೆಂಕಿ ನಂದಿಸುವ ಕಾರ್ಯದಲ್ಲಿ ಯಶಸ್ವಿಯಾದರು.

ಅಗ್ನಿಶಾಮಕ ದಳಕ್ಕೂ ಕರೆ ಮಾಡಲಾಗಿದ್ದು, ಉಪ್ಪಳದಿಂದ ಅಗ್ನಿಶಾಮಕ ದಳ ತಲುಪುವಷ್ಟರಲ್ಲಿ ಊರವರೇ ಬೆಂಕಿಯನ್ನು ಬಹುತೇಕ ನಂದಿಸುವಲ್ಲಿ ಸಫಲರಾಗಿದ್ದಾರೆ. ಪಂಚಾಯತ್ ಅಸಿಸ್ಟೆಂಟ್ ಕಾರ್ಯದರ್ಶಿ ಗಿರೀಶ್, ಉದ್ಯೋಗಿ ಪ್ರಮೋದ್, ಹಸಿರು ಕ್ರಿಯಾ ಸೇನೆಯ ವಾಹನ ಚಾಲಕ ಇಬ್ರಾಹಿಂ ಪೆರ್ಲ ಮೊದಲಾದವರು ಕಾರ್ಯಾಚರಣೆಗೆ ನೇತೃತ್ವ ವಹಿಸಿದ್ದರು.



ಅಂಬಾಗಿಲು, ಬಲಾಯಿಪಾದೆ ಟ್ರಾಫಿಕ್ ಸಿಗ್ನಲ್ ಅಳವಡಿಕೆಯ ಕಾರ್ಯ ಪೂರ್ಣ

ಉಡುಪಿ: ಹಲವು ವರ್ಷಗಳಿಂದ ಕನಸಾಗಿಯೇ ಉಳಿದಿದ್ದ ಅಂಬಾಗಿಲು, ಬಲಾಯಿಪಾದೆ ಟ್ರಾಫಿಕ್ ಸಿಗ್ನಲ್ ಅಳವಡಿಕೆ ಕಾರ್ಯ ಪೂರ್ಣಗೊಂಡಿದ್ದು ಪ್ರಾಯೋಗಿಕ ಹಂತದಲ್ಲಿದೆ.

ರಾಜ್ಯ ಸರಕಾರ ಸಂಚಾರ ವ್ಯವಸ್ಥೆ ಸುಧಾರಣೆಗಾಗಿ 2.5 ಕೋಟಿ ರೂ. ಅನುದಾನ ಮಂಜೂರು ಮಾಡಿದ್ದು ಆದರ ಅನುದಾನವನ್ನು ಇದಕ್ಕೆ ಬಳಸಲಾಗಿದೆ.

2025ರಲ್ಲಿ ಮಣಿಪಾಲ ಸಿಂಡಿಕೇಟ್ ಸರ್ಕಲ್ ಹಾಗೂ ಕಲ್ಸಂಕದಲ್ಲಿ ಟ್ರಾಫಿಕ್ ಸಿಗ್ನಲ್ ಅಳವಡಿಸಲಾಗಿತ್ತು. ಒಟ್ಟು ಆರು ಕಡೆಗಳಲ್ಲಿ ಸಿಗ್ನಲ್ ದೀಪ ಅಳವಡಿಕೆಗೆ

2020-21ರಲ್ಲಿ ಉಡುಪಿ ನಗರ ಭಾಗದ 12 ಕಡೆಗಳಲ್ಲಿ ಸಿಗ್ನಲ್ ಲೈಟ್ ಅಳವಡಿಕೆಗೆ ಆದೇಶ ನೀಡಲಾಗಿತ್ತು. ಆದರಂತೆ ಈಗಾಗಲೇ ಉಡುಪಿ ನಗರದ 4 ಕಡೆಗಳಲ್ಲಿ ಟ್ರಾಫಿಕ್ ಸಿಗ್ನಲ್ ಅಳವಡಿಸಲಾಗಿದೆ. ಮತ್ತೆ ಕೆಲವು ಕಡೆಗಳಲ್ಲಿ ಸ್ಥಳದ ಸಮಸ್ಯೆಯ ಕಾರಣ ಸಿಗ್ನಲ್ ಅಳವಡಿಕೆ ಸವಾಲಾಗಿ ಪರಿಣಮಿಸಿದೆ.

ಬಲಾಯಿಪಾದೆ ಹಾಗೂ ಅಂಬಾಗಿಲು ಜಂಕ್ಷನ್‌ನಲ್ಲಿ ಈಗಾಗಲೇ ಲೈಟ್ ಹಾಕಲಾಗಿದ್ದು, ಬಲಾಯಿಪಾದೆಯಲ್ಲಿ ಕ್ರಾಸಿಂಗ್ ಲೈನ್ ಮಾಡುವ ಬಗ್ಗೆ ಈಗಾಗಲೇ ಹೆದ್ದಾರಿ ಇಲಾಖೆಗೆ ಸೂಚನೆಯನ್ನೂ ನೀಡಲಾಗಿದೆ.

ಇಲ್ಲಿ ಸಿಗ್ನಲ್ ಇದ್ದರೂ ಪಾಲನೆ ಇಲ್ಲ

ಈಗಾಗಲೇ ಕಲ್ಸಂಕ ಹಾಗೂ ಸಿಂಡಿಕೇಟ್ ಸರ್ಕಲ್ ಬಳಿ ಸಿಗ್ನಲ್‌ಗಳು ಕಾರ್ಯಾಚರಿಸುತ್ತಿದ್ದರೂ, ಫ್ರೀ ಲೆಫ್ಟ್ ನಲ್ಲಿ ಸಂಚಾರಿ ನಿಯಮ ಪಾಲನೆಯಾಗದೇ ದಟ್ಟಣೆ ಮುಂದುವರೆದಿದೆ. ಇದಲ್ಲದೇ ಕಲ್ಸಂಕದಿಂದ ಗುಂಡಿಬೈಲು ಹೋಗುವ ಮಾರ್ಗದಲ್ಲಿ ಫ್ರೀ ಲೆಫ್ಟ್ ಕಾಮಗಾರಿ 49 ಲ.ರೂ.ವೆಚ್ಚದಲ್ಲಿ ಸೇತುವೆ ಮಾದರಿಯಲ್ಲಿ ನಿರ್ಮಾಣಗೊಳ್ಳಲಿದೆ. ಇಷ್ಟೆಲ್ಲ ಅಭಿವೃದ್ಧಿ ಆದರೂ ನಿಯಮ ಪಾಲನೆ ಆಗದಿದ್ದರೆ ಪ್ರಯೋಜನವಿಲ್ಲ ಎಂಬ ಮನಸ್ಥಿತಿ ವಾಹನ ಚಾಲಕರಿಗೆ ಬರಬೇಕಿದೆ. ಉಡುಪಿಯಿಂದ ಮಣಿಪಾಲದ ಕಡೆ ಹೋಗುವ ಬಸ್, ಕಾರು, ರಿಕ್ಷಾ ಸೇರಿದಂತೆ ವಿವಿಧ ವಾಹನಗಳನ್ನು ಕಲ್ಸಂಕ ಜಂಕ್ಷನ್‌ನಲ್ಲಿ ಸಿಗ್ನಲ್ ಬೀಳುವಾಗ ಫ್ರೀಲೆಫ್ಟ್‌ನಲ್ಲಿ ನಿಲ್ಲಿಸುವುದರಿಂದ ಗುಂಡಿಬೈಲ್‌ಗೆ ಹೋಗುವ ವಾಹನ ಸವಾರರಿಗೆ ಸಮಸ್ಯೆಯಾಗುತ್ತದೆ. ಮಣಿಪಾಲದಿಂದ ಉಡುಪಿಗೆ ಬರುವಾಗ ಕಲ್ಸಂಕದಲ್ಲಿ ಫ್ರಿಲೆಫ್ಟ್‌ನಲ್ಲಿ ವಾಹನಗಳನ್ನು ನಿಲ್ಲಿಸುವುದರಿಂದ ಕೃಷ್ಣಮಠದ ಕಡೆಗೆ ಹೋಗುವ ವಾಹನಗಳು ಕಾಯಬೇಕಾದ ಪರಿಸ್ಥಿತಿ ಉಂಟಾಗುತ್ತಿದೆ. ಬಸ್‌ಗಳು ಕೂಡ ಎಲ್ಲೆಂದರಲ್ಲಿ ನಿಲ್ಲಿಸುವುದರಿಂದ ಇತರ ವಾಹನ ಸವಾರರಿಗೆ ಸಮಸ್ಯೆಯಾಗುತ್ತಿದೆ. ಫ್ರೀಲೆಫ್ಟ್ ಸಮರ್ಪಕವಾಗಿ ಕಾರ್ಯರೂಪಕ್ಕೆ ಬಾರದಿದ್ದರೆ ಸಿಗ್ನಲ್ ದೀಪ ಅಳವಡಿಸಿಯೂ ಪ್ರಯೋಜನವಾಗದಂತಾಗಿದೆ.



ಹಲವು ಅಪಘಾತಗಳಿಗೆ ಕಾರಣವಾಗಿತ್ತು

ರಾಷ್ಟ್ರೀಯ ಹೆದ್ದಾರಿ 66 ರ ಬಲಾಯಿಪಾದೆ ಜಂಕ್ಷನ್ ಬಳಿ ಸರ್ವಿಸ್ ರಸ್ತೆಗೆ ತೆರಳುವ ಹಾಗೂ ಉದ್ಯಾವರ ಕಡೆಗೆ ಸಂಚರಿಸುವ ವಾಹನಗಳು ವಿಪರೀತವಾಗಿರುವ ಕಾರಣದಿಂದಾಗಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಆಗಾಗ ಸಂಚಾರ ದಟ್ಟಣೆ ಉಂಟಾಗುತ್ತಿತ್ತು. ಸರಿಯಾದ ನಿಯಮ ಪಾಲನೆ ಆಗದೇ ಹಲವು ಅಪಘಾತಗಳು ಅಲ್ಲಿ ಸಂಭವಿಸಿದ್ದವು.

ನಗರಸಭೆಗೆ ತೆರಿಗೆ ವಂಚನೆ: ಇಬ್ಬರ ಬಂಧನ

ಉಡುಪಿ: ಉಡುಪಿ ನಗರಸಭೆಯ ಆಸ್ತಿ ತೆರಿಗೆ ಹಣವನ್ನು ದುರ್ಬಳಕೆ ಮಾಡಿ ಸರಕಾರಕ್ಕೆ ವಂಚನೆ ಮಾಡಿರುವ ಪ್ರಕರಣಕ್ಕೆ ಸಂಬಂಧಿಸಿ ಮಹಿಳೆ ಸೇರಿದಂತೆ ಇಬ್ಬರನ್ನು ಉಡುಪಿ ನಗರ ಪೊಲೀಸರು ಬಂಧಿಸಿದ್ದಾರೆ. ಬಂಧಿತರನ್ನು ನಗರಸಭೆ ಹೊರಗಡೆ ತೆರಿಗೆ ಸಲಹೆಗಾರ್ತಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಶಾಲಿನಿ ಹಾಗೂ ಬ್ಯಾಂಕ್ ಸಿಬ್ಬಂದಿ ಗಣೇಶ್ ಎಂದು ಗುರುತಿಸಲಾಗಿದೆ.

ಆನಂದ ಸುವರ್ಣ ಎಂಬವರು ಕಲ್ಮಾಡಿಯಲ್ಲಿರುವ ತನ್ನ ಕಟ್ಟಡಕ್ಕೆ ಸಂಬಂಧಪಟ್ಟಂತೆ 2025ರ ಅ.16ರಂದು 12 ವರ್ಷಗಳ ಆಸ್ತಿ ತೆರಿಗೆ ಮೊತ್ತ ಒಟ್ಟು 34,730 ರೂ. ಹಣವನ್ನು ನಗರಸಭೆ ಕಚೇರಿಯಲ್ಲಿ ಹೊರಗಡೆ ಕೆಲಸ ಮಾಡಿ ಕೊಂಡಿರುವ ಶಾಲಿನಿ ಎಂಬಾಕೆಗೆ ನೀಡಿದ್ದು, ಅದಕ್ಕೆ ಶಾಲಿನಿ ತೆರಿಗೆ ಸ್ವೀಕೃತಿ ಆದ ಬಗ್ಗೆ ದಾಖಲೆ ನೀಡಿದ್ದರು.

ಇತ್ತೀಚೆಗೆ ಆನಂದ ಸುವರ್ಣ ಆಸ್ತಿ ತೆರಿಗೆ ಪೋರ್ಟಲ್‌ನಲ್ಲಿ ತೆರಿಗೆ ಪಾವತಿಯಾದ ಬಗ್ಗೆ ತಪಾಸಣೆ ನಡೆಸಿದಾಗ ತೆರಿಗೆ ಪಾವತಿ ಆಗದೇ ಪೆಂಡಿಂಗ್ ಇರುವ ಬಗ್ಗೆ ತಿಳಿದು ಬಂತು. ಈ ವಿಚಾರವನ್ನು ಆನಂದ ಸುವರ್ಣ ಪೌರಾಯುಕ್ತರ ಗಮನಕ್ಕೆ ತಂದಿದ್ದು, ಅವರು ಶಾಲಿನಿ ಅವರನ್ನು ಕರೆದು ವಿಚಾರಿಸಿದಾಗ ಆಕೆ ತಪ್ಪು ಒಪ್ಪಿಕೊಂಡಿದ್ದು, ಉಡುಪಿ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಐಷಾರಾಮಿ ಕಾರಿನಲ್ಲಿ ಮಾರಕಾಯುಧ ಸಹಿತ ಸಾಗಾಟ | ಅಂತಾರಾಜ್ಯ ಮಾದಕವಸ್ತು ಮಾರಾಟ ಜಾಲ ಬೇಧಿಸಿದ ಪುತ್ತೂರು ಪೊಲೀಸರು

ರೂ.5,38,800 ಮೌಲ್ಯದ ನಿಷೇಧಿತ ಎಂಡಿಎಂಎ ಸಹಿತ ಮೂವರ ಸೆರೆ

ಪುತ್ತೂರು: ಪುತ್ತೂರು ಕಡೆಯಿಂದ ಸುಳ್ಯ ಕಡೆಗೆ ಐಷಾರಾಮಿ ಕಾರಿನಲ್ಲಿ ಅಕ್ರಮವಾಗಿ ಎಂಡಿಎಂಎ ಮಾದಕವಸ್ತು ಸಾಗಾಟ ಮಾಡುತ್ತಿದ್ದ ಪ್ರಕರಣವೊಂದನ್ನು ಬೇಧಿಸಿರುವ ಪುತ್ತೂರು ಗ್ರಾಮಾಂತರ ಠಾಣೆಯ ಪೊಲೀಸರು ಮೂವರನ್ನು ಬಂಧಿಸಿ ಅವರಿಂದ ರೂ.5,38,800 ಮೌಲ್ಯದ 53.58 ಗ್ರಾಂ ಎಂಡಿಎಂಎ ಮತ್ತು ರೂ.10 ಸಾವಿರ ನಗದನ್ನು ವಶಪಡಿಸಿಕೊಂಡಿದ್ದಾರೆ.

ಬಂಧಿತ ಆರೋಪಿಗಳನ್ನು ಕೇರಳದ ಕೋಝಿಕೋಡ್ ನಿವಾಸಿ ಮುಹಮ್ಮದ್ ಅಜ್ಮಲ್ ಸಿ. ಯಾನೆ ಅಜ್ಜು (30), ಸಂಶೀರ್ (27) ಮತ್ತು ವಯನಾಡ್ ಜಿಲ್ಲೆಯ ಇಸ್ಮಾಯಿಲ್ (28) ಎಂದು ಗುರುತಿಸಲಾಗಿದೆ.

ಪುತ್ತೂರು ಕಡೆಯಿಂದ ಸುಳ್ಯ ಕಡೆಗೆ ಐಷಾರಾಮಿ ಕಾರಿನಲ್ಲಿ ತೆರಳುತ್ತಿದ್ದ ಸಂದರ್ಭ ಪೊಲೀಸರು ಕಾರನ್ನು ನಿಲ್ಲಿಸಿ ತಪಾಸಣೆ ನಡೆಸಿದರು. ಈ ಸಂದರ್ಭ ಮೂವರು ಆರೋಪಿಗಳು ವಾಹನದಲ್ಲಿ ಮಾರಾಟ ಮಾಡುವ ಉದ್ದೇಶದೊಂದಿಗೆ ನಿಷೇಧಿತ ಎಂಡಿಎಂಎ ಮಾದಕ ವಸ್ತುವನ್ನು ಇಟ್ಟುಕೊಂಡಿರುವುದು ಪತ್ತೆಯಾಯಿತು. ಅಲ್ಲದೆ, ಮಾರಾಕಾಯುಧ ತಲವಾರು ಕೂಡಾ ಪತ್ತೆಯಾಯಿತು.

ಆರೋಪಿಗಳಿಂದ ಒಂದು ಕಾರು, ಮಾರಕಾಸ್ತ್ರ, ಮೊಬೈಲ್‌ಗಳು ಹಾಗೂ ರೂ.10 ಸಾವಿರ ನಗದು ವಶಪಡಿಸಿಕೊಂಡು ಪುತ್ತೂರು ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ದಸ್ತಗಿರಿ ಮಾಡಿ ತನಿಖೆ ನಡೆಸಲಾಗುತ್ತಿದೆ.

ಆರೋಪಿಗಳು ಕೇರಳ, ಗೋವಾ ಹಾಗೂ ಕರ್ನಾಟಕ ರಾಜ್ಯಗಳಿಗೆ ಮಾದಕ ವಸ್ತುವನ್ನು ಸರಬರಾಜು ಮಾಡುತ್ತಿದ್ದು, ಕೇರಳ ರಾಜ್ಯದ ಕೋಝಿಕೋಡು, ಕಣ್ಣೂರು, ವಯನಾಡ್ ಜಿಲ್ಲೆಗಳಲ್ಲಿ ದಾಖಲಾಗಿದ್ದ ಪ್ರಕರಣಗಳಲ್ಲಿ ತಲೆಮರೆಸಿಕೊಂಡಿದ್ದರು. ಅಲ್ಲದೆ, ಮುಹಮ್ಮದ್ ಅಜ್ಮಲ್ ಯಾನೆ ಅಜ್ಜು ಎಂಬಾತ ಇತ್ತೀಚೆಗೆ ಪುತ್ತೂರು ಗ್ರಾಮಾಂತರ ಠಾಣೆಯಲ್ಲಿ ದಾಖಲಾದ ಮಾದಕ ವಸ್ತು ಸಾಗಾಟದ ಪ್ರಕರಣದ ಆರೋಪಿಯಾಗಿದ್ದಾನೆ. ಅಜ್ಮಲ್ ಸಹಚರನಾದ ಇಸ್ಮಾಯಿಲ್‌ನ ಮೇಲೆ ಕೂಡ ಕೇರಳ ರಾಜ್ಯದ ಕೋಝಿಕೋಡು ಜಿಲ್ಲೆಯಲ್ಲಿ ಮಾದಕ ವಸ್ತು ಸಾಗಾಟದ ಪ್ರಕರಣ ದಾಖಲಾಗಿದೆ.

ಮಾದಕವಸ್ತು ಮಾರಾಟ ಜಾಲದ ಪತ್ತೆ ಕಾರ್ಯದಲ್ಲಿ ಪುತ್ತೂರು ಉಪ ವಿಭಾಗದ ಪೊಲೀಸ್ ಉಪಾಧೀಕ್ಷಕ ಪ್ರಮೋದ್ ಕುಮಾರ್, ಪುತ್ತೂರು ಗ್ರಾಮಾಂತರ ಠಾಣಾ ಪ್ರಭಾರ ಪೊಲೀಸ್ ನಿರೀಕ್ಷಕ ಸುನಿಲ್ ಕುಮಾರ್, ದ.ಕ. ಜಿಲ್ಲಾ ಡಿ.ಎಸ್.ಬಿ. ವಿಭಾಗದ ಪೊಲೀಸ್ ನಿರೀಕ್ಷಕರಾದ ನಂದ ಕುಮಾರ್, ಪುತ್ತೂರು ಗ್ರಾಮಾಂತರ ಠಾಣಾ ಉಪನಿರೀಕ್ಷಕರಾದ ಗುಣಪಾಲ, ಸುಶ್ಮಾ ಜಿ. ಭಂಡಾರಿ ಹಾಗೂ ವಿಶೇಷ ತಂಡದ ಸಿಬ್ಬಂದಿಗಳಾದ ಅದ್ರಾಮ, ಪ್ರಶಾಂತ್ ರೈ, ಪ್ರಶಾಂತ್ ಎಂ., ಪ್ರವೀಣ್ ರೈ, ಹರ್ಷಿತ್, ಹಾಗೂ ಪುತ್ತೂರು ಗ್ರಾಮಾಂತರ ಠಾಣಾ ಸಿಬ್ಬಂದಿಗಳಾದ ಪರಮೇಶ್ವರ ಗೌಡ, ಹರೀಶ್, ಸುಬ್ರಹ್ಮಣ್ಯ, ಬೀಮಸೇನ್, ಭವಿತ್ ರೈ, ನಾಗಾರಾಜ್, ಕಾರ್ತಿಕ್ ಜಿಲ್ಲಾ ಗಣಕ ಯಂತ್ರ ಸಿಬ್ಬಂದಿಗಳಾದ ದಿವಾಕರ್, ಸಂಪತ್ ಮತ್ತು ಗೃಹ ರಕ್ಷಕ ಸಿಬ್ಬಂದಿಗಳು ಕಾರ್ಯ ನಿರ್ವಹಿಸಿದ್ದರು.



ಮಾದಕ ವಸ್ತು ಸಾಹಿತ ಓರ್ವನ ಬಂಧನ

ಬಂಟ್ವಾಳ: ತಾಲೂಕಿನ ಕೊಡ್ಮಾಣು ಗ್ರಾಮದ ಪಕ್ಕಳಪಾದೆಯ ಪ್ರದೇಶದಲ್ಲಿ ನಿಷೇದಿತ ಮಾದಕ ವಸ್ತುವನ್ನು ಅಕ್ರಮವಾಗಿ ಮಾರಾಟ ಮಾಡಲು ಯತ್ನಿಸುತ್ತಿದ್ದಾತನನ್ನು ಬಂಟ್ವಾಳ ಗ್ರಾಮಾಂತರ ಪೊಲೀಸರು ಬಂಧಿಸಿದ್ದಾರೆ.

ಪ್ರಶಾಂತ್ ಯಾನೆ ಪ್ರಸಾದ್ (30) ಬಂಧಿತ ಆರೋಪಿಯಾಗಿದ್ದಾನೆ.

ಗುರುವಾರ ರಾತ್ರಿ 10 ಗಂಟೆಯ ವೇಳೆಗೆ ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯ ಎಸ್ ಐ ಮಂಜುನಾಥ್ ಮತ್ತವರ ಸಿಬ್ಬಂದಿಗಳು ಗಸ್ತಿನಲ್ಲಿದ್ದಾಗ ಕೊಡ್ಮಾಣು ಗ್ರಾಮದ ಪಕ್ಕಳಪಾದೆ ಎಂಬಲ್ಲಿ ಆರೋಪಿ ನಿರ್ಜನ ಪ್ರದೇಶದಲ್ಲಿ ಸ್ಕೂಟರ್ ನಿಲ್ಲಿಸಿ ಅನುಮಾನಾಸ್ಪದವಾಗಿ ನಿಂತಿದ್ದಾತನನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದಾಗ ಅತನ ಪ್ಯಾಂಟಿನಲ್ಲಿ ಗಾಂಜಾ ಪತ್ತೆಯಾಗಿದೆ.

ಆರೋಪಿ ಪ್ರಶಾಂತನ್ನು ಮತ್ತಷ್ಟು ವಿಚಾರಣೆ ಗೊಳಪಡಿಸಿದಾಗ ಬಿ.ಸಿ.ರೋಡಿನ ಪಲ್ಲಮಜಲು ನಿವಾಸಿ ಅಬ್ದುಲ್ ರಜಾಕ್ ಎಂಬಾತ ನಿಷೇಧಿತ ಈ ಮಾದಕ ವಸ್ತುವನ್ನು ಗಿರಾಕಿಗಳಿಗೆ ಮಾರಾಟ ಮಾಡಲು ಕೊಟ್ಟಿರುತ್ತಾನೆ ಎಂದು ಬಾಯಿ ಬಿಟ್ಟಿದ್ದಾನೆ.ತಕ್ಷಣ ಪೊಲೀಸರು ಆರೋಪಿ ಪ್ರಶಾಂತನನ್ನು ಬಂಧಿಸಿ ಆತನಿಂದ ಸ್ಕೂಟರ್, 180 ಗ್ರಾಂ. ಗಾಂಜಾವನ್ನು ವಶಪಡಿಸಿಕೊಂಡಿದ್ದಾರೆ.

ಈ ಬಗ್ಗೆ ಬಂಟ್ವಾಳ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮುಂದಿನ ತನಿಖೆ ನಡೆಯುತ್ತಿದೆ.

ಗಾಂಜಾ ಸಹಿತ ಇಬ್ಬರ ಸೆರೆ

ಮಂಜೇಶ್ವರ: ಅಬಕಾರಿ ಚೆಕ್‌ಪೋಸ್ಟ್‌ನಲ್ಲಿ ನಡೆಸಿದ ವಾಹನ ತಪಾಸಣೆಯಲ್ಲಿ ಗಾಂಜಾ ಸಹಿತ ಇಬ್ಬರು ಸೆರೆಯಾಗಿದ್ದಾರೆ. ಅಸ್ಸಾಂ ಕಚ್ಚಾರ್ ಜಿಲ್ಲೆಯ ನಿವಾಸಿಯಾದ ಮೆಹಬೂಬ್ ಅಹಮ್ಮದ್ ಲಾಸ್ಕರ್ (26), ಮಧೂರು ಪೆರಿಯಡ್ಕ ನಿವಾಸಿ ಎ.ಕೆ.ಮನ್ಸೂರ್ (35) ಬಂಧಿತರು. ಅಸ್ಸಾಂ ನಿವಾಸಿಯ ಬಳಿಯಿಂದ 15 ಗ್ರಾಂ ಗಾಂಜಾ ಮತ್ತು ಪೆರಿಯಡ್ಕ ನಿವಾಸಿ ಬಳಿಯಿಂದ 20 ಗ್ರಾಂ ಗಾಂಜಾವನ್ನು ಪತ್ತೆಹಚ್ಚಿರುವುದಾಗಿ ಅಬಕಾರಿ ಅಧಿಕಾರಿಗಳು ತಿಳಿಸಿದ್ದಾರೆ.ಮಂಗಳೂರಿನಿಂದ ಕಾಸರಗೋಡಿಗೆ ಬರುತ್ತಿದ್ದ ಕರ್ನಾಟಕ ಕೆಎಸ್‌ಆರ್‌ಟಿಸಿ ಬಸ್‌ನಿಂದ ಮೆಹಬೂಬ್ ಅಹಮ್ಮದ್ ಲಾಸ್ಕರ್‌ನನ್ನು ಸೆರೆ ಹಿಡಿಯಲಾಗಿದೆ. ಗುರುವಾರ ಕಾಸರಗೋಡಿಗೆ ಆಗಮಿಸುತ್ತಿದ್ದ ಕರ್ನಾಟಕ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಎ.ಕೆ.ಮನ್ಸೂರ್ ಪ್ರಯಾಣಿಸುತ್ತಿದ್ದನು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.


ಇಂದಿನ ಹವಾಮಾನ
ದಕ್ಷಿಣ ಕನ್ನಡ 35⁰ 24⁰ | ಉಡುಪಿ 32⁰ 24⁰

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ

ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಶನಿವಾರ 21, ಫೆಬ್ರವರಿ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU


ಪುಟ 5

ಪಶು ವೈದ್ಯಕೀಯ ಕೇಂದ್ರದಲ್ಲಿ ನಿಯಂತ್ರಣ ಕೊಠಡಿ ಸ್ಥಾಪನೆ


ಪುಟ 6

ರೈಲು, ಕೆಎಸ್ಆರ್ಟಿಸಿ ಬಸ್ ನಿಲ್ದಾಣಕ್ಕೆ ವಿದ್ಯಾರ್ಥಿಗಳ ಪ್ರವಾಸ!

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ವ್ಹಾರೇ, ಗೊಂಬೆ, ಬ್ಯಾಗ್, ಕಲಂಕಾರಿ, ಕೂಚಂಪಳ್ಳಿ, ಇಳಕಲ್ ಸೀರೆ!!



ಸ್ವಸಹಾಯ ಗುಂಪಿನ ಮಹಿಳೆಯರು ತಯಾರಿಸಿದ ಉತ್ಪನ್ನಗಳ ರಾಷ್ಟ್ರ ಮಟ್ಟದ ವಸ್ತು ಪ್ರದರ್ಶನ 'ಸರಸ್ ಮೇಳ' ಮಂಗಳೂರಿನ ಕರಾವಳಿ ಉತ್ಸವ ಮೈದಾನದಲ್ಲಿ ಶುಕ್ರವಾರ ಆರಂಭವಾಗಿದೆ. ಇಲ್ಲಿರುವ ಸುಮಾರು 100ಕ್ಕೂ ಅಧಿಕ ಮಳಿಗೆಗಳಲ್ಲಿ ವಿವಿಧ ರೀತಿ ವಸ್ತುಗಳು ಮಾರಾಟಕ್ಕಿವೆ. ಚಿತ್ರ: ರಾಜೇಶ್ ಶೆಟ್ಟಿ ಬಳ್ಳಾಲ್‌ಬಾಗ್.

ಮಂಗಳೂರಿನ ಗಾಳಿ ಈಗ ಮತ್ತಷ್ಟು ವಿಷಕಾರಿ

ಮಂಗಳೂರು: ನಗರದಲ್ಲಿನ ಗಾಳಿಯ ಗುಣಮಟ್ಟ ಸತತ ಕುಸಿತ ಕಾಣುತ್ತಿದ್ದು, ಅದೀಗ ಎಕ್ಯೂಐ ಸೂಚ್ಯಂಕದಲ್ಲಿ 200ರ ಗಡಿಗೆ ಸಮೀಪಿಸಿದೆ.

ನಾಗರಿಕರ ಆರೋಗ್ಯದ ದೃಷ್ಟಿಯಿಂದ ಇದು ಆತಂಕಕಾರಿಯಾಗಿದ್ದು, ಪುಟಾಣಿಗಳು, ಶ್ವಾಸಕೋಶ, ಹೃದಯ ಸಂಬಂಧಿ ಕಾಯಿಲೆ ಉಳ್ಳವರು ಹಾಗೂ ವೃದ್ಧರ ಮೇಲೆ ಇದು ಗಂಭೀರ ಪರಿಣಾಮ ಬೀರುವ ಸಾಧ್ಯತೆ ಇದೆ. »ಪುಟ 6

ಮಾಪನ ಹೇಗೆ?

ಎಕ್ಯೂಐನಲ್ಲಿ 0-50 ಉತ್ತಮ, 50-100 ಮಧ್ಯಮ, 100-150 ಕಳಪೆ, 150-200 ಅನಾರೋಗ್ಯಕರ, 200-300 ದಾಖಲಾದರೆ ಗಂಭೀರ.

ಸುತ್ತ ಮುತ್ತ

ಕಾಸರಗೋಡು ಸಹಿತ ಕೇರಳದ ವಿವಿಧ ಜಿಲ್ಲೆಗಳಲ್ಲಿ ಧಾರಾಕಾರ ಮಳೆ ಸಾಧ್ಯತೆ

ಕಾಸರಗೋಡು: ಹಿಂದೂ ಮಹಾಸಾಗರದಲ್ಲಿ ಮತ್ತು ದಕ್ಷಿಣ ಪೂರ್ವ ಬಂಗಾಳಕೊಲ್ಲಿ ಆಳಸಮುದ್ರದಲ್ಲಿ ಸುಂಟರಗಾಳಿ ಹಾಗೂ ವಾಯುಭಾರ ಕುಸಿತದ ಹಿನ್ನೆಲೆಯಲ್ಲಿ ಕಾಸರಗೋಡು ಜಿಲ್ಲೆಯೂ ಸೇರಿದಂತೆ ಕೇರಳದ ವಿವಿಧ ಜಿಲ್ಲೆಗಳಲ್ಲಿ ಮುಂದಿನ ದಿನಗಳಲ್ಲಿ ಧಾರಾಕಾರ ಮಳೆಯಾಗುವ ಸಾಧ್ಯತೆಯಿದೆ ಎಂದು ತಿರುವನಂತಪುರದ ಕೇಂದ್ರ ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದೆ. ಮಿಂಚು ಗುಡುಗು ಸಹಿತ ಭರ್ಜರಿ ಮಳೆ ಸುರಿಯುವ ಲಕ್ಷಣಗಳಿವೆ. ಗಂಟೆಗೆ 30 ರಿಂದ 40 ಕಿಲೋ ಮೀಟರ್ ವರೆಗಿನ ವೇಗದಲ್ಲಿ ತೀವ್ರ ಗಾಳಿಯೂ ಬೀಸುವ ಸಾಧ್ಯತೆ ಇರುವುದಾಗಿ ಹವಾಮಾನ ಇಲಾಖೆಯು ಮುನ್ನೆಚ್ಚರಿಕೆ ನೀಡಿದೆ.

ಕಡಬ ಪರಿಸರದಲ್ಲಿ ಕುತೂಹಲ ಹೆಚ್ಚಿಸಿದ ಘಟನೆ


ಮಳೆಬಿದ್ದ ಕಡೆ 'ಚುಕ್ಕೆ'!

ಹಳದಿ ಪೌಡರ್ ಕಂಡು ಹೌಹಾರಿದ ಜನತೆ

ಕಡಬ: ತಾಲೂಕಿನ ಕೊಂಬಾರು, ಸಿರಿಬಾಗಿಲು, ಕೈಕಂಬ ಭಾಗದಲ್ಲಿ ಗುರುವಾರ ರಾತ್ರಿ ತುಂತುರು ಮಳೆ ಬಿದ್ದಿದ್ದು, ಬೆಳಿಗ್ಗೆ ಮಳೆಹನಿ ಬಿದ್ದ ಜಾಗಗಳಲ್ಲಿ 'ಹಳದಿ' ಬಣ್ಣದ ಚುಕ್ಕಿ ಕಂಡು ಬಂದಿದೆ.

ಎಲ್ಲಾ ಕಡೆಯಲ್ಲಿ ಚುಕ್ಕಿ...

ರಾತ್ರಿ ಅದನ್ನು ಯಾರೂ ಅಷ್ಟಾಗಿ ಗಮನಿಸಿರಲಿಲ್ಲ. »ಪುಟ 6



ಮಳೆ ಹನಿ ಬಿದ್ದ ಸ್ಥಳದಲ್ಲಿ ಪತ್ತೆಯಾದ ಹಳದಿ ಬಣ್ಣದ ಚುಕ್ಕೆಗಳು

ಅಧಿಕಾರಿಗಳಿಂದ ಮಾದರಿ ಸಂಗ್ರಹ


ಕಂದಾಯ ಇಲಾಖಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಮಾದರಿಯನ್ನು ಸಂಗ್ರಹಿಸಿದ್ದಾರೆ. ವರದಿ ಇನ್ನಷ್ಟೆ ಬರಬೇಕಿದೆ.

ಸುತ್ತಮುತ್ತ

ಇಂದು ವಿದ್ಯುತ್ ವ್ಯತ್ಯಯ

ಮಂಗಳೂರು: ಫೀಡರ್‌ಗಳಲ್ಲಿ ತುರ್ತು ನಿರ್ವಹಣಾ ಕಾಮಗಾರಿಗಳನ್ನು ಕೈಗೊಳ್ಳಲಿರುವುದರಿಂದ ಕಾನ, ಬನ್ನಡ್ಕ, ತಂತ್ರತರೆ, ಪಡುಮರ್ನಾಡು, ಮೂಡು ಮಾರ್ನಾಡು, ಕಲ್ಲೋಳ್ಳಿ, ನಡುಗುಡ್ಡೆ ಕಾಂತಾವರ ಕ್ರಾಸ್, ಬೆಳುವಾಯಿ, ಕಾಯರ್ ಕಟ್ಟೆ, ಅಜಾದ್ ನಗರ, ಕರಿಯನಂಗಡಿ, ಮಲೆಬೆಟ್ಟು, ಮಂಜನಕಟ್ಟೆ, ಪೆಲತಂಜ, ಮಾಡಾವು, ಮೂಡಾರು, ಚಲಿಬಿ, ಇರ್ವತ್ತೂರು ಕ್ರಾಸ್, ಗುಂಡುಕಲ್ಲು, ಕೆಲ್ಲಪುತ್ತಿಗೆ, ದರೆಗುಡ್ಡೆ, ಪಣಪಿಲ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಫೆ.21ಕ್ಕೆ ಬೆಳಗ್ಗೆ 9.30ರಿಂದ ಸಂಜೆ 6ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ರಾಜ್ಯಮಟ್ಟದ ಪ್ರತಿಭಾ ಕಾರಂಜಿ: ಚಿತ್ರಕಲೆಯಲ್ಲಿ ನಿಲಿಷ್ಕಾ ತೃತೀಯ



ಪುತ್ತೂರು: ಕೊಪ್ಪಳ ಜಿಲ್ಲೆಯ ಕಾರಟಗಿಯಲ್ಲಿ ಇತ್ತೀಚೆಗೆ ನಡೆದ ರಾಜ್ಯಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ 2025-26ರ ಪ್ರೌಢಶಾಲಾ ವಿಭಾಗದ ಚಿತ್ರಕಲಾ ಸ್ಪರ್ಧೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯನ್ನು ಪ್ರತಿನಿಧಿಸಿದ್ದ ನಿಲಿಷ್ಕಾ ರಾಜ್ಯಮಟ್ಟದಲ್ಲಿ ತೃತೀಯ ಬಹುಮಾನ ಗಳಿಸಿದ್ದಾರೆ. ಈಕೆ, ಪುತ್ತೂರು ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆಯ 10ನೇ ತರಗತಿ ವಿದ್ಯಾರ್ಥಿನಿ. ದಿನೇಶ್–ಸ್ವಾತಿ ದಂಪತಿ ಪುತ್ರಿ. ಈಕೆ ದ.ಕ. ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಗೆದ್ದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದರು.

ಪಾವಂಜೆ ದೇವಸ್ಥಾನದಲ್ಲಿ ವರ್ಷಾವಧಿ ಜಾತ್ರೆ, ದೀಪೋತ್ಸವ

ಮುಲ್ಕಿ: ಸಮೀಪದ ಪಾವಂಜೆ ಶ್ರೀ ಮಹಾಲಿಂಗೇಶ್ವರ ಮಹಾ ಗಣಪತಿ ದೇವಸ್ಥಾನದಲ್ಲಿ ವರ್ಷಾವಧಿ ಜಾತ್ರಾ ಮಹೋತ್ಸವ ಪ್ರಯುಕ್ತ ಕ್ಷೇತ್ರದ ತಂತ್ರಿಗಳಾದ ಕೊಡವೂರು ರಾಧಾಕೃಷ್ಣ ಉಪಾಧ್ಯಾಯ ಮಾರ್ಗದರ್ಶನದಲ್ಲಿ ಅರ್ಚಕ ವಾಸುದೇವ ಭಟ್ ನೇತೃತ್ವದಲ್ಲಿ ಪಲ್ಲಕ್ಕಿ ಉತ್ಸವ,



ಬಾಕಿಮಾರು ದೀಪೋತ್ಸವ, ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ವಿಶೇಷ ಕಟ್ಟೆಪೂಜೆ ನಡೆಯಿತು. ಈ ಸಂದರ್ಭ ವಿದ್ವಾನ್ ಕೃಷ್ಣ ಭಟ್, ದೇವಸ್ಥಾನದ ಆಡಳಿತ ಮೊಕ್ತೇಸರ ಸೂರ್ಯ ಕುಮಾರ್, ಹಳೆಯಂಗಡಿ ಪಿಸಿಎ ಬ್ಯಾಂಕ್ ಅಧ್ಯಕ್ಷ ಸತೀಶ್ ಭಟ್ ಕೊಳುವೈಲು, ಎಸ್ಕೆಪಿಎ ವಿವಿಧೋದ್ದೇಶ ಸಹಕಾರಿ ಸಂಘದ ಸದಸ್ಯ ಮೋಹನ್ ರಾವ್, ಕ್ಷೇತ್ರದ ಆಡಳಿತ ಮಂಡಳಿಯ ಸದಸ್ಯರು ಗ್ರಾಮಸ್ಥರು ಉಪಸ್ಥಿತರಿದ್ದರು. ಫೆ.21ಕ್ಕೆ ಹಗಲು ರಥೋತ್ಸವ, ಮಹಾ ಅನ್ನಸಂತರ್ಪಣೆ, ಫೆ.22ಕ್ಕೆ ಬೆಳಗ್ಗೆ ಕವಾಟೋದ್ಘಾಟನೆ, ಮಹಾ ರಥೋತ್ಸವ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

25 ಕೋ. ರೂ. ಅನುದಾನ ಅಧಿಕೃತ ಪ್ರಕಟಣೆಯಲ್ಲ: ಮುರುಳ್ಯ

ಸುಳ್ಯ: ಸುಳ್ಯ ವಿಧಾನಸಭಾ ಕ್ಷೇತ್ರಕ್ಕೆ ಮುಖ್ಯಮಂತ್ರಿ ವಿಶೇಷ ಅನುದಾನ ರೂ.25 ಕೋಟಿ ಎಂಬ ವಿಷಯದಲ್ಲಿ ಕೆಲ ಸ್ಥಳೀಯ ಮಾಧ್ಯಮಗಳಲ್ಲಿ ಪ್ರಕಟವಾದ ವಿವರ ಶಾಸಕರ ಅಧಿಕೃತ ಪ್ರಕಟಣೆಯಾಗಿರುವುದಿಲ್ಲ ಎಂದು ಶಾಸಕಿ ಭಾಗೀರಥಿ ಮುರುಳ್ಯ ಸ್ಪಷ್ಟಪಡಿಸಿದ್ದಾರೆ. ಕಳೆದ ಕೆಲ ದಿನಗಳಿಂದ ಮುಖ್ಯಮಂತ್ರಿ ಮೂಲ ಸೌಕರ್ಯ ನಿಧಿ ರೂ.25 ಕೋಟಿ ಅನುದಾನದ ಹಂಚಿಕೆಯ 161 ಕಾಮಗಾರಿಗಳ ವಿವರಗಳು ಪ್ರಕಟವಾಗಿದ್ದು ಇದು ಶಾಸಕರ ಕಛೇರಿಯಿಂದ ಅಧಿಕೃತವಾಗಿ ನೀಡಿಲ್ಲ, ಜೊತೆಗೆ ಮುಂದಿನ ದಿನಗಳಲ್ಲಿ ಈ ಕುರಿತು ಅಧಿಕೃತವಾಗಿ ಶಾಸಕರ ಕಚೇರಿ ಪ್ರಕಟಣೆ ಹೊರಡಿಸಲಿದೆ ಎಂದು ಸುಳ್ಯ ಶಾಸಕ ಭಾಗೀರಥಿ ಮುರುಳ್ಯ ಅವರ ಕಚೇರಿ ಪ್ರಕಟಣೆಯಲ್ಲಿ ತಿಳಿಸಿದೆ. ಈ ಕುರಿತು ಶಾಸಕಿ ಭಾಗೀರಥಿ ಮುರುಳ್ಯರನ್ನು ಸಂಪರ್ಕಿಸಿದಾಗ, ಈ ರೀತಿಯ ವರದಿ ಪ್ರಕಟವಾಗುತ್ತಿರುವುದು ಗ್ರಾಮ ಮಟ್ಟದಿಂದ ನಿರಂತರ ಕರೆಗಳು ಬರುತ್ತಿದ್ದು ಅಂತಹ ಯಾವುದೇ ಪಟ್ಟಿಗಳನ್ನು ಕಚೇರಿ ಮತ್ತು ನಾನು ನೀಡಿಲ್ಲ. ಮುಂದೆ ಅಧಿಕೃತ ಪಟ್ಟಿಯನ್ನು ಮಾಧ್ಯಮಗಳ ಮೂಲಕ ತಿಳಿಸಲಾಗುವುದು. ಈ ರೀತಿ ಅನಧಿಕೃತವಾಗಿ ವರದಿ ಪ್ರಕಟಿಸಬಾರದು ಎಂದು ಕೆಲ ಮಾಧ್ಯಮಗಳಿಗೂ ಮನವಿ ಮಾಡಿದ್ದಾರೆ.

ಡಿಸಿ ಸೂಚನೆ | ಎಸಿಯಿಂದ ಕೋವಿ ಕೊಠಡಿ ಪರಿಶೀಲನೆ

ದಾಸ್ತಾನು ಕೊಠಡಿಗಳಿಗೆ ಮುದ್ರೆ



ಪುತ್ತೂರು: ಕೃಷಿಕರಿಂದ ಕೋವಿಗಳನ್ನು ಠೇವಣಿ ಇಟ್ಟ ಕೋವಿಗಳ ದಾಸ್ತಾನು ಕೊಠಡಿಗಳನ್ನು ಜಿಲ್ಲಾಧಿಕಾರಿಗಳ ಸೂಚನೆ ಯಂತೆ ಪುತ್ತೂರು ಉಪವಿಭಾಗಾಧಿಕಾರಿ ಸ್ಟೆಲ್ಲಾ ವರ್ಗೀಸ್ ಅವರು ಪೊಲೀಸರು ಹಾಗೂ ಇತರ ಇಲಾಖೆಗಳ ಅಧಿಕಾರಿಗಳ ಸಹಕಾರದೊಂದಿಗೆ ಪುತ್ತೂರಿನಲ್ಲಿ ಶುಕ್ರವಾರ ಪರಿಶೀಲನೆ ಮಾಡಿದರು.

ರೈತರಿಂದ ಕೋವಿಗಳನ್ನು ಠೇವಣಿ ಮೂಲಕ ದಾಸ್ತಾನಿರಿಸಿಕೊಂಡ ಪುತ್ತೂರಿನ ದೇವಿಕ ಕೃಪ ಮತ್ತು ಎಸ್‌ಬಿಬಿ ಕಟ್ಟಡಗಳ ಕೊಠಡಿಗಳಲ್ಲಿ ಇರಿಸಲಾಗಿದ್ದು ಉಪವಿಭಾಗಾಧಿಕಾರಿ ಸ್ಟೆಲ್ಲಾ ವರ್ಗೀಸ್ ಅವರು ಪುತ್ತೂರು ಪೊಲೀಸರ ಸಮ್ಮುಖದಲ್ಲಿ ಕಟ್ಟಡದ ಮೇಲಂತಸ್ತಿನಲ್ಲಿರುವ ಎರಡು ಕೊಠಡಿ ಗಳನ್ನು ಪರಿಶೀಲಿಸಿದರು. ಬಳಿಕ ಕೆಳಗಿನ ಅಂಗಡಿಯೊಳಗಿರುವ ಇನ್ನೊಂದು ಕೊಠಡಿಗಳನ್ನು ಕೂ ತೆರೆಸಿದರು. ಸಂಜೆ ವೇಳೆ ಪಕ್ಕದ ಎಸ್‌ಬಿಬಿ ಟವರ್ಸ್ ಕಟ್ಟಡದ ಕೊಠಡಿಯಲ್ಲೂ ಪರಿಶೀಲನೆ ಮಾಡಿದರು. ಈ ಸಂದರ್ಭ ತಹಶೀಲ್ದಾರ್ ಎಸ್. ಬಿ.ಕೂಡಲಗಿ, ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್ ಅಧಿಕಾರಿ ಮಂಜುನಾಥ್, ಪುತ್ತೂರು ನಗರ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಜಾನ್ಸನ್ ಡಿಸೋಜ, ಕಂದಾಯ ಅಧಿಕಾರಿ ದಯಾನಂದ ಮೊದಲಾದವರು ಇದ್ದರು. ದೇವಿಕೃಪಾದ ಕಟ್ಟಡದ ಕೊಠಡಿಯ ಮೇಲಂತಸ್ತಿಗೆ ತೆರಳುವ ಬೀಗವನ್ನು ಮೋಹನ ಭಟ್ ಅವರ ಪುತ್ರ ಶ್ರೀಧರ್ ಭಟ್ ತೆರೆದರು. ಮೇಲಂತಸ್ತಿನಲ್ಲಿರುವ ಎರಡು ಕೊಠಡಿಯ ಬೀಗವನ್ನು ಗೋಪಾಲಕೃಷ್ಣ ಭಟ್ ಅವರ ಪುತ್ರ ವಿವೇಕ್ ಭಟ್ ತೆರೆದರು. ಪರಿಶೀಲನೆ ಬಳಿಕ ಎಲ್ಲಾ ದಾಸ್ತಾನು ಕೊಠಡಿ ಗಳಿಗೆ ಮುದ್ರೆ ಒತ್ತಲಾಯಿತು.

ಏಕಾಂಗಿಯಾಗಿ ಧರಣಿ ಕೂತ ಸುರೇಶ್ ಬೆಳ್ಚಡ

ಅಂಡರ್‌ಪಾಸ್‌ಗಾಗಿ ಒತ್ತಾಯ

ಕೈಕಂಬ: ಮಂಗಳೂರು–ಮೂಡಬಿದ್ರಿ ರಾಷ್ಟ್ರೀಯ ಹೆದ್ದಾರಿ 169ರ ಗುರುಪುರ–ಕೈಕಂಬದಲ್ಲಿ ಹೆದ್ದಾರಿ ಚತುಷ್ಪಥ ಕಾಮಗಾರಿ ನಡೆಯುತ್ತಿದ್ದು, ಇಲ್ಲಿನ ಪೊಂಪೈ ದ್ವಾರದ ಬಳಿ ಪಿಲ್ಲರ್ ಅಳವಡಿಸಿ ಅಂಡರ್ ಪಾಸ್ ನಿರ್ಮಿಸಬೇಕೆಂದು ಆಗ್ರಹಿಸಿ ಸುರೇಶ್ ಬೆಳ್ಚಡ ಅಡ್ಡೂರು ಶುಕ್ರವಾರದಿಂದ ಏಕಾಂಗಿ ಪ್ರತಿಭಟನೆ ನಡೆಸುತ್ತಿದ್ದಾರೆ.

ಕಳೆದ 3 ದಿನಗಳಿಂದ ಗುರುಪುರ– ಕೈಕಂಬ ದಲ್ಲಿ ನಾಗರಿಕ ಹೋರಾಟ ಸಮಿತಿಯು ನಡೆಸುತ್ತಿದ್ದ ಪ್ರತಿಭಟನೆಯನ್ನು ಬಜಪೆ ಪೊಲೀಸ್ ಸರ್ಕಲ್ ಇನ್‌ಸ್ಪೆಕ್ಟರ್ ಬಾಲಕೃಷ್ಣ ಅವರ ಭರವಸೆ ಹಿನ್ನಲೆಯಲ್ಲಿ ಬುಧವಾರ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು. ಆದರೆ ಹೋರಾಟದಲ್ಲಿ ಭಾಗಿಯಾಗಿದ್ದ ಸುರೇಶ್ ಶುಕ್ರವಾರ ಗುರುಪುರ–ಕೈಕಂಬ ಪೇಟೆಯಲ್ಲಿ ಪ್ರತಿಭಟನೆ ಆರಂಭಿಸಿದ್ದಾರೆ.

ಕೈಕಂಬ ಪೇಟೆಯ ಮಧ್ಯ ಭಾಗದಲ್ಲಿ ಎತ್ತರದ ಹೆದ್ದಾರಿಯು ಜಂಕ್ಷನ್‌ನಲ್ಲಿ ನಿರ್ಮಿಸಲಾಗುತ್ತಿರುವ ಫ್ಲೈಓವರ್ ಸಂಪರ್ಕಿಸುತ್ತದೆ. ಹೆದ್ದಾರಿಯ ಎರಡೂ ಪಾರ್ಶ್ವದಲ್ಲಿ ಸರ್ವಿಸ್ ರೋಡ್ ಇದೆ. ಆದರೆ ಪೊಂಪೈ ದ್ವಾರದ ಬಳಿ ಮೇಲ್ಭಾಗದಲ್ಲಿ ಹಾದು ಹೋಗುವ ಹೆದ್ದಾರಿ ಸಂಪೂರ್ಣ ಮುಚ್ಚಲ್ಪಟ್ಟರೆ ಕಂದಾವರ ಮತ್ತು ಇತರ ಪ್ರದೇಶಗಳ ಸಂಪರ್ಕ ಕಡಿದು ಹೋಗಿ ಸಾರ್ವಜನಿಕರು ತೀವ್ರ ಸಮಸ್ಯೆ ಎದುರಿಸಬೇಕಾಗುತ್ತದೆ. ವ್ಯಾಪಾರ– ವ್ಯವಹಾರಗಳಿಗೆ ತೊಂದರೆ ಉಂಟಾಗಿ ವ್ಯಾಪಾರಿಗಳು ಇಲ್ಲಿಂದ ಪರ್ಯಾಯ ಪೇಟೆಗೆ ಸ್ಥಳಾಂತರಗೊಳ್ಳುವ ಸಾಧ್ಯತೆಯೂ ಇದೆ. ಕೈಕಂಬ ಪೊಂಪೈ ದ್ವಾರದ ಎದುರು ಹೆದ್ದಾರಿಗೆ ತಡೆಗೋಡೆ ನಿರ್ಮಿಸಿ ಮುಚ್ಚಿದ್ದೆ, ಸರ್ವಿಸ್ ರೋಡ್ ಸಂಪರ್ಕದ ಫ್ಲೈಓವರ್ ನಿರ್ಮಿಸಬೇಕು ಎಂಬುದು ಸುರೇಶ್ ಬೇಡಿಕೆಯಾಗಿದೆ.



ರಾತ್ರಿ ಹೋರಾಟ ವಾಪಸ್

ಶುಕ್ರವಾರ ರಾತ್ರಿ ಸುರೇಶ್ ಬೆಳ್ಚಡ ಅವರ ಮನೆಯವರು ಹಾಗೂ ಸಾರ್ವಜನಿಕರ ಒತ್ತಾಯದ ಮೇರೆಗೆ ಹೋರಾಟವನ್ನು ವಾಪಾಸ್ ತೆಗೆದುಕೊಂಡಿದ್ದಾರೆ.

ಅಭಿನವ ಭಾರತ ಬೆಂಬಲ

ಸುರೇಶ್ ಅವರು ಫ್ಲೈ ಓವರ್ ಗಾಗಿ ನಡೆಸುತ್ತಿರುವ ಏಕಾಂಗಿ ಪ್ರತಿಭಟನೆಗೆ ಅಭಿನವ ಭಾರತ ಸಂಪೂರ್ಣ ಬೆಂಬಲ ನೀಡುತ್ತದೆ ಎಂದು ರಾಜ್ಯ ಸಂಚಾಲಕ ಪ್ರೇಮ್ ಪೊಳಲಿ ಹೇಳಿದ್ದಾರೆ. ಸುರೇಶ್ ಅವರ ಜತೆ ಕೆಲ ಸಮಯ ಪ್ರತಿಭಟನೆಗೆ ಸಾಥ್ ನೀಡಿದರು.

ಪುತ್ತೂರು ವಿವೇಕಾನಂದ ಕಾಲೇಜಿನಲ್ಲಿ ವಾರ್ಷಿಕ 'ಕ್ರೀಡೋತ್ಸವ'ದ ಉದ್ಘಾಟನೆ



ಪುತ್ತೂರು: ಕ್ರೀಡೆ ಎನ್ನುವುದು ಕೇವಲ ದೇಹದ ಆರೋಗ್ಯವನ್ನು ಕಾಪಾಡುವುದು ಮಾತ್ರವಲ್ಲ ಬದಲಾಗಿ ನಮ್ಮ ಮಾನಸಿಕ ಸದೃಡತೆಗೂ ಸಹಕಾರಿ. ಅಲ್ಲದೆ, ಏಕಾಗ್ರತೆ ಯನ್ನು ಕಾಪಾಡಿಕೊಳ್ಳಲು ಕ್ರೀಡೆ ಬಲು ಮುಖ್ಯ ಎಂದು ರಾಷ್ಟ್ರೀಯ ಮಟ್ಟದ ವಾಲಿಬಾಲ್ ಕ್ರೀಡಾಪಟು ಹಾಗೂ ಉಜಿರೆಯ ಎಸ್.ಡಿ.ಎಂ.(ಸ್ವಾಯತ್ತ) ಕಾಲೇಜಿನ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ರಮೇಶ್ ಎಚ್. ಹೇಳಿದರು.

ನಗರದ ವಿವೇಕಾನಂದ ಕಾಲೇಜಿನ (ಸ್ವಾಯತ್ತ) ದೈಹಿಕ ಶಿಕ್ಷಣ ವಿಭಾಗ ಮತ್ತು ಐಕ್ಯೂಎಸಿ ಜಂಟಿ ಆಶ್ರಯದಲ್ಲಿ ನಡೆದ 2025–26ನೇ ಸಾಲಿನ ವಾರ್ಷಿಕ ಕ್ರೀಡಾಕೂಟದಲ್ಲಿ ಮುಖ್ಯ ಅತಿಥಿಯಾಗಿದ್ದ ಅವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಈಗಿನ ಕಾಲದಲ್ಲಿ ಕ್ರೀಡೆಗೆ ಉತ್ತಮ ಸ್ಥಾನಮಾನ ಇದೆ. ಕ್ರೀಡೆಯಲ್ಲಿದ್ದವರು ಶೈಕ್ಷಣಿಕ ಕ್ಷೇತ್ರದಲ್ಲಿಯೂ ಉತ್ತಮ ಅಂಕಗಳನ್ನು ಪಡೆಯುತ್ತಾರೆ. ಹಾಗಾಗಿ ಇಂತಹ ಕ್ರೀಡಾಕೂಟದಲ್ಲಿ ನಿರಂತರವಾಗಿ ಭಾಗವಹಿಸಿ ಎಂದು ಅವರು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲ ಪ್ರೊ. ಶ್ರೀಕೃಷ್ಣ ಗಣರಾಜ ಭಟ್, ಕ್ರೀಡಾಕೂಟವು ಯಶಸ್ವಿಯಾಗಿ ಮೂಡಿ ಬರಲಿ ಎಂದು ಶುಭ ಹಾರೈಸಿದರು.

ವೇದಿಕೆಯಲ್ಲಿ ಪರೀಕ್ಷಾಂಗ ವಿಭಾಗದ ಕುಲಸಚಿವ ಡಾ.ಎಚ್.ಜಿ. ಶ್ರೀಧರ್, ಐಕ್ಯೂಎಸಿ ಘಟಕದ ಸಂಯೋಜಕಿ ಮತ್ತು ವಾಣಿಜ್ಯ ವಿಭಾಗದ ಮುಖ್ಯಸ್ಥೆ ಡಾ. ರವಿಕಲಾ, ಆಡಳಿತ ಮಂಡಳಿಯ ವಿಶೇಷ ಅಕಾರಿ ಮತ್ತು ಕನ್ನಡ ವಿಭಾಗದ ಮುಖ್ಯಸ್ಥ ಡಾ. ಮನಮೋಹನ ಎಂ. ಹಾಗೂ ಕಾಲೇಜಿನ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ರವಿಶಂಕರ್ ವಿ.ಎಸ್. ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಆಯೋಜಿಸಿದ ಫುಡ್ ಸ್ಟಾಲ್ ಗಳನ್ನು ಉದ್ಘಾಟಿಸಲಾಯಿತು. ಕ್ರೀಡಾ ಕಾರ್ಯದರ್ಶಿ ರಿತೇಶ್ ಅಮ್ಮುಂಜ ಹಾಗೂ ತಂಡದವರಿಂದ ಕ್ರೀಡಾಜ್ಯೋತಿಯನ್ನು ಬೆಳಗಿಸುವ ಮೂಲಕ ಕ್ರೀಡೋತ್ಸವಕ್ಕೆ ಚಾಲನೆಯನ್ನು ನೀಡಲಾಯಿತು.

ಕಾಲೇಜಿನ ವಿದ್ಯಾರ್ಥಿ ಸಂಘದ ಜೊತೆ ಕಾರ್ಯದರ್ಶಿ ಹಂಪನ ಕೆ.ಪಿ. ಸ್ವಾಗತಿಸಿ, ಕಾರ್ಯದರ್ಶಿ ಸುಮನ ವಂದಿಸಿದರು. ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥೆ ಭವ್ಯ. ಪಿ.ಆರ್. ನಿಡ್ಪಳ್ಳಿ ಕಾರ್ಯಕ್ರಮ ನಿರ್ವಹಿಸಿದರು. ಕಾಲೇಜಿನ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರಾದ ಡಾ. ಜ್ಯೋತಿ ಕುಮಾರಿ ಪಿ.ಎಸ್. ಹಾಗೂ ಯತೀಶ್ ಬಾರ್ತಿಕುಮೇರ್ ಸಹಕರಿಸಿದರು.

ಮುಲ್ಕಿ ಸೀಮೆಯ ಅರಸು ಕಂಬಳದ ಅಂತಿಮ ಆಯವ್ಯಯದ ಮಂಡನೆ



ಮುಲ್ಕಿ: ದಾನಿಗಳ ಸಹಕಾರ, ಜನಪ್ರತಿನಿಧಿ ಗಳ ಪ್ರೋತ್ಸಾಹ, ಹಾಗೂ ಕಂಬಳ ಅಭಿಮಾನಿಗಳ ನಿರಂತರ ಶ್ರಮದಿಂದಾಗಿ 2025 ವರ್ಷದ ಮುಲ್ಕಿ ಸೀಮೆ ಅರಸು ಕಂಬಳವು ಯಶಸ್ವಿಯಾಗಿ ಮೂಡಿ ಬಂದಿದ್ದು, ಯಶಸ್ಸಿಗೆ ಕಾರಣಕರ್ತ ನಿರ್ವಹಣಾ ಮಂಡಳಿಯ ಸದಸ್ಯರು ಅಭಿನಂದನೆಗೆ ಅರ್ಹರಾಗಿರುತ್ತಾರೆ.

ಒಗ್ಗಟಿನ ಪ್ರದರ್ಶನದಿಂದ ಮುಲ್ಕಿ ಸೀಮೆ ಅರಸು ಕಂಬಳವು ಸಾಂಪ್ರದಾಯಕವಾಗಿ ಆಧುನಿಕ ಸ್ಪರ್ಶದೊಂದಿಗೆ ಯಶಸ್ವಿ ಯಾಗಿರುತ್ತದೆ ಎಂದು ಮುಲ್ಕಿ ಸೀಮೆ ಅರಸರಾದ ಮತ್ತು ಶ್ರೀ ಕ್ಷೇತ್ರ ಬಪ್ಪನಾಡು ಇದರ ಅನುವಂಶಿಕ ಮೊಕ್ತೇಸರ ಎಂ. ದುಗ್ಗಣ್ಣ ಸಾವಂತರು ಹೇಳಿದರು.

ಅವರು ಮುಲ್ಕಿ ಸೀಮೆಯ ಅರಸು ಕಂಬಳದ ಅಂತಿಮ ಆಯವ್ಯಯದ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಕಂಬಳದ ವ್ಯವಸ್ಥಾಪಕ ಗೌತಮ್ ಎಂ ಜೈನ್ ಕಂಬಳದ ಆಯವ್ಯಯ ಮಂಡಿಸಿ, ಕಳೆದ ವರ್ಷ ದಾನಿಗಳಿಂದ 18,46,917 ಮೊತ್ತ ಧನಸಹಾಯ ಬಂದಿದ್ದು ಒಟ್ಟು18,05,362 ಖರ್ಚಾಗಿದ್ದು 41,555 ಅಂತಿಮ ಉಳಿತಾಯವಾಗಿದೆ. ಇದು ಹೆಮ್ಮೆ ತರುವ ವಿಷಯ ಎಂದು ತಿಳಿಯಪಡಿಸಲು ಸಂತೋಷ ಪಡುತ್ತೇನೆ ಎಂದರು

ಆಧುನಿಕ ವ್ಯವಸ್ಥೆಗೆ ಅನುಕೂಲವಾಗುವಂತೆ ಪೆವಿಲಿಯನ್ ನ್ನು ವಿಸ್ತರಣೆ ಗೊಳಿಸುವ ಯೋಜನೆ ರೂಪಿಸಲಾಗಿದ್ದು ಜನಪ್ರತಿನಿಧಿ ಗಳ ಮತ್ತು ದಾನಿಗಳ ಸಹಕಾರದೊಂದಿಗೆ ಈ ಯೋಜನೆ ಆದಷ್ಟು ಬೇಗ ಸಹಕಾರ ಗೊಳ್ಳುವ ನಿರೀಕ್ಷೆ ಇದೆ ಎಂದು ತಿಳಿಸಿದರು. ಇತ್ಯಾದಿಗಳಾಗಿ ಕಾಸಪ್ಪಯ್ಯ ಅವರ ಮನೆ

ಚಂದ್ರಶೇಖರ್ ಜಿ, ಪ್ರಿಯದರ್ಶಿನಿ ಕೋ ಆಪರೇಟಿವ್ ಅಧ್ಯಕ್ಷ ವಸಂತ ಬೆರ್ನಾಡ್, ಹಳೆಯಂಗಡಿ ಗ್ರಾ.ಪಂ. ಮಾಜಿ ಅಧ್ಯಕ್ಷೆ ಪೂರ್ಣಿಮಾ, ಪಡುಪಣಂಬೂರು ಗ್ರಾ.ಪಂ. ಮಾಜಿ ಅಧ್ಯಕ್ಷ ವಿನೋದ್ ಸಾಲ್ಯಾನ್ ಬೆಳ್ಳಾಯರು, ವಿಜಯಕುಮಾರ್ ಶೆಟ್ಟಿ ಇದ್ದರು. ಜೀವನ್ ಪ್ರಕಾಶ್ ಕಾಮೆರೊಟ್ಟು, ಶೋಭೇಂದ್ರ ಸಸಿಹಿತ್ಲು, ಧರ್ಮಾನಂದ ಶೆಟ್ಟಿಗಾರ, ಸತೀಶ್ ಶೆಟ್ಟಿ ಅನಿಲ್ ಶೆಟ್ಟಿ ನವೀನ್ ಪುತ್ರನ್ ಭಾಗವಹಿಸಿದರು. ಸುದರ್ಶನ್ ಪಂಜ ನಿರೂಪಿಸಿದರು.

ತೊಕ್ಕೊಟ್ಟು ರಾಷ್ಟ್ರೋತ್ಥಾನ ವಿದ್ಯಾಕೇಂದ್ರ: 'ತಲೆಮಾರು' ದಿನಾಚರಣೆ, ಪಾದಪೂಜೆ



ಉಳ್ಳಾಲ: ತೊಕ್ಕೊಟ್ಟು ಚೆಂಬುಗುಡ್ಡೆಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ 'ತಲೆಮಾರು' ಕಾರ್ಯಕ್ರಮ ಆಚರಿಸಲಾಯಿತು.

ರಾಷ್ಟ್ರೋತ್ಥಾನ ಕೇಂದ್ರದ ಪ್ರಧಾನಾ ಚಾರ್ಯ ವಿದ್ಯಾ ಕಾಮತ್ ಮತ್ತು ಆಡಳಿತಾಧಿಕಾರಿ ಪ್ರಖ್ಯಾತ್ ರೈ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ವಿದ್ಯಾರ್ಥಿಗಳು,ಪೋಷಕರು,ಅಜ್ಜ–ಅಜ್ಜಂದಿರು ಒಂದೇ ವೇದಿಕೆಯಲ್ಲಿ ಸೇರಿ ಸಂಭ್ರಮಾಚರಿಸಿದರು. ವಿದ್ಯಾರ್ಥಿಗಳ ಪೋಷಕರು ತಮ್ಮ ತಂದೆ ತಾಯಿಗಳ ಪಾದಪೂಜೆ ನೆರವೇರಿಸಿದರು. ಬಳಿಕ ವಿದ್ಯಾರ್ಥಿಗಳು ತಮ್ಮ ಪೋಷಕರಿಗೆ ಪಾದಪೂಜೆ ಸಲ್ಲಿಸಿ ಆಶೀರ್ವಾದ ಪಡೆದರು.

ಕುಮಾರ್ ಗುರೂಜಿ, 'ನಮ್ಮ ಮನೆ' ಎಂಬ ಗೀತೆ ಹಾಡುವುದರ ಮೂಲಕ ಶಾಲೆಯನ್ನು ಮನೆಯೊಂದಿಗೆ ಹೋಲಿಸಿ, ಮನೆ ಹೇಗೆ ಮಮತೆ, ಶಿಸ್ತು, ಸಂಸ್ಕೃತಿ ಮತ್ತು ಮೌಲ್ಯಗಳನ್ನು ನೀಡುತ್ತದೆಯೋ ಹಾಗೆಯೇ ಶಾಲೆಯೂ ಮಕ್ಕಳನ್ನು ಬೆಳೆಸುತ್ತದೆ ಎಂಬ ಸಂದೇಶ ಸಾರಿದರು.

ಗೋಕುಲಂ ಮಕ್ಕಳಿಂದ ಮನೋಹರವಾದ ಸ್ವಾಗತ ನೃತ್ಯ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶನಗೊಂಡಿತು. ಜಯಶ್ರೀ ಸ್ವಾಗತಿಸಿ, ದಿವ್ಯಾ ವಂದಿಸಿದರು. ಪ್ರಾಧ್ಯಾಪಕ ಡಾ. ಅರುಣ್ ಉಳ್ಳಾಲ್ ನಿರೂಪಿಸಿದರು.



ತುಂಬೆ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ವಾರ್ಷಿಕ ಜಾತ್ರಾ ಮಹೋತ್ಸವದ ಪ್ರಯುಕ್ತ ರುದ್ರಪಠಣ ಸಮಿತಿ ಬಂಟ್ವಾಳ ವತಿಯಿಂದ ಸಾಮೂಹಿಕ ಶ್ರೀ ರುದ್ರ ಪಠಣ ಅಥರ್ವ ಶೀರ್ಷ ಪಠಣ ದುರ್ಗಾ ಸೂಕ್ತ ಮಂತ್ರ ಪುಷ್ಪ ಮಂತ್ರಪಠಣ ನಡೆಯಿತು. ಸಚೇಪಮಾಗಣೆ ತಂತ್ರಿ ಎಂ.ಸುಬ್ರಹ್ಮಣ್ಯ ಭಟ್, ದೇವಸ್ಥಾನದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಮುಳ್ಳುಂಜ ವೆಂಕಟೇಶ್ವರ ಭಟ್,ಎ. ರವಿಶಂಕರ ಮಯ್ಯ, ಎಂ.ಶಾಂತರಾಮ ರಾವ್, ಎಂ.ಜಯರಾಮ ಮಯ್ಯ, ಚಂದ್ರಮೋಹನರಾವ್, ಕೆ. ಮಿಥುನರಾವ್., ಕೆ ರಮೇಶ್ ರಾವ್ ನಾರಾಯಣ ಭಟ್. ಕೆ ಪರಮೇಶ್ವರರಾವ್ ಮತ್ತಿತರರು ಇದ್ದರು.

ಸಸಿಹಿತ್ಲು ಕ್ಷೇತ್ರದ ಬ್ರಹ್ಮಕಲಶೋತ್ಸವ: ಚಪ್ಪರ ಮುಹೂರ್ತ ಕಾರ್ಯಕ್ರಮ



ಮುಲ್ಕಿ: ಹಳೆಯಂಗಡಿ ಸಮೀಪದ ಸಸಿಹಿತ್ಲು ಶ್ರೀ ಭಗವತೀ ದೇವಸ್ಥಾನದ ಬ್ರಹ್ಮಕಲಶೋತ್ಸವದ ಪ್ರಯುಕ್ತ ಚಪ್ಪರ ಮೂಹೂರ್ತ ಶುಕ್ರವಾರ ನಡೆಯಿತು.

ತಂತ್ರಿಗಳಾದ ಶ್ರೀಪತಿ ಭಟ್ ಹೊಯ್ಗೆ ಗುಡ್ಡೆ, ದೇವಳದ ಅನುವಂಶಿಕ ಮೊಕ್ತೇಸರ ಶ್ರೀನಿವಾಸ ಯಾನೇ ಅಪ್ಪು ಪೂಜಾರಿ, ಧಾರ್ಮಿಕ ವಿಧಿವಿಧಾನ ನೆರವೇರಿಸಿದರು.

ಈ ಸಂದರ್ಭ ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಪ್ರಧಾನ ಕಾರ್ಯದರ್ಶಿ ರಮೇಶ್ ಬಂಗೇರ, ಚಪ್ಪರ ಸಮಿತಿಯ ಅಧ್ಯಕ್ಷ ಪ್ರೇಮನಾಥ ಸುವರ್ಣ, ಅಭಿವೃದ್ಧಿ ಸಮಿತಿ ಅಧ್ಯಕ್ಷ ಪ್ರಭಾಕರ ಪೂಜಾರಿ, ವಿವಿಧ ಸಮಿತಿಗಳ ಸುಧಾಕರ ಸುವರ್ಣ, ಶೋಭೋಂದ್ರ ಸಸಿಹಿತ್ಲು ಚಂದ್ರಶೇಖರ ನಾನಿಲ್, ಗೀತಾ ಕುಮಾರ್, ಲೀಲಾಧರ ಬಂಗೇರ, ಕಸ್ತೂರಿ ಪಂಜ, ಜಗನ್ನಾಥ ಕೋಟ್ಯಾನ್, ಉದಯಕುಮಾರ್, ವಿನೋದ್ ಕುಮಾರ್ ಬೊಳ್ಳೂರು, ಅಶೋಕ್ ಬಂಗೇರ, ಅರವಿಂದ್, ವಿ.ಕೆ.ಯಾದವ್, ಎಸ್.ಆರ್ ಪ್ರದೀಪ್, ಕಿರಣ್ ಗುರಿಕಾರ, ಸುಧಾನಂದ ಬೆಳ್ಚಡ,ಸುರೇಶ್ ಬಂಗೇರ ಸಸಿಹಿತ್ಲು ರಾಜೇಂದ್ರ ಪ್ರಸಾದ್, ಮೋಹನ್ ಸುವರ್ಣ, ಆಶೀಶ್ ಬಂಗೇರ, ಉಮೇಶ್ ಅಮೀನ್, ಮನೋಜ್ ಕರ್ಕೇರ, ಸತೀಶ್ ಶೆಟ್ಟಿ ಎಕ್ಕಾರು ಮತ್ತಿತರರು ಉಪಸ್ಥಿತರಿದ್ದರು. ಬ್ರಹ್ಮಕಲಶೋತ್ಸವವು ಮಾರ್ಚ್ 4ರಿಂದ 8ರವರೆಗೆ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ವಿಜೃಂಭಣೆಯಿಂದ ನಡೆಯಲಿದೆ.

ಪೆರ್ನೆ ವ್ಯವಸಾಯ ಸೇವಾ ಸಹಕಾರಿ ಸಂಘ: ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಉಪ್ಪಿನಂಗಡಿ: ಪೆರ್ನೆ ವ್ಯವಸಾಯ ಸೇವಾ ಸಹಕಾರಿ ಸಂಘದ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಚುನಾವಣೆಯು ಸಂಘದ ಕಛೇರಿಯಲ್ಲಿ ನಡೆದು, ಅಧ್ಯಕ್ಷರಾಗಿ ಸತತ ಐದನೇ ಬಾರಿಗೆ ಎಸ್. ತೋಯಜಾಕ್ಷ ಶೆಟ್ಟಿ ಉಪಾಧ್ಯಕ್ಷರಾಗಿ ಸತತ ಎರಡನೇ ಬಾರಿಗೆ ತನಿಯಪ್ಪ ಪೂಜಾರಿ ಅವಿರೋಧವಾಗಿ ಆಯ್ಕೆಯಾದರು.

ಚುನಾವಣೆಯಲ್ಲಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಒಂದೊಂದು ನಾಮಪತ್ರ ಸಲ್ಲಿಸಿರುವುದರಿಂದ ಚುನಾವಣೆ ಪ್ರಕ್ರಿಯೆ ಇಲ್ಲದೇ ಅವಿರೋಧವಾಗಿ ಆಯ್ಕೆ ನಡೆಯಿತು. ಚುನಾವಣೆಯನ್ನು ರಿಟರ್ನಿಂಗ್ ಅಧಿಕಾರಿಗಳಾದ ಬಿ. ನಾಗೇಂದ್ರ ಅವರು ನಡೆಸಿಕೊಟ್ಟರು.

ನಿರ್ದೇಶಕರಾದ ಡಾ. ರಾಜಗೋಪಾಲ ಶರ್ಮ, ನೀಲಪ್ಪ ಗೌಡ, ಲಕ್ಷ್ಮಣ ನ್ಯಾಕ್, ಸುನೀಲ್ ನೆಲ್ಸನ್ ಪಿಂಟೋ, ಜಾರಪ್ಪ ಗೌಡ, ಜಯಲಕ್ಷ್ಮೀ, ರೇವತಿ ಪಿ. ಬೇಬಿ, ಅಬ್ದುಲ್ ಲತೀಫ್, ಶಾಂತ ಹಾಗೂ ಆರ್ಥಿಕ ಬ್ಯಾಂಕಿನ ಪ್ರತಿನಿಯಾಗಿ ಯೋಗೀಶ್ ಎಚ್. ಆಯ್ಕೆಯಾಗಿದ್ದಾರೆ. ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿ ಕಾರಿ ಪುಷ್ಪಾ ಡಿ. ಉಪಸ್ಥಿತರಿದ್ದರು. ಪಂಚಗ್ಯಾರಂಟಿ ಯೋಜನೆ ಪುತ್ತೂರು ಕ್ಷೇತ್ರದ ಅಧ್ಯಕ್ಷ ಉಮಾನಾಥ ಶೆಟ್ಟಿ, ಪುತ್ತೂರು ವಿಧಾನಸಭಾ ಕ್ಷೇತ್ರದ ಯುವ ಕಾಂಗ್ರೆಸ್, ಅಧ್ಯಕ್ಷ ಮಹಮ್ಮದ್ ಫಾರೂಕ್, ಪೆರ್ನೆ ಗ್ರಾಮ ಪಂಚಾಯತ್‌ನ ಮಾಜಿ ಉಪಾಧ್ಯಕ್ಷೆ ವನಿತಾ, ಸಂಘದ ಮಾಜಿ ಉಪಾಧ್ಯಕ್ಷ ಅಬ್ದುಲ್ ಶಾಫಿ, ಮಾಜಿ ನಿರ್ದೇಶಕರಾದ, ವಿಶ್ವನಾಥ ಶೆಟ್ಟಿ ಬಶೀರ್, ಮಹಮ್ಮದ್ ಶರೀಫ್, ಚೆನ್ನಕೇಶವ ಯಾನೆ ಚೆನ್ನ ಮೇರ, ಸಂಘದ ಸದಸ್ಯರಾದ ಪದ್ಮಯ ಗೌಡ, ಪುಷ್ಕರ ಪೂಜಾರಿ, ಮಿತ್ರದಾಸ ರೈ, ಸುಂದರ, ಪುರುಷೋತ್ತಮ ಗೌಡ, ರವೀಂದ್ರ ಶೆಟ್ಟಿ ಚೇತನ್ ಕುಮಾರ್, ಉಮೇಶ್ ಪೂಜಾರಿ, ರಾಜಶೇಖರ್ ಶೆಟ್ಟಿ ಅಶ್ರಫ್ ಉಪಸ್ಥಿತರಿದ್ದರು.



ಯಕ್ಷಮಿತ್ರರು ಅಸ್ಯೆಗೋಳಿ ವತಿಯಿಂದ ಬುಧವಾರ ಅಸ್ಯೆಗೋಳಿಯಲ್ಲಿ ನಡೆದ 'ಗರುಡೋದ್ಭವ' ಯಕ್ಷಗಾನ ಬಯಲಾಟ ಸಂದರ್ಭ ಕಲಾವಿದರಾದ ಮೋಹನ್ ಬೆಳ್ಳಿಪಾಡಿ, ರಮೇಶ್ ಪಟ್ರಮೆ ಹಾಗೂ ಪಾಕತಜ್ಞ ಹರೀಶ್ ಭಟ್ ಅಸ್ಯೆಗೋಳಿ ಅವರನ್ನು ಸನ್ಮಾನಿಸಲಾಯಿತು. ಇದೇ ಸಂದರ್ಭ ಪಾವಂಜೆ ಮೇಳದ ಸಂಚಾಲಕ ಪಟ್ಲ ಸತೀಶ್ ಶೆಟ್ಟಿ ಅವರನ್ನೂ ಗೌರವಿಸಲಾಯಿತು. ಈ ಸಂದರ್ಭ ರವಿಶಂಕರ ಭಟ್ ಅಸ್ಯೆಗೋಳಿ, ಶಬರೀಶ್ ಭಟ್ ಅಸ್ಯೆಗೋಳಿ,ಪರಮೇಶ್ವರ ಭಟ್ ,ಉದಯ ಭಟ್ ಅಸ್ಯೆಗೋಳಿ, ಕಿರಣ್, ಪತ್ರಕರ್ತ ವಿನಯಕೃಷ್ಣಭಟ್ ಕುರ್ನಾಡು ಉಪಸ್ಥಿತರಿದ್ದರು.

ಯು.ಆರ್. ಪ್ರಾಪರ್ಟಿಸ್ ಸಂಸ್ಥೆಯಿಂದ ವಿನೂತನ ಪರಿಸರ ಕಾಳಜಿ

ಪುತ್ತೂರಿನಲ್ಲಿ 'ಪಕ್ಷಿಗಳ ಆಶ್ರಯಧಾಮ' ನಿರ್ಮಾಣ

ಪುತ್ತೂರು: ಪಕ್ಷಿ ಸಂಕುಲವನ್ನು ರಕ್ಷಿಸಿ, ಉಳಿಸುವ ನಿಟ್ಟಿನಲ್ಲಿ ಪುತ್ತೂರು ತಾಲೂಕು ಆಡಳಿತ ಸೌಧದ ಹಿಂಭಾಗದಲ್ಲಿರುವ ಖಾಲಿ ಸ್ಥಳದಲ್ಲಿ ವಿವಿಧ ಜಾತಿಯ ಹಣ್ಣಿನ ಗಿಡಗಳನ್ನೊಳಗೊಂಡ 'ಪಕ್ಷಿಗಳ ಆಶ್ರಯಧಾಮ' ನಿರ್ಮಾಣವಾಗಲಿದೆ.

ಯು.ಆರ್.ಪ್ರಾಪರ್ಟಿಸ್ ಸಂಸ್ಥೆಯ ಉದ್ಯಮಿ ಉಜ್ವಲ್ ಪ್ರಭು ಅವರು ತಾಲೂಕು ಆಡಳಿತ ಸೌಧದ ಬಳಿ ಪಕ್ಷಿಗಳ ಆಶ್ರಯಧಾಮ ನಿರ್ಮಿಸಲು ಮುಂದಾಗಿದ್ದು, ಶಿಲಾನ್ಯಾಸ ನೆರವೇರಿಸಲಾಯಿತು. ಪುತ್ತೂರು ಉಪವಿಭಾಗಾಧಿಕಾರಿ ಸ್ಟೆಲ್ಲಾ ವರ್ಗೀಸ್ ಹಾಗೂ ಉಜ್ವಲ್ ಪ್ರಭು ಶಿಲಾನ್ಯಾಸ ನೆರವೇರಿಸಿದರು.



ಆಡಳಿತ ಸೌಧದ ಹಿಂಭಾಗದಲ್ಲಿರುವ ಸುಮಾರು 9 ಸೆಂಟ್ಸ್ ಜಾಗದಲ್ಲಿ ನಿರ್ಮಾಣವಾಗಲಿರುವ ಪಕ್ಷಿಗಳ ಆಶ್ರಯಧಾಮದಲ್ಲಿ ಚಿಕ್ಕು ಮಾವು, ರಾಂಬೂಟನ್, ಪೇರಳೆ, ಜಂಬೂ, ಕೋಕಮ್, ಗೇರು, ಆಪಲ್ ಸೇರಿ ಸುಮಾರು 25 ಜಾತಿಯ ಹಣ್ಣಿನ ಗಿಡಗಳು ಇರಲಿವೆ. ಹಣ್ಣಿನ ಗಿಡಗಳಿಗೆ ನೀರು ಹಾಯಿಸಲು ಹನಿ ನೀರಾವರಿ ವ್ಯವಸ್ಥೆ, ಪಕ್ಷಿಗಳ ಬಾಯಾರಿಕೆ ನೀಗಿಸಲು ನೀರಿನ ಕೊಳ, ಎರಡು ಗೂಡುಗಳು ಇರಲಿದ್ದು ಸುತ್ತ ಆವರಣಗೋಡೆ, ಹೊರಭಾಗದಲ್ಲಿ ಇಂಟರ್‌ಲಾಕ್ ಅಳವಡಿಸಲಾಗುವುದು. ನಿರ್ವಹಣೆಯನ್ನೂ ಸಂಸ್ಥೆಯೇ ಮಾಡಲಿದೆ. ಈ ಸಂದರ್ಭ ಸಂದೇಶ ಮಯ್ಯ, ಸಂಜೀವ ಗೌಡ, ಎಂಜಿನಿಯರ್ ಸಜೇಶ್, ಸರ್ವೆಯರ್ ಪ್ರಜ್ವಲ್, ಸಂತೋಷ್, ಉಪವಿಭಾಗಾಧಿಕಾರಿ ಕಚೇರಿಯ ರಾಜೇಶ್, ಶ್ರೀಧರ, ಯು.ಆರ್. ಪ್ರಾಪರ್ಟಿಸ್ ಸಿಬ್ಬಂದಿ ಭಾಗವಹಿಸಿದ್ದರು. ಭೂಮಾಪಕ ನಿಸ್ಸಾರ್ ಪಾಷಾ ಸ್ವಾಗತಿಸಿ, ಉಪತಹಶೀಲ್ದಾರ್ ರವಿ ಪಿ.ಎಸ್. ವಂದಿಸಿದರು. ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿಯ ಪ್ರಮೋದ್ ಕುಮಾರ್ ನಿರ್ವಹಿಸಿದರು.

ತುಂಬೆ ಗ್ರಾಮ ಪಂಚಾಯತ್‌ನಲ್ಲಿ ವಿವಿಧ ಯೋಜನೆಗೆ ಅನುಕೂಲ

ಒಟ್ಟು 4.46 ಎಕ್ರೆ ಜಮೀನು ಮಂಜೂರಾತಿ

ಬಂಟ್ವಾಳ: ತುಂಬೆ ಗ್ರಾಮ ಪಂಚಾಯತ್ ಸಭಾಂಗಣದಲ್ಲಿ ತುಂಬೆ ಗ್ರಾಮದ ಮಲ್ಲಿ ಎಂಬಲ್ಲಿ ವಿವಿಧ ಯೋಜನೆಗಳಿಗೆ 4.46 ಎಕ್ರೆ ಜಮೀನನ್ನು ಮಂಗಳೂರು ಸಹಾಯಕ ಕಮೀಷನರ್ ಅವರ ಆದೇಶದನ್ವಯ ಮಂಜೂರಾತಿ ಪಡೆದು ಗ್ರಾಮ ಆಡಳಿತಾಧಿಕಾರಿಯವರು ಗ್ರಾ.ಪಂ. ಗೆ ಹಸ್ತಾಂತರಿಸಿದರು.

ತುಂಬೆ ಗ್ರಾಮದ ಮಲ್ಲಿ ಎಂಬಲ್ಲಿನ ಸರ್ವೇ ನಂಬ್ರ 9/2 ರಲ್ಲಿ ಒಟ್ಟು 4.46 ಎಕ್ರೆ ಜಮೀನಿನ ಪೈಕಿ 3.3.30 ಎಕ್ರೆ ಕ್ರೀಡಾಂಗಣ,0.34 ಎಕ್ರೆ ಒಣತ್ಯಾಜ್ಯ ಘಟಕ, 0.40 ಎಕ್ರೆ ಗ್ರಾಮ ಆಡಳಿತಾಧಿಕಾರಿ ವಸತಿ ಗೃಹ, 0.42 ಎಕ್ರೆ ಗ್ರಾಮ ಪಂಚಾಯತ್ ಸಿಬ್ಬಂದಿಗಳ ವಸತಿ ಗೃಹಕ್ಕೆ ಕಾದಿರಿಸುವಂತೆ ಆದೇಶದಲ್ಲಿ ಸೂಚಿಸಲಾಗಿದೆ.



ಈ ಸಂದರ್ಭದಲ್ಲಿ ಜಿ.ಪಂ. ಮಾಜಿ ಸದಸ್ಯ ಚಂದ್ರಪ್ರಕಾಶ್ ಶೆಟ್ಟಿ ತುಂಬೆ ಗ್ರಾ.ಪಂ. ಅಧ್ಯಕ್ಷೆ ಜಯಂತಿ ಕೇಶವ, ಉಪಾಧ್ಯಕ್ಷ ಗಣೇಶ್ ಸಾಲ್ಯಾನ್,ಮಾಜಿ ಅಧ್ಯಕ್ಷ ಪ್ರವೀಣ್ ಬಿ ತುಂಬೆ, ಪಂಚಾಯತ್ ಸದಸ್ಯರಾದ ಹೇಮಾಲತ, ಅರುಣ್ ಕುಮಾರ್, ಕಿಶೋರ್, ಮಹಮದ್ ಝುಹೂರ್, ಅಬ್ದುಲ್ ಅಝೀಜ್, ಇಬ್ರಾಹಿಂ, ಶಶಿಕಲಾ, ಮುನೀರಾ, ಆತಿಕ ಬಾನು, ಜಯಂತಿ ಶ್ರೀಧರ, ಜಯಂತಿ ನಾಗೇಶ್, ಪ್ರಮುಖರಾದ ಇರ್ಫಾನ್, ತುಂಬೆ ಗ್ರಾ.ಪಂ. ಅಭಿವೃದ್ಧಿ ಅಕಾರಿ ಶಿವುಲಾಲ್ ಚವ್ಹಾಣ್, ಲೆಕ್ಕ ಸಹಾಯಕಿ ಚಂದ್ರಕಲಾ ಜಿ. ಮತ್ತಿತರರು ಇದ್ದರು.

ಸುತ್ತಮುತ್ತ

ಇಂದು ಕುಜ್ಲುಬೆಟ್ಟು ನೇಮ

ಬಂಟ್ವಾಳ: ತಾಲೂಕಿನ ಮೂಡನಡುಗೋಡು ಗ್ರಾಮದ ಕುಜ್ಲುಬೆಟ್ಟು ದೈವಸ್ಥಾನದಲ್ಲಿ ಧರ್ಮ ದೈವಗಳ ನೇಮ ಫೆ.21 ರಂದು ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ. ಬೆಳಿಗ್ಗೆ ಭಂಡಾರ ಇಳಿದು, ಪುಣ್ಯಾಹ ವಾಚನ, ನವಕ ಕಲಶ ಪ್ರಧಾನ ಹೋಮ,ಕಲಶಾಭಿಷೇಕ, ಪರ್ವಪೂಜೆ. ಸಾರ್ವಜನಿಕ ಸತ್ಯನಾರಾಯಣ ಪೂಜೆ, ಪ್ರಸಾದ ವಿತರಣೆ, ಅನ್ನಸಂತರ್ಪಣೆ ನಡೆಯಲಿದೆ. ಅಪರಾಹ್ನ 2 ಗಂಟೆಗೆ ರಕ್ತೇಶ್ವರಿ, ಮೈಸಂದಾಯ ದೈವಗಳಿಗೆ ನೇಮ. ರಾತ್ರಿ 8ರಿಂದ ಗ್ರಾಮ ಧರ್ಮ ದೈವಗಳಾದ ಕೊಡಮಣಿತ್ತಾಯ, ಪಿಲಿಚಾಮುಂಡಿ, ಅಣ್ಣಪ್ಪ ಪಂಜುರ್ಲಿ, ಕಲ್ಕುಡ –ಕಲ್ಲುರ್ಟಿ ಮತ್ತು ಗುಳಿಗ ದೈವಗಳಿಗೆ ನೇಮ ನಡೆಯಲಿದೆ.

ಈ ಸಂದರ್ಭ ಶಾಸಕರಾದ ರಾಜೇಶ್ ನ್ಯಾಕ್ ಉಳಿಪಾಡಿ ಅವರಿಂದ ದೈವಸ್ಥಾನದ ವಠಾರದಲ್ಲಿ ಅಳವಡಿಸಲಾದ ಸೋಲಾರ್ ಹೈಮಾಸ್ಕ್ ದೀಪ ಲೋಕಾರ್ಪಣೆಗೊಳ್ಳಲಿದೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ಮೂಲ್ಕಿ ನ.ಪಂ.ನ ಆಯವ್ಯಯ ಪೂರ್ವಭಾವಿ ಸಭೆ

ಮೂಲ್ಕಿ: ಮೂಲ್ಕಿ ನಗರ ಪಂಚಾಯತ್ ನ 2026–27 ನೇ ಸಾಲಿನ ಆಯವ್ಯಯ ತಯಾರಿ ಬಗ್ಗೆ ಪೂರ್ವಭಾವಿಯಾಗಿ ಚರ್ಚಿಸಲು ಫೆ.21 ರಂದು ಪೂರ್ವಾಹ್ನ 10.30 ಕ್ಕೆ ಮೂಲ್ಕಿ ನ.ಪಂ.ನ ಸಮುದಾಯ ಭವನದಲ್ಲಿ ಮೂಲ್ಕಿ ನಗರ ಪಂಚಾಯತ್ ಆಡಳಿತಾಧಿಕಾರಿ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಲಿದೆ. ಸಭೆಯಲ್ಲಿ ಜನ ಪ್ರತಿನಿಧಿಗಳು, ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು, ಪತ್ರಿಕಾ ಪ್ರತಿನಿಧಿಗಳು ಹಾಗೂ ಸಾರ್ವಜನಿಕರು ಸಭೆಯಲ್ಲಿ ಭಾಗವಹಿಸಿ 2026–27 ನೇ ಸಾಲಿನ ಮೂಲ್ಕಿ ನಗರ ಪಂಚಾಯತ್ ಕಚೇರಿಯ ಬಜೆಟ್ ತಯಾರಿಕೆ ಬಗ್ಗೆ ತಮ್ಮ ಸಲಹೆ ಸೂಚನೆ ನೀಡಬೇಕೆಂದು ಮೂಲ್ಕಿ ನ.ಪಂ.ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಫೆ.27: ವಿಕಸಿತ ಭಾರತ ಯುವ ಸಂಸತ್ ಸ್ಪರ್ಧೆ

ಮಂಗಳೂರು: ಮೈ ಭಾರತ್, ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯ ಇವರು ಮಂಗಳೂರು ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನೆ ಘಟಕದ ಸಹಯೋಗದೊಂದಿಗೆ ಭಾರತ ಸರ್ಕಾರದ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವಾಲಯದ ಪ್ರಮುಖ ಉಪಕ್ರಮವಾದ 'ವಿಕಸಿತ ಭಾರತ ಯುವ ಸಂಸತ್ 2026' ರ ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ಸ್ಪರ್ಧೆ ಫೆ.27 ರಂದು ಬೆಳಿಗ್ಗೆ 9.30ಕ್ಕೆ ನಗರದ ಸೈಂಟ್ ಆಗ್ನೆಸ್ ಕಾಲೇಜಿನಲ್ಲಿ ನಡೆಯಲಿದೆ. 18 ರಿಂದ 25 ವರ್ಷ ವಯಸ್ಸಿನ ಯುವಕ–ಯುವತಿಯರು ಭಾಗವಹಿಸಬಹುದು.

ಸ್ಪರ್ಧೆಯ ಪ್ರಮುಖ ವಿವರಗಳು

ವಿಷಯ: 50 ವರ್ಷಗಳ ತುರ್ತು ಪರಿಸ್ಥಿತಿ: ಭಾರತೀಯ ಪ್ರಜಾಪ್ರಭುತ್ವಕ್ಕೆ ಕಲಿಸಿದ ಪಾಠಗಳು (50 years of Emergency: Lessons for Indian Democracy)ಭಾಷೆ :ಕನ್ನಡ, ಇಂಗ್ಲಿಷ್ ಅಥವಾ ಹಿಂದಿ.

ಆಯ್ಕೆಯ ಹಂತಗಳು:

ಜಿಲ್ಲಾ ಮಟ್ಟದಲ್ಲಿ ಉತ್ತಮ ಪ್ರದರ್ಶನ ನೀಡುವ 10 ಪ್ರತಿಭಾನ್ವಿತರನ್ನು ಕರ್ನಾಟಕ ರಾಜ್ಯ ಮಟ್ಟದ ಸ್ಪರ್ಧೆಗೆ ಆಯ್ಕೆ ಮಾಡಲಾಗುತ್ತದೆ. ರಾಜ್ಯ ಮಟ್ಟದಲ್ಲಿ ವಿಜೇತರಾದ ಮೂವರು ನವದೆಹಲಿಯ ಭಾರತೀಯ ಸಂಸತ್ತಿನಲ್ಲಿ ನಡೆಯುವ ರಾಷ್ಟ್ರೀಯ ಮಟ್ಟದ ಕಾರ್ಯಕ್ರಮದಲ್ಲಿ ಭಾಗವಹಿಸುವ ಐತಿಹಾಸಿಕ ಅವಕಾಶ ಪಡೆಯಲಿದ್ದಾರೆ.

ಆಸಕ್ತ ಯುವಜನರು ಮೈ ಭಾರತ್ ಪೋರ್ಟಲ್ mybharat.gov.in ಮೂಲಕ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಮಾಹಿತಿಗೆ ದೂ.ಸಂ.9961332968, 9448061961 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಆಕಾಶ ವೀಕ್ಷಣೆ

ಮಂಗಳೂರು: ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಫೆ.21 ರಂದು ಸಂಜೆ 6.30 ರಿಂದ 8.30ರ ವರೆಗೆ ರಾತ್ರಿ ಆಕಾಶ ವೀಕ್ಷಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಸಮಯದಲ್ಲಿ ಕಾಣಲಿರುವ ಗುರು, ಶನಿ ಗ್ರಹಗಳಲ್ಲದೆ ಚಂದ್ರನ ಕುಳಿಗಳನ್ನು ಸಹ ವೀಕ್ಷಿಸಬಹುದು. ವಿಜ್ಞಾನ ಕೇಂದ್ರದ ಆವರಣದಲ್ಲಿ ಇವುಗಳನ್ನು ದೂರದರ್ಶಕದ ಮೂಲಕ ವೀಕ್ಷಿಸಲು ವ್ಯವಸ್ಥೆ ಮಾಡಲಾಗಿದೆ. ಅಲ್ಲದೆ ನಕ್ಷತ್ರ ಮತ್ತು ನಕ್ಷತ್ರಪುಂಜಗಳನ್ನು ಗುರುತಿಸುವುದನ್ನು ಪರಿಚಯಿಸಲಾಗುತ್ತದೆ. ಬರಿಗಣ್ಣಿನಿಂದ ಇವುಗಳನ್ನು ನೋಡಬಹುದಾದರೂ ದೂರದರ್ಶಕದಿಂದ ನೋಡುವುದು ಬೇರೆಯೇ ಅನುಭವ ನೀಡುತ್ತದೆ. ಖಗೋಳಾಸಕ್ತರು ಈ ಮುಕ್ತ ಅವಕಾಶದ ಸದುಪಯೋಗ ಪಡೆದುಕೊಳ್ಳಲು ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುರತ್ಕಲ್ ಗೋವಿಂದ ದಾಸ ಕಾಲೇಜಿನಲ್ಲಿ ರಾಷ್ಟ್ರಮಟ್ಟದ ಕಾರ್ಯಕ್ರಮ | ನ್ಯಾ. ಸಂತೋಷ್ ಹೆಗ್ಡೆ ಆಶಯ

ದುರಾಸೆ ಬಿಟ್ಟು ಪರಿಶ್ರಮದ ತೃಪ್ತ ಜೀವನಕ್ಕೆ ಆದ್ಯತೆ ನೀಡಬೇಕು

ಸುರತ್ಕಲ್: ಆರು ತಿಂಗಳ ಮಗುವಿಗೆ ಶಸ್ತ್ರ ಚಿಕಿತ್ಸೆ ಮಾಡಲು ದುರಾಸೆಯಿಂದ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಸರಕಾರಿ ವೈದ್ಯರೊಬ್ಬರು ಕರ್ತವ್ಯ ಮರೆಯುತ್ತಾರೆ ಎಂದರೆ ಭ್ರಷ್ಟಾಚಾರ ಎಲ್ಲಿಯ ವರೆಗೆ ವ್ಯಾಪಿಸಿದೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕಿದೆ. ಇವತ್ತು ಬರೀ ಶ್ರೀಮಂತಿಕೆ ಮತ್ತು ಅಧಿಕಾರವನ್ನು ಪೂಜಿಸುವ ಸಮಾಜದಲ್ಲಿದ್ದೇವೆ. ಯುವ ಸಮಾಜ ಕ್ರಾಂತಿಗೆ ಮುಂದಾಗದೆ ಶಾಂತಿಯಿಂದ ಭ್ರಷ್ಟಾಚಾರ ನಿಗ್ರಹಕ್ಕೆ ಹೋರಾಟ ನಡೆಸಬೇಕಿದೆ ಎಂದು ಮಾಜಿ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಹೇಳಿದ್ದಾರೆ.



ಸುರತ್ಕಲ್ ಗೋವಿಂದ ದಾಸ ಕಾಲೇಜು, ಹಿಂದೂ ವಿದ್ಯಾದಾಯಿನಿ ಸಂಘ, ಗುಣಮಟ್ಟ ಖಾತ್ರಿ ವಿಭಾಗ, ಸಮಾಜಶಾಸ್ತ್ರ ವಿಭಾಗ, ಮಾನವ ಹಕ್ಕು, ಗ್ರಾಹಕ ವೇದಿಕೆ, ಹಾಗೂ ಮಹಿಳಾ ವೇದಿಕೆ ಇವುಗಳ ಸಯುಕ್ತ ಆಶ್ರಯದಲ್ಲಿ ಆಯೋಜಿಸಲಾದ ರಾಷ್ಟ್ರೀಯ ಮಟ್ಟದ ಮಾನವ ಹಕ್ಕುಗಳು ಮತ್ತು ಝೆನ್ ಜಿ ಸವಾಲುಗಳು ಮತ್ತು ಅವಕಾಶಗಳು ಕುರಿತ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದೇಶದಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿದೆ

ದೇಶದಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿದ್ದು ಇದು ವ್ಯಕ್ತಿಗಳ ತಪ್ಪಲ್ಲ ಸಮಾಜದ ತಪ್ಪು. ಈ ಹಿಂದೆ ವ್ಯಕ್ತಿಯೊಬ್ಬ ತಪ್ಪು ಮಾಡಿದಾಗ ಸಮಾಜವೇ ಶಿಕ್ಷೆ ನೀಡುತ್ತಿತ್ತು. ಆದರೆ ಇಂದು ಲಂಚ ಗುಳಿತನ, ಭ್ರಷ್ಟಾಚಾರ ನಡೆಸಿದ ವ್ಯಕ್ತಿ ಜೈಲಿಗೆ ಹೋದರೆ ಅದೊಂದು ಪುಣ್ಯ ಎಂಬಂತೆ ಹೋಗಿ ಬರುತ್ತಾರೆ ಎಂದು ಹೇಳಿದರು.

ದುರಾಸೆ ರೋಗಕ್ಕೆ ಮದ್ದಿಲ್ಲ

ದುರಾಸೆಯೆಂಬ ರೋಗಕ್ಕೆ ಮದ್ದಿಲ್ಲ. ಆದರೆ ಭ್ರಷ್ಟಾಚಾರ ಮಾಡಿದ ವ್ಯಕ್ತಿ ಯಾವತ್ತೂ ಸಂತೋಷವಾಗಿ ಬದುಕಲು ಸಾಧ್ಯವಾಗಿಲ್ಲ, ಆದ್ದರಿಂದ ದುರಾಸೆಯನ್ನು ಬಿಟ್ಟು ಪರಿಶ್ರಮದ ತೃಪ್ತ ಜೀವನಕ್ಕೆ ಮುಂದಾದಾಗ ಕಡಿಮೆ ಮಾಡಲು ಸಾಧ ಎಂಧು ಅವರು ಹೇಳಿದರು.

> **ಶಾಂತಿಯಿಂದ ಬದಲಾವಣೆ ಸಾಧ್ಯ**
>
> ಹಣ ದುಬ್ಬರದಿಂದ ದೇಶದ ಭವಿಷ್ಯ ಎತ್ತ ಕಡೆ ಸಾಗುತ್ತಿದೆ ಎಂಬ ಚಿಂತೆ ಇದೆ. ಯುವ ಸಮುದಾಯ ಪ್ರಾಮಾಣಿಕ ತನವಾದ ಜೀವನ ನಡೆಸಲು ಮುಂದಾದರೆ ಮಾತ್ರ ಇಂದು ಬದಲಾವಣೆಯನ್ನು ತರಬಹುದು. ಕ್ರಾಂತಿ ಮಾಡಿ ಗೆದ್ದವರಿಲ್ಲ, ಶಾಂತಿಯಿಂದ ಬದಲಾವಣೆ ಸಾಧ್ಯ.
>
> ● ಸಂತೋಷ್ ಹೆಗ್ಡೆ ಮಾಜಿ ಲೋಕಾಯುಕ್ತ ನ್ಯಾಯಮೂರ್ತಿ

ಬದಲಾವಣೆ ಮಾಡುವ ಕೆಲಸ ಮಾಡಬೇಕು

ಭವಿಷ್ಯದ ಯುವ ಸಮುದಾಯ ತೃಪ್ತ ಜೀವನ ಅಳವಡಿಸಿಕೊಳ್ಳಬೇಕು. ಸಮಾಜವನ್ನು ಈ ಮೂಲಕ ಬದಲಾವಣೆ ಮಾಡುವ ಕೆಲಸ ಮಾಡಬೇಕು ಎಂದು ಸಂತೋಷ್ ಹೆಗ್ಡೆ ಹೇಳಿದರು.

ತಜ್ಞರಾದ ಸರೋಜ್ ಮಾಯಾದೇವ್, ಡಾ. ಅನಿತಾ ರವಿಶಂಕರ್ ವಿಶೇಷ ಉಪನ್ಯಾಸ ನೀಡಿದರು.

ವೇದಿಕೆಯಲ್ಲಿ ಹಿಂದೂ ವಿದ್ಯಾದಾಯಿನಿ ಸಂಘದ ಅಧ್ಯಕ್ಷರಾದ ಜಯಚಂದ್ರ ಹತ್ವಾರ್ ಎಸ್., ಗೋವಿಂದ ದಾಸ ಕಾಲೇಜಿನ ಆಡಳಿತಾತ್ಮಕ ನಿರ್ದೇಶಕರಾದ ಪ್ರೊ. ರಮೇಶ್ ಭಟ್ ಎಸ್. ಜಿ., ಗ್ರಾಹಕ ವೇದಿಕೆಯ ದಯಾ ಸುವರ್ಣ, ಮಹಿಳಾ ವೇದಿಕೆಯ ಡಾ. ಶ್ರೀದೇವಿ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಕಾಲೇಜಿನ ಪ್ರಾಂಶುಪಾಲ ಪ್ರೊ.ಹರೀಶ್ ಆಚಾರ್ಯ ಸ್ವಾಗತಿಸಿ, ಉಪ ಪ್ರಾಂಶುಪಾಲರಾದ ಪ್ರೊ. ನೀಲಪ್ಪ ವಿ., ವಂದಿಸಿದರು. ಕಾರ್ಯಕ್ರಮ ಸಂಯೋಜಕ ಡಾ. ಆಶಾಲತಾ ಪ್ರಾಸ್ತಾವಿಕವಾಗಿ ಮಾತನಾಡಿದರು. ಶರ್ಮಿತಾ ಯು., ಜ್ಯೋತಿ ಕಾಮತ್ ಕಾರ್ಯಕ್ರಮ ನಿರೂಪಿಸಿದರು.

ಸ್ಥಗಿತಗೊಂಡಿದ್ದ ಪೌತಿ ಖಾತೆ ಆಂದೋಲನ ಪುನರಾರಂಭಿಸಲು ಕೊಡಗು ಬಿಜೆಪಿ ಒತ್ತಾಯ



ಮಡಿಕೇರಿ : ಹಿಂದಿನ ಬಿಜೆಪಿ ಸರಕಾರ ಜಾರಿ ಮಾಡಿದ ಪೌತಿ ಖಾತೆ ಆಂದೋಲನ ಇದೀಗ ಸ್ಥಗಿತಗೊಂಡಿದ್ದು, ಅದನ್ನು ಪುನರಾರಂಭಗೊಳಿಸಬೇಕೆಂದು ಕೊಡಗು ಜಿಲ್ಲಾ ಬಿಜೆಪಿ ಜಿಲ್ಲಾಡಳಿತವನ್ನು ಒತ್ತಾಯಿಸಿದೆ.

ಜಿಲ್ಲಾಧಿಕಾರಿಗೆ ಮನವಿ

ಮಾಜಿ ಶಾಸಕ ಕೆ.ಜಿ. ಬೋಪಯ್ಯ ಹಾಗೂ ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ನೇತೃತ್ವದ ನಿಯೋಗ ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ್ ಅವರನ್ನು ಭೇಟಿಯಾಗಿ ಈ ಕುರಿತು ಮನವಿ ಸಲ್ಲಿಸಿದೆ. ಈ ಹಿಂದೆ ಬಿಜೆಪಿ ಸರ್ಕಾರ ಆಡಳಿತದಲ್ಲಿದ್ದ ಸಂದರ್ಭ ವಿಶೇಷವಾಗಿ ಕೊಡಗಿನ ಜನತೆಯ ಹಿತದೃಷ್ಟಿಯಿಂದ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿ ಅದರಂತೆ ರೈತಾಪಿ ವರ್ಗದವರ ಸಮಸ್ಯೆ ಪರಿಹರಿಸಿ ಪೌತಿ/ವಾರಸ ಸ್ವರೂಪದ ಮ್ಯೂಟೇಶನ್ ಪ್ರಕ್ರಿಯೆ ಸರಳೀಕರಣಗೊಳಿಸಿ ಪೌತಿ ಖಾತೆ ಆಂದೋಲನಕ್ಕೆ ಚಾಲನೆ ನೀಡಲಾಗಿತ್ತು. ಈ ಸಂದರ್ಭ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಮಹೇಶ್ ಜೈನಿ, ನಗರ ಒಬಿಸಿ ಮೋರ್ಚಾ ಅಧ್ಯಕ್ಷ ಗಜೇಂದ್ರ, ಸಚಿನ್ ಮತ್ತಿತರರು ಹಾಜರಿದ್ದರು.

> **ಸಮಸ್ಯೆಯಾಗುತ್ತಿದೆ**
>
> ಆಂದೋಲನದ ಮೂಲಕ ಕೊಡಗಿನ ರೈತರು ಪ್ರಯೋಜನ ಪಡೆದುಕೊಂಡು ದಾಖಲೆ ಪಡೆದು ಕೊಂಡಿದ್ದರು. ಆದರೆ, ಇದೀಗ ಈ ಆಂದೋಲನ ಸ್ಥಗಿತಗೊಳಿಸಲಾಗಿದೆ. ಇದರಿಂದ ಶೂನ್ಯ ಬಡ್ಡಿ ದರದಲ್ಲಿ ರೈತರು ಸಾಲ ಪಡೆಯಲು, ಸರಕಾರದ ಯೋಜನೆ ಪಡೆದು ಕೊಳ್ಳಲು ಸಮಸ್ಯೆ ಉಂಟಾಗಿದೆ. ಈ ಹಿನ್ನೆಲೆ ತಕ್ಷಣ ಆಂದೋಲನ ಪುನರ್ ಆರಂಭಗೊಳಿಸಬೇಕು ಎಂದು ಪ್ರಮುಖರು ಒತ್ತಾಯಿಸಿದರು.

ದೈವಾರಾಧನೆಯೇ ಈ ಮಣ್ಣಿನ ಮೂಲ ಸತ್ವ ಸಂಧಿಗಳ ಸಮೂಹ ಪಾಡ್ದನ: ಮನ್ಮಥ ಶೆಟ್ಟಿ



ಕಟೀಲು : ನಮ್ಮ ಮೂಲ ಸತ್ವವನ್ನು ಮರೆತು ಆಧುನಿಕ ಜಗತ್ತಿಗೆ ಮುಖ ಮಾಡಿರುವ ನಮಗೆ ದೈವಾರಾಧನೆಯ ಉದ್ದೇಶ ಮತ್ತು ಅದರ ವಿವಿಧ ಆಯಾಮಗಳ ಬಗೆಗೆ ಜ್ಞಾನವಿಲ್ಲ, ಅವುಗಳ ತಿಳಿಯುವ ಪ್ರಯತ್ನ ಆಗಬೇಕೆಂದು ದ.ಕ. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಮನ್ಮಥ ಶೆಟ್ಟಿ ಪುತ್ತೂರು ನುಡಿದರು.

ಅವರು ಶುಕ್ರವಾರ ಮಂಗಳೂರು ವಿವಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತುಳು ಪೀಠ ಮತ್ತು ಕಟೀಲಿನ ಶ್ರೀ ದುರ್ಗಾಪರಮೇಶ್ವರೀ ದೇವಳ ಪ್ರಥಮ ದರ್ಜೆ ಕಾಲೇಜು ಸಹಯೋಗದೊಂದಿಗೆ ಕಾಲೇಜಿನ ಸಭಾಂಗಣದಲ್ಲಿ ನಡೆದ ಪ್ರಚಾರೋಪನ್ಯಾಸ ಮಾಲಿಕೆಯ 'ದೈವಾರಾಧನೆ: ದೈವ ಕಲತ್ತ ಬೇತೆ ಬೇತೆ ಮರ್ಗಿಲ್– ಗೇನದ ತುಲಿಪು– ಪಾರ್ದನ' ಉಪನ್ಯಾಸ ಮಾಲಿಕೆಯಲ್ಲಿ ಮಾತನಾಡಿದರು. ದೈವಾರಾಧನೆಯೇ ಈ ಮಣ್ಣಿನ ಮೂಲ ಸತ್ವ ಮತ್ತು ತತ್ವ ಸಂಧಿಗಳ ಸಮೂಹವೇ ಪಾಡ್ದನ. ಅದು ಒಂದು ನಿಖರವಾದ ಮಾಹಿತಿ. ಒಂದು ದೈವದ ಹುಟ್ಟು- ಕಟ್ಟು- ಆಯ –ಬೀರ ಇವುಗಳು ಸಂಧಿಗಳಲ್ಲಿ ವ್ಯಕ್ತವಾಗುವ ವಿವಿಧ ಆಯಾಮಗಳು. ಇದರ ಆರಂಭ ಮತ್ತು ಅಂತ್ಯ, ಉದ್ದೇಶ ಒಂದೇ ಆಗಿದ್ದು, ಅದರ ಮಧ್ಯೆ ಪ್ರಾದೇಶಿಕ ವ್ಯತ್ಯಾಸಗಳನ್ನು ಕಾಣಬಹುದು. ಪಾಡ್ದನಗಳು ತುಳುನಾಡಿನ ಪುರಾಣ ಪಠ್ಯಗಳಾಗಿವೆ16,400 ಸಾಲುಗಳಿರುವ ಸಿರಿ ಪಾರ್ದನ ಹಾಡಿದ ಮಾಚಾರು ಗೋಪಾಲ ನಾಯ್ಕರನ್ನು ನೆನಪಿಸುತ್ತಾ, ವಿದೇಶಿ ಯರು ಬಂದು ಪಾರ್ದನದ ಬಗೆಗಿನ ಅಧ್ಯಯನ ನಡೆಸಿರುವುದು ನಮಗೆ ಹೆಮ್ಮೆ. ಪಾರ್ದನ ಪಠ್ಯಗಳನ್ನು ಶೈಕ್ಷಣಿಕ ನೆಲೆಯಲ್ಲಿ ಅಧ್ಯಯನ ನಡೆಸಬೇಕು ಎಂದರು.

ಕಟೀಲು ಕಾಲೇಜಿನ ಪ್ರಾಂಶುಪಾಲ ಡಾ. ವಿಜಯ ವಿ. ಮಾತನಾಡಿದರು. ಉಪನ್ಯಾಸಕಿ ಹರಿಣಾಕ್ಷಿ, ತುಳು ಪೀಠದ ಸಹಾಯಕ ಪ್ರಸಾದ್ ಅಂಚನ್ , ಪೃಥ್ವಿ ಎಚ್. ಪೂಜಾರಿ , ಬಿಂದಿಯಾ ಉಪಸ್ಥಿತರಿದ್ದರು.

ಕಡಬದಲ್ಲಿ ಸಂತ ಸೇವಾಲಾಲ್, ಶಿವಾಜಿ ಮಹಾರಾಜ್ ಜಯಂತಿ



ಕಡಬ: ಸಂತ ಸೇವಾಲಾಲ್ ಜಯಂತಿ ಹಾಗೂ ಛತ್ರಪತಿ ಶಿವಾಜಿ ಮಹಾರಾಜ್ ಅವರು ತಾವು ಜೀವಿಸಿದ ಕಾಲಾವಧಿಯಲ್ಲಿ ಸಮಾಜಕ್ಕೆ ನೀಡಿದ ಕೊಡುಗೆಗಳು ಮತ್ತು ಸಂದೇಶಗಳು ಇಂದಿಗೂ ಪ್ರಸ್ತುತವಾಗಿದೆ ಎಂದು ಕಡಬ ತಹಶೀಲ್ದಾರ್ ಪ್ರಭಾಕರ ಖಜೂರೆ ಹೇಳಿದರು.

ಅವರು ಕಡಬ ತಾಲೂಕು ಆಡಳಿತ ಸೌಧದ ಸಭಾಂಗಣದಲ್ಲಿ ಕಡಬ ತಾ. ರಾಷ್ಟ್ರೀಯ ಹಬ್ಬಗಳ ಆಚರಣ ಸಮಿತಿ ನೇತೃತ್ವ ಗುರುವಾರ ಜರಗಿದ ಸಂತ ಸೇವಾಲಾಲ್ ಜಯಂತಿ ಹಾಗೂ ಛತ್ರಪತಿ ಶಿವಾಜಿ ಮಹಾರಾಜ್ ಜಯಂತಿಕಾರ್ಯಕ್ರಮಕ್ಕೆಚಾಲನೆನೀಡಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಅತಿಥಿಯಾಗಿದ್ದ ಸುಳ್ಯ ವಿಧಾನಸಭಾ ಕ್ಷೇತ್ರದ ಅಕ್ರಮ ಸಕ್ರಮ ಸಮಿತಿಯ ಸದಸ್ಯ ಪಿ.ಪಿ. ವರ್ಗೀಸ್ ಮಾತನಾಡಿ, ಸಂತರು ಹಾಗೂ ದಾರ್ಶನಿಕರು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುವುದೇ ನಾವು ಅವರಿಗೆ ನೀಡುವ ನಿಜವಾದ ಗೌರವ ಎಂದರು.

ಶಿರಸ್ತೇದಾರ್ ಶಾಯಿದುಲ್ಲಾ ಖಾನ್, ತಾಲೂಕು ಕಚೇರಿಯ ಸಿಬ್ಬಂದಿಗಳು, ಸರ್ವೆ ಇಲಾಖೆ ಸಿಬ್ಬಂದಿಗಳು, ಉಪ ಖಜಾನೆ ಇಲಾಖೆ ಸಿಬ್ಬಂದಿ ಗಳು ಉಪಸ್ಥಿತರಿದ್ದರು. ಕಂದಾಯ ಇಲಾಖಾ ಸಿಬಂದಿ ಕೌಶಿಕ್ ಕುಳ ಸ್ವಾಗತಿಸಿ, ಉದಯ ಪಿ.ಆರ್. ನೆಟ್ಟಣ ವಂದಿಸಿದರು.

ಶಶಿಕಲಾ ಟೀಚರ್‌ಗೆ 'ಚುಟುಕು ಸಿರಿರತ್ನ' ಪ್ರಶಸ್ತಿ

ಕಾಸರಗೋಡು: ಕೇರಳ ರಾಜ್ಯ ಕನ್ನಡ ಚುಟುಕು ಸಾಹಿತ್ಯ ಪರಿಷತ್‌ನ ಚುಟುಕು ಸಿರಿರತ್ನ ಪ್ರಶಸ್ತಿಗೆ ಕವಯತ್ರಿ, ಸಂಘಟಕಿ ಶಶಿಕಲಾ ಟೀಚರ್ ಕುಂಬಳೆ ಆಯ್ಕೆಯಾಗಿದ್ದಾರೆ. ಫೆ.22ರಂದು ಕಾಸರಗೋಡು ನುಳ್ಳಿಪ್ಪಾಡಿಯ ಕನ್ನಡ ಭವನದ ಸಭಾಂಗಣದಲ್ಲಿ ಜರಗಲಿರುವ ಚುಟುಕು ಸಾಹಿತ್ಯ ಪರಿಷತ್‌ನ ವಾರ್ಷಿಕೋತ್ಸವದಲ್ಲಿ ಈ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಘಟಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿವೇಕಾನಂದ ಕಾಲೇಜಿನಲ್ಲಿ ಜೆಇಇ ಮೈನ್ಸ್ ಸಾಧಕ ವಿದ್ಯಾರ್ಥಿಗಳಿಗೆ ಸನ್ಮಾನ



ಪುತ್ತೂರು: ಕೇಂದ್ರ ಸರಕಾರದ ಎನ್‌ಟಿಎ ಪ್ರಾಕಾರ ನಡೆಸಿದ 2026ನೇ ಸಾಲಿನ ಜೆಇಇ ಮೈನ್ಸ್ ಪ್ರಥಮ ಹಂತದ ಪ್ರವೇಶಾತಿ ಪರೀಕ್ಷೆಯಲ್ಲಿ ಅತ್ಯುತ್ತಮ ಪರ್ಸೆಂಟೈಲ್ ಗಳಿಸುವುದರ ಮೂಲಕ ಉನ್ನತ ಸಾಧನೆ ಮೆರೆದ ವಿವೇಕಾನಂದ ಪದವಿ ಪೂರ್ವ ಕಾಲೇಜಿನ ಸಾಧಕ ವಿದ್ಯಾರ್ಥಿಗಳನ್ನು ಕಾಲೇಜಿನ ವತಿಯಿಂದ ಸನ್ಮಾನಿಸಲಾಯಿತು.

ಯಶಸ್ಸಿನ ಪಥದತ್ತ ಕೊಂಡೊಯ್ಯುತ್ತದೆ

ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷ ರವೀಂದ್ರ ಪಿ ವಿದ್ಯಾರ್ಥಿಗಳ ಸಾಧನೆಗೆ ಅಭಿನಂದನೆ ಸಲ್ಲಿಸಿ, ಸತತ ಪರಿಶ್ರಮ, ಶಿಸ್ತು ಹಾಗೂ ಶ್ರದ್ಧೆಯ ಕಲಿಕೆ ನಮ್ಮನ್ನು ಯಶಸ್ಸಿನ ಪಥದತ್ತ ಕೊಂಡೊಯ್ಯಬಲ್ಲದು. ವಿದ್ಯಾರ್ಥಿಗಳ ಪರಿಶ್ರಮದ ಜೊತೆ ಜೊತೆಗೆ ಗುರುಗಳ ನಿರಂತರ ಮಾರ್ಗದರ್ಶನ, ಪೋಷಕರ ಬೆಂಬಲ ಹಾಗೂ ಕಲಿಕೆಗೆ ಬೇಕಾದಂತಹ ಪೂರಕ ವಾತಾವರಣ ಇದ್ದರಷ್ಟೇ ಸಾಧನೆಯ ಹಾದಿ ಸುಗಮವಾಗುವುದು. ವಿದ್ಯಾರ್ಥಿಗಳು ಶೈಕ್ಷಣಿಕ ಸಾಧನೆಯ ಜೊತೆಗೆ ಉತ್ತಮ ಸಮಾಜದ ನಿರ್ಮಾಣದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕೆಂದು ಹೇಳಿದರು.

ಸನ್ಮಾನ

ಕಾರ್ಯಕ್ರಮದಲ್ಲಿ ಸಾಧಕ ವಿದ್ಯಾರ್ಥಿಗಳಿಗೆ ಅಭಿನಂದನೆಗಳನ್ನು ಸಲ್ಲಿಸಿ ಸನ್ಮಾನಗೈದು, ಸಿಹಿ ತಿಂಡಿ ಹಂಚಲಾಯಿತು.

ಈ ಸಂದರ್ಭ ಕಾಲೇಜಿನ ಆಡಳಿತ ಮಂಡಳಿಯ ನಿರ್ದೇಶಕ ಡಾ.ಕೆ. ಎನ್. ಸುಬ್ರಹ್ಮಣ್ಯ, ಕಾಲೇಜಿನ ಶೈಕ್ಷಣಿಕ ಸಂಯೋಜಕ ಶ್ರೀವತ್ಸ ಎನ್., ಮತ್ತಿತರರು ಉಪಸ್ಥಿತರಿದ್ದು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು. ರಸಾಯನ ಶಾಸ್ತ್ರ ವಿಭಾಗ ಮುಖ್ಯಸ್ಥೆ ದಯಾಮಣಿ ಟಿ.ಕೆ. ಕಾರ್ಯಕ್ರಮ ನಿರ್ವಹಿಸಿದರು.

ಸಿಐಎಸ್ಎಫ್ ಯೋಧರ 'ವಂದೇ ಮಾತರಂ' ಸೈಕಲ್ ಜಾಥಾ ಅಭಿಯಾನ



ಉಪ್ಪುಂದ: ಕರಾವಳಿ ಭಾಗದ ಕಡಲ ಮೂಲಕ ಆಕ್ರಮಿಸುವ ವಿಧ್ವಂಸಕರ ವಿರುದ್ಧ ಎಚ್ಚರಿಕೆ ಬಹುಮುಖ್ಯ. ಯುವ ಸಮುದಾಯ ಮಾದಕ ವಸ್ತುಗಳಿಂದ ದೂರವಿರಬೇಕು. ಮಹಿಳಾ ಸಬಲೀಕರಣದ ಜೊತೆಗೆ ದೇಶದ ಭದ್ರತೆ ವಿಚಾರದಲ್ಲಿ ಕರಾವಳಿಗರ ಪಾತ್ರ ಬಹು ದೊಡ್ಡದು ಎಂದು ಸಿ.ಐ.ಎಸ್‌ಎಫ್ ಡೆಪ್ಯೂಟಿ ಕಮಾಂಡರ್ ಸಂದೀಪ್ ಚಕ್ರವರ್ತಿ ಹೇಳಿದ್ದಾರೆ.

ಅವರು ಬುಧವಾರ ಶಿರೂರು ಸಮೀಪದ ಗೋರ್ಟೆ ಎಂ.ಎಂ. ರೇಸಾರ್ಟ್‌ನಲ್ಲಿ ನಡೆದ ಸಿ.ಐ.ಎಸ್‌ಎಫ್ ಯೋಧರ ವಂದೇ ಮಾತರಂ ಸೈಕಲ್ ಜಾಥಾ ಅಭಿಯಾನ ಉದ್ದೇಶಿಸಿ ಮಾತನಾಡಿ, ದೇಶದ ಭದ್ರತೆ ವಿಷಯದಲ್ಲಿ ಸಿ.ಐ.ಎಸ್‌ಎಫ್ ಯೋಧರು ಬಹುಮುಖ್ಯ ಸೇವೆ ನೀಡುತ್ತಿದೆ. ಜ.28ರಿಂದ ಈ ಅಭಿಯಾನ ಆರಂಭವಾಗಿದ್ದು, ಫೆ.22ಕ್ಕೆ ಕೊಚ್ಚಿ ತಲುಪಲಿದೆ. ದಾರಿ ಉದ್ದಕ್ಕೂ ವಿವಿಧ ಕಾರ್ಯಕ್ರಮಗಳ ಮೂಲಕ ಜಾಗೃತಿ ಮೂಡಿಸುವ ಮೂಲ ಉದ್ದೇಶ ಹೊಂದಿದೆ ಎಂದು ಅವರು ಹೇಳಿದರು.

ವಿವಿಧ ಸಂಘ ಸಂಸ್ಥೆ, ಇಲಾಖೆ, ಶಾಲಾ ವಿದ್ಯಾರ್ಥಿಗಳು, ಗ್ರಾ.ಪಂ.ಸದಸ್ಯರು, ಗ್ರಾಮಸ್ಥರು ಸಿ.ಐ.ಎಸ್‌ಎಫ್ ಯೋಧರನ್ನು ಅದ್ದೂರಿಯಾಗಿ ಸ್ವಾಗತಿಸಿದರು. ಎಂ. ಎಂ. ಫೌಂಡೇಶನ್‌ನ ಮಣೆಗಾರ್ ಜಿಪ್ರಿ ಅಧ್ಯಕ್ಷತೆ ವಹಿಸಿದ್ದರು. ಭಟ್ಕಳ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್‌ನ ನಿರ್ದೇಶಕ ಬೀನಾ ವೈದ್ಯ, ಡೆಪ್ಯೂಟಿ ಕಮಾಂಡರ್ ಕಮಲಪತಿ ಮುನಿರಾಜು, ಎಸ್.ಕೆ. ನಾಯಕ್, ಬೈಂದೂರು ವೃತ್ತ ನಿರೀಕ್ಷಕ ಶಿವಕುಮಾರ್, ಠಾಣಾಧಿಕಾರಿ ಸುನೀಲ್ ಕುಮಾರ್ ಮತ್ತಿತರರು ಈ ಸಂದರ್ಭ ಇದ್ದರು.

ಸಿ.ಐ.ಎಸ್‌ಎಫ್ ಹೆಡ್ ಕಾನ್ಸ್‌ಟೇಬಲ್ ಶಿಲ್ಪೇಶ್ ಸ್ವಾಗತಿಸಿ, ಪತ್ರಕರ್ತ ಅರುಣ್ ಕುಮಾರ್ ಶಿರೂರು ವಂದಿಸಿದರು.

ಬೆಂಕಿಗಾಹುತಿಯಾದ ಮನೆಯಲ್ಲಿ ಶ್ರಮ ಸೇವೆಗೈದ ಕಲ್ಲಡ್ಕ 'ಶೌರ್ಯ' ತಂಡ



ಬಂಟ್ವಾಳ: ಇತ್ತೀಚೆಗೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದಾಗಿ ಬೆಂಕಿಗಾಹುತಿಯಾದ ಬಂಟ್ವಾಳ ತಾಲೂಕಿನ ವೀರಕಂಭ ಗ್ರಾಮದ ಗಣೇಶ್ ಕೋಡಿ ನಿವಾಸಿ ರಾಜೇಶ್ವರಿ ಅವರ ಮನೆಯನ್ನು ದುರಸ್ತಿಗೊಳಿಸುವ ನಿಮಿತ್ತ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಕಲ್ಲಡ್ಕ ವಲಯ ಶೌರ್ಯ ವಿಪತ್ತು ನಿರ್ವಹಣಾ ಘಟಕದ ಸದಸ್ಯರು ಶ್ರಮದಾನದ ಮೂಲಕ ಮೇಲ್ಛಾವಣಿ ತೆರವುಗೊಳಿಸುವ ಕಾರ್ಯ ನಡೆಸಲಾಯಿತು.

ಕಲ್ಲಡ್ಕ ವಲಯ ಶೌರ್ಯ ವಿಪತ್ತು ನಿರ್ವಹಣಾ ಘಟಕದ ಅಧ್ಯಕ್ಷ ಮಾಧವ ಸಾಲಿಯನ್ ಕುದ್ರೆಬೆಟ್ಟು, ಘಟಕ ಸಂಯೋಜಕಿ ವಿದ್ಯಾ, ಸದಸ್ಯರಾದ ಸತೀಶ್ ಕುದ್ರೆಬೆಟ್ಟು, ಧನಂಜಯ ಬೊಂಡಲ, ಚಿನ್ನಾ ಕಲ್ಲಡ್ಕ, ತುಳಸಿ ಕೊಳಕೀರು, ಸೌಮ್ಯ ಬೊಂಡಲ, ಮಧುರಾಜ್ ಗಣೇಶ್ ಕೋಡಿ, ಒಕ್ಕೂಟ ಸೇವಾ ಪ್ರತಿನಿಧಿ ವಿಜಯ ಮೊದಲಾದವರು ಭಾಗವಹಿಸಿದ್ದರು. ವೀರಕಂಬ ಗ್ರಾ.ಪಂ. ಮಾಜಿ ಅಧ್ಯಕ್ಷ ದಿನೇಶ್ ಪೂಜಾರಿ, ಕಲ್ಲಡ್ಕ ವಲಯ ಮೇಲ್ವಿಚಾರಕ ಸುಖರಾಜ್ ಭೇಟಿ ನೀಡಿ ಪ್ರೋತ್ಸಾಹಿಸಿದರು.

ಶಕ್ತಿನಗರ ಶ್ರೀ ಮುತ್ತಪ್ಪ ಕ್ಷೇತ್ರದ ನೂತನ ರಾಜಗೋಪುರ ಉದ್ಘಾಟನೆ

ಧರ್ಮ ಸಂಸ್ಕೃತಿ ಉಳಿಸಿ ಬೆಳೆಸಬೇಕು: ಒಡಿಯೂರು ಶ್ರೀ

ಮಂಗಳೂರು: ತುಳು ನಾಡಿನಲ್ಲಿ ಧರ್ಮ ಸತ್ಯ ಸಂಸ್ಕೃತಿ ಬಿಟ್ಟುನಡೆಯಲುಸಾಧ್ಯವಿಲ್ಲ.ನಮ್ಮಮೂಲ ಉದ್ದೇಶವೇ ಧರ್ಮ ಸಂಸ್ಕೃತಿಯನ್ನು ಉಳಿಸುವುದು. ಹಾಗಾಗಿ ಎಲ್ಲೆಡೆ ದೈವ ದೇವರ ಆರಾಧನೆ ನಡೆಯುತ್ತಿದೆ. ಭಕ್ತಿ ಶ್ರದ್ಧೆಯೊಂದಿಗೆ ಕ್ಷೇತ್ರದ ಬ್ರಹ್ಮಕಲಶದ ಮುಂದಿನ ಕಾರ್ಯಕ್ರಮಗಳು ಯಶಸ್ವಿಯಾಗಿ ನೆರವೇರಲಿ ಎಂದು ಶ್ರೀ ಕ್ಷೇತ್ರ ಒಡಿಯೂರು ಶ್ರೀ ಗುರುದೇವಾನಂದ ಸ್ವಾಮೀಜಿ ಹೇಳಿದ್ದಾರೆ.

ಅವರು ಶಕ್ತಿನಗರದ ಶ್ರೀ ಮುತ್ತಪ್ಪ ಕ್ಷೇತ್ರದಲ್ಲಿ ಪುನರ್ ಪ್ರತಿಷ್ಠೆ ಹಾಗೂ ಬ್ರಹ್ಮಕಲಶದ ಹಿನ್ನೆಲೆಯಲ್ಲಿ ನೂತನವಾಗಿ ನಿರ್ಮಿಸಿದ ರಾಜಗೋಪುರವನ್ನು ಬುಧವಾರ ಉದ್ಘಾಟಿಸಿ ಆಶೀರ್ವಚನಗೈದರು. ಮುತ್ತಪ್ಪನ್ ಎಂದಾಗ ಕೇರಳ ನೆನಪಾಗುತ್ತದೆ. ಕೇರಳದ ಜನರಿಗೆ ಭಾರೀ ನಂಬಿಕೆ ಇರುವ ದೈವ.



ಇಂದು ಕೇರಳ ಮಾತ್ರವಲ್ಲದೆ ಮಂಗಳೂರು, ಕೊಡಗು ಭಾಗದಲ್ಲಿ ಮುತ್ತಪ್ಪನ್ ಆರಾಧನೆ ನಡೆಯುತ್ತಿದೆ. ಕೇರಳೀಯ ಪದ್ದತಿಯ ಜತೆಗೆ ತೌಳವ ಶೈಲಿ ಸೇರ್ಪಡೆಯೊಂದಿಗೆ ಕ್ಷೇತ್ರ ಸುಂದರವಾಗಿ ನಿರ್ಮಾಣವಾಗಿದೆ. ಶ್ರೇಯಸ್ಸಿನ ಕೀಲಿ ಕೈ ಆಧ್ಯಾತ್ಮಿಕತೆ. ಪ್ರತಿಯೊಬ್ಬರಲ್ಲೂ ಇದು ಇರಬೇಕಾದ ಅಗತ್ಯವಿದೆ ಎಂದರು.

ಉಗ್ರಾಣವನ್ನು ಉದ್ಯಮಿ ಎ.ಜೆ.ಶೇಖರ್ ಉದ್ಘಾಟಿಸಿದರು. ಕ್ಷೇತ್ರದ ಆಡಳಿತ ಮೊಕ್ತೇಸರ ಸತೀಶ್ ಕಾಮತ್ ಅವರನ್ನು ಸನ್ಮಾನಿಸಲಾಯಿತು, ಪಿ.ಎಚ್.ಡಿ ಪದವಿ ಪಡೆದ ಪ್ರಜಿತ ಅವರನ್ನು ಗೌರವಿಸಲಾಯಿತು.

ಬ್ರಹ್ಮಕಲಶ ಸಮಿತಿ ಗೌರವಾಧ್ಯಕ್ಷ ಶಾಸಕ ವೇದವ್ಯಾಸ ಕಾಮತ್ , ವಿಧಾನ ಪರಿಷತ್ ಮಾಜಿ ಸದಸ್ಯ ನ್ಯಾಯವಾದಿ ಮೋನಪ್ಪ ಭಂಡಾರಿ, ವಿದ್ಯಾರತ್ನ ಶಿಕ್ಷಣ ಸಂಸ್ಥೆ ಅಧ್ಯಕ್ಷ ರವೀಂದ್ರ ಶೆಟ್ಟಿ ಉಳಿದೊಟ್ಟು, ಜ್ಞಾನರತ್ನ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಭಾಸ್ಕರ್ ದೇವಸ್ಯ , ಉದ್ಯಮಿ ಪವನ್ ದೇವಾಂಗ, ಮಂಗಳೂರು ವಕೀಲರ ಸಂಘದ ಅಧ್ಯಕ್ಷ ಎಚ್. ವಿ. ರಾಘವೇಂದ್ರ, ಪ್ರಮುಖರಾದ ಪದವು ಮೇಗಿನ ಮನೆ ಉಮೇಶ್ ರೈ, ಉದ್ಯಮಿ ಅಶ್ವತ್ಥಾಮ ಹೆಗ್ಡೆ , ಈಶ್ವರ್ ಪ್ರಸಾದ್, ಸತೀಶ್ ಪೂಜಾರಿ, ಗಣೇಶ್ ಮಹಾಕಾಳಿ, ಹರೀಶ್ ರೈ, ಪ್ರದೀಪ್ ಕುಮಾರ್, ಸುಂದರ ಕುಲಾಲ್, ಮಾಜಿ ಕಾರ್ಪೊರೇಟರ್ ವನಿತಾ ಪ್ರಸಾದ್ ಉಪಸ್ಥಿತರಿದ್ದರು. ಬ್ರಹ್ಮಕಲಶ ಸಮಿತಿ ಅಧ್ಯಕ್ಷ ಮಾಜಿ ಕಾರ್ಪೊರೇಟರ್ ಕಿಶೋರ್ ಕೊಟ್ಟಾರಿ ಸ್ವಾಗತಿಸಿ, ಸುಮನ ಶರಣ್ ವಂದಿಸಿದರು. ಪ್ರವೀಣ್ ಕುಂಪಲ ನಿರೂಪಿಸಿದರು.

'ಸೋಲಾರ್ ಬಳಕೆ' ಮಾಹಿತಿ ಶಿಬಿರ

ಮಂಗಳೂರು: ವಿಜಯ ಗ್ರಾಮೀಣ ಅಭಿವೃದ್ಧಿ ಸಮಿತಿ, ಅಡ್ಯಾರ್ ಇವರ ಆಶ್ರಯದೊಂದಿಗೆ, ಸರ್ವಶಕ್ತಿ ಮಹಿಳಾ ಮಂಡಳಿ ಪಡೀಲ್, ಇವರ ಸಹಯೋಗದಲ್ಲಿ 'ಸೋಲಾರ್ ಬಳಕೆ ಮಾಹಿತಿ ಶಿಬಿರ' ಇತ್ತೀಚಿಗೆ ಶ್ರೀ ಮಹಾದೇವಿ ಭಜನಾ ಮಂದಿರ ಅಳಪೆ ಕರ್ಮಾರ್ ಇದರ ಸಭಾಂಗಣದಲ್ಲಿ ನಡೆಯಿತು.

ಮಂಗಳೂರು VRDF ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಜ್ಯೋತಿರಾಜ್ ಅಧ್ಯಕ್ಷತೆ ವಹಿಸಿದ್ದರು.

ಮಾಹಿತಿ

ಸಂಪನ್ಮೂಲ ವ್ಯಕ್ತಿಯಾಗಿದ್ದ ಮಂಗಳೂರು ಸೆಲ್ಕೋ ಸೋಲಾರ್ ಮೆನೇಜರ್ ರವೀನ ಬಂಗೇರ ಸೋಲಾರ್ ಬಳಕೆ ಮಾಹಿತಿ ನೀಡಿದರು.



ಮುಖ್ಯ ಅತಿಥಿಗಳಾಗಿ ಕಣ್ಣೂರು ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಅಧ್ಯಕ್ಷರಾದ ಮೋಹನ್ ಪಡೀಲ್, ಮನಪಾ ನಿ.ಪೂ. ಸದಸ್ಯೆ ಶೋಭಾ ಪೂಜಾರಿ, ಕರ್ಮಾರ್ ಶ್ರೀ ಮಹಾದೇವಿ ಭಜನಾ ಮಂದಿರ ಅಧ್ಯಕ್ಷ ಪ್ರಭಾಕರ್ ಅಮೀನ್, ಪಡೀಲ್ ಸರ್ವಶಕ್ತಿ ನೃತ್ಯ ಭಜನಾ ತಂಡದ ಸಂಚಾಲಕರಾದ ಉದಯ ಕೆ. ಪಿ. , ಪಡೀಲ್ ಸರ್ವಶಕ್ತಿ ಮಹಿಳಾ ಮಂಡಳಿ ಅಧ್ಯಕ್ಷೆ ತೇಜಾಕ್ಷಿ ಮೋಹನ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸುಪ್ರಿತಾ ಶೆಟ್ಟಿ ಪ್ರಸ್ತಾವಿಕವಾಗಿ ಮಾತನಾಡಿದರು. ಮಹಿಳಾ ಮಂಡಳಿಯ ಕಾರ್ಯದರ್ಶಿ ಶಕುಂತಲಾ ಎಸ್. ಗಟ್ಟಿ ಸ್ವಾಗತಿಸಿ, ಸಾವಿತ್ರಿ ಟೀಚರ್ ವಂದಿಸಿದರು.

ಸುತ್ತಮುತ್ತ

ಕೊಡವ ಅಕಾಡೆಮಿಯ ಗೌರವ ಪ್ರಶಸ್ತಿ ಪ್ರಕಟ

ಮಡಿಕೇರಿ: ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ 2026ನೇ ಸಾಲಿನ ಗೌರವ ಪ್ರಶಸ್ತಿಯನ್ನು ಪ್ರಕಟಿಸಲಾಗಿದ್ದು ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 15. ಮಂದಿಯನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಮಲ್ಲೇಂಗಡ ದಾದ ಬೆಳ್ಯಪ್ಪ (ಸಮಾಜ ಸೇವೆ ಕ್ಷೇತ್ರ), ಚೆಪ್ಪುಡಿರ ತಿಲಕ್ ಸುಬ್ಬಯ್ಯ (ಸಮಾಜ-ಸಂಸ್ಕೃತಿ ಕ್ಷೇತ್ರ), ತೀತಮಾಡ ಅರ್ಜುನ್ ದೇವಯ್ಯ (ವ್ಯಕ್ತಿ-ಸಮಾಜ ಕ್ಷೇತ್ರ), ಉದಿಯಂಡ ರೋಷನ್ ಸೋಮಣ್ಣ (ಸಾಹಿತ್ಯ-ಸಮಾಜ ಕ್ಷೇತ್ರ), ಚೆಯಿಯಂಡ ಮನು ಮಂದಣ್ಣ (ಸಾಹಿತ್ಯ -ಸಂಸ್ಕೃತಿ ಕ್ಷೇತ್ರ), ಚೊಟ್ಟೆಯಂಡ ಅಪ್ಪಾಜಿ (ಸಂಸ್ಕೃತಿ ಕ್ಷೇತ್ರ), ಕರಿಯರ ನಾಣಯ್ಯ (ಜಾನಪದ ಕ್ಷೇತ್ರ), ನರೆಕಲಿಯಂಡ ವಿಕ್ರಂ ಅಪ್ಪಯ್ಯ (ಕಲೆ-ಸಂಸ್ಕೃತಿ ಕ್ಷೇತ್ರ), ಚಮ್ಮಮಾಡ ವಾಣಿ ರಾಘವೇಂದ್ರ (ಸಾಹಿತ್ಯ ಕ್ಷೇತ್ರ), ಕುಡಿಯರ ಕೆ. ಚಿಣ್ಣಪ್ಪ (ಜಾನಪದ ಕ್ಷೇತ್ರ), ಸುಳ್ಳಿಮಾಡ ಗೌರಿ ನಂಜಪ್ಪ (ಜಾನಪದ ಕ್ಷೇತ್ರ), ಚೋಕಂಡ ಸಂಜು ಸುಬ್ಬಯ್ಯ (ಸಮಾಜ ಸೇವೆ ಕ್ಷೇತ್ರ), ಐಮಂಡ ರೂಪೇಶ್ ನಾಣಯ್ಯ (ಕಲಾ ಸೇವಾ ಕ್ಷೇತ್ರ), ಕಾಳೆಕುಟ್ಟಿರ ಭೋಜಣ್ಣ (ಸಂಸ್ಕೃತಿ ಕ್ಷೇತ್ರ), ಕೊರಕುಟ್ಟಿರ ಸರ ಚಂಗಪ್ಪ (ಸಮಾಜ ಸೇವೆ ಕ್ಷೇತ್ರ) ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಕೊಡಗಿನ ಗಡಿಭಾಗ ಕುಟ್ಟದಲ್ಲಿ ಫೆ.28ರಂದು ಗೌರವ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ ಎಂದು ಅಕಾಡೆಮಿಯ ರಿಜಿಸ್ಟ್ರಾರ್ ಚಿನ್ನಸ್ವಾಮಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪುತ್ತೂರು ಬಾರ್ ಅಸೋಸಿಯೇಶನ್‌ಗೆ1 ಕೋ. ರೂ. ಮಂಜೂರು

ಪುತ್ತೂರು: ಪುತ್ತೂರಿನ ಅನೆಮಜಲಿನಲ್ಲಿರುವ ಹೊಸ ನ್ಯಾಯಾಲಯ ಕಟ್ಟಡದಲ್ಲಿರುವ ಬಾರ್ ಅಸೋಸಿಯೇಶನ್‌ಗೆ ಲೋಕೋಪಯೋಗಿ ಇಲಾಖೆಯಿಂದ ರೂ.1 ಕೋಟಿ ಅನುದಾನ ಮಂಜೂರಾಗಿದೆ ಎಂದು ಶಾಸಕ ಅಶೋಕ್ ರೈ ತಿಳಿಸಿದ್ದಾರೆ. ಬಾರ್ ಅಸೋಸಿಯೇಶನ್ ಕಟ್ಟಡದ ಪೀಠೋಪಕರಣ, ಕಂಪ್ಯೂಟರ್ ಉಪಕರಣ ಮತ್ತು ಗ್ರಂಥಾಲಯಕ್ಕೆ ಸಲಕರಣೆ ಅಳವಡಿಸುವ ಕಾಮಗಾರಿಗೆ ಈ ಅನುದಾನ ಮಂಜೂರುಗೊಂಡಿದೆ. ಬಾರ್ ಅಸೋಸಿಯೇಶನ್ ಕಟ್ಟಡಕ್ಕೆ ಸಲಕರಣೆಗಳ ಖರೀದಿಗೆ ಅನುದಾನ ನೀಡುವಂತೆ ವಕೀಲರ ಸಂಘದ ವತಿಯಿಂದ ಶಾಸಕ ಅಶೋಕ್ ರೈ ಅವರಿಗೆ ಮನವಿ ಸಲ್ಲಿಸಲಾಗಿತ್ತು.



2 ಮಸೀದಿಗೆ ರೂ.55 ಲಕ್ಷ

ಬೆಂಗಳೂರಿನಲ್ಲಿ ವಸತಿ, ವಕ್ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಝಮೀರ್ ಅಹ್ಮದ್ ಅವರನ್ನು ಭೇಟಿಯಾದ ಶಾಸಕರು ಎರಡು ಮಸೀದಿಗೆ ಸಂಬಂಧಪಟ್ಟಂತೆ ಅಗತ್ಯ ಕಾಮಗಾರಿಗಳ ಬಗ್ಗೆ ಚರ್ಚೆ ನಡೆಸಿದ್ದಾರೆ. ಕರ್ವೇಲು ಬದ್ರಿಯಾ ಜುಮಾ ಮಸೀದಿಯಲ್ಲಿ ನೂತನ ವಿಸ್ತೃತ ಕಟ್ಟಡ ನಿರ್ಮಾಣಕ್ಕೆ ರೂ.35 ಲಕ್ಷ ಹಾಗೂ ಇಡ್ಕಿದು ಬದ್ರಿಯಾ ಜುಮಾ ಮಸೀದಿಯಲ್ಲಿ ಶೌಚಾಲಯ ಮತ್ತು ಶುದ್ಧ ಕುಡಿಯುವ ನೀರಿನ ವ್ಯವಸ್ಥೆಗೆ ರೂ.20 ಲಕ್ಷ ಅನುದಾನವನ್ನು ಸಚಿವರು ಮಂಜೂರುಗೊಳಿಸಿದ್ದಾರೆ ಎಂದು ಅಶೋಕ್ ರೈ ತಿಳಿಸಿದ್ದಾರೆ.

ಭಜನಾ ಮಂದಿರ ಟ್ರಸ್ಟ್: ಪದಾಧಿಕಾರಿಗಳ ಆಯ್ಕೆ

ಮಂಗಳೂರು: ಬಿಕರ್ನಕಟ್ಟೆ ಶ್ರೀ ಹರಿಹರ ಪಾಂಡುರಂಗ ವಿಠ್ಠಲ ಭಜನಾ ಮಂದಿರ ಟ್ರಸ್ಟ್ ಮಂದಿರದ 101ನೇ ವರ್ಷದ ಭಕ್ತರ ಸಭೆ ಇತ್ತೀಚೆಗೆ ನಡೆಯಿತು. ಪ್ರೊ. ಪಿ. ಜಯರಾಮ್ ಅಧ್ಯಕ್ಷತೆ ವಹಿಸಿದ್ದರು. ಈ ವೇಳೆ ಪದಾಧಿಕಾರಿಗಳ ಆಯ್ಕೆ ನಡೆಯಿತು. ಅಡ್ಯಾರ್‌ಗುತ್ತು ಮನೋಹರ್ ರೈ ಅವರನ್ನು ಅಧ್ಯಕ್ಷರಾಗಿ ನೇಮಕ ಮಾಡಲಾಯಿತು.



ಗೌರವಾಧ್ಯಕ್ಷರಾಗಿ ಭರತೇಶ್ ಕುಮಾರ್ ಆಯ್ಕೆಯಾದರು. ಉಪಾಧ್ಯಕ್ಷರಾಗಿ ಡಾ. ಚಂದ್ರಶೇಖರ್, ಶರತ್ ಬಿಕರ್ನಕಟ್ಟೆ, ಉಮಾವತಿ, ಕಾರ್ಯದರ್ಶಿಯಾಗಿ ಜಗದೀಶ್ ಆಚಾರ್ಯ, ಜತೆ ಕಾರ್ಯದರ್ಶಿಯಾಗಿ ಅವಿನಾಶ್, ಲೋಲಾಕ್ಷ ಆಚಾರ್ಯ, ಕೋಶಾಧಿಕಾರಿಯಾಗಿ ಸುಚಿತ್ರ ಪ್ರಶಾಂತ್, ಭಜನಾ ಸಂಚಾಲಕರಾಗಿ ವಕೀಲ ಶ್ರೇಯಸ್ ಆಯ್ಕೆಯಾದರು. ಇತರ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು. ನಂತರ ಭಕ್ತಾಭಿಮಾನಿಗಳ ಉಪಸ್ಥಿತಿಯಲ್ಲಿ ಮಂದಿರದ ಸದಸ್ಯರಿಂದ ಭಕ್ತ ರಾಮಜಾನ ನಡೆಯಿತು. ಡಾ. ಚಂದ್ರಶೇಖರ ಸ್ವಾಗತಿಸಿದರು. ರಾಜೇಶ್ ಶೆಟ್ಟಿ ಶಕ್ತಿನಗರ ವಂದಿಸಿದರು. ಶ್ರೇಯಸ್ ನಿರೂಪಿಸಿದರು.

ಫೆ.23ರಿಂದ ಮಾ.1ರತನಕ ವಿವಿಧ ಕಾರ್ಯಕ್ರಮ | ಫೆ.28ರಂದು ವಿಷ್ಣುಮೂರ್ತಿ ದೈವದ ಕೋಲ

ಬ್ರಹ್ಮಕಲಶೋತ್ಸವ ಸಂಭ್ರಮದಲ್ಲಿ ಚೀರುಂಬಾ ಭಗವತೀ ಕ್ಷೇತ್ರ

ಕಾಸರಗೋಡು: ತೆರುವತ್ತ್ ಶ್ರೀ ಚೀರುಂಬಾ ಭಗವತೀ ಕ್ಷೇತ್ರದ ಬ್ರಹ್ಮಕಲಶೋತ್ಸವ ಹಾಗೂ ನಡಾವಳಿ ಮಹೋತ್ಸವವು ಫೆ.23ರಿಂದ ಮಾರ್ಚ್ 1ರ ತನಕ ಶ್ರೀ ಕ್ಷೇತ್ರದ ತಂತ್ರಿವರ್ಯ ಬ್ರಹ್ಮಶ್ರೀ ವಿಷ್ಣುಪ್ರಕಾಶ್ ತಂತ್ರಿ ಕಾವುಮಠ ಅವರ ಉಪಸ್ಥಿತಿಯಲ್ಲಿ ಜರಗಲಿದೆ ಎಂದು ಬ್ರಹ್ಮಕಲಶೋತ್ಸವ ಮತ್ತು ನಡಾವಳಿ ಮಹೋತ್ಸವ ಸಮಿತಿ ಚೆಯರ್‌ಮೆನ್, ವಕೀಲ ನಾರಾಯಣ ಕೆ. ವಡಕ್ಕೇವೀಡ್ ಗುರುವಾರ ಪ್ರೆಸ್‌ಕ್ಲಬ್‌ನಲ್ಲಿ ಜರಗಿದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಫೆ.20ಕ್ಕೆ ಬೆಳಗ್ಗೆ 9.20ರಿಂದ 10ರ ಮಧ್ಯೆ ನಡಾವಳಿ ಉತ್ಸವದ ಗೊನೆ, ಕಡಿಯುವ ಮುಹೂರ್ತ, ರಾತ್ರಿ 8ಕ್ಕೆ ಪೂಜೆ, ಪ್ರಸಾದ ವಿತರಣೆ ನಡೆಯಲಿದೆ. ಫೆ.23ಕ್ಕೆ ಸಂಜೆ 5ಕ್ಕೆ ಕಾಸರಗೋಡು ಶ್ರೀ ಮಲ್ಲಿಕಾರ್ಜುನ ಕ್ಷೇತ್ರದಿಂದ ಶ್ರೀ ಚೀರುಂಬಾ ಭಗವತೀ ಕ್ಷೇತ್ರಕ್ಕೆ ಹಸಿರುವಾಣಿ ಹೊರೆಕಾಣಿಕೆ ಮೆರವಣಿಗೆ, ರಾತ್ರಿ 7ಕ್ಕೆ ಉಗ್ರಾಣ ತುಂಬಿಸುವುದು, 8 ಗಂಟೆಗೆ ಪೂಜೆ, 8.15ರಿಂದ ಅನ್ನಪ್ರಸಾದ ವಿತರಣೆ, 8.30ಕ್ಕೆ 'ರಿಥಂ ಕ್ಲಾಸ್ 2ಕೆ-26' (ಮೆಗಾ ಕಲಾ



ಕಾರ್ಯಕ್ರಮ) ನಡೆಯಲಿದೆ. ಫೆ.24ರಂದು ಬೆಳಗ್ಗೆ 8.30ಕ್ಕೆ ಚಂಡಿಕಾಹೋಮ ಪ್ರಾರಂಭ, 11.20ಕ್ಕೆ ಪೂರ್ಣಾಹುತಿ, ಮಧ್ಯಾಹ್ನ 12.30ಕ್ಕೆ ನಡೆಯುವ ಧಾರ್ಮಿಕ ಸಭೆಯಲ್ಲಿ ಕೊಂಡೆವೂರು ಶ್ರೀ ನಿತ್ಯಾನಂದ ಯೋಗಾಶ್ರಮ ಮಠದ ಶ್ರೀ ಯೋಗಾನಂದ ಸರಸ್ವತೀ ಸ್ವಾಮೀಜಿಯವರು ಆಶೀರ್ವಚನ ನೀಡುವರು.

ಬ್ರಹ್ಮಕಲಶೋತ್ಸವ ಮತ್ತು ನಡಾವಳಿ ಮಹೋತ್ಸವ ಸಮಿತಿ ಚೆಯರ್‌ಮೆನ್, ವಕೀಲ ನಾರಾಯಣ ಕೆ. ವಡಕ್ಕೇವೀಡ್ ಅಧ್ಯಕ್ಷತೆ ವಹಿಸುವರು. ಶ್ರೀ ಕ್ಷೇತ್ರದ ತಂತ್ರಿವರ್ಯರಾದ ಬ್ರಹ್ಮಶ್ರೀ ವಿಷ್ಣುಪ್ರಕಾಶ್ ತಂತ್ರಿ ಕಾವುಮಠ ಮತ್ತು ರಾಘವ ಮೂತ ಚೆಟ್ಟಿಯಾರ್ ಚ್ಚನ್ ದಿವ್ಯ ಉಪಸ್ಥಿತರಿರುವರು. ಮಧ್ಯಾಹ್ನ 12 ಗಂಟೆಗೆ ಮಹಾಪೂಜೆ, 1.30ರಿಂದ ಅನ್ನಪ್ರಸಾದ ವಿತರಣೆ, ರಾತ್ರಿ 7.30ಕ್ಕೆ ಸತ್ಸಂಗ, 8 ಗಂಟೆಗೆ ಪೂಜೆ, 8.15ರಿಂದ ಅನ್ನಪ್ರಸಾದ ವಿತರಣೆ, 8.30ರಿಂದ ನೃತ್ಯ ವೈಭವ ಜರಗಲಿದೆ. ಫೆ.25ಕ್ಕೆ ಬೆಳಗ್ಗೆ 8 ಗಂಟೆಗೆ ಪೂಜೆ, ಮಧ್ಯಾಹ್ನ 12 ಗಂಟೆಗೆ ಮಹಾಪೂಜೆ, 1 ಗಂಟೆಯಿಂದ ಅನ್ನಪ್ರಸಾದ ವಿತರಣೆ, ಸಂಜೆ 6 ಗಂಟೆಗೆ ಪಾಂಗೋಡು ಶ್ರೀ ದುರ್ಗಾಪರಮೇಶ್ವರಿ ಶ್ರೀ ಸುಬ್ರಹ್ಮಣ್ಯ ಸ್ವಾಮೀ ಕ್ಷೇತ್ರದಿಂದ ಹುಲ್ಪೆ ಮೆರವಣಿಗೆ, ರಾತ್ರಿ 8 ಗಂಟೆಗೆ ಮಹಾಪೂಜೆ ಬಳಿಕ ಅನ್ನಪ್ರಸಾದ ವಿತರಣೆ, 8.30ರಿಂದ ಗೋರ ಪೆರುಮ ನಾಡನ್ ಕಲಾಮೇಳ ನಡೆಯಲಿದೆ. ಫೆ.26ಕ್ಕೆ ಬೆಳಗ್ಗೆ 10.30ರಿಂದ ಸರ್ವೈಶ್ವರ್ಯ ವಿಳಕ್ಕ್‌ಪೂಜೆ, ಮಧ್ಯಾಹ್ನ 12ಕ್ಕೆ ಮಹಾಪೂಜೆ, 1 ಗಂಟೆಯಿಂದ ಅನ್ನಪ್ರಸಾದ ವಿತರಣೆ, ರಾತ್ರಿ 7ರಿಂದ ಕುಣಿತ ಭಜನೆ, 8 ಗಂಟೆಗೆ ಮಹಾಪೂಜೆ ಬಳಿಕ ಅನ್ನಸಂತರ್ಪಣೆ, 8.30ರಿಂದ ನೃತ್ಯನೃತ್ಯಾವಳಿ ಜರಗಲಿದೆ.

ಫೆ.27ಕ್ಕೆ ಬೆಳಗ್ಗೆ 6 ಗಂಟೆಗೆ ಮಹಾಗಣಪತಿ ಹೋಮ, ಕಲಶಪೂಜೆ, ಶ್ರೀ ಚೀರುಂಬಾ ಭಗವತಿ ಹಾಗೂ ಪರಿವಾರ ದೇವತೆಗಳ ಬ್ರಹ್ಮಕಲಶೋತ್ಸವ, 11 ಗಂಟೆಗೆ ಮಹಾಪೂಜೆ, ಸಾಮೂಹಿಕ ಪ್ರಾರ್ಥನೆ, ಪ್ರಸಾದ ವಿತರಣೆ, 11.30ರಿಂದ ತಚ್ಚಂಗಾಡು ಶ್ರೀ ಲಕ್ಷ್ಮೀಕಾಂತ ಅಗ್ಗಿತ್ತಾಯ ಮತ್ತು ಶಿಷ್ಯರಿಂದ ದೇವರ ನೃತ್ಯ ಬಲಿ ಉತ್ಸವ, ಮಧ್ಯಾಹ್ನ 1 ಗಂಟೆಗೆ ಅನ್ನಪ್ರಸಾದ ವಿತರಣೆ, ಸಂಜೆ 6ರಿಂದ ಲಲಿತ ಸಹಸನಾಮಾವಳಿ, ರಾತ್ರಿ 8ರಿಂದ ಅನ್ನಪ್ರಸಾದ ವಿತರಣೆ, 8.30ಕ್ಕೆ ಶ್ರೀ ಕ್ಷೇತ್ರದ ಭಂಡಾರ ಮನೆಯಿಂದ ವಾದ್ಯಘೋಷಗಳೊಂದಿಗೆ ಶ್ರೀ ಕ್ಷೇತ್ರಕ್ಕೆ ಭಂಡಾರ ಮೆರವಣಿಗೆ, ಹುಲ್ಪೆ ಮೆರವಣಿಗೆ, ರಾತ್ರಿ 9ರಿಂದ ದೇವರ ನೃತ್ಯ ಬಲಿ ಉತ್ಸವ ಜರಗಲಿದೆ.

ಫೆ.28ರಂದು ಮುಂಜಾನೆ 4.30ಕ್ಕೆ ದೇವರ ನೃತ್ಯ ಬಲಿ ಉತ್ಸವ, 5.30ರಿಂದ ಶ್ರೀ ವಿಷ್ಣುಮೂರ್ತಿ ದೈವದ ಕುಳಿಚ್ಚಾಟಂ, ಬೆಳಗ್ಗೆ 7.30ರಿಂದ ಎಣಚಾರ ಮತ್ತು ಚಪ್ಪರ ಮದುವೆ, 8.30ರಿಂದ ಪಿಲಿಚಾಮುಂಡಿ ದೈವದ ಕೋಲ, 10 ಗಂಟೆಗೆ ಬಬ್ಬರಿಯನ ಕೋಲ, 10.30ಕ್ಕೆ ಮಹಾಪೂಜೆ, 11ರಿಂದ ದೇವರ ನೃತ್ಯ ಬಲಿ ಉತ್ಸವ, ವಿಷ್ಣುಮೂರ್ತಿ ದೈವದ ಕೋಲ, ವಡಕ್ಕೇವಾದಿಲ್ ಒಪ್ಪಿಕ್ಕಲ್, ಮಧ್ಯಾಹ್ನ 1 ಗಂಟೆಗೆ ಅನ್ನಪ್ರಸಾದ ವಿತರಣೆ, ಸಂಜೆ 4ರಿಂದ ಗುಳಿಗನ ಕೋಲ, ರಾತ್ರಿ 8.30ಕ್ಕೆ ಭಂಡಾರ ಹಿಂತಿರುಗುವುದು. ಮಾರ್ಚ್ 1ರಂದು ಬೆಳಗ್ಗೆ 9.30ಕ್ಕೆ ನಾಗತಂಬಿಲ, 10 ಗಂಟೆಗೆ ಬ್ರಹ್ಮರಕ್ಷಸನಿಗೆ ವಿಶೇಷ ಪೂಜೆ, ಅಪರಾಹ್ನ 2ರಿಂದ ಗುಳಿಗನ ಕೋಲ, ರಾತ್ರಿ 8 ಗಂಟೆಗೆ ಮಹಾಪೂಜೆ, 9ರಿಂದ ಬಬ್ಬರಿಯನಿಗೆ ಅಡೆ ನೈವೇದ್ಯ ನಡೆಯುವುದು ಎಂದು ತಿಳಿಸಿದರು.

ಮಹೋತ್ಸವ ಸಮಿತಿ ಪ್ರಧಾನ ಸಂಚಾಲಕ ಕೆ.ಎನ್.ಕಮಲಾಕ್ಷನ್, ಕ್ಷೇತ್ರ ಅಧ್ಯಕ್ಷ ಕೆ.ಎಂ. ಹರೀಶ್‌ಕುಮಾರ್, ಕ್ಷೇತ್ರ ಪ್ರಧಾನ ಕಾರ್ಯದರ್ಶಿ ಟಿ.ವಿ.ವಿಜಯನ್, ಹಣಕಾಸು ಚೆಯರ್‌ಮೆನ್ ಟಿ.ಕೆ.ಉಲ್ಲಾಸ್‌ಕುಮಾರ್, ಪ್ರಚಾರ ಸಮಿತಿ ಚೆಯರ್ ಮೆನ್ ಕೆ.ಆರ್.ಬ್ರಿಜೇಶ್ ಉಪಸ್ಥಿತರಿದ್ದರು.

ಬಂಟ್ವಾಳ ತಾಲೂಕು ಆಡಳಿತದಿಂದ ಛತ್ರಪತಿ ಶಿವಾಜಿ ಜಯಂತಿ ಆಚರಣೆ



ಬಂಟ್ವಾಳ: ತಾಲೂಕು ಮಟ್ಟದ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಬಂಟ್ವಾಳ ತಾಲೂಕು ಆಡಳಿತ ಸೌಧದಲ್ಲಿ ಗುರುವಾರ ಛತ್ರಪತಿ ಶಿವಾಜಿ ಜಯಂತಿ ಆಚರಣೆ ನಡೆಯಿತು.

ಈ ಸಂದರ್ಭ ಮಾತನಾಡಿದ ಸಾಮಾಜಿಕ ಕಾರ್ಯಕರ್ತ ಪ್ರಣಾಮ್ ರಾಜ್ ಅಜ್ಜಿಬೆಟ್ಟು, ಶಿವಾಜಿ ಮಹಾರಾಜರು ನಮ್ಮ ದೇಶದ ಇತಿಹಾಸದ ಪರಂಪರೆಯನ್ನು ಜಾಗೃತಿಗೊಳಿಸುವಂತೆ ಮಾಡಿದವರು. ಶಿವಾಜಿ ತಾಯಿ ಮಕ್ಕಳನ್ನು ಹೇಗೆ ಬೆಳೆಸಬೇಕು ಎಂಬುದಕ್ಕೆ ಆದರ್ಶವಾಗಿದ್ದರೆ, ರಾಷ್ಟ್ರದ ರಕ್ಷಣೆ, ನಮ್ಮ ಸ್ವಾಭಿಮಾನದ ಸಂರಕ್ಷಣೆಯನ್ನು ಮಾಡುವುದಕ್ಕೆ ಮೊದಲ ಆದ್ಯತೆ ನೀಡಿದವರು ಛತ್ರಪತಿ ಶಿವಾಜಿ. ಸಮಾಜ ನಿರ್ಮಾಣ ಕಾರ್ಯವನ್ನು ಅವರು ಮಾಡಿದ್ದಾರೆ ಎಂದರು.

ಉಪ ತಹಸೀಲ್ದಾರ್ ನವೀನ್ ಕುಮಾರ್ ಬೆಂಜನಪದವು ಪ್ರಾಸ್ತಾವಿಕ ನುಡಿಗಳನ್ನಾಡಿ, ಜಯಂತಿ ಆಚರಣೆಯ ಮಹತ್ವವನ್ನು ವಿವರಿಸಿದರು. ಉಪ ತಹಸೀಲ್ದಾರ್ ಶಿವಪ್ರಸಾದ್, ಕಂದಾಯ ನಿರೀಕ್ಷಕ ವಿಜಯ್ ಆರ್, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿಯ ವಿಷಯ ನಿರ್ವಾಹಕ ವಿಷುಕುಮಾರ್ ಸೇರಿದಂತೆ ತಾಲೂಕು ಕಚೇರಿಯ ಸಿಬ್ಬಂದಿ ಹಾಜರಿದ್ದರು.

ಸುಳ್ಯದ ರಂಗಮನೆ ಬೆಳ್ಳಿ ಹಬ್ಬ ಆಚರಿಸುವಂತೆ ಆಗಲಿ: ಶಾಸಕಿ ಮುರುಳ್ಯ



ಸುಳ್ಯ: ನಿರಂತರ ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ 24 ವರ್ಷಗಳನ್ನು ಪೂರೈಸಿದ ರಂಗಮನೆ ಸಜ್ಜನ ಪ್ರೇಕ್ಷಕರನ್ನು ಸೃಷ್ಟಿಸಿದ ಅಪರೂಪದ ಕಲಾ ಕೇಂದ್ರವಾಗಿದೆ. ಯುವ ಜನತೆಯ ಪ್ರತಿಭೆಗೆ ವೇದಿಕೆಯಾಗುವ ಯುವಜನ ಮೇಳಗಳನ್ನು ಮತ್ತೆ ಆರಂಭಿಸಬೇಕೆಂಬ ಪ್ರಯತ್ನ ನಡೆಯುತ್ತಿದ್ದು ಅರ್ಥಪೂರ್ಣ ಕಾರ್ಯಕ್ರಮ ಮೂಲಕ ರಂಗಮನೆ ತನ್ನ ಬೆಳ್ಳಿ ಹಬ್ಬದ ಸಂಭ್ರಮವನ್ನು ಆಚರಿಸುವಂತೆ ಆಗಬೇಕು ಎಂದು ಸುಳ್ಯ ಕ್ಷೇತ್ರದ ಶಾಸಕಿ ಭಾಗೀರಥಿ ಮುರುಳ್ಯ ಹೇಳಿದರು.

ಸುಳ್ಯದ ರಂಗಮನೆ ಸಾಂಸ್ಕೃತಿಕ ಕಲಾ ಕೇಂದ್ರದ ಆಶ್ರಯದಲ್ಲಿ ನಡೆದ ರಂಗ ಸಂಭ್ರಮ ಇದರ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪ್ರಶಂಸನೀಯ ಕಾರ್ಯ

ಮುಖ್ಯ ಅತಿಥಿಯಾಗಿದ್ದ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ತಾರಾನಾಥ ಗಟ್ಟಿ ಕಾಪಿಕಾಡು ಮಾತನಾಡಿ, ಸಹೃದಯಿ ಪ್ರೇಕ್ಷಕ ವರ್ಗ ನಗರಗಳಲ್ಲಿ ಕಾಣಲು ಬಹಳ ಕಷ್ಟ. ಹೊಸ ಪೀಳಿಗೆಯಲ್ಲಿ ಸಾಂಸ್ಕೃತಿಕ ಆಸಕ್ತಿ ಬೆಳೆಸುವ ಜೀವನ್ ರಾಂ ಅವರ ಕೆಲಸ ಪ್ರಶಂಸನೀಯ. ರಂಗ ಮನೆಯ ಬೆಳ್ಳಿ ಹಬ್ಬಕ್ಕೆ ಅಕಾಡೆಮಿಯಿಂದ ಸಂಪೂರ್ಣ ಸಹಕಾರ ನೀಡಲಾಗುವುದು ಎಂದು ಹೇಳಿದರು. ಹಿರಿಯ ರಂಗಕರ್ಮಿ ಮಹಾಬಲೇಶ್ವರ ಹೆಬ್ಬಾರ್ ಮಾತನಾಡಿ, ಜೀವನ್ ರಾಂ ಅವರ ಕರ್ತವ್ಯ ಕ್ಷಮತೆಯನ್ನು ಕೊಂಡಾಡಿದರು.

ವನಜ ಸುಜನಾ ರಂಗಮನೆ ಪ್ರಶಸ್ತಿ

ಡಾ.ಜೀವನ್ ರಾಂ ಸುಳ್ಯ ಮಾತಾಪಿತೃಗಳಾದ ವನಜಾಕ್ಷಿ ಹಾಗೂ ಸುಜನಾ ಸುಳ್ಯ ಅವರ ನೆನಪಿನಲ್ಲಿ ನೀಡುವ 2025-26ನೇ ಸಾಲಿನ 'ವನಜ ಸುಜನಾ ರಂಗಮನೆ ಪ್ರಶಸ್ತಿ'ಯನ್ನು ಧರ್ಮಸ್ಥಳ ಮೇಳದ ಹಾಸ್ಯಗಾರ ಮಹೇಶ್ ಮಣಿಯಾಣಿ ದೊಡ್ಡತೋಟ, ಯುವ ಭರತನಾಟ್ಯ ಕಲಾವಿದೆ ಅದಿತಿ ಲಕ್ಷ್ಮೀ ಭಟ್, ನೀನಾಸಂ ಪದವೀಧರರಾದ ಯಶವಂತ್ ಬೆಳ್ತಂಗಡಿ ಹಾಗೂ ಸುನಿಲ್ ಕಲ್ಲಕೊಪ್ಪ ಅವರಿಗೆ ನೀಡಿ ಶಾಸಕರು ಸನ್ಮಾನಿಸಿದರು.

ಕೃಷ್ಣಮೂರ್ತಿ ಕೆ. ವಿನೋದಿನಿ ಎನ್. ರೈ, ಕುಮಾರ ಸುಬ್ರಹ್ಮಣ್ಯ, ವಾಮನ ಕೊಯಿಂಗಾಜೆ, ಕಮಲಾಕ್ಷ ಅಡ್ಕಾರ್ ಹಾಗೂ ಮನುಜ ನೇಹಿಗ ಸುಳ್ಯ ಉಪಸ್ಥಿತರಿದ್ದರು. ರಂಗ ಮನೆಯ ರೂವಾರಿ ಡಾ ಜೀವನ್ ರಾಂ ಸುಳ್ಯ ಸ್ವಾಗತಿಸಿ, ಡಾ. ವಿದ್ಯಾ ಶಾರದ ಕಾನಾವು ವಂದಿಸಿದರು. ಸುಶ್ಮಿತಾ ಕಡಪಳ ಕಾರ್ಯಕ್ರಮ ನಿರ್ವಹಿಸಿದರು.

ತಲ್ಲೂರು ಗ್ರಾಮ ಪಂಚಾಯತ್‌ನ ಗ್ರಂಥಾಲಯ ಕಟ್ಟಡಕ್ಕೆ ಗುದ್ದಲಿಪೂಜೆ



ಕುಂದಾಪುರ: ತಲ್ಲೂರು ಗ್ರಾಮ ಪಂಚಾಯತ್‌ನ ಗ್ರಂಥಾಲಯದ ಹೊಸ ಕಟ್ಟಡಕ್ಕೆ ಗುದ್ದಲಿಪೂಜೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು.

ಗ್ರಾ.ಪಂ. ಅಧ್ಯಕ್ಷ ಗಿರೀಶ್ ನಾಯ್ಕ್ ಅವರು ನೂತನ ಕಟ್ಟಡಕ್ಕೆ ಗುದ್ದಲಿ ಪೂಜೆ ನೆರವೇರಿಸಿದರು. ಜಿಲ್ಲಾ ಪಂಚಾಯತ್ ಅನುದಾನ 5 ಲಕ್ಷ ರೂ. ಹಾಗೂ ಪಂಚಾಯತ್‌ನ ಗಾಂಧಿ ಗ್ರಾಮ ಪುರಸ್ಕಾರದಲ್ಲಿ ಸಿಕ್ಕ ನಗದು ಬಹುಮಾನ 5 ಲಕ್ಷ ರೂ. ಅನುದಾನವನ್ನು ಈ ಹೊಸ ಕಟ್ಟಡಕ್ಕೆ ಬಳಸಿಕೊಳ್ಳಲಾಗುತ್ತಿದೆ.

ಈ ಸಂದರ್ಭದಲ್ಲಿ ಉಪಾಧ್ಯಕ್ಷೆ ಚಂದ್ರಮತಿ ಡಿ. ಹೆಗ್ಡೆ, ಸಾಮಾಜಿಕ ನ್ಯಾಯ ಸಮಿತಿ ಅಧ್ಯಕ್ಷ ಉದಯ ಕುಮಾರ್ ತಲ್ಲೂರು, ಪಿಡಿಒ ಗಣೇಶ್, ಸದಸ್ಯರಾದ ರಾಧಾಕೃಷ್ಣ ಶೇರಿಗಾರ್, ಕೃಷ್ಣ ಪೂಜಾರಿ, ಚಂದ್ರ ದೇವಾಡಿಗ, ಜುಡಿತ್ ಮೆಂಡೋನ್ಸಾ, ಗುತ್ತಿಗೆದಾರ ಮಂಜುನಾಥ, ಗ್ರಾಮ ಕರಣಿಕ ಶಿವರಾಯ, ಗ್ರಾ.ಪಂ. ಸಿಬಂದಿ ವರ್ಗದವರು, ಗ್ರಂಥಾಲಯ ಮೇಲ್ವಿಚಾರಕಿ ಮತ್ತಿತರರು ಉಪಸ್ಥಿತರಿದ್ದರು.



ಕೋಟ ಇಲ್ಲಿನ ಕೋಟತಟ್ಟು ಕೊರಗ ಕಾಲನಿಯ 8 ಕುಟುಂಬಳಿ ಮನೆ ನಿರ್ಮಾಣ ಕಾರ್ಯಕ್ಕೆ 1 ಲಕ್ಷ ದೇಣಿಗೆಯನ್ನು ಉದ್ಯಮಿ ಸುರೇಶ್ ಕಾಂಚನ್ ಬಾರಿಕೆರೆ ಸಮುದಾಯಕ್ಕೆ ಹಸ್ತಾಂತರಿಸಿದರು. ಗ್ರಾ.ಪಂ. ಅಧ್ಯಕ್ಷ ಸತೀಶ್ ಕುಂದರ್, ಉಪಾಧ್ಯಕ್ಷೆ ಸರಸ್ವತಿ, ಪಂಚಾಯತ್ ಅಭಿವೃದ್ಧಿ ಅಧಿಕಾರಿ ರವೀಂದ್ರರಾವ್, ಸದಸ್ಯ ಪ್ರಮೋದ್ ಹಂದೆ ಪ್ರಕಾಶ ಹಂದಟ್ಟು, ರಾಬರ್ಟ್ ರೊಡ್ರಿಗಸ್ ಜ್ಯೋತಿ, ಸೀತಾ ,ಬಾರಿಕೆರೆ ಯುವಕ ಮಂಡಲದ ಅಧ್ಯಕ್ಷ ರವಿ ಕುಂದರ್, ಕಾರ್ಯದರ್ಶಿ ಪವನ್ ಕುಂದರ್ ಹಾಗೂ ಪದಾಧಿಕಾರಿಗಳ, ಕಾಲನಿಯ ನಿವಾಸಿಗಳು ಉಪಸ್ಥಿತರಿದ್ದರು.

ತಿಂಪ್ಯೆ ಕಾಲನಿ ಬಳಿ ಅಭಿವೃದ್ಧಿ ಕಾಮಗಾರಿ: ಶಾಸಕ ವೇದವ್ಯಾಸ್‌ರಿಂದ ಗುದ್ದಲಿಪೂಜೆ



ಮಂಗಳೂರು: ಮಹಾನಗರ ಪಾಲಿಕೆ ವ್ಯಾಪ್ತಿಯ 21ನೇ ಪದವು ಪಶ್ಚಿಮ ವಾರ್ಡಿನ ಶ್ರೀಕೃಷ್ಣ ಭಜನಾ ಮಂದಿರ ಟ್ರಸ್ಟ್ ತಿಂಪ್ಯೆ ಕಾಲನಿ ಕಾನಡ್ಕ ಶಕ್ತಿನಗರ ಬಳಿ 10 ಲಕ್ಷ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಯ ಗುದ್ದಲಿ ಪೂಜೆಯನ್ನು ಶಾಸಕ ವೇದವ್ಯಾಸ ಕಾಮತ್ ನೆರವೇರಿಸಿದರು.

ನಂತರ ಮಾತನಾಡಿದ ಶಾಸಕರು, ಇಲ್ಲಿನ ಕೃಷ್ಣ ಭಜನಾ ಮಂದಿರವು ಹಲವಾರು ವರ್ಷಗಳಿಂದ ಅನೇಕ ಧಾರ್ಮಿಕ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದೆ. ಇಂತಹ ಪರಿಸರದಲ್ಲಿ ಅಭಿವೃದ್ಧಿಯಾಗಬೇಕು ಎಂಬ ಹಲವರ ಮನವಿ ಮೇರೆಗೆ ಈ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದ್ದು ಶೀಘ್ರದಲ್ಲಿ ಪೂರ್ಣಗೊಳ್ಳುವ ಭರವಸೆಯಿದೆ ಎಂದರು. ಪಾಲಿಕೆಯ ನಿಕಟಪೂರ್ವ ಸದಸ್ಯರಾದ ವನಿತಾ ಪ್ರಸಾದ್, ಶಕೀಲಾ ಕಾವ, ವಿಹಿಂಪ ಜಿಲ್ಲಾಧ್ಯಕ್ಷ ಎಚ್.ಕೆ.ಪುರುಷೋತ್ತಮ್, ಪದವು ಫ್ರೆಂಡ್ಸ್ ಕ್ಲಬ್ ಅಧ್ಯಕ್ಷ ಕುಶಾಲ್ ಕುಮಾರ್, ಪ್ರಮುಖರಾದ ರವಿಚಂದ್ರ, ಸುಂದರ್ ಅಂಚನ್, ವಿನೋದ್ ಮುಗ್ರೋಡಿ, ಶುಭಕರ, ಅವಿನಾಶ್ ಅಂಚನ್, ಕೇಶವ, ಡಾ.ಚಂದ್ರಶೇಖರ, ಅಶೋಕ್ ನಾಯಕ್, ಪ್ರಸಾದ್ ಶಕ್ತಿನಗರ, ಗಣೇಶ್, ವಿಜಯ್ ಶೆಣೈ, ಕಿಶನ್, ಶಿವಪ್ಪಣ್ಣ, ಅಮೃತ ಟೀಚರ್, ಲತಾ ಉಪಸ್ಥಿತರಿದ್ದರು.

ಅಕ್ರಮ ಸಾಗಾಟದ ಮರದ ದಿಮ್ಮಿ ವಶ

ಸುಳ್ಯ: ಬೆಳ್ಳಾರೆ ಸೋಣಂಗೇರಿ ರಸ್ತೆಯ ಬಂಡಿಮಜಲು ಎಂಬಲ್ಲಿ ಅಕ್ರಮ ಮರ ಸಾಗಾಟ ಪ್ರಕರಣವನ್ನು ಮಂಗಳೂರು ಅರಣ್ಯ ಸಂಚಾರಿ ದಳದ ವಲಯ ಅರಣ್ಯ ಅಧಿಕಾರಿ ಮತ್ತು ಸಿಬ್ಬಂದಿಗಳು ಪತ್ತೆ ಹಚ್ಚಿದ್ದು ಅಕ್ರಮ ಸಾಗಾಟಕ್ಕೆ ಬಳಸಿದ ಲಾರಿ ಮತ್ತು ಸೊತ್ತುಗಳನ್ನು ಗುರುವಾರ ವಶ ಪಡಿಸಿಕೊಳ್ಳಲಾಗಿದೆ.

ಲಾರಿ ಮತ್ತು ಸೊತ್ತಿನ ಮೌಲ್ಯ ಅಂದಾಜು ರೂ. 8 ಲಕ್ಷ ಎಂದು ಅಂದಾಜಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿ ಮದನ್ ಎಂ. ಎಂಬವರ ಮೇಲೆ ಪ್ರಕರಣ ದಾಖಲಿಸಲಾಗಿದೆ. ಕಾರ್ಯಾಚರಣೆಯಲ್ಲಿ ವಲಯ ಅರಣ್ಯಾಧಿಕಾರಿ ಸಂತೋಷ್ ರೈ, ಉಪ ವಲಯ ಅರಣ್ಯ ಅಧಿಕಾರಿ ಪ್ರಶಾಂತ್ ಪೂಜಾರಿ, ಸೋಮನಾಥ್ ಹಾಗೂ ಸಿಬ್ಬಂದಿ ಜಯಪ್ರಕಾಶ್ ಭಾಗವಹಿಸಿದ್ದರು. ಮಂಗಳೂರು ಅರಣ್ಯ ಸಂಚಾರಿ ದಳದ ಉಪ ಅರಣ್ಯ ಸಂರಕ್ಷಣಾ ಅಧಿಕಾರಿ ರೋಶಿಣಿ ಎ.ಜೆ. ಮಾರ್ಗದರ್ಶನದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾ ಅಧಿಕಾರಿ ಪ್ರವೀಣ್ ಕುಮಾರ್ ಶೆಟ್ಟಿ ತನಿಖೆ ನಡೆಸುತ್ತಿದ್ದಾರೆ.

ಕುದ್ರೋಳಿ: ಅಖಿಲ ಭಾರತ ಬಿಲ್ಲವರ ಯೂನಿಯನ್‌ನ ಪ್ರತಿನಿಧಿ ಮಹಾಸಭೆ



ಮಂಗಳೂರು: ಬ್ರಹ್ಮಶ್ರೀ ನಾರಾಯಣ ಗುರುಗಳ ಮಾರ್ಗದರ್ಶನದಲ್ಲಿ 1912ರಲ್ಲಿ ಕುದ್ರೋಳಿಯಲ್ಲಿ ಸ್ಥಾಪಿತವಾಗಿರುವ ಅಖಿಲ ಭಾರತ ಬಿಲ್ಲವರ ಯೂನಿಯನ್ ಕಳೆದ 114 ವರ್ಷಗಳಲ್ಲಿ ಸಮಾಜವನ್ನು ವಿವಿಧ ಕ್ಷೇತ್ರದಲ್ಲಿ ಮುಂಚೂಣಿಗೆ ತರಲು ಹಲವಾರು ಪ್ರಮುಖ ಕಾರ್ಯಕ್ರಮಗಳ ಮೂಲಕ ಶ್ರಮಿಸುತ್ತಿದೆ. ಸರ್ವ ರಂಗದಲ್ಲಿ ಶಕ್ತಿಶಾಲಿ ಬಿಲ್ಲವ ಸಮಾಜದ ನಿರ್ಮಾಣವೇ ನಮ್ಮ ಧ್ಯೇಯವಾಗಿದೆ. ಇದಕ್ಕಾಗಿ ಎಲ್ಲರೂ ಜತೆಯಾಗಿ ಕೈಜೋಡಿಸಬೇಕಿದೆ ಎಂದು ಅಖಿಲ ಭಾರತ ಬಿಲ್ಲವರ ಯೂನಿಯನ್‌ನ ಅಧ್ಯಕ್ಷ ನವೀನ್ ಚಂದ್ರ ಸುವರ್ಣ ಹೇಳಿದರು.

ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದ ವಠಾರದಲ್ಲಿರುವ ನಾರಾಯಣ ಗುರು ಕಾಲೇಜಿನ ದಾಮೋದರ ಆರ್.ಸುವರ್ಣ ಸಭಾಂಗಣದಲ್ಲಿ ನಡೆದ ಯೂನಿಯನ್‌ನ ವಾರ್ಷಿಕ ಪ್ರತಿನಿಧಿ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಯೂನಿಯನ್‌ನ ಹಿರಿಯ ಸದಸ್ಯ, ಪ್ರಗತಿಪರ ಕೃಷಿಕ ಮೋನಪ್ಪ ಪೂಜಾರಿ ಕುಳಾಯಿ ಉದ್ಘಾಟಿಸಿದರು. ಉಪಾಧ್ಯಕ್ಷ ಲೋಕನಾಥ ಅಮೀನ್, ಸಂಘಟನಾ ಕಾರ್ಯದರ್ಶಿಗಳಾದ ಎ.ಜೆ.ಶೇಖರ್, ರಾಜಶೇಖರ ಬಿ.ಎಂ., ವೈ.ಸುಧೀರ್ ಕುಮಾರ್, ಬಿಲ್ಲವರ ಮಹಿಳಾ ಸಂಘದ ಅಧ್ಯಕ್ಷೆ ಸುಮಲತಾ ಎನ್. ಸುವರ್ಣ ಉಪಸ್ಥಿತರಿದ್ದರು. ಪ್ರಧಾನ ಕಾರ್ಯದರ್ಶಿ ಜೀವನ್ ಕುಮಾರ್ ತೊಕ್ಕೊಟ್ಟು ಸ್ವಾಗತಿಸಿ, ವಾರ್ಷಿಕ ವರದಿ ವಾಚಿಸಿದರು. ಖಜಾಂಜಿ ಬಿ.ದೇರಣ್ಣ ಲೆಕ್ಕಪತ್ರ ಮಂಡಿಸಿದರು. ಚುನಾವಣಾಧಿಕಾರಿ ವೈ.ಸುಕುಮಾರ್ ಆಡಳಿತ ಸಮಿತಿಗೆ 50 ಜನ ಸದಸ್ಯರ ಪಟ್ಟಿಯನ್ನು ಅಧ್ಯಕ್ಷರಿಗೆ ನೀಡಿದರು. ಜತೆ ಕಾರ್ಯದರ್ಶಿ ಶಕೀಲಾ ರಾಜ್ ವಂದಿಸಿದರು.

ಫೆ.22: ವಿರಾಟ್ ಹಿಂದೂ ಸಂಗಮ

ಮಡಿಕೇರಿ: ಚೆಟ್ಟಳ್ಳಿಯ ವಿರಾಟ್ ಹಿಂದೂ ಸಂಗಮ ಆಯೋಜನಾ ಸಮಿತಿ ವತಿಯಿಂದ ಫೆ.22 ರಂದು ಚೆಟ್ಟಳ್ಳಿಯಲ್ಲಿ ಬೃಹತ್ 'ವಿರಾಟ್ ಹಿಂದೂ ಸಂಗಮ'ವನ್ನು ಆಯೋಜಿಸಲಾಗಿದೆ ಎಂದು ಸಮಿತಿಯ ಸಂಯೋಜಕ ಪೇರಿಯನ ಉದಯ ಕುಮಾರ್ ತಿಳಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಕಾರ್ಯಕ್ರಮದ ಕುರಿತು ಮಾಹಿತಿ ನೀಡಿದ ಅವರು ಭಾನುವಾರ ಮಧ್ಯಾಹ್ನ 2ಕ್ಕೆ ವ್ಯಾಲಿ ಪ್ಲೇ ಶಾಲೆ ಮುಂಭಾಗದಿಂದ ಚೆಟ್ಟಳ್ಳಿ ಪ್ರೌಢಶಾಲಾ ಆಟದ ಮೈದಾನದವರೆಗೆ ಬೃಹತ್ ಶೋಭಾಯಾತ್ರೆ ಸಾಗಲಿದೆ.

ಸಂಜೆ 5ಕ್ಕೆ ಚೆಟ್ಟಳ್ಳಿಯ ಪ್ರೌಢಶಾಲಾ ಆಟದ ಮೈದಾನದಲ್ಲಿ ಸಭಾ ಕಾರ್ಯಕ್ರಮ ನಡೆಯಲಿದೆ. ಕಾಫಿ ಬೆಳೆಗಾರ ಕೊಂಗೇಟಿರ ವೀಣಾ ಅಪ್ಪಣ್ಣ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮಂಗಳೂರು ವಿಭಾಗದ ಕಾರ್ಯವಾಹಕ ವಾದಿ ರಾಜ್ ಉಡುಪಿ ಅವರು ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕೊಡಗು ಗೌಡ ಸಮಾಜದ ನಿಕಟಪೂರ್ವ ಅಧ್ಯಕ್ಷ ಪೇರಿಯನ ಜಯಾನಂದ, ನಿವೃತ್ತ ಬ್ಯಾಂಕ್ ಅಧಿಕಾರಿ ಎಂ.ಎಸ್. ತಿರುಮಲೇಶ್ವರ ಭಟ್ ಹಾಗೂ ಚೆಟ್ಟಳ್ಳಿ ಹಿಂದೂ ಮಲಯಾಳಿ ಸಮಾಜದ ಅಧ್ಯಕ್ಷ ಪಿ.ಕೆ. ಲೀಲಾ ಪಾಲ್ಗೊಳ್ಳಲಿದ್ದಾರೆ ಪೇರಿಯನ ಉದಯ ಕುಮಾರ್ ಹೇಳಿದರು. ಸಮಿತಿಯ ಪ್ರಧಾನ ಕಾರ್ಯದರ್ಶಿ ಬಲ್ಲಾರಂಡ ಕಂಠಿ ಕಾರ್ಯಪ್ಪ ಮಾತನಾಡಿ, ಜಾತಿ, ಮತ, ರಾಜಕೀಯ ಬೇಧವಿಲ್ಲದೆ ಸರ್ವರೂ ಪಾಲ್ಗೊಳ್ಳುವಂತೆ ಮನವಿ ಮಾಡಿದರು. ಸಹ ಸಂಯೋಜಕ ಕಡ್ಯದ ಉದಯ, ಸದಸ್ಯರಾದ ಬಿ.ಆರ್. ಚೇತನ್ ಪೂಜಾರಿ ಹಾಗೂ ಎನ್.ಎಸ್. ರವಿ ಉಪಸ್ಥಿತರಿದ್ದರು.

ಫೆ.22ರಂದು ಸರಪಾಡಿ ಶ್ರೀ ಶರಭೇಶ್ವರನಿಗೆ ನೂತನ ಚಂದ್ರಮಂಡಲ ರಥ ಸಮರ್ಪಣೆ

ಬಂಟ್ವಾಳ: ಸರಪಾಡಿ ಶ್ರೀ ಶರಭೇಶ್ವರ ದೇವಸ್ಥಾನದ ವಾರ್ಷಿಕ ಜಾತ್ರೆಯು ಫೆ.28ರಿಂದ ಮಾ.4 ರವರೆಗೆ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ನಡೆಯಲಿದ್ದು ಜಾತ್ರೆಗೆ ಪೂರ್ವಭಾವಿಯಾಗಿ ದಾನಿಗಳಾದ ಸರಪಾಡಿ ಗ್ರಾಮದ ಪಡ್ಡಾಯಿಬೆಟ್ಟುವಿನ ಪ್ರಗತಿಪರ ಕೃಷಿಕ ರಘುರಾಮ ಶೆಟ್ಟಿ ಅವರ ಮನೆಯವರಿಂದ ಸಮರ್ಪಣೆಗೊಳ್ಳಲಿರುವ ಚಂದ್ರಮಂಡಲ ರಥದ ಸಮರ್ಪಣಾ ಮೆರವಣಿಗೆಯು ಫೆ.22ಕ್ಕೆ ಮಧ್ಯಾಹ್ನ 3ಕ್ಕೆ ಬಿ.ಸಿ.ರೋಡಿನ ಶ್ರೀ ರಕ್ತೇಶ್ವರೀ ಸನ್ನಿಧಿಯ ಬಳಿಯಿಂದ ನಡೆಯಲಿದೆ ಎಂದು ಜೀರ್ಣೋದ್ಧಾರ ಸಮಿತಿಯ ಕಾರ್ಯಾಧ್ಯಕ್ಷ ಜಗನ್ನಾಥ ಚೌಟ ಬದಿಗುಡ್ಡೆ ತಿಳಿಸಿದರು.

50 ಲಕ್ಷ ರೂ.ಗಳ ಯೋಜನೆ

ಅವರು ಗುರುವಾರ ಬಿ.ಸಿ.ರೋಡಿನಲ್ಲಿ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿ, ಸರಪಾಡಿ



ಶ್ರೀ ಶರಭೇಶ್ವರ ದೇವಸ್ಥಾನವು 2024ರಲ್ಲಿ ಸುಮಾರು 6 ಕೋ.ರೂ.ವೆಚ್ಚದಲ್ಲಿ ಪುನರ್ ನಿರ್ಮಾಣಗೊಂಡು ಬ್ರಹ್ಮಕಲಶೋತ್ಸವ ನಡೆದಿದ್ದು ಪ್ರಸ್ತುತ ಹಂತ ಹಂತವಾಗಿ ಹಲವು ಅಭಿವೃದ್ಧಿ ಕಾರ್ಯಗಳು ಅನುಷ್ಠಾನಗೊಳ್ಳುತ್ತಿದೆ ಎಂದರು. ದೇವಸ್ಥಾನದ ಮೂಲ ಸೌಕರ್ಯಗಳಾದ ರಥದ ಕೊಟ್ಟಿಗೆ, ಭೋಜನಾ ಶಾಲೆ, ಅನ್ನಛತ್ರ, ದೇವಳದ ಕಚೇರಿ ನಿರ್ಮಾಣಕ್ಕೆ 50 ಲಕ್ಷ ರೂ.ಗಳ ಯೋಜನೆ ಹಾಕಿಕೊಂಡು ಒಂದು ಹಂತದ ಕಾರ್ಯ ಪೂರ್ಣಗೊಂಡು ಫೆ. 28ರಂದು ಜಾತ್ರೆಯ ಸಂದರ್ಭದಲ್ಲಿ ಇದರ ಉದ್ಘಾಟನೆಗೊಳ್ಳಲಿದೆ ಎಂದರು. ಅಪರೂಪವೆಂಬಂತೆ ರೈತನೋರ್ವ ನಮ್ಮ ದೇವಸ್ಥಾನಕ್ಕೆ ರಥ ಸಮರ್ಪಣೆ ಮಾಡುತ್ತಿದ್ದಾರೆ. ಫೆ.22ಕ್ಕೆ ಮಧ್ಯಾಹ್ನ 3ಕ್ಕೆ ಬಿ.ಸಿ.ರೋಡಿನ ಶ್ರೀ ರಕ್ತೇಶ್ವರೀ ಸನ್ನಿಧಿಯ ಬಳಿಯಿಂದ ಅದ್ದೂರಿಯ ಮೆರವಣಿಗೆ ಹೊರಡಲಿದ್ದು ಒಡಿಯೂರು ಶ್ರೀ ಗುರುದೇವಾನಂದ ಸ್ವಾಮೀಜಿ ಸಹಿತ ವಿವಿಧ ಕ್ಷೇತ್ರದ ಗಣ್ಯರು ಪಾಲ್ಗೊಳ್ಳಲಿದ್ದಾರೆ. ಸರಪಾಡಿಯಲ್ಲಿ ಮಣಿನಾಲ್ಕೂರು ರೈತರ ಸೇವಾ ಸಹಕಾರಿ ಬ್ಯಾಂಕ್ ಬಳಿಯಿಂದ ವಿವಿಧ ಕಲಾತಂಡಗಳೊಂದಿಗೆ ಪಾದಯಾತ್ರೆಯ ಮೆರವಣಿಗೆ ನಡೆಯಲಿದೆ ಎಂದರು. ಫೆ.25ಕ್ಕೆ ಸಂಜೆ ನೂತನ ಭೋಜನಾ ಶಾಲೆಯ ಕಟ್ಟಡ ಹಾಗೂ ನೂತನ ರಥಕ್ಕೆ ವಾಸ್ತು ಪೂಜೆ ಸಹಿತ ವೈದಿಕ ಕಾರ್ಯ ನಡೆದು ಫೆ. 26ಕ್ಕೆ ಬೆಳಗ್ಗೆ ಗಣಹೋಮ, ಕಲಶಾಭಿಷೇಕ ನಡೆಯುತ್ತದೆ ಎಂದರು.

ಜಾತ್ರೆ ಸಮಿತಿ ಪ್ರಧಾನ ಕಾರ್ಯದರ್ಶಿ ರಾಧಾಕೃಷ್ಣ ರೈ ಕೊಟ್ಟುಂಜ ಮಾತನಾಡಿ, ಫೆ. 28ಕ್ಕೆ ಮಧ್ಯಾಹ್ನ ಧ್ವಜಾರೋಹಣಗೊಂಡು ಜಾತ್ರೆ ಆರಂಭಗೊಳ್ಳಲಿದ್ದು, ಪ್ರತಿನಿತ್ಯ ವಿವಿಧ ವೈದಿಕ ಕಾರ್ಯಗಳು, ದೇವರ ಬಲಿ ಉತ್ಸವ, ಅನ್ನಪ್ರಸಾದವಿರುತ್ತದೆ.

ಮೊದಲ ದಿನ ರಾತ್ರಿ 8ಕ್ಕೆ ಪಾಕಶಾಲೆ, ಉಗ್ರಾಣ, ದೇವಳದ ಕಚೇರಿ ಕಟ್ಟಡ, ರಥದ ಕೊಟ್ಟಿಗೆಯನ್ನು ಮುಂಬಯಿ ಭವಾನಿ ಫೌಂಡೇಶನ್ ಅಧ್ಯಕ್ಷ ಕುಸುಮೋಧರ ಡಿ.ಶೆಟ್ಟಿ ಉದ್ಘಾಟಿಸಲಿದ್ದು, ಜಾತ್ರೋತ್ಸವ ಸಮಿತಿ ಅಧ್ಯಕ್ಷ ವಿಜಯ ವಿ.ಕೋಟ್ಯಾನ್ ಅಧ್ಯಕ್ಷತೆ ವಹಿಸಲಿದ್ದಾರೆ. ನಾಟಕ ಪ್ರದರ್ಶನಗೊಳ್ಳಲಿದೆ.

ಮಾ. 1ರಂದು ಬೆಳಗ್ಗಿನಿಂದ ವಿವಿಧ ವೈದಿಕ ಕಾರ್ಯ ಸಹಿತ ರಾತ್ರಿ ಪಲ್ಲಕಿ ಉತ್ಸವ, ಬಳಿಕ ಕಾಯರಪಲ್ಕೆ ಹೆಗ್ಡೇಸ್ ಆಂಗ್ಲ ಮಾಧ್ಯಮ ಶಾಲೆ ಹಾಗೂ ಸರಪಾಡಿ ಸರಕಾರಿ ಪ್ರೌಢಶಾಲಾ ವಿದ್ಯಾರ್ಥಿಗಳಿಂದ ನೃತ್ಯ ಝೇಂಕಾರ ಪ್ರದರ್ಶನಗೊಳ್ಳಲಿದೆ. ಮಾ. 2ರಂದು ಬೆಳಗ್ಗಿನಿಂದ ವೈದಿಕ ಕಾರ್ಯ ನಡೆದು, ರಾತ್ರಿ ಧರ್ಮದೈವ ಪಂಜುರ್ಲಿ ನೇಮ, ಚಂದ್ರಮಂಡಲೋತ್ಸವ ನಡೆಯುತ್ತದೆ. ಮಾ. 3ರಂದು ಬೆಳಗ್ಗಿನಿಂದ ವಿವಿಧ ವೈದಿಕ ಕಾರ್ಯ ಸಹಿತ ದೇವರ ರಥಾರೋಹಣಗೊಂಡು ಚಂದ್ರಗ್ರಹಣ ಹಿನ್ನೆಲೆಯಲ್ಲಿ ರಥಾವರೋಹಣ, ಧ್ವಜಾವರೋಹಣ, ವಿಶೇಷ ಗ್ರಹಣ ಶಾಂತಿ ಹೋಮ ನಡೆಯುತ್ತದೆ. ರಾತ್ರಿ ಗ್ರಹಣ ಮೋಕ್ಷದ ಬಳಿಕ ದೇವರಿಗೆ ಕಲಶಾಭಿಷೇಕ, ಧ್ವಜಾರೋಹಣ, ದೇವರು ರಥಾರೋಹಣ, ವಿವಿಧ ಭಜನಾ ತಂಡಗಳಿಂದ ಭಜನಾ ಕಮ್ಮಟೋತ್ಸವ, ಶಾಂತಿಗುಡ್ಡೆಯಲ್ಲಿ ಧರ್ಮದೈವ ಶ್ರೀ ರಕ್ತೇಶ್ವರಿ ದೈವದ ನೇಮ, ವಲಸರಿ ಇಳಿಯುವುದು, ದೈವ-ದೇವರ ಭೇಟಿ, ಮಹಾರಥೋತ್ಸವ ನಡೆಯುತ್ತದೆ. ಮಾ. 4ರಂದು ರಾತ್ರಿ ಶ್ರೀ ಕಲ್ಲುರ್ಟಿ ದೈವದ ನೇಮ, ಓಕುಳಿ, ನೇತ್ರಾವತಿ ನದಿಯಲ್ಲಿ ಅವಭೃತ ಸ್ನಾನ, ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಮಹಾಪೂಜೆ, ದೈವಕ್ಕೆ ಹರಕೆ ಒಪ್ಪಿಸುವುದು ಬಳಿಕ ಧ್ವಜಾವರೋಹಣಗೊಳ್ಳಲಿದೆ. ಮಾ. 5ರಂದು ಸಂಪ್ರೋಕ್ಷಣೆ, ಮಹಾಮಂತ್ರಾಕ್ಷತೆಯ ಮೂಲಕ ಜಾತ್ರೆ ಸಮಾಪ್ತಿಗೊಳ್ಳುತ್ತದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ದೇವಸ್ಥಾನದ ಪ್ರಧಾನ ಅರ್ಚಕ ಶಂಕರನಾರಾಯಣ ಹೊಳ್ಳ, ಯುವಕ ಮಂಡಲದ ಅಧ್ಯಕ್ಷ ಸಂತೋಷ್ ಶೆಟ್ಟಿ ಪಡ್ಡಾಯಿಬೆಟ್ಟು, ಜಾತ್ರೋತ್ಸವ ಸಮಿತಿಯ ಕಾರ್ಯದರ್ಶಿ ಚೇತನ್ ಬಜ, ಕಾರ್ಯಕಾರಿ ಸಮಿತಿಯ ಸದಸ್ಯರಾದ ಪ್ರಕಾಶ್ಚಂದ್ರ ಆಳ್ವ ರಾಹುಲ್ ಕೋಟ್ಯಾನ್ ಉಪಸ್ಥಿತರಿದ್ದರು.

ಜಿಲ್ಲಾ ಪಶುಸಂಗೋಪನಾ ಇಲಾಖೆಯಿಂದ ಬಿಸಿಲಿನ ತಾಪಮಾನ ಎದುರಿಸಲು ಸಕಲ ಸಿದ್ಧತೆ
ಪಶು ವೈದ್ಯಕೀಯ ಕೇಂದ್ರದಲ್ಲಿ ನಿಯಂತ್ರಣ ಕೊಠಡಿ ಸ್ಥಾಪನೆ

ಕಾಸರಗೋಡು: ಜಿಲ್ಲಾ ಪಶುಸಂಗೋಪನಾ ಇಲಾಖೆಯಿಂದ ಬಿಸಿಲಿನ ತಾಪಮಾನ ಎದುರಿಸಲು ಸಕಲ ಸಿದ್ಧತೆಗಳು ನಡೆಯುತ್ತಿದ್ದು, ಈ ನಿಟ್ಟಿನಲ್ಲಿ ಪಶು ವೈದ್ಯಕೀಯ ಕೇಂದ್ರದಲ್ಲಿ ನಿಯಂತ್ರಣ ಕೊಠಡಿ ಸ್ಥಾಪಿಸಲಾಗಿದೆ. ಜಿಲ್ಲೆಯಲ್ಲಿ ಬೇಸಿಗೆ ಕಾಲವು ಜಾನುವಾರುಗಳಿಗೆ, ಹೈನುಗಾರರಿಗೆ ಹಾಗೂ ಕ್ಷೀರೋತ್ಪಾದನೆಗೆ ಕಠಿಣ ಸಮಯವಾಗಿದೆ. ಹವಾಮಾನ ಬದಲಾವಣೆ ಮತ್ತು ತಾಪಮಾನದಿಂದ ಹಸುಗಳು ಈ ಅವಧಿಯಲ್ಲಿ ಅಪಾರ ಬಿಸಿಲಿನ ಒತ್ತಡ ಎದುರಿಸಬೇಕಾಗುತ್ತದೆ. ಪ್ರಸ್ತುತ ಕಾಸರಗೋಡು ಜಿಲ್ಲೆಯ ಹೆಚ್ಚಿನ ಶೇಕಡಾವಾರು ಹಸುಗಳು ಮಿಶ್ರತಳಿ ಜೆರ್ಸಿ, ಹೋಲ್‌ಸ್ಟೈನ್ ಫ್ರೀಸಿಯನ್ ಹಸುಗಳಾಗಿವೆ.
ಅಧಿಕ ಹಾಲು ಉತ್ಪಾದನೆ ಹೊಂದಿರುವ ಮತ್ತು ಕೃತಕ ಗರ್ಭಧಾರಣೆಯ ಮೂಲಕ ಸಾಕಲಾಗುವ ಈ ಹಸುಗಳು ಸ್ಥಳೀಯ ತಳಿಗಳಿಗೆ ಹೋಲಿಸಿದರೆ ಹೆಚ್ಚಿನ ಶಾಖ ಮತ್ತು ತೇವಾಂಶ ತಡೆದುಕೊಳ್ಳುವ ಸಾಮರ್ಥ್ಯ ಹೊಂದಿರುವುದಿಲ್ಲ. ಬೇಸಿಗೆಯಲ್ಲಿ ತಾಪಮಾನ ಏರಿಕೆಯಾದಂತೆ ಹಸುಗಳು ವಿಭಿನ್ನ ಲಕ್ಷಣ ಪ್ರದರ್ಶಿಸುತ್ತವೆ. ಅವುಗಳಲ್ಲಿ ಹೆಚ್ಚಿದ ಉಸಿರಾಟ, ತೆರೆದ ಬಾಯಿ



ಉಸಿರಾಟ, ಜೊಲ್ಲು ಸುರಿಸುವುದು ಮತ್ತು ಉಸಿರು ಗಟ್ಟುವುದು ಸೇರಿವೆ. ಬಿಸಿಲಿನ ತಾಪಮಾನ ಇನ್ನಷ್ಟು ತೀವ್ರವಾದಾಗ ನಡುಗುವಿಕೆ, ದೇಹದ ಸಮನ್ವಯದ ನಷ್ಟಕ್ಕೆ ಕಾರಣವಾಗುತ್ತದೆ. ಬೇಸಿಗೆಯಲ್ಲಿ ಹಸುಗಳು ಬಿಸಿಲಿನ ಹೊಡೆತದಿಂದ ಬಳಲುವ ಸಾಧ್ಯತೆಯಿವೆ.
ಬಿಸಿ ವಾತಾವರಣದಲ್ಲಿ ಹಸುಗಳನ್ನು ಕೊಟ್ಟಿಗೆಯಿಂದ ಹೊರಗೆ ಕರೆದೊಯ್ದು ಹೊರಗಿನ ನೆರಳಿನ ಪ್ರದೇಶಗಳಲ್ಲಿ ಕಟ್ಟಿಹಾಕಬೇಕು. ಬೆಳಿಗ್ಗೆ ಮತ್ತು ಸಂಜೆ ವಾಹನಗಳಲ್ಲಿ ದೀರ್ಘ ಪ್ರಯಾಣದ ವ್ಯವಸ್ಥೆ ಮಾಡಬೇಕು. ಬಿಸಿಲಿನ ಒತ್ತಡ ತಪ್ಪಿಸಲು ಕೊಟ್ಟಿಗೆಯಲ್ಲಿ ಉತ್ತಮ ಗಾಳಿ ಖಚಿತವ ಡಿಸಿಕೊಳ್ಳಬೇಕು.

ಮಾಹಿತಿಗೆ ಕರೆ ಮಾಡಿ

ಸಾಕುಪ್ರಾಣಿಗಳ ಅಸೌಖ್ಯತೆ ಬಗ್ಗೆ ಪ್ರಾಣಿ ಕಲ್ಯಾಣ ಇಲಾಖೆಯ ಜಿಲ್ಲಾ ಮಟ್ಟದ ನಿಯಂತ್ರಣ ಕೊಠಡಿಗೆ ವರದಿ ಮಾಡಬೇಕು. ಮಾಹಿತಿಗೆ 04994 - 224 624 ದೂ.ನಂ.ಗೆ ಕರೆ ಮಾಡಬಹುದು.

ಸಾಧ್ಯವಾದರೆ ಕೊಟ್ಟಿಗೆ ಒಳಗೆ ಯಾವಾಗಲೂ ಫ್ಯಾನ್‌ಗಳನ್ನು ಚಾಲನೆಯಲ್ಲಿಡಬೇಕು. ಹಸುಗಳ ತಲೆ ಅಥವಾ ಹಣೆಯ ಮೇಲೆ ಗಾಳಿ ಬೀಸುವಂತೆ ಛಾವಣಿ ಮೇಲೆ ಫ್ಯಾನ್‌ಗಳನ್ನು ಅಳವಡಿಸುವುದು ಉತ್ತಮವಾಗಿದೆ.
ತಾಳೆ ಎಲೆಗಳು, ತೆಂಗಿನ ಗರಿಗಳು, ಹಸಿರು ಬಲೆ ಅಥವಾ ಟಾರ್ಪಾಲಿನ್ ಬಳಸಿ ಕೊಟ್ಟಿಗೆಯ ಛಾವಣಿಯ ಕೆಳಗೆ ಸೀಲಿಂಗ್‌ನ್ನು ಸಿದ್ಧಪಡಿಸುವುದರಿಂದ ಕೊಟ್ಟಿಗೆಯೊಳಗಿನ ತಾಪಮಾನ ಕಡಿಮೆಯಾಗುತ್ತದೆ. ಕೊಟ್ಟಿಗೆಯಲ್ಲಿ ಹಸುಗಳಿಗೆ ಸ್ನಾನ ಮಾಡಿಸುವ ಬದಲು ಕೊಟ್ಟಿಗೆಯ ಮೇಲೆ ಸ್ಪ್ರಿಂಕ್ಲರ್‌ಗಳನ್ನು ಅಳವಡಿಸಬಹುದು ಮತ್ತು ಕೊಟ್ಟಿಗೆಯ ಛಾವಣಿಗೆ ನೀರು ಹಾಕಬಹುದು.

ಸಾಕುಪ್ರಾಣಿಗಳು ಮತ್ತು ಪಕ್ಷಿಗಳಿಗೆ ಆರೈಕೆ ಅಗತ್ಯ

ಸಾಕುಪ್ರಾಣಿಗಳಿಗೆ ಹಾಗೂ ಪಕ್ಷಿಗಳಿಗೆ ಯಾವುದೇ ಅನಾರೋಗ್ಯ ಕಂಡುಬಂದಲ್ಲಿ ತಕ್ಷಣ ಸೂಕ್ತ ವ್ಯವಸ್ಥೆ ಕೈಗೊಳ್ಳಬೇಕು. ಪಂಜರಗಳಲ್ಲಿ ಸಾಕಲಾಗುವ ಪ್ರಾಣಿಗಳಿಗೆ ದಿನವಿಡೀ ತಣ್ಣನೆಯ ಶುದ್ಧ ನೀರನ್ನು ಒದಗಿಸಬೇಕು. ಕೋಳಿಗಳಿಗೆ ಕುಡಿಯುವ ನೀರಿನಲ್ಲಿ ಅರ್ಧ ಲೀಟರ್ ಮೊಸರು ನೀಡುವುದರಿಂದ ದೇಹದ ಉಷ್ಣತೆ ಕಡಿಮೆ ಯಾಗುತ್ತದೆ. ಸೂರ್ಯನ ಶಾಖದಿಂದ ಒತ್ತಡವನ್ನು ಕಡಿಮೆ ಮಾಡಲು ಅಗತ್ಯವಾದ ಔಷಧಿಗಳನ್ನು ವೈದ್ಯರ ಸೂಚನೆಯಂತೆ ನೀಡಬೇಕು. ರೋಗ ನಿರೋಧಕ ಶಕ್ತಿ ಹೆಚ್ಚಿಸಲು ವಿಟಮಿನ್ ಮಿಶ್ರಣ ಆಹಾರಕ್ಕೆ ಸೇರಿಸಬೇಕು.

● **ಡಾ.ಕೆ.ವಿ.ಬಿಂದು, ಜಿಲ್ಲಾ ಪ್ರಾಣಿ ಕಲ್ಯಾಣ ಅಧಿಕಾರಿ**

ಸ್ಪ್ರಿಂಕ್ಲರ್, ಶವರ್ ಅಥವಾ ಮಂಜಿನಿಂದ ಹಸುಗಳಿಗೆ ನೀರುಣಿಸುವುದು ಬಿಸಿಲಿನ ಒತ್ತಡ ಕಡಿಮೆ ಮಾಡಲು ಪರಿಣಾಮಕಾರಿಯಾಗಿದೆ. ಕೊಟ್ಟಿಗೆಯಲ್ಲಿ ದಿನದ 24 ಗಂಟೆಗಳ ಕಾಲ ತಂಪಾದ ಕುಡಿಯುವ ನೀರು ಲಭ್ಯವಿರಬೇಕು. ವಿಶೇಷ ರಾತ್ರಿ ಹೊತ್ತಿನಲ್ಲಿ ಹಸುಗಳಿಗೆ ಕುಡಿಯಲು ಸಾಕಷ್ಟು ನೀರು ಇರಬೇಕು. ತಂಪಾದ, ಬಿಸಿಲನ ಸಮಯದಲ್ಲಿ ಜಾನುವಾರುಗಳ ಮೇವು ಮತ್ತು ಹುಲ್ಲು ರಾತ್ರಿಗೆ ಹೊಂದಿಕೆಯಾಗಬೇಕು. ಒಣಹುಲ್ಲಿನ ಆಹಾರವನ್ನು ನೀರಿನಲ್ಲಿ ನೆನೆಸಿ ಮೇವಾಗಿ ನೀಡಬಹುದು. ಹಗಲಿನಲ್ಲಿ ಹೆಚ್ಚಿನ ನೀರಿನ ಅಂಶವಿರುವ ಉತ್ತಮ ಗುಣಮಟ್ಟದ ಮೇವಿನ್ನು ನೀಡಬೇಕು. ಹಾಲು ನೀಡುವ ಸಮಯದಲ್ಲಿ ಅತಿಯಾದ ಜೊಲ್ಲು ನಷ್ಟದಿಂದ ಹಸುಗಳ ಹೊಟ್ಟೆಯಲ್ಲಿ ಆಮ್ಲೀಯತೆ ತಡೆಗಟ್ಟಲು ಸೋಡಿಯಂ ಬೈಕಾರ್ಬನೇಟ್ (ಅಡಿಗೆ ಸೋಡಾ)ನ್ನು ಪ್ರತಿ ಕಿಲೋಗ್ರಾಂ ಮೇವಿಗೆ 10 ಗ್ರಾಂ ನಂತೆ ಸೇರಿಸಬಹುದು. ಒಟ್ಟು ಆಹಾರಕ್ಕೆ ಪ್ರತಿ ಕಿಲೋಗ್ರಾಂ ಸಾಂದ್ರೀಕೃತ ಮೇವಿಗೆ 10 ಗ್ರಾಂ, 10 ರಿಂದ 25 ಗ್ರಾಂ ಕಲ್ಲು ಉಪ್ಪನ್ನು ಖನಿಜ, ವಿಟಮಿನ್ ಮಿಶ್ರಣವನ್ನು ಸೇರಿಸುವುದು ಪ್ರಯೋಜನಕಾರಿಯಾಗಿದೆ.

ಸುತ್ತಮುತ್ತ

ಫೆ.22ರಂದು ಪೆರ್ಲದಲ್ಲಿ ಬೃಹತ್ ಹಿಂದು ಸಂಗಮ

ಪೆರ್ಲ: ಹಿಂದು ಸಂಗಮ ಆಯೋಜನಾ ಸಮಿತಿ ಎಣ್ಮಕಜೆ ಪಂಚಾಯತ್ ಘಟಕದ ಆಶ್ರಯದಲ್ಲಿ ಫೆ.22ರಂದು ಪೆರ್ಲ ಪೇಟೆ ಪಠಾರದಲ್ಲಿ ಬೃಹತ್ ಹಿಂದು ಸಂಗಮ ಕಾರ್ಯಕ್ರಮ ನಡೆಯಲಿದೆ.
ಕಾರ್ಯಕ್ರಮದ ಅಂಗವಾಗಿ ಅಪರಾಹ್ನ 2.30ಕ್ಕೆ ಪೆರ್ಲ ಸನಿಹದ ಇಡಿಯಡ್ಕ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಪಠಾರದಿಂದ ಬೃಹತ್ ಸಾಂಸ್ಕೃತಿಕ ಶೋಭಾಯಾತ್ರೆ ಆರಂಭಗೊಳ್ಳಲಿದೆ. ಕುಣಿತ ಭಜನೆ, ಮಕ್ಕಳಿಂದ ವಿವಿಧ ವೇಷಗಳು, ಚೆಂಡೆಮೇಳ, ಮೊದಲಾದ ವೈವಿಧ್ಯತೆಯೊಂದಿಗೆ ಶೋಭಾಯಾತ್ರೆ ಪೆರ್ಲದ ಸಮಾರಂಭ ಸ್ಥಳಕ್ಕೆ ತಲುಪಲಿದೆ.
ಅಪರಾಹ್ನ 3.30ಕ್ಕೆ ಆರಂಭಗೊಳ್ಳಲಿರುವ ಹಿಂದು ಸಂಗಮದ ಸಭಾ ಕಾರ್ಯಕ್ರಮದಲ್ಲಿ ಶ್ರೀ ಕ್ಷೇತ್ರ ಒಡಿಯೂರಿನ ಸಾಧ್ವಿ ಶ್ರೀ ಮಾತಾನಂದಮಯಿ ಆಶೀರ್ವಚನ ನೀಡುವರು. ಕೇರಳ ಹಿಂದು ಐಕ್ಯ ವೇದಿಕೆಯ ಕಾರ್ಯಾಧ್ಯಕ್ಷ ವಲ್ಸನ್ ತಿಲ್ಲಂಗೇರಿ ದಿಕ್ಸೂಚಿ ಭಾಷಣ ಮಾಡುವರು. ಹಿಂದು ಸಂಗಮ ಆಯೋಜನಾ ಸಮಿತಿಯ ಅಧ್ಯಕ್ಷ ಸುಬ್ಬ ಪಾಟಾಳಿ ಕುತ್ತಾಜೆ ಅಧ್ಯಕ್ಷತೆ ವಹಿಸುವರು. ಕವಯತ್ರಿ ಸುಜಯಾ ಸಜಂಗದ್ದೆ ಅತಿಥಿಯಾಗಿರುವರು.
ಸಭಾ ಕಾರ್ಯಕ್ರಮದ ನಂತರ ಕಲರ್ಸ್ ಕನ್ನಡ ಖ್ಯಾತಿಯ ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ, ತುಳುನಾಡ ಗಾನ ಗಂಧರ್ವ ಬಿರುದಾಂಕಿತ ಪುತ್ತೂರು ಜಗದೀಶ್ ಆಚಾರ್ಯ ಮತ್ತು ಬಳಗದವರಿಂದ ಭಕ್ತಿಗೀತೆ, ಜಾನಪದ ಗೀತೆ ಹಾಗೂ ರಾಷ್ಟ್ರ ಭಕ್ತಿಗೀತೆಗಳನ್ನೊಳಗೊಂಡ ಗಾನ ಸಂಭ್ರಮ ಎಂಬ ವಿಶಿಷ್ಟ ಕಾರ್ಯಕ್ರಮ ಜರಗಲಿದೆ ಎಂದು ಹಿಂದು ಸಂಗಮ ಆಯೋಜನಾ ಸಮಿತಿಯ ಪದಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಾಳೆ ನೇತ್ರ ತಪಾಸಣಾ ಶಿಬಿರ

ಕಾಸರಗೋಡು: ನುಳ್ಳಿಪ್ಪಾಡಿ ಸೀತಮ್ಮ ಪುರುಷ ನಾಯಕ ಕನ್ನಡ ಭವನ ಗ್ರಂಥಾಲಯದಲ್ಲಿ ಕಾಸರಗೋಡಿನ ಪ್ರಸಾದ್ ನೇತ್ರಾಲಯ ಸೂಪರ್ ಸ್ಪೆಷಾಲಿಟಿ ಕಣ್ಣಿನ ಆಸ್ಪತ್ರೆಯ ಸಹಕಾರದಲ್ಲಿ ಕಣ್ಣು ತಪಾಸಣಾ ಉಚಿತ ಶಿಬಿರವು ಫೆ.22ರಂದು ಬೆಳಿಗ್ಗೆ 10ರಿಂದ ನುಳ್ಳಿಪ್ಪಾಡಿ ಕನ್ನಡ ಭವನದಲ್ಲಿ ನಡೆಯಲಿದೆ.
ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಶಿಬಿರವನ್ನು ಉದ್ಘಾಟಿಸುವರು. ಅತಿಥಿಗಳಾಗಿ ಕಾಸರಗೋಡು ನಗರಸಭಾ ಕೌನ್ಸಿಲರ್‌ಗಳಾದ ಶ್ರುತಿ ಅಶೋಕನಗರ, ಶಾರದಾ ಜೆ.ಪಿ.ನಗರ, ಸುಧಾರಾಣಿ ಶರತ್ ಅಣಂಗೂರು, ನೇತಾಜಿ ರೆಸಿಡೆನ್ಸಿ ವಲಯ ಅಧ್ಯಕ್ಷ ಶಶಿಕಾಂತ ಶೆಟ್ಟಿ, ಮಾಜಿ ಕೌನ್ಸಿಲರ್ ವರಪ್ರಸಾದ್ ಕೋಟೆಕಣಿ ಪಾಲ್ಗೊಳ್ಳುವರು.
ಕನ್ನಡ ಭವನದ ಸಂಸ್ಥಾಪಕ ಡಾ.ಕೆ.ವಾಮನ್ ರಾವ್ ಬೇಕಲ್, ಸಂಚಾಲಕಿ ಸಂಧ್ಯಾರಾಣಿ ಟೀಚರ್ ನೇತೃತ್ವ ವಹಿಸುವರು. ಈ ಸಂದರ್ಭದಲ್ಲಿ ಬೇವಿಂಜೆ ಶ್ರೀಧರ ಕಕ್ಕಿಲ್ಲಾಯ - ಸರೋಜಿನಿದೇವಿ ಕಕ್ಕಿಲ್ಲಾಯ ಸ್ಮರಣಾರ್ಥ ಸಾರ್ವಜನಿಕ ಉಚಿತ ವಾಚನಾಲಯದ ಲೋಕಾರ್ಪಣೆಯೂ ಜರಗಲಿದೆ.

ಚೇವಾರು ಶ್ರೀ ಶಾರದಾ ಶಾಲೆ: ನೇತ್ರ ತಪಾಸಣಾ ಶಿಬಿರ

ಮಂಜೇಶ್ವರ: ಪಟ್ಲ ಫ್ರೆಂಡ್ಸ್ ಕ್ಲಬ್ ಹಾಗೂ ಬಾಯಾರು ಶ್ರೀ ಸತ್ಯಸಾಯಿ ಸೇವಾ ಸಮಿತಿ ಇವುಗಳ ಸಹಯೋಗದಲ್ಲಿ ಫೆ.22ರಂದು ಬೆಳಗ್ಗೆ 9ರಿಂದ ಮಧ್ಯಾಹ್ನ 1ಗಂಟೆಯ ವರೆಗೆ ಚೇವಾರು ಶ್ರೀ ಶಾರದಾ ಎಯುಪಿ ಶಾಲೆಯಲ್ಲಿ ನೇತ್ರ ತಪಾಸಣಾ ಉಚಿತ ಶಿಬಿರ ಮತ್ತು ರಕ್ತದಾನ ಶಿಬಿರ ಹಮ್ಮಿಕೊಳ್ಳಲಾಗಿದೆ.
ನೇತ್ರ ತಪಾಸಣಾ ಶಿಬಿರವನ್ನು ಕಾಸರಗೋಡು ಪ್ರಸಾದ್ ನೇತ್ರಾಲಯ ಸೂಪರ್ ಸ್ಪೆಷಾಲಿಟಿ ಕಣ್ಣು ಆಸ್ಪತ್ರೆಯ ಸಹಕಾರದೊಂದಿಗೆ ಆಯೋಜಿಸಲಾಗಿದೆ.
ರಕ್ತದಾನ ಶಿಬಿರವನ್ನು ನಿಟ್ಟೆ ಜಸ್ಟಿಸ್ ಕೆ.ಎಸ್.ಹೆಗ್ಡೆ ಚಾರಿಟೇಬಲ್ ಆಸ್ಪತ್ರೆಯ ಸಹಕಾರದೊಂದಿಗೆ ಏರ್ಪಡಿಸಲಾಗಿದೆ.
ಕಾರ್ಯಕ್ರಮದಲ್ಲಿ ವಿವಿಧ ವಲಯಗಳ ಗಣ್ಯರು ಭಾಗವಹಿಸಲಿದ್ದಾರೆ. ಸಾರ್ವಜನಿಕರು ಈ ಶಿಬಿರದ ಪ್ರಯೋಜನ ಪಡೆದುಕೊಳ್ಳಬೇಕೆಂದು ಸಂಘಟಕರು ಪ್ರಕಟಣೆಯಲ್ಲಿ ವಿನಂತಿಸಿದ್ದಾರೆ.

ಪೈವಳಿಕೆ ವ್ಯಾಪಾರಿ ನಿಧನಕ್ಕೆ ಸಂತಾಪ

ಮಂಜೇಶ್ವರ: ವ್ಯಾಪಾರಿ ವ್ಯವಸಾಯಿ ಏಕೋಪನಾ ಸಮಿತಿಯ ಪೈವಳಿಕೆ ಘಟಕದ ಕೋಶಾಧಿಕಾರಿಯಾಗಿದ್ದ ಪಿ.ಎಸ್.ಮುಹಮ್ಮದ್ ಹಾಜಿಯವರ ನಿಧನಕ್ಕೆ ಘಟಕದ ವತಿಯಿಂದ ಪೈವಳಿಕೆ ನಗರದಲ್ಲಿ ಸಂತಾಪ ಸಭೆ ನಡೆಸಲಾಯಿತು.
ಘಟಕದ ಅಧ್ಯಕ್ಷ ಅಬ್ದುಲ್ ರಹಮಾನ್ ಅಧ್ಯಕ್ಷತೆ ವಹಿಸಿದ್ದರು. ಘಟಕದ ಸದಸ್ಯ ಎಂ.ಚಂದ್ರ ನಾಯ್ಕ ಮಾಣಿಪ್ಪಾಡಿ ಅವರು ನುಡಿನಮನ ಸಲ್ಲಿಸಿದರು.
ಅಬ್ದುಲ್ ಖಾದರ್ ಪಿ.ಎಚ್., ಪದ್ಮನಾಭ ಟೈಲರ್, ಬಶೀರ್, ಮಾಲಿನಿ ಮಯ್ಯ, ಅಸೀಸ್ ಗಾಳಿಯಡ್ಕ, ಉಮ್ಮರ್ ಲಾಲ್‌ಬಾಗ್ ಮುಂತಾದವರು ಸಂತಾಪ ಸೂಚಿಸಿ ಮಾತನಾಡಿದರು.

ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನ: ಭಕ್ತಿಗೀತೆ ರಚನಾ ಸ್ಪರ್ಧೆ ಫಲಿತಾಂಶ ಪ್ರಕಟ

ಬದಿಯಡ್ಕ: ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದ ಬ್ರಹ್ಮಕಲಶೋತ್ಸವದ ಪೂರ್ವಭಾವಿಯಾಗಿ ದೇವಸ್ಥಾನ ಹಾಗೂ ಭಕ್ತರನ್ನು ಜೋಡಿಸುವುದು, ಸಾಹಿತ್ಯ, ಇತಿಹಾಸ, ಐತಿಹ್ಯ, ಹಳೆಯ ನೆನಪುಗಳು, ಹಳೆಯ ವಸ್ತುಗಳು, ನಂಬಿಕೆಗಳು, ಕೊಡುಗೆಗಳನ್ನು ನೆನಪಿಸುವ ಸದುದ್ದೇಶದೊಂದಿಗೆ ಹಮ್ಮಿಕೊಂಡ ಭಕ್ತಿಗೀತೆ ರಚನಾ ಸ್ಪರ್ಧೆಯ ಫಲಿತಾಂಶ ಪ್ರಕಟಿಸಲಾಯಿತು. ನಾಡಿನ ವಿವಿಧ ಕಡೆಗಳಿಂದ ಒಟ್ಟು 105 ಮಂದಿ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.
ಡಾ.ಬೇ.ಸಿ.ಗೋಪಾಲಕೃಷ್ಣ ಭಟ್, ಸುಂದರ ಬಾರಡ್ಕ , ಡಾ.ಶ್ರೀಶ ಪಂಜಿತ್ತಡ್ಕ ತೀರ್ಪುಗಾರರಾಗಿ ಸಹಕರಿಸಿದ್ದರು. ಎ.ಪಿ. ಉಮಾಶಂಕರಿ ಮರಿಕೆ ಪ್ರಥಮ, ವಿ.ಬಿ. ಕುಳಮರ್ವ ದ್ವಿತೀಯ, ಜಯಲಕ್ಷ್ಮೀ ಜೋಷಿ ತೃತೀಯ ಬಹುಮಾನ ಪಡೆದಿದ್ದಾರೆ. ವಾಸುದೇವ ಭಟ್ ಶೇಡಿಗುಮ್ಮೆ ಅವರಿಗೆ ಗೌರವ ಬಹುಮಾನ ನೀಡಲಾಗುವುದು.
ಕವನಗಳ ಸೇರಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸ ಲಾಗುವುದು. ಸ್ಪರ್ಧೆಗೆ ಬಂದಂತಹ ಎಲ್ಲಾ ಕವನಗಳ ಸೇರಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸಲಾಗುವುದು. ಬೇರೆ ಬೇರೆ ರಾಜ್ಯಗಳಲ್ಲಿ ನೆಲೆಸಿರುವ ಕವಿಗಳು ಕನ್ನಡ, ತುಳು, ಮಲೆಯಾಳ ಭಾಷೆಗಳಲ್ಲಿ ಕವನಗಳ ಬರೆದು ನೀಡಿದ್ದರು. 2026 ಏಪ್ರಿಲ್ 17ರಿಂದ ಏ.28ರ ತನಕ ಬ್ರಹ್ಮಕಲಶ ನಡೆಯಲಿದೆ.



ಸ್ಪರ್ಧೆಗಾಗಿ ಬಂದ ಸುಮಾರು 100ಕ್ಕೂ ಮಿಕ್ಕಿ ಕವನಗಳು ಒಂದಕ್ಕಿಂತ ಇನ್ನೊಂದು ಚೆನ್ನಾಗಿದ್ದವು, ಆದಕಾರಣ ಆಯ್ಕೆ ಮಾಡುವಲ್ಲೂ ಗೊಂದಲಪಡಬೇಕಾಯಿತು. ಆಯೋಜಕರ ಮಾನದಂಡ ಪಾಲಿಸಿ ನಮ್ಮ ದೃಷ್ಟಿಯಲ್ಲಿ ಉತ್ತಮವೆಂದು ಕಂಡ ಗೀತೆಗಳನ್ನು ಆಯ್ಕೆ ಮಾಡಲಾಗಿದೆ ಎಂದು ತೀರ್ಪುಗಾರರು ಸುಂದರ ಬಾರಡ್ಕ ಹೇಳಿದರು.
ಪೆರಡಾಲ ದೇವಸ್ಥಾನದ ಬ್ರಹ್ಮಕಲಶದ ಅಂಗವಾಗಿ ಭಕ್ತಿಗೀತೆ ರಚನಾ ಸ್ಪರ್ಧೆ ಏರ್ಪಡಿಸಿರುವುದು ಶ್ಲಾಘನೀಯ. ಅದಕ್ಕಾಗಿ ಬಂದ ಕವನಗಳ ದೊಡ್ಡ ಸಂಖ್ಯೆ ನಮ್ಮ ನಾಡಿನಲ್ಲಿ ಕವಿ ಹೃದಯದ ಭಕ್ತರು, ದೇಶಭಾಷಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆನ್ನುವ ಮಹತ್ವದ ಅಂಶ ಹೊರಗೆ ಡಹಿದೆ. ಕವನಗಳೆಲ್ಲವೂ ಶ್ರೇಷ್ಠವೇ. ಆದರೆ ಸ್ಪರ್ಧೆಯೆಂದಾಗ ಶ್ರೇಷ್ಠ ಕನಿಷ್ಠ ಎಂಬ ತಾರತಮ್ಯ ಭಾವ ಅನಿವಾರ್ಯ. 3, 4 ಸುತ್ತಿನ ಮೌಲ್ಯಮಾಪನದ ಬಳಿಕ 4 ಕವನಗಳನ್ನು ಬಹುಮಾನಕ್ಕೆ ಆರಿಸಲಾಗಿದೆ ಎಂದು ಡಾ. ಬೇಸಿ ಗೋಪಾಲಕೃಷ್ಣ ಭಟ್ ಹೇಳಿದರು.

ಮವ್ವಾರು ಶ್ರೀ ಷಡಾನನ ಗ್ರಂಥಾಲಯ: ರಿಪಬ್ಲಿಕ್ ಸದಸ್, ಮಕ್ಕಳಿಗೆ ಕ್ವಿಜ್ ಸ್ಪರ್ಧೆ



ಮುಳ್ಳೇರಿಯ: ಮವ್ವಾರು ಶ್ರೀ ಷಡಾನನ ಯೂತ್ ಕ್ಲಬ್ ಹಾಗೂ ಗ್ರಂಥಾಲಯದಲ್ಲಿ ರಿಪಬ್ಲಿಕ್ ಸದಸ್ ಮತ್ತು ವಿದ್ಯಾರ್ಥಿಗಳಿಗೆ ಕ್ವಿಜ್ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.
ಕ್ಲಬ್ ಸಭಾಂಗಣದಲ್ಲಿ ನಡೆದ ಈ ಕಾರ್ಯಕ್ರಮವನ್ನು ಕುಂಬ್ಡಾಜೆ ಗ್ರಂಥಾಲಯ ಸಮಿತಿ ಸಂಚಾಲಕ ಪ್ರಶಾಂತ್ ಉದ್ಘಾಟಿಸಿ ಮಾತನಾಡಿ, ಪ್ರಜಾಪ್ರಭುತ್ವ ದೇಶವಾದ ಭಾರತದಲ್ಲಿ ಸಂವಿಧಾನದ ಮಹತ್ವ ಹಾಗೂ ಅದರ ಬಗ್ಗೆ ಪ್ರತಿಯೊಬ್ಬರೂ ಅರಿವು ಹೊಂದಿರಬೇಕೆಂದು ತಿಳಿಸಿದರು.
ಸಮಾರಂಭದಲ್ಲಿ ಗ್ರಂಥಾಲಯದ ಅಧ್ಯಕ್ಷ ಕೆ.ಗಂಗಾಧರ್ ಅಧ್ಯಕ್ಷತೆ ವಹಿಸಿದ್ದರು. ಗ್ರಂಥಾಲಯದ ಉಪಾಧ್ಯಕ್ಷ ಎ.ವಿಷ್ಣು ಭಟ್, ಸದಸ್ಯರಾದ ಕೃಷ್ಣಮೂರ್ತಿ, ವಿ. ಗಣಪತಿ ಭಟ್, ಶ್ಯಾಮಲಕುಮಾರಿ, ಪೂರ್ಣಿಮಾ, ಗ್ರಂಥಪಾಲಕಿ ವಿದ್ಯಾಶಂಕರಿ, ಮವ್ವಾರು ಎಯುಪಿ ಶಾಲಾ ಅಧ್ಯಾಪಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.
ಗ್ರಂಥಾಲಯದ ಪ್ರಧಾನ ಕಾರ್ಯದರ್ಶಿ ಚಾತುಕುಟ್ಟಿ ಮಾಸ್ಟರ್ ಸ್ವಾಗತಿಸಿ, ಕೃಷ್ಣಮೂರ್ತಿ ಭಟ್ ವಂದಿಸಿದರು. ಕಾರ್ಯಕ್ರಮದ ಅಂಗವಾಗಿ ಜರಗಿದ ಕ್ವಿಜ್ ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಪ್ರಶಾಂತ್ ಬಹುಮಾನಗಳನ್ನು ವಿತರಿಸಿದರು.

ಪುಸ್ತಕ ಹಸ್ತಾಂತರ

ಕಾಸರಗೋಡು ಜಿಲ್ಲಾ ಪತ್ರಕರ್ತರ ಸಂಘ ಹಾಗೂ ಕಾರ್ಯನಿರತ ಪತ್ರಕರ್ತರ ಸಂಘದ ನೇತೃತ್ವದಲ್ಲಿ ಕೊಡ ಮಾಡಿದ ಉಚಿತ ಪುಸ್ತಕಗಳನ್ನು ಗ್ರಂಥಾಲಯದ ಪ್ರಧಾನ ಕಾರ್ಯದರ್ಶಿ ಚಾತುಕುಟ್ಟಿ ಮಾಸ್ಟರ್‌ಗೆ ಹಸ್ತಾಂತರಿಸಲಾಯಿತು.

'ಕಲೆಗಳು' ನಮ್ಮ ಭಾರತೀಯ ಸಂಸ್ಕೃತಿಯ ಪ್ರತೀಕ: ಎಡನೀರು ಶ್ರೀ



ಬದಿಯಡ್ಕ: ಕಲೆಗಳು ನಮ್ಮ ಭಾರತೀಯ ಸಂಸ್ಕೃತಿಯ ಪ್ರತೀಕವಾಗಿವೆ. ಧಾರ್ಮಿಕವಾಗಿ ಯಾವುದೇ ಹಬ್ಬ ಹರಿದಿನಗಳ ಸಂದರ್ಭ ಕಲೆಗಳ ಪ್ರಸ್ತುತಿ ನಡೆಯುತ್ತದೆ. ಈ ರೀತಿಯ ಸಾಂಸ್ಕೃತಿಕವಾದ ನೃತ್ಯ ಸಂಗೀತಾದಿ ಕಾರ್ಯಕ್ರಮಗಳಿಂದ ದೈವ ಸಾನಿಧ್ಯ ಪ್ರಸನ್ನಗೊಳ್ಳುತ್ತದೆ ಎಂದು ಎಡನೀರು ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿ ಅಭಿಪ್ರಾಯ ವ್ಯಕ್ತಪಡಿಸಿದರು.
ಮಹಾಶಿವರಾತ್ರಿಯ ಅಂಗವಾಗಿ ಬದಿಯಡ್ಕ ಸಮೀಪದ ಬಳ್ಳಪದವು ವೀಣಾವಾದಿನಿ ಸಂಗೀತ ವಿದ್ಯಾಪೀಠವು ಏರ್ಪಡಿಸಿದ್ದ 'ಅಖಂಡ ಶಿವ ಸಂಗೀತ ಸ್ಮರಣಂ' ಎಂಬ ವಿನೂತನ ಕಾರ್ಯಕ್ರಮದಲ್ಲಿ ಅವರು ಆಶೀರ್ವಚನ ನೀಡಿದರು. ನಾದಪ್ರಿಯ ಶಿವನನ್ನು ಸಂಗೀತಾರ್ಚನೆಯ ಮೂಲಕ ಆರಾಧಿಸಿದಲ್ಲಿ ಇಷ್ಟಾರ್ಥ ಸಿದ್ಧಿಯನ್ನು ಭಕ್ತವತ್ಸಲನಾದ ಶಿವ ನೆರವೇರಿಸಿ ಕೊಡುತ್ತಾನೆ ಎಂದು ನುಡಿದರು.
ವೇದಿಕೆಯಲ್ಲಿ ಉಪಸ್ಥಿತರಿದ್ದ ಬದಿಯಡ್ಕ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಸುಕುಮಾರನ್, ಸಂಸ್ಥೆಯ ಚಾರ್ಟರ್ಡ್ ಅಕೌಂಟೆಂಟ್ ಆಗಿರುವ ಕಾಞಂಗಾಡಿನ ಎಚ್.ಎಸ್.ಭಟ್, ವೈದ್ಯರೂ, ಸಂಗೀತ ಕಲಾವಿದರೂ ಆಗಿರುವ ಶಂಕರ್‌ರಾಜ್ ಆಲಂಪಾಡಿ ಹಾಗೂ ಮಂಗಳೂರು ಆಕಾಶವಾಣಿ ನಿಲಯದ ಕಲಾವಿದ ರಫೀಕ್‌ಖಾನ್ ಶುಭಹಾರೈಸಿದರು.
ಸಂಸ್ಥೆ ನಿರ್ದೇಶಕ ಯೋಗೀಶ ಶರ್ಮಾ ಬಳ್ಳಪದವು ಸ್ವಾಗತಿಸಿ, ರವೀಂದ್ರ ಸ್ವಾಮಿ ವಂದಿಸಿದರು. ಅಧ್ಯಾಪಿಕೆ ಸುಶೀಲಾ ಕೆ. ಪದ್ಯಾಣ ನಿರೂಪಿಸಿದರು.
ಬಳಿಕ ಜರಗಿದ ಪ್ರಮುಖ ಸಂಗೀತ ಕಛೇರಿಗಳಲ್ಲಿ ಟಿ.ಪಿ.ಶ್ರೀನಿವಾಸನ್ ಕಾಞಂಗಾಡು ಅವರಿಂದ ಹಾಡುಗಾರಿಕೆ ನಂತರ ಹಿಂದೂಸ್ಥಾನಿ ಕಲಾವಿದ ಉಸ್ತಾದ್ ರಫೀಕ್ ಖಾನ್ ಅವರಿಂದ ಸಿತಾರ್ ವಾದನ, ಕೋಟೆಕಲ್ ರಂಜಿತ್ ವಾರಿಯರ್, ಕಾಸರಗೋಡು ಸದಾಶಿವ ಆಚಾರ್ಯ, ವಿಜಯಶ್ರೀ ಗುರುಮೂರ್ತಿ ಬೆಂಗಳೂರು ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಅಜಿತ್ ಸುಬ್ರಹ್ಮಣ್ಯ ಅವರಿಂದ ಹಿಂದೂಸ್ಥಾನಿ ಗಾಯನ, ಅರವಿಂದ ಆಚಾರ್ಯ ಮತ್ತು ಬಳಗದವರಿಂದ ಭಜನ್, ರಾಮಕೃಷ್ಣ ಕಾಟುಕುಕ್ಕೆ ಹಾಗೂ ಕಿಶೋರ್ ಪೆರ್ಲ ಅವರಿಂದ ದಾಸವಾಣಿ, ಮಧೂರು ನಾಟ್ಯ ಮಂಟಪದ ವಿದ್ಯಾರ್ಥಿಗಳಿಂದ ಭರತನಾಟ್ಯ ಮತ್ತು ವೀಣಾವಾದಿನಿಯ ವಿದ್ಯಾರ್ಥಿಗಳಿಂದ ಸಂಗೀತಾರ್ಚನೆ ಸೇವೆ ನಡೆಯಿತು.
ಬ್ರಹ್ಮಶ್ರೀ ಆಲಂಗಾರು ರಾಧಾಕೃಷ್ಣ ಭಟ್ ಮಹಾಶಿವಪೂಜೆ ನೆರವೇರಿಸಿದರು. ನಡುರಾತ್ರಿ 12ಕ್ಕೆ ಧ್ಯಾನ, ಶಿವನಮನ ನಡೆಯಿತು. ವಿದ್ವಾನ್ ಯೋಗೀಶ ಶರ್ಮಾ ಬಳ್ಳಪದವು ಅವರಿಂದ ಪ್ರಾತಃಕಾಲದ ಪ್ರಮುಖ ಸಂಗೀತ ಕಛೇರಿಯೊಂದಿಗೆ ಕಾರ್ಯ ಕ್ರಮಕ್ಕೆ ಅಮೋಘ ಮಂಗಲ ಜರಗಿತು.
ವೇಣುಗೋಪಾಲ್ ಶ್ಯಾನುಭೋಗ್, ಪ್ರಭಾಕರ ಕುಂಜಾರು, ಧನಶ್ರೀ ಶಬರಾಯ ಮಂಗಳೂರು, ಕಲ್ಲೇಕುಳಂಗರ ಉಣ್ಣಿಕೃಷ್ಣನ್, ಶ್ರೀಧರ ಭಟ್ ಬಡಕ್ಕೇಕೆರೆ, ರತ್ನಶ್ರೀ ಅಯ್ಯರ್, ಲವಕುಮಾರ್ ಐಲ, ಸತ್ಯನಾರಾಯಣ ಐಲ ಮತ್ತಿತರರಿದ್ದರು. ಕಲೋಪಾಸಕ ಸಪರ್ಯ ಕಾರ್ಯಕ್ರಮ ಗುರುಗಳಾದ ಯೋಗೀಶ ಶರ್ಮಾ ಬಳ್ಳಪದವು ನೆರವೇರಿಸಿದರು.

ಪೆರ್ಲ ಪ್ರಾಣಿ ಕಲ್ಯಾಣ ಚೆಕ್‌ಪೋಸ್ಟ್: ಸ್ಯಾಟಲೈಟ್ ಕಂಟೇನರ್ ಕಚೇರಿ ಆರಂಭ



ಕಾಸರಗೋಡು: ಪೆರ್ಲದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಾಣಿ ಕಲ್ಯಾಣ ಚೆಕ್‌ಪೋಸ್ಟ್‌ನ ಸೇವೆಗಳನ್ನು ಸುಧಾರಿಸುವ ಭಾಗವಾಗಿ ಸ್ಯಾಟಲೈಟ್ ಕಂಟೇನರ್ ಕಚೇರಿಯನ್ನು ತೆರೆಯಲಾಗಿದೆ. ಚೆಕ್‌ಪೋಸ್ಟ್ ಮೂಲಕ ಹಾದುಹೋಗುವ ಎಲ್ಲಾ ಪ್ರಾಣಿಗಳ ಪರಿಣಾಮಕಾರಿ ನೋಂದಣಿ ಮತ್ತು ಲಸಿಕೆಗಳ ದಾಖಲೆಗಳನ್ನು ಇಡುವುದರಿಂದ ಕಾಸರಗೋಡು ಜಿಲ್ಲೆಗೆ ಇತರ ರಾಜ್ಯಗಳಿಂದ ಬರುವ ಜಾನುವಾರುಗಳಿಂದ ಹರಡಬಹುದಾದ ರೋಗಗಳ ನಿಯಂತ್ರಣ ಸುಧಾರಿಸುತ್ತದೆ.
ಈ ಬಗ್ಗೆ ಪೆರ್ಲದಲ್ಲಿ ನಡೆದ ಸಮಾರಂಭವನ್ನು ಕೇರಳ ಪ್ರಾಣಿ ಕಲ್ಯಾಣ ಇಲಾಖೆ ಸಚಿವೆ ಜೆ.ಚಿಂಚುರಾಣಿ ಆನ್‌ಲೈನ್‌ನಲ್ಲಿ ಉದ್ಘಾಟಿಸಿದರು. ಮಂಜೇಶ್ವರ ಶಾಸಕ ಎ.ಕೆ.ಎಂ.ಅಶ್ರಫ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪಾಲಕ್ಕಾಡ್ ರಿಂಡರ್‌ಪೆಸ್ಟ್ ಚೆಕ್ ಪೋಸ್ಟ್ ಆಫೀಸ್ ಪರವಾಗಿ ಡಾ.ವಿನೀತಾ ಸಿ.ಬಿ. ವರದಿ ಮಂಡಿಸಿದರು.
ಎಣ್ಮಕಜೆ ಗ್ರಾಮ ಪಂಚಾಯತ್ ಉಪಾಧ್ಯಕ್ಷ ಅಬೂಬಕ್ಕರ್ ಸಿದ್ದಿಕ್, ಜಿಲ್ಲಾ ಪಂಚಾಯತ್ ಸದಸ್ಯ ಸೋಮಶೇಖರ ಜೆ.ಎಸ್., ಬ್ಲಾಕ್ ಪಂಚಾಯತ್ ಸದಸ್ಯೆ ನಫೀಸತ್ ಮಿಸಿರಿಯಾ, ಅಭಿವೃದ್ಧಿ ಸ್ಥಾಯೀ ಸಮಿತಿ ಅಧ್ಯಕ್ಷೆ ರಮ್ಲಾ ಇಬ್ರಾಹಿಂ, ಐಷತ್ ರಾಬಿಯಾ, ರಾಮಕೃಷ್ಣ ರೈ, ಎಂ.ರಾಮಚಂದ್ರ, ಬಿ.ಎಸ್. ಗಾಭೀರ ಮತ್ತಿತರರು ಮಾತನಾಡಿದರು.
ಈ ಸಂದರ್ಭ ಪ್ರಾಣಿಗಳಿಂದ ಹರಡುವ ರೋಗಗಳ ಕುರಿತು ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು. ಜಿಲ್ಲಾ ಪಶು ವೈದ್ಯಕೀಯ ಕೇಂದ್ರದ ಪಶುವೈದ್ಯ ಶಸ್ತ್ರಚಿಕಿತ್ಸಕ ಡಾ.ಸೂರ್ಯ ಮಾತನಾಡಿದರು. ಜಿಲ್ಲಾ ಪ್ರಾಣಿ ಕಲ್ಯಾಣ ಇಲಾಖೆ ಅಧಿಕಾರಿ ಡಾ.ಕೆ.ವಿ. ಬಿಂದು ಸ್ವಾಗತಿಸಿ, ವಲಯ ಅಧಿಕಾರಿ ಸುನೀಲ್ ಕುಮಾರ್ ವಂದಿಸಿದರು.

ಸಂಶೋಧನಾ ಉಪನ್ಯಾಸ ಆತ್ಮವಿಶ್ವಾಸ ವೃದ್ಧಿಸುತ್ತದೆ: ಡಾ.ಪ್ರವೀಣ ಪದ್ಯಾಣ



ಕಾಸರಗೋಡು: ಸಂಶೋಧನಾ ಉಪನ್ಯಾಸಗಳು ವಿದ್ಯಾರ್ಥಿಗಳಲ್ಲಿ ವಿಮರ್ಶಾತ್ಮಕ ಚಿಂತನೆ ಹಾಗೂ ಆತ್ಮವಿಶ್ವಾಸ ವೃದ್ಧಿಸುತ್ತದೆ. ಈ ನಿಟ್ಟಿನಲ್ಲಿ ನಮ್ಮ ವಿಭಾಗವು ಹಮ್ಮಿಕೊಂಡ ಉಪನ್ಯಾಸವು ಮಹತ್ವಪೂರ್ಣ ಎನಿಸಿಕೊಂಡಿದೆ ಎಂದು ಕೇರಳ ಕೇಂದ್ರೀಯ ವಿವಿಯ ಕನ್ನಡ ವಿಭಾಗದ ಪ್ರಭಾರ ಮುಖ್ಯಸ್ಥ ಡಾ.ಪ್ರವೀಣ ಪದ್ಯಾಣ ಹೇಳಿದರು.
ಕೇಂದ್ರೀಯ ವಿವಿಯಲ್ಲಿ ನಡೆದ 'ಸಂಶೋಧನಾ ತರಂಗ' ಉಪನ್ಯಾಸ ಮಾಲಿಕೆಯನ್ನು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ತನ್ನ ಒಡಲಲ್ಲಿ ಇರಿಸಿಕೊಂಡಿದೆ

ಮಾಲಿಕೆಯ ಮೊದಲ ತರಂಗದ ಸಂಪನ್ಮೂಲ ವ್ಯಕ್ತಿ, ಸಂಶೋಧನಾರ್ಥಿ ಶಶಾಂಕ್ ಎಚ್. ವಿ. ಅವರು ಡಾ.ಎಸ್. ಎಲ್.ಭೈರಪ್ಪನವರ ಆತ್ಮಕಥೆ ಭಿತ್ತಿ, ನೆಲೆ, ಬೆಲೆ ಎಂಬ ವಿಷಯದ ಕುರಿತು ಮಾತನಾಡಿ, ಭೈರಪ್ಪನವರ ಆತ್ಮಕಥೆ ಭಿತ್ತಿಯು ವ್ಯಕ್ತಿಜೀವನದ ವಿವರಗಳೊಂದಿಗೆ, ಸ್ವಾತಂತ್ರ್ಯ ಸಂಗ್ರಾಮ, ಸ್ವಾತಂತ್ರ್ಯೋತ್ತರ ಭಾರತ, ತುರ್ತುಪರಿಸ್ಥಿತಿಯ ವಿಪ್ಲವ ಮುಂತಾದ ಅನೇಕ ಸಮಾಜೋ ರಾಜಕೀಯ ಐತಿಹಾಸಿಕ ಘಟನೆಗಳನ್ನೂ ತನ್ನ ಒಡಲಲ್ಲಿ ಇರಿಸಿಕೊಂಡಿದೆ ಎಂದು ಬಣ್ಣಿಸಿದರು.
ಸಹಾಯಕ ಪ್ರಾಧ್ಯಾಪಕ ಡಾ. ಗೋವಿಂದರಾಜು ಕೆ.ಎಂ. ಮತ್ತು ಚೇತನ್ ಮುಂಡಾಜೆ ಮಾತನಾಡಿ ಮಾಲಿಕೆಗೆ ಶುಭ ಹಾರೈಸಿದರು. ಪ್ರಾಧ್ಯಾಪಕರು, ವಿದ್ಯಾರ್ಥಿಗಳು, ಸಂಶೋಧನಾರ್ಥಿಗಳು ಸಕ್ರಿಯವಾಗಿ ಸಂವಾದದಲ್ಲಿ ಭಾಗವಹಿಸಿದ್ದರು.
ಸೈಯದ್ ನದೀಮ್, ಚೇತನಾ, ಸೋಮ ನಿಂಗ ಹಿಪ್ಪರಗಿ ಆಶಯ ಗೀತೆ ಹಾಡಿದರು. ಶೃತಿ ಸ್ವಾಗತಿಸಿ, ಸಹನಾ ಅವರು ವಂದಿಸಿದರು. ಚೇತನ ಕೆ. ಕಾರ್ಯಕ್ರಮ ನಿರೂಪಿಸಿದರು.



ಆರೆಸ್ಸೆಸ್ ಸಂಘದ ಶತಾಬ್ದಿ ವರ್ಷಾಚರಣೆಯ ಅಂಗವಾಗಿ ಕುಂಬ್ಡಾಜೆ ಪಂ.ಸಮಿತಿ ನೇತೃತ್ವದಲ್ಲಿ ಫೆ.22ರಂದು ಮಾರ್ಪನಡ್ಕ ಜಯನಗರದಲ್ಲಿ ಬೃಹತ್ ಹಿಂದು ಸಮಾಜೋತ್ಸವ ನಡೆಯಲಿದ್ದು, ಇದರ ಸಲುವಾಗಿ ಪಂ. ಮಟ್ಟದ ಧ್ವಜ ದಿನಾಚರಣೆ, ವಾಹನ ಪ್ರಚಾರಕ್ಕೆ ಚಾಲನೆ ನೀಡಲಾಯಿತು. ಧಾರ್ಮಿಕ ಮುಂದಾಳು ಡಾ.ವೇಣುಗೋಪಾಲ ಕಳೆಯತ್ತೋಡಿ ಧ್ವಜ ಹಸ್ತಾಂತರಿಸುವ ಮೂಲಕ ಚಾಲನೆ ನೀಡಿದರು. ಹಿಂದು ಸಮಾಜೋತ್ಸವ ಸಮಿತಿ ಅಧ್ಯಕ್ಷ ಸಂತೋಷ್ ಕುಮಾರ್ ರೈ ಗಾಡಿಗುಡ್ಡೆ, ಮಹಿಳಾ ಸಮಿತಿ ಅಧ್ಯಕ್ಷೆ ಲಾವಣ್ಯ ಗಿರೀಶ್ ಮತ್ತಿತರರಿದ್ದರು.

ಕುಳೂರು ಶಾಲೆ ಇನ್ನಷ್ಟು ಸರ್ವತೋಮುಖ ಅಭಿವೃದ್ಧಿ ಕಾಣಲಿ: ಕೆ.ಕೆ.ಶೆಟ್ಟಿ ಕುತ್ತಿಕ್ಕಾರ್

ಮಂಜೇಶ್ವರ: ಶತಮಾನವನ್ನು ಕಂಡಂತಹ ಕುಳೂರಿನ ಕಿರಿಯ ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವ ಜರಗಿತು. ಕಾರ್ಯಕ್ರಮದ ಉದ್ಘಾಟನಾ ಸಮಾರಂಭಕ್ಕೆ ಆಗಮಿಸಿದ ಕಾಸರಗೋಡಿನ ಕನ್ನಡ ನೆಲದಲ್ಲಿ ಹುಟ್ಟಿ ಮಹಾರಾಷ್ಟ್ರದಲ್ಲಿ ತನ್ನ ಉದ್ಯಮ ಸಾಮ್ರಾಜ್ಯವನ್ನು ವಿಸ್ತರಿಸಿದ ಕುಳೂರು ಕನ್ಯಾನ ಸದಾಶಿವ ಶೆಟ್ಟಿಯವರ ಆತ್ಮೀಯ ಮಿತ್ರರಾದ ಕೊಡುಗೈದಾನಿ ಕೆ.ಕೆ.ಶೆಟ್ಟಿ ಕುತ್ತಿಕ್ಕಾರ್ ಮಾತನಾಡಿ, ಕುಳೂರು ಶಾಲೆಗೆ ಆಗಮಿಸಿದ್ದು ಋಣಾನುಬಂಧದಿಂದಲೇ ಆಗಿದೆ. ಸದಾಶಿವ ಶೆಟ್ಟಿ ಅವರಂತಹ ಶ್ರೇಷ್ಠರನ್ನು ಕೊಟ್ಟಂತಹ ಕುಳೂರು ಶಾಲೆ ಇನ್ನಷ್ಟು ಸರ್ವತೋಮುಖ ಅಭಿವೃದ್ಧಿ ಕಾಣಲಿ ಎಂದು ಶುಭಹಾರೈಸಿದರು.
ಕಾರ್ಯಕ್ರಮಕ್ಕೆ ಶಾಲಾ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಜಯರಾಜ್ ಶೆಟ್ಟಿ ಚಾರ್ಲ ಧ್ವಜಾರೋಹಣಗೈಯುವ ಮೂಲಕ ಚಾಲನೆ ನೀಡಿದರು. ಮೀಂಜ ಗ್ರಾ.ಪಂ. ಉಪಾಧ್ಯಕ್ಷೆ ಉಷಾ ಪೂಂಜ ಮಾಣೂರು ನೆರವೇರಿಸಿದರು. ಅಧ್ಯಕ್ಷತೆಯನ್ನು ಶಾಲಾ ಹಳೆ ವಿದ್ಯಾರ್ಥಿ ಸಂಘದ ಅಧ್ಯಕ್ಷ ಮೊಹಮ್ಮದ್ ಹಾಜಿ ಕಂಚಿಲ ವಹಿಸಿದ್ದರು.



ಗೌರವಾರ್ಪಣೆ

ಮುಖ್ಯ ಅತಿಥಿಗಳಾಗಿ ಆಗಮಿಸಿದ ಈ ಶೈಕ್ಷಣಿಕ ವರ್ಷದಲ್ಲಿ ನಿವೃತ್ತಿ ಹೊಂದುವ ಕಾಸರಗೋಡು ಜಿಲ್ಲಾ ಶಿಕ್ಷಣ ಉಪನಿರ್ದೇಶಕರಾದ ಇಬ್ರಾಹಿಂ ಬಿ., ಮಂಜೇಶ್ವರ ಉಪಜಿಲ್ಲಾ ಶಿಕ್ಷಣಾಧಿಕಾರಿಯಾದ ಜಾರ್ಜ್ ಕ್ರಾಸ್ತ ಹಾಗೂ ಮೀಂಜ ಪಂಚಾಯತ್ ಪಿಇಸಿ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸಿದ ಮಜಿಬೈಲ್ ಶಾಲಾ ಮುಖ್ಯ ಶಿಕ್ಷಕ ಸುರೇಶ್ ಬಂಗೇರ ಅವರನ್ನು ಶಾಲು ಹೊದೆಸಿ, ಸ್ಮರಣಿಕೆ ನೀಡಿ ಗೌರವಿಸಲಾಯಿತು. ಜೊತೆಗೆ ಶಾಲಾ ಹಳೆ ವಿದ್ಯಾರ್ಥಿಗಳಾದ ಇತ್ತೀಚೆಗೆ ಸೇವೆಯಿಂದ ನಿವೃತ್ತರಾದ ಸಬ್ ಇನ್‌ಸ್ಪೆಕ್ಟರ್ ಕೊರಗಪ್ಪ ಕುಳೂರು, ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆಯ ವಿದ್ಯಾರ್ಥಿ ನಿಲಯಗಳಲ್ಲಿ ಮೇಲ್ವಿಚಾರಕರಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತರಾದ ಮಾಧವ ಕೆ.ಕುಳೂರು ಹಾಗೂ ಕಿನ್ನಿಗೋಳಿ, ಮೂಡಬಿದ್ರೆ ಶಾಲೆಗಳಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ರಾಮ ಕೆ.ಕುಳೂರು ಅವರಿಗೆ ಗೌರವಾರ್ಪಣೆ ಮಾಡಲಾಯಿತು.

ಸನ್ಮಾನ

ಶೈಕ್ಷಣಿಕ ವರ್ಷದಲ್ಲಿ ಕರ್ನಾಟಕ ರಾಜ್ಯ ಉತ್ತಮ ಶಿಕ್ಷಕ ಪ್ರಶಸ್ತಿ ಪಡೆದ ಶಾಲಾ ಹಳೆ ವಿದ್ಯಾರ್ಥಿ ಜಗದೀಶ್ ಶೆಟ್ಟಿ ಎಲಿಯಾನ ಹಾಗೂ ಕುಳೂರು ಶಾಲೆ ಮಾಜಿ ಮುಖ್ಯ ಶಿಕ್ಷಕ, ಪ್ರಸ್ತುತ ಮಧೂರು ಶಾಲೆಯ ಮುಖ್ಯ ಶಿಕ್ಷಕ ವಿನೋದ್‌ಕುಮಾರ್ ಬಿ. ಅವರನ್ನು ಸನ್ಮಾನಿಸಲಾಯಿತು.

ಅಭಿನಂದನೆ

ಇತ್ತೀಚೆಗೆ ನಡೆದ ತ್ರಿಸ್ತರ ಪಂ. ಚುನಾವಣೆಯಲ್ಲಿ ಗೆದ್ದು ವಿವಿಧ ಸ್ಥಾನಗಳನ್ನು ಅಲಂಕರಿಸಿದ ಮೀಂಜ ಪಂ.ಉಪಾಧ್ಯಕ್ಷೆ ಹಾಗೂ ಶಾಲಾ ಹಳೆ ವಿದ್ಯಾರ್ಥಿ ಉಷಾ ಪೂಂಜ ಮಾಣೂರು, ಕುಳೂರು ವಾರ್ಡ್ ಸದಸ್ಯೆ ಶರ್ಮಿಳಾ ಎಂ ಶೆಟ್ಟಿ ಚಾರ್ಲ ಹಾಗೂ ಕಳೆದ ಐದು ವರ್ಷಗಳಲ್ಲಿ ಕುಳೂರು ವಾರ್ಡ್ ಸದಸ್ಯರಾಗಿ ಶಾಲೆಗೆ ಪಂಚಾಯತಿನಿಂದ ಹಲವು ಅನುದಾನಗಳನ್ನು ದೊರಕಿಸಿ ಕೊಡಲು ಸಹಕರಿಸಿರುವ ಶಾಲಾ ಹಳೆ ವಿದ್ಯಾರ್ಥಿಯಾದ ಜನಾರ್ದನ ಪೂಜಾರಿ ಕುಳೂರು ಅವರನ್ನು ಗೌರವ ಸ್ಮರಣಿಕೆ ನೀಡಿ ಅಭಿನಂದಿಸಲಾಯಿತು. ಶಾಲಾ ಶಿಕ್ಷಕಿಯರಾದ ನಯನಾ ಎಂ., ಅಶ್ವಿನಿ ಎಂ. ಸನ್ಮಾನಪತ್ರ ವಾಚಿಸಿದರು.
ಮೀಯಪದವು ವಿದ್ಯಾವರ್ಧಕ ಎಯುಪಿ ಶಾಲಾ ಮುಖ್ಯ ಶಿಕ್ಷಕ ಅರವಿಂದಾಕ್ಷ ಭಂಡಾರಿ, ಹಳೆ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷ ಚಂದ್ರಹಾಸ ಶೆಟ್ಟಿ ಕುಳೂರು ಕನ್ಯಾನ, ಶಾಲಾಭಿವೃದ್ಧಿ ಸಮಿತಿ ಸದಸ್ಯರಾದ ನಾರಾಯಣ ನಾಯ್ಕ್ ನಡುಹಿತ್ಲು, ಶಾಲಾ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಜಯರಾಜ್ ಶೆಟ್ಟಿ ಚಾರ್ಲ, ಮಾತೃ ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷೆ ಕವಿತಾ ದೇರಂಬಳ, ಪ್ರೀ ಪ್ರೈಮರಿ ವಿಭಾಗದ ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷೆ ಪ್ರಿಯಾಂಕ ಕೇಮಜಾಲು ಉಪಸ್ಥಿತರಿದ್ದರು. ಶಾಲಾ ಮುಖ್ಯ ಶಿಕ್ಷಕಿ ಮಾಲತಿ ಪ್ರಸ್ತಾವನೆಗೈದರು. ಶಶಿಕುಮಾರ್ ಕುಳೂರು ಸ್ವಾಗತಿಸಿ, ಶಿಕ್ಷಕಿ ಸೌಮ್ಯ ಪಿ. ವಂದಿಸಿದರು. ಶಾಲಾ ಶಿಕ್ಷಕ ಜಯಪ್ರಶಾಂತ್ ಪಾಲೆಂಗ್ರಿ ನಿರೂಪಿಸಿದರು.
ಬಳಿಕ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರಗಿದವು. ಶಾಲಾ ಮಕ್ಕಳಿಂದ ಕಿರು ನಾಟಕ 'ಚಿನ್ನದ ಮಾಲೆ, ಶಾಲಾ ರಕ್ಷಕಶಿಕ್ಷಕ ಸಂಘದ ಸದಸ್ಯೆಯರಿಂದ ತುಳು ಕಿರು ನಾಟಕ 'ಕತ್ತಲೆ ಮಾಜಿಂಡ್', ನವಯುವಕ ಕಲಾವಿದೆರ್ ಚಿನಾಲ ಇವರಿಂದ ತುಳು ಸಾಮಾಜಿಕ ಹಾಸ್ಯ ನಾಟಕ 'ಕಡೀರ ಮಗೆ' ಪ್ರದರ್ಶನಗೊಂಡು ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಸುತ್ತಮುತ್ತ

ಕಾಪು ಪತ್ರಕರ್ತರ ಸಂಘ: ಪದಾಧಿಕಾರಿಗಳ ಆಯ್ಕೆ




ಕಾಪು: ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಕಾಪು ತಾಲೂಕು ಘಟಕದ 2025–28ನೇ ಸಾಲಿನ ನೂತನ ಅಧ್ಯಕ್ಷರಾಗಿ ಪತ್ರಕರ್ತ ಹಮೀದ್ ಪಡುಬಿದ್ರೆ ಹಾಗೂ ಪ್ರಧಾನ ಕಾರ್ಯದರ್ಶಿಯಾಗಿ ಹೊಸದಿಗಂತದ ಪುಂಡಲೀಕ ಮರಾಠೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.


ಚುನಾವಣಾಧಿಕಾರಿಯಾಗಿರುವ ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಸುಬ್ರಹ್ಮಣ್ಯ ಜಿ.ಕುರ್ಯ ಅವರ ಅಧ್ಯಕ್ಷತೆಯಲ್ಲಿ ಶುಕ್ರವಾರ ಕಾಪು ಪತ್ರಿಕಾ ಭವನದಲ್ಲಿ ನಡೆದ ಚುನಾವಣೆಯಲ್ಲಿ ಈ ಆಯ್ಕೆ ಮಾಡಲಾಯಿತು. ಉಪಾಧ್ಯಕ್ಷರಾಗಿ ಪತ್ರಕರ್ತ ಹೇಮನಾಥ ಪಡುಬಿದ್ರೆ, ಕೋಶಾಧಿಕಾರಿಯಾಗಿ ಪತ್ರಕರ್ತ ಸಂತೋಷ್ ನಾಯ್ಕ್, ಕಾರ್ಯದರ್ಶಿಯಾಗಿ ಪತ್ರಕರ್ತ ಸತೀಶ್ಚಂದ್ರ ಶೆಟ್ಟಿ ಮತ್ತು ಕಾರ್ಯಕಾರಿಣಿ ಸಮಿತಿ ಸದಸ್ಯರುಗಳಾಗಿ ರಾಮಚಂದ್ರ ಆಚಾರ್ಯ, ರಾಕೇಶ್ ಕುಂಜೂರು, ಹರೀಶ್ಚಂದ್ರ ಕಟಪಾಡಿ, ಪ್ರಕಾಶ್ ಸುವರ್ಣ ಅವಿರೋಧವಾಗಿ ಆಯ್ಕೆಯಾದರು.

ಚುನಾವಣಾ ಪ್ರಕ್ರಿಯೆಯಲ್ಲಿ ಉಡುಪಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ನಝೀರ್ ಪೊಲ್ಯ ಹಾಗೂ ರಾಜ್ಯ ಸಮಿತಿ ಸದಸ್ಯ ಆಸ್ಟ್ರೋ ಮೋಹನ್ ಸಹಕರಿಸಿದರು. ಈ ಸಂದರ್ಭದಲ್ಲಿ ಸಂಘದ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಸುರೇಶ್ ಎರ್ಮಾಳ್, ಕಾರ್ಯಕಾರಿ ಸಮಿತಿ ಸದಸ್ಯರಾದ ವಿಜಯ ಆಚಾರ್ಯ ಉಚ್ಚಿಲ ಪ್ರಮೋದ್ ಸುವರ್ಣ ಉಪಸ್ಥಿತರಿದ್ದರು.

ಫೆ.24ರಂದು ಕುಂದುಕೊರತೆ ಸಭೆ

ಕುಂದಾಪುರ: ಕುಂದಾಪುರ ತಾಲೂಕು ಮಟ್ಟದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಾಂಗದವರ ಹಿತರಕ್ಷಣಾ ಮತ್ತು ಕುಂದುಕೊರತೆಗಳ ಬಗ್ಗೆ ಚರ್ಚಿಸಲು ಕುಂದಾಪುರ ತಹಶೀಲ್ದಾರ್ ಅಧ್ಯಕ್ಷತೆಯಲ್ಲಿ ಫೆ.24ರಂದು ಮಧ್ಯಾಹ್ನ 2.30ಕ್ಕೆ ಕುಂದಾಪುರ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಸಭೆ ನಡೆಯಲಿದೆ ಎಂದು ತಹಶೀಲ್ದಾರ್ ಕಚೇರಿ ಪ್ರಕಟಣೆ ತಿಳಿಸಿದೆ.

ಶ್ರೀ ಮಲ್ಯರಮಠದಲ್ಲಿ ಶ್ರೀದೇವರಿಗೆ ಅಲಂಕಾರ



ಕುಂದಾಪುರ: 350 ವರ್ಷ ಪುರಾತನವಾದ ಗಂಗೊಳ್ಳಿಯ ಮಲ್ಯರಮಠ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಕಾಲಂಪ್ರತಿ ಜರಗುವ ಬ್ರಹ್ಮರಥೋತ್ಸವದ ಪ್ರಯುಕ್ತ ಧ್ವಜಾರೋಹಣ ದಿನದಂದು ಪುಷ್ಪಾಲಂಕೃತದಿಂದ ಕಂಗೊಳಿಸುತ್ತಿರುವ ಗಂಗೊಳ್ಳಿಯ ಮಲ್ಯರ ಮಠ ಶ್ರೀ ವೆಂಕಟರಮಣ ದೇವಸ್ಥಾನದ ದೇವರು.

ಮೊದಲನೇ ಪುಟದಿಂದ

ವಿಷಕಾರಿ

ವಾಯು ಗುಣಮಟ್ಟ ಸೂಚ್ಯಂಕದಲ್ಲಿ(ಎಕ್ಯೂಐ) ಮಾನದಂಡಗಳ ಪ್ರಕಾರ ಇಂದಿನ ಮಟ್ಟಗಳು ಆರೋಗ್ಯಕ್ಕೆ ಹಾನಿಕರವಾಗಿವೆ ಎಂದು ತಜ್ಞರು ಎಚ್ಚರಿಸಿದ್ದಾರೆ.ರಾಜ್ಯದ ಹಲವು ನಗರಗಳಲ್ಲಿ ವಾಯು ಗುಣಮಟ್ಟ ಮತ್ತೆ ಹದಗೆಟ್ಟಿದೆ. ವಿಶೇಷವಾಗಿ ಬೆಂಗಳೂರು, ಮಂಗಳೂರು ಹಾಗೂ ಉಡುಪಿಯಲ್ಲಿ ಗಾಳಿಯ ಗುಣಮಟ್ಟ ಸೂಚ್ಯಂಕ ಆತಂಕಕಾರಿಯಾಗಿ ಏರಿಕೆಯಾಗಿದೆ. ದಿನದಿಂದ ದಿನಕ್ಕೆ ಮಾಲಿನ್ಯ ಪ್ರಮಾಣ ಹೆಚ್ಚುತ್ತಿರುವುದು ಸ್ಥಳೀಯರಲ್ಲಿ ಚಿಂತೆ ಮೂಡಿಸಿದೆ.

'ಚುಕ್ಕೆ'!

ಆದರೆ ಬೆಳಗ್ಗೆ ನೋಡಿದಾಗ ಮನೆಯ ಅಂಗಳ, ಗಿಡಗಳು ಹಾಗೂ ಒಣ ಹಾಕಿದ ಬಟ್ಟೆಗಳ ಮೇಲೆ ಹಳದಿ ಬಣ್ಣದ ಚುಕ್ಕಿಗಳು ಕಂಡುಬಂದಿವೆ. ಈ ಚುಕ್ಕಿಗಳು ಒಣಗಿದ ನಂತರ ಹತ್ತಿಯಿಂದ ತೆಗೆಯುವಾಗ ಹಳದಿ ಹುಡಿಯಂತೆ ಕಂಡು ಬಂದಿದೆ. ಸುತ್ತಮುತ್ತಲಿನ ಪ್ರದೇಶಗಳಲ್ಲಿಯೂ ಜನ ಪರಿಶೀಲಿಸಿದಾಗ ಹಳದಿ ಕಲೆಗಳು ಕಂಡುಬಂದಿವೆ. ಈ ಬೆಳವಣಿಗೆ ಸಹಜವಾಗಿಯೇ ನಾಗರಿಕರಲ್ಲಿ ಭಾರೀ ಆತಂಕ ಕುತೂಹಲವನ್ನು ಮೂಡಿಸಿದೆ.

ಮುನಿಯಾಲು ಸಂಜೀವಿನಿ ಗೋಧಾಮದಲ್ಲಿ ಶ್ರೀಮನ್ನಾಗಮಂಡಲ, ರೈತಪೀಠ ಪ್ರಶಸ್ತಿ, ಗೋಷ್ಠಿ

ಕೃಷಿಯಿಂದ ಸಂತೃಪ್ತ ಜೀವನ ಸಾಧ್ಯ: ಬಿ.ಕೆ.ದೇವರಾಯ



ಕಾರ್ಕಳ: ಹೆಬ್ರಿ ತಾಲೂಕಿನ ಮುನಿಯಾಲು ಸಂಜೀವಿನಿ ಗೋಧಾಮದಲ್ಲಿ ಪಾರಂಪರಿಕ ಸಂಪ್ರದಾಯದಂತೆ ದೊಂದಿ ಬೆಳಕಿನಲ್ಲಿ ನಡೆಯುವ ಭಕ್ತಿಭಾವಪೂರ್ಣ ಏಕಪವಿತ್ರ ಶ್ರೀಮನ್ನಾಗಮಂಡಲದಲ್ಲಿ ಶುಕ್ರವಾರ ಶ್ರೀನಿವಾಸ ಸಭಾಮಂಟಪದಲ್ಲಿ ರೈತಪೀಠ ಪ್ರಶಸ್ತಿ ಪ್ರದಾನ ಜರಗಿತು.

240ಕ್ಕೂ ಹೆಚ್ಚು ಭಾರತೀಯ ಭತ್ತದ ತಳಿಗಳನ್ನು ಸಂರಕ್ಷಣೆ ಮಾಡಿದ ಅಪರೂಪದ ಕೃಷಿಕ ಋಷಿ ಹಾಗೂ ತಮ್ಮ ಬದುಕನ್ನೇ ಕೃಷಿ ಕಾಯಕಕ್ಕೆ ಅರ್ಪಿಸಿರುವ ರೈತರ ತ್ಯಾಗ, ಪರಿಶ್ರಮ ಮತ್ತು ರೈತರ ಮಹತ್ವವನ್ನು ಗುರುತಿಸುವ ಮಹತ್ವದ ಉದ್ದೇಶದಿಂದ 'ರೈತಪೀಠ' ಎಂಬ ಗೌರವ ಪ್ರಶಸ್ತಿಯನ್ನು ಪದ್ಮಶ್ರೀ ಬಿ.ಕೆ.ದೇವರಾಯ ಮಿತ್ತಬಾಗಿಲು ಅವರು ಮೂಡಬಿದರೆ ಎಸ್‌ಕೆಎಫ್ ಸಂಸ್ಥೆ ನೀಡುವ ನೂತನ ಪ್ರಥಮ ರೈತಪೀಠ ಪ್ರಶಸ್ತಿಯನ್ನು ಸ್ವೀಕರಿಸಿದರು.

ಬಿ.ಕೆ.ದೇವರಾಯ ಮಿತ್ತಬಾಗಿಲು ಅವರು ಪ್ರಶಸ್ತಿ ಸ್ವೀಕರಿಸಿ ಮಾತನಾಡಿ, ನಮ್ಮ ಸಂಪ್ರದಾಯ ಮತ್ತು ಸಂಸ್ಕೃತಿ ಉಳಿಸಿಕೊಳ್ಳಬೇಕು. ಜಮೀನನ್ನು ಹಾಳು ಮಾಡದೆ ಕೃಷಿ ಮಾಡಿ ಬದುಕು ಸಾಗಿಸಬೇಕು, ನಿಮ್ಮ ಮನೆಯಲ್ಲೇ ಭತ್ತ ಬೆಳೆಸಿ, ಅದನ್ನೇ ನೀವು ಊಟ ಮಾಡಿ. ಅದರಲ್ಲಿರುವ ಸಂತೃಪ್ತಿ ಬೇರೆ ಯಾವುದರಲ್ಲಿ ಇರುವುದಿಲ್ಲ ಅದೇ ಆತ್ಮಸಂತೃಪ್ತಿ ಎಂದರು.

ಮುನಿಯಾಲು ಗೋಧಾಮ ಮತ್ತು ಮೂಡಬಿದರೆ ಎಸ್‌ಕೆಎಫ್ ಸಮೂಹ ಸಂಸ್ಥೆಯ ಸಂಸ್ಥಾಪಕ ಡಾ.ಜಿ. ರಾಮಕೃಷ್ಣ ಆಚಾರ್ ಪ್ರಸ್ತಾವನೆಗೈದು ಮಾತನಾಡಿ, ರೈತರನ್ನು ಗೌರವಿಸುವುದು ನಮ್ಮ ಮುಖ್ಯ ಉದ್ದೇಶ. ನಮ್ಮ ಯುವ ಸಮುದಾಯ ಕೃಷಿಯತ್ತ ಆಕರ್ಷಿತರಾಗಬೇಕು, ಕೃಷಿಯನ್ನೂ ಕೂಡ ಕಾರ್ಪೊರೇಟ್ ವ್ಯವಸ್ಥೆಯ ಹಂತಕ್ಕೆ ಬೆಳೆಸಬೇಕು, ಮುನಿಯಾಲಿನ ಗೋಧಾಮ ಎಂಬ ಕೃಷಿಲೋಕವನ್ನು ಕಂಡು ಯುವಕರು ಕೃಷಿಯಲ್ಲಿ ತೊಡಗಿ ಸುಂದರ ಬದುಕು ಕಟ್ಟಿಕೊಳ್ಳಬೇಕು ಎಂದು ಪ್ರಕೃತಿಯಿಂದ ಪ್ರಕೃತಿಗೆ ಎಂಬ ವಿನೂತನ ಪರಿಕಲ್ಪನೆಯಲ್ಲಿ ಶ್ರೀ ಮನ್ನಾಗಮಂಡಲದಲ್ಲಿ ರೈತಪೀಠ ಪ್ರಶಸ್ತಿ ಪ್ರದಾನ ಮಾಡಲಾಗಿದೆ ಎಂದರು.

ಪ್ರಕೃತಿ ಬಲಿಕೊಟ್ಟು ಅಭಿವೃದ್ಧಿ ಅಸಾಧ್ಯ

ಮಹಾರಾಷ್ಟ್ರ ಕೊಲ್ಲಾಪುರ ಸಿದ್ದಗಿರಿ ಮಠದ ಪೂಜ್ಯಶ್ರೀ ಅದೃಶ್ಯ ಕಾಡಸಿದ್ದೇಶ್ವರ ಮಹಾಸ್ವಾಮೀಜಿ ಅವರು ಗೋಧಾಮದ ಪ್ರವರ್ತಕ ಡಾ. ಜಿ ರಾಮಕೃಷ್ಣ ಆಚಾರ್ಯ ಅವರ ಸಾಧನೆ ಯಶೋಗಾಥೆಯನ್ನು ದಾಖಲಿಸಿದ ಡಾ. ನರೇಂದ್ರ ರೈ ದೇರ್ಲ ರಚಿಸಿರುವ 'ರೈತಪೀಠ ಇದು ಈ ನೆಲದ ಜ್ಞಾನಪೀಠ' ಕೃತಿಯ ಬಿಡುಗಡೆಗೊಳಿಸಿ ಆಶೀರ್ವಚನ ನೀಡಿ, ಪ್ರಕೃತಿ ಬಲಿಕೊಟ್ಟು ಮಾನವ ಅಭಿವೃದ್ಧಿ ಸಾಧ್ಯವಿಲ್ಲ ಎಂದರು. 'ಆಧುನಿಕ ರಸಗೊಬ್ಬರಗಳಿಂದ ಉತ್ಪಾದನೆ ಹೆಚ್ಚಾಗಿರಬಹುದು, ಆದರೆ ಗುಣಮಟ್ಟ ಕುಸಿದಿರುವುದು ದುರಂತ,' ಎಂದು ವಿಷಾದ ವ್ಯಕ್ತಪಡಿಸಿದರು.

ಬೆಳಗಾವಿ ನಿಡಸೋಸಿ ಶ್ರೀ ದುರದುಂಡೀಶ್ವರ ಸಿದ್ಧಸಂಸ್ಥಾನ ಮಠದ ನಿಜಲಿಂಗೇಶ್ವರ ಸ್ವಾಮೀಜಿ ಆಶೀರ್ವಚನ ನೀಡಿ, ರೈತರು ಅನ್ನದಾತರು, ಕೃಷಿಯ ನೈಜ ಸಾಧಕರು ಎಂದು ಗೌರವಿಸಬೇಕೆಂದರು.

ಸಂಸ್ಕೃತಿಗೆ ಉತ್ತೇಜನ ಅನುಕರಣೀಯ

ಮೂಡಬಿದರೆ ಆಳ್ವಾಸ್ ಎಜುಕೇಶನ್ ಫೌಂಡೇಶನ್ ಅಧ್ಯಕ್ಷ ಡಾ.ಎಂ. ಮೋಹನ್ ಆಳ್ವ ಅಧ್ಯಕ್ಷತೆ ವಹಿಸಿ ಮಾತನಾಡಿ, ರಾಮಕೃಷ್ಣ ಆಚಾರ್ಯ ಅವರು ಉದ್ಯಮಿಯಾಗಿದ್ದರೂ ಕೃಷಿಗೆ ಒತ್ತು ನೀಡುವ ಬಹುಮುಖ ಸೇವೆ ಶ್ಲಾಘನೀಯವಾಗಿದ್ದು, ನಾಗಮಂಡಲದಂತಹ ಧಾರ್ಮಿಕ ಆಚರಣೆಗಳ ಮೂಲಕ ಸಂಸ್ಕೃತಿಗೆ ಉತ್ತೇಜನ ನೀಡುವುದು ಅನುಕರಣೀಯ ಎಂದರು.

ಕಾರ್ಕಳದ ಕಾಂಗ್ರೆಸ್ ನಾಯಕ ಮುನಿಯಾಲು ಉದಯಕೃಷ್ಣಯ್ಯ ಶೆಟ್ಟಿ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಉದಯ ಕುಮಾರ್ ಶೆಟ್ಟಿ, ಮಂಗಳೂರು ವಿಶ್ವಕರ್ಮ ಸಹಕಾರಿ ಬ್ಯಾಂಕ್ ಅಧ್ಯಕ್ಷ ಡಾ. ಹರೀಶ ಆಚಾರ್ಯ ಜಲಕದಕಟ್ಟೆ, ಮಂಗಳೂರು ಎಸ್ ಕೆ ಜಿ ಐ ಕೋಆಪರೇಟಿವ್ ಸೊಸೈಟಿ ಅಧ್ಯಕ್ಷ ಪೊರ್ಯಾರು ಉಪೇಂದ್ರ ಆಚಾರ್ಯ, ಸುಚಿತಾ ಆರ್. ಆಚಾರ್, ಪ್ರಜ್ವಲ್ ಆಚಾರ್ ಇದ್ದರು. ಸಾಣೂರು ಗುತ್ತು ದೇವಪ್ರಸಾದ್ ಶೆಟ್ಟಿ ಸ್ವಾಗತಿಸಿದರು.ಎನ್. ಆರ್. ದಾಮೋದರ್ ಶರ್ಮಾ ನಿರೂಪಿಸಿ, ವಂದಿಸಿದರು.

ಭೂತನಾಥ ಪ್ರೀತಿಕರ ಪ್ರತ್ಯಕ್ಷ ಅಶ್ವಪೂಜಾ

ಮುನಿಯಾಲು ಸಂಜೀವಿನಿ ಗೋಧಾಮದಲ್ಲಿ ಫೆಬ್ರವರಿ 21ರ ತನಕ ನಡೆಯುವ ಪಾರಂಪರಿಕ ಸಂಪ್ರದಾಯದಂತೆ ದೊಂದಿ ಬೆಳಕಿನಲ್ಲಿ ನಡೆಯುವ ಭಕ್ತಿಭಾವಪೂರ್ಣ ಏಕಪವಿತ್ರ ಶ್ರೀ ಮನ್ನಾಗಮಂಡಲದ 2ನೇ ದಿನ ಶುಕ್ರವಾರ ಮೃತ್ಯುಂಜಯ ಹೋಮ, ಕೂಷ್ಮಾಂಡ ಯಾಗ, ಭೂತನಾಥ ಪ್ರೀತಿಕರ ಪ್ರತ್ಯಕ್ಷ ಅಶ್ವಪೂಜಾ, ಪ್ರಸನ್ನ ಪೂಜೆ ಸಹಿತ ವಿವಿಧ ಧಾರ್ಮಿಕ ಕಾರ್ಯಗಳು ವಿದ್ವಾನ್ ಕೊರಂಗ್ರಪಾಡಿ ಕೆ.ಪಿ. ಕುಮಾರಗುರು ತಂತ್ರಿಯವರ ಮಾರ್ಗದರ್ಶನದಲ್ಲಿ ಎಳ್ಳಾರೆ ವಾಸುದೇವ ಭಟ್ ಸಹಯೋಗದಲ್ಲಿ ನಡೆಯಿತು. ಸಂಜೀವಿನಿ ಗೋಧಾಮದ ಸಂಸ್ಥಾಪಕ ಡಾ. ಜಿ ರಾಮಕೃಷ್ಣ ಆಚಾರ್, ಸವಿತಾ ಆರ್. ಆಚಾರ್ ಮತ್ತು ಕುಟುಂಬಸ್ಥರು ಉಪಸ್ಥಿತರಿದ್ದರು.

ಕೃಷಿ ಭವಿಷ್ಯದಲ್ಲಿ ಅನಿವಾರ್ಯ: ಪದ್ಮಶ್ರೀ ಸತ್ಯನಾರಾಯಣ ಬೆಳೇರಿ



ಕಾರ್ಕಳ: ಕೃಷಿ ನಮ್ಮ ಅನ್ನದ ಭಾಗ್ಯ. ಕೃಷಿ ಬಿಟ್ಟರೆ ಜೀವನವೇ ಇಲ್ಲ, ಯುವ ಸಮುದಾಯವನ್ನು ಕೃಷಿಯತ್ತ ಆಕರ್ಷಿಸಲು ಸರ್ಕಾರ ಹೊಸ ಸಿಲೆಬಸ್ ಮಾಡಿ ಪ್ರೋತ್ಸಾಹಿಸಿ, ಕೃಷಿಗೆ ಗಮನ ನೀಡುವುದು ಮುಂದಿನ ಅಗತ್ಯವಾಗಿದೆ. ನಾವು ವಿವಿಧ ರೀತಿಯಲ್ಲಿ ಹಣವನ್ನು ಗಳಿಸಬಹುದು, ಆದರೆ ಹಣವನ್ನು ತಿನ್ನಲು ಸಾಧ್ಯವಿಲ್ಲ, ಕೃಷಿ ಮಾಡುವುದು ಮುಂದೆ ಅನಿವಾರ್ಯವಾಗಲಿದೆ. ಕೃಷಿಯ ಜೊತೆಗೆ ರೈತರನ್ನು ಪ್ರೋತ್ಸಾಹಿಸುವ ರಾಮಕೃಷ್ಣ ಆಚಾರ್ಯರ ಕಾರ್ಯ ಅತ್ಯಂತ ಮಹತ್ವದ್ದಾಗಿದೆ ಎಂದು ಪದ್ಮಶ್ರೀ ಸತ್ಯನಾರಾಯಣ ಬೆಳೇರಿ ಹೇಳಿದರು.

ಅವರು ಮುನಿಯಾಲು ಸಂಜೀವಿನಿ ಗೋಧಾಮದಲ್ಲಿ ಫೆ.21ರ ತನಕ ನಡೆಯುವ ಪಾರಂಪರಿಕ ಸಂಪ್ರದಾಯದಂತೆ ದೊಂದಿ ಬೆಳಕಿನಲ್ಲಿ ನಡೆಯುವ ಭಕ್ತಿಭಾವಪೂರ್ಣ ಏಕಪವಿತ್ರ ಶ್ರೀ ಮನ್ನಾಗಮಂಡಲದಲ್ಲಿ ಶುಕ್ರವಾರ ನಡೆದ ಕೃಷಿ ಮಂಡಲ – ಕೃಷಿ ವಿಚಾರ ಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡಿದರು.

ರಾಮಕೃಷ್ಣ ಆಚಾರ್ ಕೃಷಿಗೆ ವಿಶೇಷವಾಗಿ ಆದ್ಯತೆ ನೀಡಿ ರೈತರಿಗೆ 'ರೈತಪೀಠ' ಪ್ರಶಸ್ತಿ ನೀಡಿ ಗೌರವಿಸುವುದು ದೇಶವನ್ನು ಗೌರವಿಸಿದಂತೆ, ಇದು ಇನ್ನಷ್ಟು ಪ್ರೇರಣೆ ನೀಡಿದಂತೆ ಆಗುತ್ತದೆ ಎಂದು ಪದ್ಮಶ್ರೀ ಸತ್ಯನಾರಾಯಣ ಬೆಳೇರಿ ಹೇಳಿದರು.

ಪ್ರಥಮ ಕೃಷಿ ವಿಚಾರ ಗೋಷ್ಠಿ

ಕರಾವಳಿಯ ಕೃಷಿ ಬಹುತ್ವ ಮತ್ತು ಧಾರ್ಮಿಕ ನಂಬಿಕೆಗಳ ಬಗ್ಗೆ ಮಾತನಾಡಿದ ನಿವೃತ್ತ ಪ್ರಾಧ್ಯಾಪಕ ಕೃಷಿ ಲೇಖಕ ಡಾ.ನರೇಂದ್ರ ರೈ ದೇರ್ಲ ಮಾತನಾಡಿ, ನಾಗಮಂಡಲದಲ್ಲಿ ಪ್ರಪ್ರಥಮವಾಗಿ ಕೃಷಿ ವಿಚಾರ – ಕೃಷಿ ಮಂಡಲವನ್ನು ಮಾಡಿದ ಕೀರ್ತಿ ರಾಮಕೃಷ್ಣ ಆಚಾರ್ಯರಿಗೆ ಸಲ್ಲುತ್ತದೆ. ಈ ನೆಲದ ಎಲ್ಲಾ ಸಂಸ್ಕೃತಿಗೂ ಕೃಷಿಯೇ ಮೂಲ ಸಂಸ್ಕೃತಿ ಆಗಿದೆ. ಯುವಸಮುದಾಯ ಮುಂದೆ ಕೃಷಿಯನ್ನು ಲಾಭದಾಯಕವಾಗಿ ಮಾಡಿ ಉಳಿಸಿ ಬೆಳೆಸುವ ಅನಿವಾರ್ಯತೆ ಎದುರಾಗಿದೆ ಎಂದರು. ಮುನಿಯಾಲು ಸಂಜೀವಿನಿ ಗೋಧಾಮದ ಸಂಸ್ಥಾಪಕ ಡಾ. ಜಿ ರಾಮಕೃಷ್ಣ ಆಚಾರ್, ನಿವೃತ್ತ ಪ್ರಾಂಶುಪಾಲ ಬಾಲಕೃಷ್ಣ ಶೆಟ್ಟಿ ಶ್ರೀಮನ್ನಾಗಮಂಡಲ ಸೇವಾ ಸಮಿತಿಯ ಅಧ್ಯಕ್ಷ ದೇವಿಪ್ರಸಾದ ಶೆಟ್ಟಿ ಸಾಣೂರುಗುತ್ತು, ಪ್ರಧಾನ ಕಾರ್ಯದರ್ಶಿಗಳಾದ ಶ್ರೀಕಾಂತ ಶೆಟ್ಟಿ ಕಾರ್ಕಳ, ದಾಮೋದರ ಶರ್ಮ ಬಾರ್ಕೂರು, ಅರವಿಂದ ಆಚಾರ್ಯ ಬೆಳುವಾಯಿ, ಪ್ರಭಾಕರ ಆಚಾರ್ಯ ಗುಡ್ಡೆಯಂಗಡಿ, ಮಾರ್ಗದರ್ಶಕರಾದ ಸುಕೇಶ ಹೆಗ್ಡೆ ಕಡ್ತಲ, ಮುನಿಯಾಲು ದಿನೇಶ ಪೈ, ಸಂತೋಷ ಅಮೀನ್, ಜ್ಯೋತಿ ಹರೀಶ್, ಗೋಪಿನಾಥ ಭಟ್ ಮುನಿಯಾಲು, ಸಮಿತಿಯ ಸದಸ್ಯರು,ಪದಾಧಿಕಾರಿಗಳು, ಗ್ರಾಮಸ್ಥರು, ಪ್ರಮುಖರು, ಸಂಘಸಂಸ್ಥೆಗಳ ಪ್ರಮುಖರು ಭಾಗವಹಿಸಿದ್ದರು.

ಕೃಷಿ ವಿಚಾರ ಗೋಷ್ಠಿ – 2

ರೈತರನ್ನು ಸರ್ಕಾರಗಳು ಸೇರಿ ಎಲ್ಲರೂ ಕಡೆಗಣಿಸುತ್ತಿದ್ದಾರೆ. ಆದರೆ ಎಲ್ಲರೂ ಸೇರಿ ಗೌರವಿಸುವ ದಿನಗಳು ಹತ್ತಿರದಲ್ಲಿದೆ ಎಂದು ಕೃಷಿ ವಿಚಾರ ಗೋಷ್ಠಿಯ ಅಧ್ಯಕ್ಷತೆ ವಹಿಸಿದ ಪ್ರಗತಿಪರ ಕೃಷಿಕ ನಿವೃತ್ತ ಪ್ರಾಂಶುಪಾಲ ಗುಣಪಾಲ ಕಡಂಬ ಹೇಳಿದರು. ಯುವಜನತೆ ಮತ್ತು ಭವಿಷ್ಯದಲ್ಲಿ ಕೃಷಿ ಸಾಧ್ಯತೆಗಳ ಬಗ್ಗೆ ಪುತ್ತೂರು ಗ್ರಾಮಜನ್ಯದ ನಿರಂಜನ ಪೋಳ್ಯ ಮಾತನಾಡಿದರು.

ಕೃಷಿ ವಿಚಾರ ಗೋಷ್ಠಿ 3

ಹೊಸತಲೆಮಾರಿನ ಕೃಷಿ ಮತ್ತು ಹೆಚ್ಚುವಾಪಸಾತಿಯ ಅನುಭವದ ಬಗೆಗೆ ಪ್ರಯೋಗಶೀಲ ಕೃಷಿಕ ಮೈಸೂರು ಕುಂಬಾರಕೊಪ್ಪಲು ಪ್ರವೀಣ್ ಕೇಶವ್ ಮಾತನಾಡಿದರು. ಬ್ರಹ್ಮಾವರ ಕೃಷಿ ವಿಜ್ಞಾನ ಕೇಂದ್ರದ ಕೃಷಿ ವಿಜ್ಞಾನಿ ಡಾ.ಧನಂಜಯ್ ಅಧ್ಯಕ್ಷತೆ ವಹಿಸಿದ್ದರು. ಶ್ರೀಕಾಂತ್ ಶೆಟ್ಟಿ ಕಾರ್ಕಳ ಸ್ವಾಗತಿಸಿದರು. ಪ್ರಣೂತ್ ಆರ್. ಗಾಣಿಗ ನಿರೂಪಿಸಿದರು.

ಸುಮನಸಾ ಕೊಡವೂರು ನಾಟಕೋತ್ಸವ | ಪ್ರತಿ ದಿನ ರಂಗ ಸಾಧಕರಿಗೆ ಸನ್ಮಾನ

ನಾಳೆಯಿಂದ 28ರವರೆಗೆ ಉಡುಪಿಯಲ್ಲಿ ರಂಗಹಬ್ಬ

ಉಡುಪಿ: ಸುಮನಸಾ ಕೊಡವೂರು ಸಾಂಸ್ಕೃತಿಕ ಸಂಘಟನೆಯು 14ನೇ ವರ್ಷದ ನಾಟಕೋತ್ಸವ ರಂಗಹಬ್ಬ-14 ಅನ್ನು ಫೆ.22ರಿಂದ 28ರವರೆಗೆ ಉಡುಪಿಯ ಭುಜಂಗ ಪಾರ್ಕ್ ಬಯಲು ರಂಗಮಂದಿರದಲ್ಲಿ ಹಮ್ಮಿಕೊಂಡಿದೆ.

ಈ ಕುರಿತು ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಅಧ್ಯಕ್ಷ ಪ್ರಕಾಶ್ ಜಿ. ಕೊಡವೂರು ಅವರು ಮಾಹಿತಿ ನೀಡಿ, 'ನಮ್ಮ ಸಂಘಟನೆ 2002ರಲ್ಲಿ ಆರಂಭಗೊಂಡಿದ್ದು ಪ್ರತಿ ವರ್ಷ ತಲಾ ಮೂರು ನಾಟಕಗಳನ್ನು ಸಿದ್ಧಪಡಿಸಿ 750ಕ್ಕೂ ಹೆಚ್ಚು ಪ್ರದರ್ಶನಗಳನ್ನು ನೀಡಿದೆ. ಯಕ್ಷಗಾನ ಸಾಹಿತ್ಯ, ಜನಪರ, ಶೈಕ್ಷಣಿಕ ಮೊದಲಾದ ಕ್ಷೇತ್ರಗಳಲ್ಲಿ ನಿರಂತರ ಚಟುವಟಿಕೆಗಳನ್ನು ಮಾಡುತ್ತಿದೆ. 23 ಬಾರಿ ರಾಜ್ಯಮಟ್ಟದ ನಾಟಕ ಸ್ಪರ್ಧೆಗಳಲ್ಲಿ, 4 ಬಾರಿ ರಾಷ್ಟ್ರೀಯ ನಾಟಕ ಸ್ಪರ್ಧೆಯಲ್ಲಿ ಬಹುಮಾನ ಪಡೆದಿದೆ ಎಂದರು.

ಉಡುಪಿ ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಕೂಡ ನಮ್ಮ ಸಂಸ್ಥೆಗೆ ಲಭಿಸಿದೆ. ಕಳೆದ 13 ವರ್ಷಗಳಿಂದ ರಂಗಹಬ್ಬವನ್ನು ಸಂಘಟಿಸುತ್ತಾ ಬಂದಿದ್ದು, ರಾಷ್ಟ್ರೀಯ, ಪೌರಾಣಿಕ ನಾಟಕೋತ್ಸವವನ್ನು ಯಶಸ್ವಿಯಾಗಿ ಸಂಘಟಿಸಿದೆ ಎಂದರು.

ಈ ಬಾರಿಯ ರಂಗಹಬ್ಬವು ಫೆ.22ರಿಂದ 28 ವರೆಗೆ ಪ್ರತಿದಿನ ಸಂಜೆ 6.30ಕ್ಕೆ ನಡೆಯಲಿದೆ. ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಉಡುಪಿ ನಗರಸಭೆ, ನವದೆಹಲಿಯ ಸಂಸ್ಕೃತಿ ನಿರ್ದೇಶನಾಲಯವು ಸಹಯೋಗ ನೀಡಿವೆ. ತುಳು ರಂಗಭೂಮಿ ಮತ್ತು ತುಳು ಚಲನಚಿತ್ರ ರಂಗದ ಹಿರಿಯ ರಂಗಕರ್ಮಿ ಡಾ. ಪಿ ಸಂಜೀವ ದಂಡಕೇರಿ ಅವರು ನಾಟಕೋತ್ಸವವನ್ನು ಉದ್ಘಾಟಿಸಲಿದ್ದಾರೆ ಎಂದು ವಿವರಿಸಿದರು.

ಶಾಸಕ ಯಶ್‌ಪಾಲ್ ಎ. ಸುವರ್ಣ ಅಧ್ಯಕ್ಷತೆ ವಹಿಸಲಿರುವರು. ಫೆ.22ಕ್ಕೆ ಜರ್ನಿ ಥೇಟರ್ ಗ್ರೂಪ್, ಮಂಗಳೂರು ತಂಡವು ಕನ್ನಡ ನಾಟಕ 'ಸಾಹೇಬರು ಬರುತ್ತಾರೆ? ನಾಟಕವನ್ನು ಪ್ರದರ್ಶಿಸಲಿದ್ದಾರೆ. ಫೆ.23ರಂದು ಸುಮನಸಾ ಕೊಡವೂರು, ಉಡುಪಿ ತಂಡದ ಕಲಾವಿದರು ?ಯೇಸ' ತುಳು ನಾಟಕವನ್ನು ಪ್ರದರ್ಶಿಸಲಿದ್ದಾರೆ ಎಂದು ತಿಳಿಸಿದರು.

ಫೆ.24ರಂದು ಶಿವಮೊಗ್ಗದ ಸಹ್ಯಾದ್ರಿ ಕಲಾತಂಡದ ?ಜೋಕುಮಾರ ಸ್ವಾಮಿ? ಕನ್ನಡ ನಾಟಕ, ಫೆ. 25ರಂದು ಸುಮನಸಾ ಕೊಡವೂರು ತಂಡದ ಸದಸ್ಯರಿಂದ ಕನ್ನಡ ಯಕ್ಷನಾಟಕ ?ಮೈಂದ ದ್ವಿವಿದ ಕಾಳಗ? ಫೆ. 26ರಂದು ಪಾಂಡಿಚೇರಿಯ ಆದಿಶಕ್ತಿ ಥಿಯೇಟರ್ ಸದಸ್ಯರಿಂದ ಇಂಗ್ಲೀ?ಶ್ ನಾಟಕ ?ಎ ಉಮೆನ್ ಆರ್ ನಾಟ್ ಟು ಬಿ?, ಫೆ.27ರಂದು ಸುಮನಸಾ ಕೊಡವೂರು ತಂಡದಿಂದ ಕನ್ನಡ ನಾಟಕ ?ಈದಿ? ಹಾಗೂ ಫೆ.28ರಂದು ಮೈಸೂರು ರಂಗವಲ್ಲಿ ತಂಡದಿಂದ ಕನ್ನಡ ನಾಟಕ ?ಪರಮೇಶಿ ಪೇಮಪ್ರಸಂಗ? ಪ್ರದರ್ಶನಗೊಳ್ಳಲಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಗೌರವಾಧ್ಯಕ್ಷ ಎಂ.ಎಸ್. ಭಟ್, ಸಂಘಟನೆಯ ಸಂಚಾಲಕರು ಭಾಸ್ಕರ್ ಪಾಲನ್ ಬಾಚನಬೈಲು, ಪ್ರಧಾನ ಕಾರ್ಯದರ್ಶಿ ಚಂದ್ರಕಾಂತ್ ಕುಂದರ್, ದಿವಾಕರ್ ಕಟೀಲ್ ಉಪಸ್ಥಿತರಿದ್ದರು.

ಪ್ರೇಕ್ಷಕರಿಗೆ ಟ್ರಾವೆಲಿಂಗ್ ಬ್ಯಾಗ್ ಕೊಡುಗೆ

ಪ್ರತಿದಿನ ನಾಟಕೋತ್ಸವದಲ್ಲಿ ರಂಗಸಾಧಕರಿಗೆ ಸನ್ಮಾನ, ಅದೃಷ್ಟ ಪ್ರೇಕ್ಷಕರಿಗೆ ಟ್ರಾವೆಲಿಂಗ್ ಬ್ಯಾಗ್‌ನ ಕೊಡುಗೆ ಇರಲಿದೆ. ಯಕ್ಷಗುರು ಯು.ದುಗ್ಗಪ್ಪ ಅವರ ನೆನಪಿನಲ್ಲಿ 'ಯಕ್ಷಸುಮ' ಪ್ರಶಸ್ತಿಯನ್ನು ಯಕ್ಷಗಾನ ಗುರು ಬಿ.ಕೃಷ್ಣ ಸ್ವಾಮಿ ಜೋಷಿ ಅವರಿಗೆ ಕೊಡ ಮಾಡಲಾಗುವುದು ಎಂದು ಪ್ರಕಾಶ್ ಜಿ. ಕೊಡವೂರು ಮಾಹಿತಿ ಅವರು ನೀಡಿದರು

ಕವಿ ಸರ್ವಜ್ಞ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಎಂ.ಎ. ಗಫೂರ್ ಬಣ್ಣನೆ

ಸಾಮಾಜಿಕ ಅಂದಕಾರ ದೂರವಾಗಿಸಿದ ಸಂತ



ಉಡುಪಿ: ಜನಸಾಮಾನ್ಯರಿಗೆ ಅರ್ಥವಾಗುವ ಸರಳ ಭಾಷೆ ಮತ್ತು ಪದಗಳಲ್ಲಿ ತ್ರಿಪದಿಗಳನ್ನು ಹೇಳುವ ಮೂಲಕ ಸಾಮಾಜಿಕ ಅಂಧಕಾರವನ್ನು ಹೋಗಲಾಡಿಸಿ ಸಮಾಜವನ್ನು ತಿದ್ದುವಲ್ಲಿ ಶ್ರಮಿಸಿದ ಸರ್ವಜ್ಞರು ಇಂದಿನ ಪೀಳಿಗೆಯ ಉತ್ತಮ ಜೀವನ ನಿರ್ವಹಣೆಗಾಗಿ ಸನ್ಮಾರ್ಗದ ದಾರಿಯನ್ನು ರೂಪಿಸಿದ್ದಾರೆ ಎಂದು ಕರಾವಳಿ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಎಂ. ಎ ಗಫೂರ್ ಹೇಳಿದರು.

ಹಿರಿಯಡ್ಕದ ಡಾ. ಚಂದಯ್ಯ ಹೆಗ್ಡೆ ಸಭಾಭವನ ಇಲ್ಲಿ ಜಿಲ್ಲಾಡಳಿತ, ಜಿ.ಪಂ., ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಉಡುಪಿ ಜಿಲ್ಲಾ ಕುಲಾಲ ಸಂಘಗಳ ಒಕ್ಕೂಟ, ಇವರ ಸಹಯೋಗದಲ್ಲಿ ನಡೆದ ಕವಿಸರ್ವಜ್ಞ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ, ಕವಿ ಸರ್ವಜ್ಞ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು.

16ನೇ ಶತಮಾನದ ಪ್ರಸಿದ್ಧ ಕನ್ನಡ ತ್ರಿಪದಿ ಕವಿಯಾದ ಸರ್ವಜ್ಞನು, ಸಾಮಾಜಿಕ ಸಮಾನತೆ, ನೀತಿ ಮತ್ತು ಜ್ಞಾನವನ್ನು ಸರಳ ತ್ರಿಪದಿಗಳ ಮೂಲಕ ಬೋಧಿಸಿದ್ದಾರೆ. ಸರ್ವಜ್ಞನ ತ್ರಿಪದಿಗಳು ಕನ್ನಡ ಸಾಹಿತ್ಯದಲ್ಲಿ ಅದರಲ್ಲೂ ವಿಶೇಷವಾಗಿ ಜನ ಸಾಮಾನ್ಯರಲ್ಲಿ ನೀತಿ ಪಾಠಗಳನ್ನು ಬಿತ್ತಲು ಇಂದಿಗೂ ಪ್ರಸ್ತುತವಾಗಿದೆ ಎಂದರು.

ನಾಡು ಕಂಡ ಮಹಾ ಕವಿ ಸರ್ವಜ್ಞರು ತನ್ನ ಜೀವನ ಅನುಭವದ ಮೂಲಕ ವಚನಗಳನ್ನು ರಚಿಸಿದ್ದಾರೆ. ಸಮಾಜದಲ್ಲಿ ಇದ್ದಂತಹ ಅಂಕುಡೊಂಕುಗಳನ್ನು ತಿದ್ದುವ ಕುರಿತು ಜನಸಾಮಾನ್ಯರಿಗೆ ಅರ್ಥವಾಗುವ ರೀತಿಯಲ್ಲಿ ತ್ರಿಪದಿಗಳ ಮೂಲಕ ವಚನಗಳನ್ನು ರಚಿಸಿದ್ದಾರೆ ಎಂದರು.

ಅಪಾರ ಜ್ಞಾನವನ್ನು ಹೊಂದಿದ್ದ ಸರ್ವಜ್ಞರು ಕಾಲ್ನಡಿಗೆಯ ಮೂಲಕ ಜನಸಾಮಾನ್ಯರಿಗೆ ಅರ್ಥವಾಗುವ ಸುಲಭ ಭಾಷೆ ಮತ್ತು ಪದಗಳ ವಚನ ಹೇಳುವ ಮೂಲಕ ಸಮಾಜವನ್ನು ತಿದ್ದುವ ಪ್ರಯತ್ನ ಮಾಡಿದ್ದರು. ನಿಂತಲ್ಲೆ ವಚನ ಸೃಷ್ಟಿಸುವ ಕಲೆಯನ್ನು ಹೊಂದಿದ್ದ ಇವರ ವಚನಗಳನ್ನು ಚಿಕ್ಕಮಕ್ಕಳು ಸಹ ಅರ್ಥ ಮಾಡಿಕೊಳ್ಳಬಹುದು.

ಸಾರ್ವಜನಿಕ ಶಿಕ್ಷಣ ಇಲಾಖೆಯ ನಿವೃತ್ತ ಜಂಟಿ ನಿರ್ದೇಶಕ ಶೇಖರ ಕುಲಾಲ್ ಉಪನ್ಯಾಸ ನೀಡಿದರು. ವಿದ್ಯಾರ್ಥಿಗಳಿಗೆ ಕವಿ ಸರ್ವಜ್ಞರ ಕುರಿತು ರಸ ಪ್ರಶ್ನೆಯನ್ನು ನಡೆಸಿ, ವಿಜೇತರಿಗೆ ಬಹುಮಾನ ವಿತರಿಸಲಾಯಿತು ಗ್ಯಾರಂಟಿ ಸಮಿತಿಯ ಉಪಾಧ್ಯಕ್ಷ ಸಂತೋಷ್ ಕುಲಾಲ್, ಕುಲಾಲ ಸಂಘ ಪೆರ್ಡೂರು ಇದರ ಅಧ್ಯಕ್ಷ ಕಾಳು ಕುಲಾಲ, ಹಿರಿಯಡ್ಕ ಸರಕಾರಿ ಕಾಲೇಜಿನ ಪ್ರಾಂಶುಪಾಲೆ ವೀಣಾ, ಉಪ ಪ್ರಾಂಶುಪಾಲ ಪ್ರಕಾಶ್ ಪ್ರಭು, ಪ್ರಮುಖರು ಇದ್ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕಿ ಪೂರ್ಣಿಮಾ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಶ್ರೀ ಭುವನೇಂದ್ರ ಕಾಲೇಜಿನ ಕನ್ನಡ ಉಪನ್ಯಾಸಕ ರಾಮಾಂಜಿ ನಿರೂಪಿಸಿ, ಶಾಲೆಯ ಹಿಂದಿ ಶಿಕ್ಷಕ ರವೀಂದ್ರ ಪ್ರಭು ವಂದಿಸಿದರು.

ಕೋಟದಲ್ಲಿ ಶ್ರವಣ ತಪಾಸಣೆ ಶಿಬಿರ

ಕೋಟ: ರೋಟರಿ ಕ್ಲಬ್ ಕೋಟ ಸಾಲಿಗ್ರಾಮದ ನೇತೃತ್ವದಲ್ಲಿ, ಕೋಟ ಸಹಕಾರಿ ವ್ಯವಸಾಯ ಸಂಘ, ಬ್ರಹ್ಮಾವರ ಕಾರ್ಯನಿರತ ಪತ್ರಕರ್ತರ ಸಂಘ ಹಾಗೂ ಟೀಮ್ ಈಶ್ವರ ಮಲ್ಪೆ ಇವರ ಸಹಯೋಗದೊಂದಿಗೆ ಕಿವಿಯ ಶ್ರವಣ ತಪಾಸಣೆ ಉಚಿತ ಶಿಬಿರ ಹಾಗೂ ರಿಯಾಯಿತಿ ದರದಲ್ಲಿ ಶ್ರವಣ ಯಂತ್ರ ವಿತರಣೆ ಕಾರ್ಯಕ್ರಮ ಕೋಟ ಸಹಕಾರಿ ಸಂಘದ ಬಿ.ಸಿ. ಹೊಳ್ಳ ಸಭಾಂಗಣದಲ್ಲಿ ಇತ್ತೀಚೆಗೆ ಜರಗಿತು.

ಕೋಟ ಸಹಕಾರಿ ಸಂಘದ ಅಧ್ಯಕ್ಷ ಡಾ.ಕೆ. ಕೃಷ್ಣ ಕಾಂಚನ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಶುಭ ಹಾರೈಸಿದರು. ರೋಟರಿ ಅಧ್ಯಕ್ಷ ಯೋಗೀಶ್ ಕುಮಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಇ.ಎನ್.ಟಿ. ತಜ್ಞೆ ಡಾ.ಅಂಕಿತಾ ಕಲ್ಮಾಡಿ ಕಿವಿಯ ಸಾಮಾನ್ಯ ಸಮಸ್ಯೆ ಹಾಗೂ ಪರಿಹಾರ, ಕಿವಿಯ ರಕ್ಷಣೆ, ಶ್ರವಣ ಸಮಸ್ಯೆಗೆ ಪರಿಹಾರ ಕುರಿತ ಮಾಹಿತಿ ನೀಡಿದರು.

ಶಿಬಿರದಲ್ಲಿ ತಪಾಸಣೆಗೊಳಪಟ್ಟ ಅರ್ಹರಿಗೆ ಶ್ರವಣ ಯಂತ್ರಗಳನ್ನು ವಿಶೇಷ ರಿಯಾಯಿತಿ ದರದಲ್ಲಿ ನೀಡಲು ಆಯ್ಕೆ ಮಾಡಲಾಯಿತು.

ಬ್ರಹ್ಮಾವರ ಪತ್ರಕರ್ತರ ಸಂಘದ ಅಧ್ಯಕ್ಷ ರಾಜೇಶ್ ಗಾಣಿಗ ಅಚ್ಲಾಡಿ, ಈಶ್ವರ ಮಲ್ಪೆ ತಂಡದ ಲವ ಕುಮಾರ್, ರೋಟರಿ ಕೋಟ– ಸಾಲಿಗ್ರಾಮ ಮಾಜಿ ಅಧ್ಯಕ್ಷ ತಿಮ್ಮ ಪೂಜಾರಿ, ರೋಟರಿ ಕಾರ್ಯದರ್ಶಿ ಶರಣಯ್ಯ ಹಿರೇಮಠ ಮೊದಲಾದವರು ಇದ್ದರು. ರೋಟರಿ ಹಿರಿಯ ಸದಸ್ಯ ರಾಜೇಂದ್ರ ಸುವರ್ಣ ಕಾರ್ಯಕ್ರಮ ನಿರೂಪಿಸಿದರು.

ನಗರಸಭೆಗೆ ವಂಚನೆ

ಉಡುಪಿ: ಉಡುಪಿ ನಗರಸಭೆಗೆ ಪಾವತಿಸುವ ತೆರಿಗೆಯಲ್ಲಿ ಯೂನಿಯನ್ ಬ್ಯಾಂಕ್ ಸೀಲ್ ದುರ್ಬಳಕೆ ಮಾಡಿ ನಗರಸಭೆ ಖಾತೆಗೆ ಜಮಾ ಮಾಡದೇ ಯೂನಿಯನ್ ಬ್ಯಾಂಕ್ ಸೀಲ್‌ನ್ನು ಹಾಕಿರುವ ಚಲನ್‌ಗಳು ಈ ಕಚೇರಿಗೆ ಬರುತ್ತಿದ್ದು, ಆರೋಪಿಗಳು ಬ್ಯಾಂಕ್ ಸೀಲ್‌ನ್ನು ದುರ್ಬಳಕೆ ಮಾಡಿ ತೆರಿಗೆ ವಂಚಿಸಿರುವುದು ಕಂಡು ಬಂದಿದೆ. ಈಗಾಗಲೇ ಪ್ರಕರಣ ದಾಖಲಾಗಿದೆ. ನಗರಸಭೆ ಆಸ್ತಿ ತೆರಿಗೆ ಹಾಗೂ ಇತರೇ ಸೇವೆಯ ಚಲನ್ ಮಾಡಲು ಮೂರನೇ ವ್ಯಕ್ತಿಗೆ ನಗದನ್ನು ನೀಡಿ ತೆರಿಗೆ ಪಾವತಿಸಿದ್ದಲ್ಲಿ, ಚಲನ್ ನೊಂದಿಗೆ ಕಚೇರಿಗೆ ಭೇಟಿ ನೀಡಿ ಕಂದಾಯ ವಿಭಾಗದಲ್ಲಿ ಪರಿಶೀಲಿಸಿಕೊಳ್ಳುವುದು ಹಾಗೂ ಆರೋಪಿಗೆ ತೆರಿಗೆ ಪಾವತಿಸಲು ನಗದು ನೀಡಿರುವವರು ಕೂಡ, ಪಾವತಿಸಿರುವ ತೆರಿಗೆ ಚಲನ್ ಅನ್ನು ನಗರಸಭೆಗೆ ಹಾಜರುಪಡಿಸಿ ಪರಿಶೀಲಿಸಿಕೊಳ್ಳುವಂತೆ ಪೌರಾಯುಕ್ತರು ತಿಳಿಸಿದ್ದಾರೆ.



ಕೆರ್ಗಾಲು ಗ್ರಾಮದ ನಾಯ್ಕನಕಟ್ಟೆ ಜಿಎಸ್‌ಬಿ ಸಮಾಜದ ಶ್ರೀ ಲಕ್ಷ್ಮೀ ವೆಂಕಟರಮಣ ದೇವಸ್ಥಾನದ ಸೇವಾ ಸಮಿತಿಯಿಂದ ಹಾಗೂ ಸಮಾಜ ಬಾಂಧವರ ಸಹಕಾರದಿಂದ ಮತ್ತು ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶ ಶ್ರೀ ವಿದ್ಯಾಧೀಶ ಸ್ವಾಮೀಜಿ ಮಾರ್ಗದರ್ಶನದಂತೆ ದೇವಸ್ಥಾನದ ಅಗತ್ಯಕ್ಕೆ ಖರೀದಿಸಿದ ನಿವೇಶನದಲ್ಲಿ ಶುಕ್ರವಾರ ಮುಂದಿನ ಅಭಿವೃದ್ಧಿ ಕಾರ್ಯಗಳಿಗಾಗಿ ಅರ್ಚಕ ಉದಯ್ ಭಟ್ ಪೌರೋಹಿತ್ಯದಲ್ಲಿ ಶಿಲಾನ್ಯಾಸ ನೆರವೇರಿಸಲಾಯಿತು. ಸೇವಾ ಸಮಿತಿ ಅಧ್ಯಕ್ಷ ಉಪ್ಪಳ್ಳಿ ನಾರಾಯಣ ಕ್ಯಾನುಭಾಗ್, ಸೇವಾ ಸಮಿತಿ ಸರ್ವ ಸದಸ್ಯರು ಇದ್ದರು.

ಹಟ್ಟಿಯಂಗಡಿ ಶ್ರೀ ಸಿದ್ಧಿವಿನಾಯಕ ವಸತಿ ಶಾಲೆಯ ಆಡಳಿತ ಮಂಡಳಿಯಿಂದ ಫೀಲ್ಡ್ ಟ್ರಿಪ್

ರೈಲು, ಕೆಎಸ್ಸಾರ್ಟಿಸಿ ಬಸ್ ನಿಲ್ದಾಣಕ್ಕೆ ವಿದ್ಯಾರ್ಥಿಗಳ ಪ್ರವಾಸ!



ಕುಂದಾಪುರ: ಹಟ್ಟಿಯಂಗಡಿ ಶ್ರೀ ಸಿದ್ಧಿವಿನಾಯಕ ವಸತಿ ಶಾಲೆಯ ಪೂರ್ವ ಪ್ರಾಥಮಿಕ ವಿಭಾಗದ ಮಕ್ಕಳಿಗೆ ಶಾಲಾ ಆಡಳಿತ ಮಂಡಳಿಯ ಮಾರ್ಗದರ್ಶನದಲ್ಲಿ ಫೀಲ್ಡ್ ಟ್ರಿಪ್ ಸೋಮವಾರ ಹಮ್ಮಿಕೊಳ್ಳಲಾಯಿತು.

ದೈನಂದಿನ ಚಟುವಟಿಕೆಗಳ ವೀಕ್ಷಣೆ

ಮಕ್ಕಳನ್ನು ಸ್ಥಳೀಯ ಪ್ರದೇಶಗಳಾದ ಕೆ.ಎಸ್.ಆರ್.ಟಿ.ಸಿ ಬಸ್ಸು ನಿಲ್ದಾಣ ಹಾಗೂ ರೈಲ್ವೆ ನಿಲ್ದಾಣಗಳಿಗೆ ಕರೆದುಕೊಂಡು ಹೋಗಲಾಯಿತು. ಕೆ.ಎಸ್.ಆರ್.ಟಿ.ಸಿ ಬಸ್ಸು ನಿಲ್ದಾಣಕ್ಕೆ ಆಗಮಿಸಿದ ವಿದ್ಯಾರ್ಥಿಗಳು ಅಲ್ಲಿಗೆ ಬರುವ ಹಾಗೂ ಅಲ್ಲಿಂದ ತೆರಳುವ ಬಸ್ಸುಗಳನ್ನು ವೀಕ್ಷಿಸಿದರು. ಅಲ್ಲಿಂದ ರೈಲ್ವೆ ನಿಲ್ದಾಣಕ್ಕೆ ತೆರಳಿದ ವಿದ್ಯಾರ್ಥಿಗಳು ಶಿಸ್ತಿನಿಂದ ಕುಳಿತು ರೈಲಿನ ಆಗಮನವನ್ನು ನಿರೀಕ್ಷಿಸಿದರು. ಮಕ್ಕಳಿಗೆ ಹೋಗಿ ಬರುವ ಎರಡು ರೈಲುಗಳನ್ನು ಕಾಣುವ ಅವಕಾಶ ಲಭಿಸಿದ್ದು ಪ್ರಯಾಣದ ಸುರಕ್ಷತೆಗಾಗಿ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆಯ ಕುರಿತು ಅವರಿಗೆ ಮನದಟ್ಟು ಮಾಡಿಕೊಡಲಾಯಿತು. ವಿದ್ಯಾರ್ಥಿಗಳ ಜೊತೆಗೆ ಶಾಲೆಯ ಮುಖ್ಯೋಪಾಧ್ಯಾಯಿನಿ ಸುಜಾತಾ ಸದಾರಾಮ್, ಶಿಕ್ಷಣ ಸಂಯೋಜಕಿ ದೀಪಿಕಾ ದೇವಾಡಿಗ ಹಾಗೂ ಫರ್ನಾಜ್, ದೈಹಿಕ ಶಿಕ್ಷಕ ಗಣೇಶ ಹಾಗೂ ಪೂರ್ವ ಪ್ರಾಥಮಿಕ ವಿಭಾಗ ಶಿಕ್ಷಕಿಯರು ಉಪಸ್ಥಿತರಿದ್ದರು.

ಉಡುಪಿ ಅಗ್ನಿಶಾಮಕ ಠಾಣೆಯ ಸತೀಶ್‌ಗೆ ಗೌರವ

'ದಕ್ಷ ಸಿಬ್ಬಂದಿ'ಗೆ ಕೇಂದ್ರದ ಪದಕ



ಉಡುಪಿ: ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯ ಉಡುಪಿ ಅಗ್ನಿಶಾಮಕ ಠಾಣೆಯಲ್ಲಿ ಅಗ್ನಿಶಾಮಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಸತೀಶ್ ಅವರಿಗೆ, ಇಲಾಖೆಯು ಉತ್ತಮ ಹಾಗೂ ನಿಷ್ಠೆಯ ಸೇವೆಗಾಗಿ, ತುರ್ತು ಪರಿಸ್ಥಿತಿಯಲ್ಲಿ ಶ್ರೇಷ್ಠ ಕಾರ್ಯಕ್ಕಾಗಿ ಕೇಂದ್ರ ಸರ್ಕಾರದ ಗೃಹ ಮಂತ್ರಾಲಯವು ನೀಡುವ ಪದಕವನ್ನು ರಾಜ್ಯ ಪೊಲೀಸ್ ಮಹಾನಿರ್ದೇಶಕ ಹಾಗೂ ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಪೊಲೀಸ್ ಮಹಾನಿರ್ದೇಶಕರ ಉಪಸ್ಥಿತಿಯಲ್ಲಿ ಇತ್ತೀಚೆಗೆ ಪಡೆದಿದ್ದಾರೆ.

ಹಲವರ ಪ್ರಾಣ ರಕ್ಷಣೆ

2005 ರಲ್ಲಿ ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಗೆ ಸೇರ್ಪಡೆಗೊಂಡು ಆರ್.ಎ ಮುಂಡ್ಕೂರ್ ತರಬೇತಿ ವಿದ್ಯಾಲಯದಲ್ಲಿ ತರಬೇತಿ ಪಡೆದು 2006ರಲ್ಲಿ ಮೂಡಬಿದ್ರೆ ಅಗ್ನಿಶಾಮಕ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿ, 2018 ರಲ್ಲಿ ಮೈಸೂರು ಹೆಬ್ಬಾಳ ಅಗ್ನಿಶಾಮಕ ಠಾಣೆಗೆ ಪದೋನ್ನತಿ ವರ್ಗಾವಣೆ ಪಡೆದು ಪ್ರಸ್ತುತ ಉಡುಪಿ ಅಗ್ನಿಶಾಮಕ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ತಮ್ಮ ಕರ್ತವ್ಯದ ಅವಧಿಯಲ್ಲಿ ಜನರ ಪ್ರಾಣ ಹಾಗೂ ಆಸ್ತಿಗಳ ರಕ್ಷಣೆಗಾಗಿ ಹಲವು ಪುರಸ್ಕಾರಗಳು ಹಾಗೂ ಸೆಲ್ಯೂಟ್ ದ ಸೈಲೆಂಟ್ ಸ್ಟಾರ್ ಪ್ರಶಸ್ತಿಯನ್ನು ಪಡೆದಿರುತ್ತಾರೆ ಎಂದು ಜಿಲ್ಲಾ ಅಗ್ನಿಶಾಮಕ ಅಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.